● www.prajavani.net


/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಅವಶ್ಯಕತೆಯಿದ್ದರೆ ಯೂಟ್ಯೂಬ್ ಚಾನೆಲ್ ವೀಕ್ಷಿಸಿ ಅಧ್ಯಯನ ಮಾಡಬಹುದು. ಇಂತಹ ಯೂಟ್ಯೂಬ್ ಚಾನೆಲ್‌ಗಳ ಆಯ್ಕೆ ಹೇಗಿರಬೇಕು?



ಅನುಭವ ಮಂಟಪ ಅಲೆಮಾರಿಗಳ ಅಹವಾಲು

ಮೈಸೂರು ಮೇಯರ್ ಗದ್ದುಗೆ ಜೆಡಿಎಸ್‌ಗೆ 6

ರಾಹುಲ್ ಹೇಳಿಕೆಗೆ ಕಾಂಗ್ರೆಸ್‌ನಲ್ಲೇ ವಿರೋಧ 11

ಸೆನ್ಸೆಕ್ಸ್	ನಿಫ್ಟಿ	₹/$
50,781 ▲	14,982 ▲	72.35 ▲

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-7

ವೈದ್ಯ ಕಾಲೇಜು: ಗುಣಮಟ್ಟದಲ್ಲಿ ರಾಜಿ ಅಸಾಧ್ಯ- 'ಸುಪ್ರೀಂ' 11

ಇಂದಿನ ಪಾಡ್‌ಕಾಸ್ಟ್ ವಿಶೇಷ

ಆಟ-ನೋಟ ವನಿತಾ ಧ್ವನಿ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕರ್ನಾಟಕ ಸೇರಿ 9 ರಾಜ್ಯಗಳಿಗೆ ಕೇಂದ್ರದ ತಂಡ ರವಾನೆ

ಕೋವಿಡ್ ಏರಿಕೆ ಆತಂಕ

ನವದೆಹಲಿ (ಪಿಟಿಐ): ಕೋವಿಡ್-19 ಹೊಸ ಪ್ರಕರಣಗಳು ಹೆಚ್ಚು ಪತ್ತೆಯಾಗಿರುವ 10 ರಾಜ್ಯಗಳಿಗೆ ಕೇಂದ್ರ ಆರೋಗ್ಯ ಸಚಿವಾಲಯವು ತಜ್ಞರ ತಂಡವನ್ನು ಕಳುಹಿಸಿದೆ. ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಮಟ್ಟದ ಮೂವರು ಅಧಿಕಾರಿಗಳು ಈ ತಂಡದಲ್ಲಿ ಇದ್ದಾರೆ.



ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆ ಕಾಣಿಸಿಕೊಂಡಿರುವ ಮಹಾರಾಷ್ಟ್ರ, ಕೇರಳ, ಛತ್ತೀಸಗಡ, ಮಧ್ಯಪ್ರದೇಶ, ಗುಜರಾತ್, ಪಂಜಾಬ್, ಕರ್ನಾಟಕ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ಹಾಗೂ ಜಮ್ಮು-ಕಾಶ್ಮೀರ ಕೇಂದ್ರಾಡಳಿತ ಪ್ರದೇಶಕ್ಕೆ ಈ ತಂಡಗಳನ್ನು ನಿಯೋಜನೆ ಮಾಡಲಾಗಿದೆ.

'ಆಯಾ ರಾಜ್ಯಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ದಿಢೀರ್ ಏರಿಕೆ ಆಗಲು ಏನು ಕಾರಣ ಎಂಬುದನ್ನು ಪತ್ತೆ ಮಾಡಲು ಈ ತಂಡಗಳು ಪ್ರಯತ್ನಿಸಲಿವೆ. ಆಯಾ ರಾಜ್ಯಗಳ ಆರೋಗ್ಯ ಇಲಾಖೆ ಮತ್ತು ಜಿಲ್ಲಾಡಳಿತಗಳ ಜತೆಯಲ್ಲಿ ಈ ತಂಡಗಳು ಕೆಲಸ ಮಾಡಲಿವೆ. ಹೊಸ ಅಲೆಯಲ್ಲಿ ಕೋವಿಡ್-19 ಹರಡುವಿಕೆಯ ಸರಪಳಿಯನ್ನು ತುಂಡರಿಸುವುದು ಹೇಗೆ ಎಂಬ ಕಾರ್ಯಯೋಜನೆಯನ್ನು ರೂಪಿಸಲು ಈ ತಂಡಗಳು ಪ್ರಯತ್ನಿಸಲಿವೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಹೇಳಿದೆ.

ರಾಜ್ಯಗಳಿಗೆ ಪತ್ರ: ಕೋವಿಡ್ ನಿಯಂತ್ರಣ ಕಾರ್ಯಯೋಜನೆಯ ಅನುಷ್ಠಾನವನ್ನು ಕಡೆಗಣಿಸಿವೆ ಎನ್ನಲಾದ ರಾಜ್ಯಗಳಿಗೆ ಆರೋಗ್ಯ ಸಚಿವಾಲಯವು ಪತ್ರ ಬರೆದಿದೆ.

'ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿರುವ ರಾಜ್ಯಗಳಲ್ಲಿ ಆರ್‌ಟಿ-ಪಿಸಿಆರ್ ಪರೀಕ್ಷೆಗಳ ಸಂಖ್ಯೆ ಕಡಿಮೆಯಾಗಿರುವುದು ಗಮನಕ್ಕೆ ಬಂದಿದೆ. ಹೀಗೆ ಆದರೆ, ಕೋವಿಡ್ ಲಾಕ್‌ಡೌನ್‌ನಿಂದ ಸಾಧಿಸಿದ ನಿಯಂತ್ರಣವನ್ನು ಕಳೆದುಕೊಳ್ಳಬೇಕಾಗುತ್ತದೆ. ಆರ್‌ಟಿ-ಪಿಸಿಆರ್ ಪರೀಕ್ಷೆಗಳ ಸಂಖ್ಯೆಯನ್ನು ಗಣನೀಯ ಪ್ರಮಾಣದಲ್ಲಿ ಏರಿಕೆ ಮಾಡಬೇಕು. ಪತ್ತೆಯಾಗದೇ ಉಳಿದಿರುವ ಪ್ರಕರಣಗಳನ್ನು ಪತ್ತೆ ಮಾಡಬೇಕು' ಎಂದು ಆರೋಗ್ಯ ಸಚಿವಾಲಯವು ಪತ್ರದಲ್ಲಿ ಸೂಚನೆ ನೀಡಿದೆ. ಮಹಾರಾಷ್ಟ್ರ, ಕೇರಳ, ಛತ್ತೀಸಗಡ, ಮಧ್ಯಪ್ರದೇಶ, ಗುಜರಾತ್, ಪಂಜಾಬ್ ಮತ್ತು ಜಮ್ಮು-ಕಾಶ್ಮೀರಕ್ಕೆ ಈ ಪತ್ರ ಬರೆಯಲಾಗಿದೆ.

11ನೇ ಪುಟ ನೋಡಿ

60ರ ಮೇಲ್ಪಟ್ಟವರಿಗೆ ಮಾರ್ಚ್ 1ರಿಂದ ಲಸಿಕೆ

ಎರಡನೇ ಹಂತದ ಕೋವಿಡ್ ಲಸಿಕೆ ಕಾರ್ಯಕ್ರಮವು ಮಾರ್ಚ್ 1ರಿಂದ ಆರಂಭವಾಗಲಿದೆ. ಈ ಬಾರಿ ಖಾಸಗಿ ಆಸ್ಪತ್ರೆಗಳಲ್ಲೂ ಕೋವಿಡ್ ಲಸಿಕೆ ನೀಡಲಾಗುತ್ತದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಹೇಳಿದೆ.

- ಈ ಹಂತದಲ್ಲಿ 60 ವರ್ಷ ಮೇಲ್ಪಟ್ಟ 10 ಕೋಟಿ ಜನರಿಗೆ ಲಸಿಕೆ ಹಾಕುವ ಗುರಿ ಹಾಕಿಕೊಳ್ಳಲಾಗಿದೆ
- 45 ವರ್ಷಕ್ಕಿಂತ ಮೇಲ್ಪಟ್ಟ ಮತ್ತು ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ ಅಂದಾಜು 17 ಕೋಟಿ ಜನರಿಗೆ ಈ ಹಂತದಲ್ಲಿ ಲಸಿಕೆ ನೀಡಲು ಉದ್ದೇಶಿಸಲಾಗಿದೆ
- ಈ ಹಂತದಲ್ಲಿ 10,000 ಸರ್ಕಾರಿ ಲಸಿಕೆ ಕೇಂದ್ರಗಳಲ್ಲಿ ಉಚಿತವಾಗಿ ಲಸಿಕೆ ಹಾಕಲಾಗುತ್ತದೆ
- 20,000 ಖಾಸಗಿ ಆಸ್ಪತ್ರೆಗಳಲ್ಲೂ ಲಸಿಕೆ ಹಾಕಲಾಗುತ್ತದೆ. ಆದರೆ, ಇದಕ್ಕೆ ಶುಲ್ಕ ಪಾವತಿ ಮಾಡಬೇಕು
- ಖಾಸಗಿ ಆಸ್ಪತ್ರೆಗಳಲ್ಲಿ ಶುಲ್ಕ ಎಷ್ಟು ಎಂಬುದು ಒಂದೆರಡು ದಿನಗಳಲ್ಲಿ ಪ್ರಕಟವಾಗಲಿದೆ
- ಯಾವೆಲ್ಲ ಕಾಯಿಲೆಗಳಿಂದ ಬಳಲುತ್ತಿರುವ 45 ವರ್ಷ ಮೇಲ್ಪಟ್ಟವರು ಲಸಿಕೆಗೆ ಅರ್ಹರು ಎಂಬುದನ್ನು ಮುಂದೆ ಪ್ರಕಟಿಸಲಾಗುವುದು

ರಾಜ್ಯಗಳಿಗೆ ಸೂಚನೆ

- ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿರುವ ಜಿಲ್ಲೆಗಳತ್ತ ಹೆಚ್ಚು ಗಮನ ನೀಡಬೇಕು. ಅಲ್ಲಿ ಆರ್‌ಟಿ-ಪಿಸಿಆರ್ ಪರೀಕ್ಷೆಗಳ ಸಂಖ್ಯೆ ಹೆಚ್ಚಿಸಬೇಕು
- ರ‍್ಯಾಪಿಡ್ ಟೆಸ್ಟ್‌ನಲ್ಲಿ ನೆಗೆಟಿವ್ ಬಂದಿರುವ, ಆದರೆ ಕೋವಿಡ್ ಲಕ್ಷಣಗಳಿರುವ ಎಲ್ಲರನ್ನೂ ಕಡ್ಡಾಯವಾಗಿ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡಿಸಬೇಕು
- ಕೋವಿಡ್ ಪಾಸಿಟಿವ್ ಇರುವ ಎಲ್ಲರನ್ನೂ ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಗಿ ಇರಿಸಬೇಕು. ಅವರ ಸಂಪರ್ಕಕ್ಕೆ ಬಂದಿದ್ದವರನ್ನು ಪತ್ತೆಮಾಡಿ, ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡಿಸಬೇಕು
- ಕೇಂದ್ರದ ತಜ್ಞರ ತಂಡಗಳು ಕ್ಷೇತ್ರಾಧ್ಯಯನ ನಡೆಸಲಿವೆ. ಈ ತಂಡಗಳಿಗೆ ಅಗತ್ಯ ಸಹಕಾರ ನೀಡಬೇಕು
- ಕೇಂದ್ರದ ತಜ್ಞರ ತಂಡಗಳು ತಮ್ಮ ಭೇಟಿಯ ಅಂತ್ಯದಲ್ಲಿ ಆಯಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳ ಜತೆ ಕಡ್ಡಾಯವಾಗಿ ಸಭೆ ನಡೆಸಲಿವೆ

ಸರ್ದಾರ್ ಪಟೇಲ್ ಕ್ರೀಡಾಂಗಣಕ್ಕೆ ಮೋದಿ ಹೆಸರು

ಪ್ರಜಾವಾಣಿ ವಾರ್ತೆ



ಅಹಮದಾಬಾದ್: ವಿಶ್ವದ ಅತಿದೊಡ್ಡ ಕ್ರಿಕೆಟ್ ತಾಣವೆಂಬ ಹೆಗ್ಗಳಿಕೆಯ ಸರ್ದಾರ್ ಪಟೇಲ್ ಕ್ರೀಡಾಂಗಣವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಕ್ರೀಡಾಂಗಣವೆಂದು ಮರುನಾಮಕರಣ ಮಾಡಲಾಯಿತು.

ನವೀಕೃತಗೊಂಡ ಈ ಕ್ರೀಡಾಂಗಣವನ್ನು ಬುಧವಾರ ರಾಷ್ಟ್ರಪತಿ ರಾಮನಾಥ ಕೋವಿಂದ್ ಉದ್ಘಾಟಿಸಿದರು. 63 ಎಕರೆ ವಿಸ್ತೀರ್ಣದಲ್ಲಿ ಈ ಕ್ರೀಡಾಂಗಣ ನಿರ್ಮಾಣವಾಗಿದೆ. 1.32 ಲಕ್ಷ ಆಸನಗಳ ಸಾಮರ್ಥ್ಯ ಇಲ್ಲಿದೆ.

'ಇದು ಪ್ರಧಾನಿ ಮೋದಿ ಅವರ ಕನಸಿನ ಯೋಜನೆಯಾಗಿತ್ತು. ಕ್ರೀಡಾಂಗಣವನ್ನು ಇನ್ನು ಅವರ ಹೆಸರಿನಿಂದಲೇ ಕರೆಯಲು ನಿರ್ಧರಿಸಲಾಗಿದೆ' ಎಂದು ಕಾರ್ಯಕ್ರಮದಲ್ಲಿ ಹಾಜರಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಇದೇ ಸಂದರ್ಭದಲ್ಲಿ 232 ಎಕರೆ ಜಾಗದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಕ್ರೀಡಾ ಸಮುಚ್ಚಯ ನಿರ್ಮಾಣಕ್ಕೆ ಕೋವಿಂದ್ ಶಿಲಾನ್ಯಾಸ ಮಾಡಿದರು. ಬೇರೆ ಬೇರೆ ಕ್ರೀಡೆಗಳ ಆಯೋಜನೆ, ತರಬೇತಿ ಸೌಲಭ್ಯಗಳನ್ನು ಇಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

ಉದ್ಘಾಟನೆಕಾರ್ಯಕ್ರಮದನಂತರ ಭಾರತ ಮತ್ತು ಇಂಗ್ಲೆಂಡ್ ತಂಡಗಳ ನಡುವಿನ ಟೆಸ್ಟ್ ಕ್ರಿಕೆಟ್ ಸರಣಿಯ ಮೂರನೇ ಪಂದ್ಯ ಇಲ್ಲಿ ಆರಂಭವಾಯಿತು. ಮಾರ್ಚ್ 4ರಿಂದ ನಡೆಯುವ ನಾಲ್ಕನೇ ಪಂದ್ಯಕ್ಕೂ ಈ ಕ್ರೀಡಾಂಗಣ ಆತಿಥ್ಯ ವಹಿಸಲಿದೆ.

ಇನ್ನಷ್ಟು ಸುದ್ದಿಗಳು 12

ಗಣಿ ಸ್ಫೋಟಕಗಳ ನಿರ್ವಹಣೆ: ನಿರ್ದಿಷ್ಟ ನಿಯಮಗಳೇ ಇಲ್ಲ

ದೂರು ಬಂದರಷ್ಟೇ ಪರಿಶೀಲಿಸುವ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣಿಗಾರಿಕೆ ಉದ್ದೇಶಕ್ಕಾಗಿ ಬಳಸುವ ಸ್ಫೋಟಕಗಳ ಸಾಗಣೆ, ಸಂಗ್ರಹ ಮತ್ತು ಬಳಕೆಗೆ ಸಂಬಂಧಿಸಿದಂತೆ ನಿರ್ದಿಷ್ಟ ನಿಯಮಾವಳಿಗಳೇ ಇಲ್ಲ. ಹೀಗಾಗಿ, ಸ್ಫೋಟ, ಪ್ರಾಣಹಾನಿಯಂತಹ ಘಟನೆಗಳು ಮರುಕಳಿಸುತ್ತಿವೆಯೇ ಎಂಬ ಚರ್ಚೆ ಅಧಿಕಾರಿಗಳ ವಲಯದಲ್ಲಿ ಶುರುವಾಗಿದೆ.

ಶಿವಮೊಗ್ಗ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಜಿಲೆಟಿನ್ ತುಂಬಿದ ವಾಹನಗಳ ಸ್ಫೋಟದಿಂದ ತಲೆಬಿಸಿ ಮಾಡಿಕೊಂಡಿರುವ ಸರ್ಕಾರ ಸ್ಪಷ್ಟ ನಿಯಮಾವಳಿಗಳನ್ನು ರೂಪಿಸಲು ಮುಂದಾಗಿದೆ.

ಈಗ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಗಣಿಗಾರಿಕೆ ಪರವಾನಗಿ ನೀಡುವ ಅಧಿಕಾರ ಹೊಂದಿದೆ. ಸ್ಫೋಟಕಗಳಿಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರ ಹೊಂದಿಲ್ಲ. ಸ್ಫೋಟಕಗಳ ಸಾಗಣೆ, ಸಂಗ್ರಹ ಮತ್ತು ಬಳಕೆ ವಿಚಾರಗಳ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ಇಲಾಖೆಗೆ ನೀಡಲಾಗಿದೆ. ಆದರೆ, ಜಿಲ್ಲಾಧಿಕಾರಿಗಳಾಗಲಿ, ಪೊಲೀಸ್ ಇಲಾಖೆಯಾಗಲಿ ಸ್ಫೋಟದಂತಹ ದುರಂತ ಸಂಭವಿಸಿದಾಗ ಮಾತ್ರ ಗಣಿ ಸ್ಫೋಟಕಗಳಿಗೆ ಸಂಬಂಧಿಸಿದಂತೆ ತಮ್ಮ ಜವಾಬ್ದಾರಿ ನೆನಪಿಸಿಕೊಳ್ಳುತ್ತವೆ. ಉಳಿದಂತೆ ಅತ್ತ ಗಮನ ಹರಿಸುವುದೇ ಇಲ್ಲ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮೂಲಗಳು ತಿಳಿಸಿವೆ.

ಸ್ಫೋಟಕಗಳ ತಯಾರಿಕೆ, ಸಾಗಣೆ, ಸಂಗ್ರಹ ಮತ್ತು ಬಳಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ರೂಪಿಸಿರುವ 2008ರ ಸ್ಫೋಟಕ ನಿಯಮಾವಳಿಯಲ್ಲಿ (ಎಕ್ಸ್‌ಪ್ಲೋಸಿವ್ ರೂಲ್ಸ್,2008) ಬಹುತೇಕ ಪಟಾಕಿ ಮತ್ತು ಇತರ ಮದ್ದು ಗುಂಡುಗಳ ಸ್ಫೋಟಕಗಳಿಗೆ ಸಂಬಂಧಿಸಿದ ನಿಯಮಗಳೇ ಹೆಚ್ಚಿವೆ. ತಮಿಳುನಾಡು ಮತ್ತು ಇತರ ಕಡೆಗಳಲ್ಲಿ ಪಟಾಕಿ ಕಾರ್ಖಾನೆಗಳಿಗೆ ಬೆಂಕಿ ಬಿದ್ದು ದೊಡ್ಡ ಅನಾಹುತ ಸಂಭವಿಸಿದ್ದರಿಂದಾಗಿ ಅಲ್ಲಿನ ನಿಯಮಾವಳಿಯಲ್ಲಿ ಸ್ಫೋಟಕ ಬಳಕೆಗೆ ನಿರ್ದಿಷ್ಟ ಮಾರ್ಗಸೂಚಿಗಳನ್ನು ನಿಗದಿಪಡಿಸಲಾಗಿದೆ.

ಕೇಂದ್ರದ ನಿಯಮಾವಳಿಯಲ್ಲಿ ಗಣಿಗಾರಿಕೆಗೆ ಬಳಸುವ ಸ್ಫೋಟಕಗಳ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಿಲ್ಲ. ಹೀಗಾಗಿ ಪಟಾಕಿ ಮತ್ತು ಇತರ ಸ್ಫೋಟಕಗಳ ತಯಾರಿಕೆ, ಸಾಗಣೆ ಮತ್ತು ಸಂಗ್ರಹಣೆಯ ನಿಯಮಗಳನ್ನೇ ಗಣಿಗಾರಿಕೆ ಸ್ಫೋಟಕಗಳ ವಿಚಾರದಲ್ಲೂ ಅನುಸರಿಸಲಾಗುತ್ತಿದೆ ಎಂದು ಗಣಿ ಇಲಾಖೆಯ ಮೂಲಗಳು ತಿಳಿಸಿವೆ.

6ನೇ ಪುಟ ನೋಡಿ

> **ಸ್ಫೋಟಕಗಳ ವಿಚಾರ ನಮ್ಮ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ. ಗಣಿಗಳಿಗೆ ಪರವಾನಗಿ ನೀಡುವುದಷ್ಟೇ ನಮ್ಮ ಕೆಲಸ. ಜಿಲ್ಲಾಧಿಕಾರಿಗಳು ಮತ್ತು ಪೊಲೀಸರಿಗೆ ಮಾತ್ರ ಅಧಿಕಾರ ಇದೆ**
>
> **ಎಂ.ಸಿ. ಕುಮಾರ್**
> ಉಪನಿರ್ದೇಶಕ ಗಣಿ ಇಲಾಖೆ

ಪಾರ್ಟಿ ಬಳಿಕ ಕುಡಿದ ಮತ್ತಿನಲ್ಲಿ ಸ್ಫೋಟಕ ಬೆಂಕಿಗೆ ಎಸೆದರು

● ದೀಪಕ್ ಎನ್.

ಚಿಕ್ಕಬಳ್ಳಾಪುರ: ಗುಡಿಬಂಡೆ ತಾಲ್ಲೂಕಿನ ಹಿರೇನಾಗವಲ್ಲಿ ಸ್ಫೋಟ ದುರಂತಕ್ಕೆ ಸಂಬಂಧಿಸಿದಂತೆ ಕುತೂಹಲಕಾರಿ ಮಾಹಿತಿ ಹೊರಬೀಳುತ್ತಿವೆ.

ಕ್ರಷರ್‌ನಲ್ಲಿದ್ದ ಜಿಲೆಟಿನ್ ಮತ್ತು ಇತರ ಸ್ಫೋಟಕಗಳನ್ನು ಎಸೆಯಲು ಸಮೀಪದ ಕುರುಚಲು ಅರಣ್ಯ ಪ್ರದೇಶಕ್ಕೆ ತೆರಳಿದ್ದ ಕೆಲಸಗಾರರು ಮಧ್ಯರಾತ್ರಿ ಬೆಂಕಿ (ಫೈರ್ ಕ್ಯಾಂಪ್) ಹಾಕಿ ಪಾರ್ಟಿ ಮಾಡಿದ್ದರು. ಪಾರ್ಟಿ ಬಳಿಕ ಕುಡಿದ ಮತ್ತಿನಲ್ಲಿ ಸ್ಫೋಟಕಗಳನ್ನು ಬೆಂಕಿಗೆ ಎಸೆದಿದ್ದಾರೆ. ಅದರಿಂದ ಈ ಅನಾಹುತ ಸಂಭವಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ಫೋಟಕಗಳನ್ನು ಕ್ರಷರ್‌ನಿಂದ ಒಂದೂವರೆಯಿಂದ ಎರಡು ಕಿಲೊಮೀಟರ್ ದೂರದಲ್ಲಿರುವ ಕೊಠಡಿಯೊಂದರಲ್ಲಿ ಸಂಗ್ರಹಿಸಲಾಗಿತ್ತು. ಸೋಮವಾರ ಅಧಿಕಾರಿಗಳ ದಾಳಿ ನಂತರ ಹೆದರಿದ ಕ್ರಷರ್ ಮಾಲೀಕರು ಸ್ಫೋಟಕಗಳನ್ನು ಸಮೀಪದ ಅರಣ್ಯದಲ್ಲಿ ಬಿಸಾಡುವಂತೆ ಕೆಲಸಗಾರರಿಗೆ ಸೂಚಿಸಿದ್ದರು ಎನ್ನಲಾಗಿದೆ.

6ನೇ ಪುಟ ನೋಡಿ

ಇಬ್ಬರು ಪೊಲೀಸ್ ಅಧಿಕಾರಿಗಳ ಅಮಾನತು

ಚಿಕ್ಕಬಳ್ಳಾಪುರ: ಗುಡಿಬಂಡೆ ತಾಲ್ಲೂಕಿನ ಹಿರೇನಾಗವಲ್ಲಿಯಲ್ಲಿ ಸಂಭವಿಸಿದ ಜಿಲೆಟಿನ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ಎಸಗಿದ ಆರೋಪದ ಮೇಲೆ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಬುಧವಾರ ಅಮಾನತು ಮಾಡಲಾಗಿದೆ.

ಗುಡಿಬಂಡೆ ಪೊಲೀಸ್ ಇನ್‌ಸ್ಪೆಕ್ಟರ್ ಮಂಜುನಾಥ್ ಹಾಗೂ ಗ್ರಾಮೀಣ ಠಾಣೆಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಗೋಪಾಲ ರೆಡ್ಡಿ ಅವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ಅಮಾನತುಗೊಳಿಸಿದ್ದಾರೆ.

6ನೇ ಪುಟ ನೋಡಿ

ನಾಳೆಯಿಂದ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಫೆ.26 ಮತ್ತು 27ರಂದು ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: 26ರಂದು ಜ್ಞಾನಭಾರತಿ ಬಡಾವಣೆ, ಕೆ.ಎಚ್. ಬಿ.ಎಸ್.ಕೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು. 27ರಂದು ವಳಗೇರಹಳ್ಳಿ, ಎಂ.ಪಿ.ಎಂ ಬಡಾವಣೆ, ಹೊಯ್ಸಳ ವೃತ್ತ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಪುರಸಭಾ ಕಾರ್ಯಾಲಯ, ಬಿಡದಿ

ಬಿಡದಿ ಮುಖ್ಯ ರಸ್ತೆ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ – 562 109
ದೂರವಾಣಿ: 080–27282572
e-mail: itstaff1_ulb_bidadi@yahoo.com, tmcbidadi@gmail.com
Website: www.bidaditown.mrc.gov.in

ಸಂ. ಪು.ಸ/ಬಿಡದಿ/ಆ.ಶಾ/ಸಿಸಿ/ಸಿ.ಆರ್–01/2020–21 ದಿನಾಂಕ: 20.02.2021

ಟೆಂಡರ್ ಪ್ರಕಟಣೆ

ಬಿಡದಿ ಪುರಸಭೆ ವ್ಯಾಪ್ತಿಯಲ್ಲಿ **ಸ್ವಚ್ಛ ಸರ್ವೇಕ್ಷಣ** ಅಂಗವಾಗಿ ಜಿ.ವಿ.ಪಿಗಳನ್ನು ನಿರ್ಮೂಲನ ಮಾಡಲು ಸಿ.ಸಿ ಕ್ಯಾಮೆರಾಗಳನ್ನು 2018–19ನೇ ಸಾಲಿನ **14ನೇ ಹಣಕಾಸು ಯೋಜನೆಯಡಿ ರೂ.1.00 ಲಕ್ಷ ವೆಚ್ಚದಲ್ಲಿ 8 ಸಂಖ್ಯೆ C.C.TV, G.V.P Points, Monitoring in City ಖರೀದಿ ಮಾಡಲು** ಟೆಂಡರ್ ಆಹ್ವಾನಿಸಲಾಗಿರುತ್ತದೆ. ಆಸಕ್ತ ನೋಂದಾಯಿತ ಸರಬರಾಜುದಾರರು/ ಟೆಂಡರ್‌ದಾರರು ತಮ್ಮ ಪ್ರಸ್ತಾವನೆಗಳನ್ನು ನಿಯಮಾನುಸಾರ ಪುರಸಭೆ ಕಚೇರಿಯಲ್ಲಿ ಟೆಂಡರ್ ದಾಸ್ತವೇಜುಗಳನ್ನು ಖರೀದಿ ಮಾಡಿ ತಮ್ಮ ಪ್ರಸ್ತಾವನೆಗಳನ್ನು ಸಲ್ಲಿಸಲು ಸೂಚಿಸಿದೆ. ಪಾವತಿಸಬೇಕಾಗಿರುವ ಇ.ಎಂ.ಡಿ **ಮೊತ್ತ ರೂ.3,000/- ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15.03.2021 ರಂದು ಸಂಜೆ 5.00 ಗಂಟೆ.** ಟೆಂಡರ್ ತೆರೆಯುವ ದಿನಾಂಕ: **16.03.2021ರಂದು ಬೆಳಿಗ್ಗೆ 11.00 ಗಂಟೆ.** ಹೆಚ್ಚಿನ ವಿವರಗಳನ್ನು ಬಿಡದಿ ಪುರಸಭಾ ಕಾರ್ಯಾಲಯದಿಂದ ಪಡೆಯಬಹುದಾಗಿರುತ್ತದೆ.

ಸಹಿ/- ಅಧ್ಯಕ್ಷರು ಪುರಸಭೆ, ಬಿಡದಿ | ಸಹಿ/- ಉಪಾಧ್ಯಕ್ಷರು ಪುರಸಭೆ, ಬಿಡದಿ | ಸಹಿ/- ಮುಖ್ಯಾಧಿಕಾರಿ ಪುರಸಭೆ, ಬಿಡದಿ

ಹಿಸನಿ/ವಾಸಸಂಇ/ರಾನ/472/ಯಕ್ಷಿ/2020–21

ವಾಹನ ಚಾಲಕ, ಸಹಾಯಕರನ್ನೂ ಕಾಯಂಗೊಳಿಸಿ– ಒತ್ತಾಯ

ಸಂಬಳ ಹೆಚ್ಚಳಕ್ಕೆ ಪೌರಕಾರ್ಮಿಕರ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸ್ವಚ್ಛತಾ ಕಾರ್ಯಕ್ಕೆ ಸಹಕರಿಸುವ ಆಟೋಟಿಪ್ಪರ್‌ಗಳ ಚಾಲಕರು ಮತ್ತು ಸಹಾಯಕರನ್ನೂ ಕಾಯಂಗೊಳಿಸಬೇಕು. ಪೌರಕಾರ್ಮಿಕರ ತಿಂಗಳ ಸಂಬಳವನ್ನು ₹ 14,040ರಿಂದ ₹ 30 ಸಾವಿರಕ್ಕೆ ಹೆಚ್ಚಿಸಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪೌರಕಾರ್ಮಿಕರು ಬಿಬಿಎಂಪಿ ಕೇಂದ್ರ ಕಚೇರಿ ಬಳಿ ಬುಧವಾರ ಪ್ರತಿಭಟನೆ ನಡೆಸಿದರು.

ಬಿಬಿಎಂಪಿ ಪೌರಕಾರ್ಮಿಕರ ಸಂಘದ (ಎಐಸಿಸಿಟಿಯು) ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ನೂರಾರು ಪೌರಕಾರ್ಮಿಕರು ಭಾಗವಹಿಸಿದರು.

ಬಿಬಿಎಂಪಿಯು ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ ಕಸ ಗುಡಿಸುವ ಕಾರ್ಯದಲ್ಲಿ ತೊಡಗಿದ್ದ 18 ಸಾವಿರ ಪೌರಕಾರ್ಮಿಕರನ್ನು ಎರಡು ವರ್ಷಗಳ ಹಿಂದೆ ಕಾಯಂಗೊಳಿಸಿತ್ತು. ಆದರೆ, ಆಟೋಟಿಪ್ಪರ್‌ಗಳ ಚಾಲಕರು ಹಾಗೂ ಸಹಾಯಕರು ಈಗಲೂ ಗುತ್ತಿಗೆ ಪದ್ಧತಿಯಲ್ಲಿ ಮುಂದುವರೆದಿದ್ದಾರೆ. ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ನೀತಿಯಂತೆ ಅವರನ್ನೂ ನೇರ ವೇತನ ಪಾವತಿ ವ್ಯವಸ್ಥೆಯ ವ್ಯಾಪ್ತಿಗೆ ತಂದು ಕಾಯಂಗೊಳಿಸಬೇಕು ಎಂದು ಪೌರಕಾರ್ಮಿಕರು ಒತ್ತಾಯಿಸಿದರು.



ಬಿಬಿಎಂಪಿ ಕೇಂದ್ರ ಕಚೇರಿ ಎದುರು ಪೌರಕಾರ್ಮಿಕರು ಬುಧವಾರ ಪ್ರತಿಭಟನೆ ನಡೆಸಿದರು

ಮಸ್ಟರಿಂಗ್ ಕೇಂದ್ರಗಳಲ್ಲಿ ಕೆಲವು ಪೌರಕಾರ್ಮಿಕರಿಗೆ ಅನಗತ್ಯ ಕಿರುಕುಳ ನೀಡಲಾಗುತ್ತಿದೆ. ಅಧಿಕಾರಿಗಳು ದಬ್ಬಾಳಿಕೆ ನಡೆಸುತ್ತಿದ್ದಾರೆ. ಕಾರ್ಮಿಕರಿಗೆ ಇಎಸ್‌ಐ ಹಾಗೂ ಪಿಂಚಣಿ ಸೌಲಭ್ಯಗಳನ್ನು ಸರಿಯಾಗಿ ನೀಡುತ್ತಿಲ್ಲ. ಕರ್ತವ್ಯದಲ್ಲಿರುವಾಗಲೇ ಸಾವಿಗೀಡಾದ ಪೌರಕಾರ್ಮಿಕರ ಕುಟುಂಬಗಳಿಗೆ ಪರಿಹಾರ ನೀಡುವಲ್ಲಿಯೂ ವಿಳಂಬವಾಗುತ್ತಿದೆ ಎಂದು ಪ್ರತಿಭಟನಕಾರರು ದೂರಿದರು.

ಕೆಲಸದ ಸಂದರ್ಭದಲ್ಲಿ ಕುಡಿಯುವ ನೀರು, ಬಿಸಿಯೂಟ, ಶೌಚಾಲಯ, ವಿಶ್ರಾಂತಿ ವ್ಯವಸ್ಥೆ ಒದಗಿಸಬೇಕು. ಈ ಹಿಂದೆ ಉದ್ದ ಕೋಲಿನ ಪೊರಕೆ ನೀಡಲಾಗುತ್ತಿತ್ತು. ಅದರ ಪೂರೈಕೆ ಸ್ಥಗಿತಗೊಳಿಸಲಾಗಿದೆ. ಸುರಕ್ಷಾ ಸಾಧನಗಳನ್ನೂ ಒದಗಿಸುತ್ತಿಲ್ಲ. ಕಸ ಸಾಗಣೆಗೆ ಬಳಸುವ ತಳ್ಳುವ ಗಾಡಿಗಳನ್ನು ಹಿಂಪಡೆಯಲಾಗಿದೆ. ಅದರ ಬದಲು ಗೋಣಿ ಚೀಲಕ್ಕೆ ಕಸ ತುಂಬುವಂತೆ ಸೂಚನೆ ನೀಡಲಾಗಿದೆ. ಇದರಿಂದ ಪೌರಕಾರ್ಮಿಕರಿಗೆ ಸಮಸ್ಯೆ ಆಗಿದೆ ಎಂದು ಪ್ರತಿಭಟನಕಾರರು ಗಮನ ಸೆಳೆದರು.

ಪೌರಕಾರ್ಮಿಕರಿಗೆ ಮಾತೃತ್ವ ರಜೆ ಸೌಲಭ್ಯ ಒದಗಿಸುತ್ತಿಲ್ಲ. ಗರ್ಭಿಣಿಯರ ಬಯೋಮೆಟ್ರಿಕ್ ಕಾರ್ಡ್ ಕಿತ್ತುಕೊಳ್ಳಲಾಗುತ್ತದೆ. ಪೌರಕಾರ್ಮಿಕರ ಸಂಘಟನೆಗಳಲ್ಲಿ ಸಕ್ರಿಯರಾಗಿರುವವರಿಗೂ ಅನಗತ್ಯ ಕಿರುಕುಳ ನೀಡಲಾಗುತ್ತಿದೆ ಎಂದೂ ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನಾನಿರತರನ್ನು ಉದ್ದೇಶಿಸಿ ಮಾತನಾಡಿದ ಬಿಬಿಎಂಪಿ ವಿಶೇಷ ಆಯುಕ್ತ ಬಸವರಾಜ್ (ಆಡಳಿತ), 'ಪೌರಕಾರ್ಮಿಕರ ಬೇಡಿಕೆಗಳ ಈಡೇರಿಕೆ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತೇವೆ. ಪೌರಕಾರ್ಮಿಕರು ಕೆಲಸದ ವೇಳೆ ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಬಗೆಹರಿಸಲು ಇದೇ 27ರ ಒಳಗೆ ಕ್ರಮ ಕೈಗೊಳ್ಳುತ್ತೇವೆ' ಎಂದು ಭರವಸೆ ನೀಡಿದರು.

ಪೌರಕಾರ್ಮಿಕರ ಪ್ರಮುಖ ಬೇಡಿಕೆಗಳು

- ಎಲ್ಲ ಪೌರಕಾರ್ಮಿಕರಿಗೆ ಉಚಿತ ವಸತಿ ಕಲ್ಪಿಸಬೇಕು
- ಮಾತೃತ್ವ ರಜೆ ಸೌಲಭ್ಯ ನೀಡಬೇಕು
- ಹಬ್ಬ–ಹರಿದಿನಗಳಂದು ರಜೆ ನೀಡಬೇಕು

ಪಟ್ಟಣ ಸಹಕಾರಿ ಬ್ಯಾಂಕ್: ಆರ್‌ಬಿಐ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಪಟ್ಟಣ ಸಹಕಾರಿ ಬ್ಯಾಂಕ್‌ಗಳನ್ನು (ಯುಸಿಬಿ) ಇನ್ನಷ್ಟು ಬಲಪಡಿಸಲು ಮಾಡಬೇಕಿರುವ ಕಾರ್ಯಗಳೇನು ಎಂಬುದರ ಬಗ್ಗೆ ವರದಿ ಸಿದ್ಧಪಡಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸಮಿತಿಯೊಂದನ್ನು ರಚಿಸಿದೆ.

ಆರ್‌ಬಿಐನ ಮಾಜಿ ಡೆಪ್ಯುಟಿ ಗವರ್ನರ್ ಎನ್‌.ಎಸ್‌. ವಿಶ್ವನಾಥನ್ ಅವರು ಈ ಸಮಿತಿಯ ಅಧ್ಯಕ್ಷರಾಗಿರಲಿದ್ದಾರೆ. ಮೂರು ತಿಂಗಳುಗಳಲ್ಲಿ ಇದು ತನ್ನ ವರದಿಯನ್ನು ಆರ್‌ಬಿಐಗೆ ಸಲ್ಲಿಸಬೇಕಿದೆ. ಒಟ್ಟು ಎಂಟು ಜನರ ಸಮಿತಿ ಇದು.

ಬೆಂಗಳೂರಿನ ಆಡಳಿತ ನಿರ್ವಹಣಾ ಸಂಸ್ಥೆಯ (ಐಐಎಂ–ಬಿ) ಪ್ರೊ. ಎಂ.ಎಸ್‌. ಶ್ರೀರಾಮ್, ನಿವೃತ್ತ ಐಎಎಸ್ ಅಧಿಕಾರಿಗಳಾದ ಎನ್‌.ಸಿ. ಮುನಿಯಪ್ಪ, ಆರ್‌.ಎನ್‌. ಜೋಷಿ, ನಬಾರ್ಡ್‌ನ ಮಾಜಿ ಅಧ್ಯಕ್ಷ ಹರೀಶ್ ಕುಮಾರ್ ಭನ್ವಾಲಾ, ಲೆಕ್ಕಪರಿಶೋಧಕ ಮುಕುಂದ ಎಂ. ಚಿತಲೆ, ಪಟ್ಟಣ ಸಹಕಾರಿ ಬ್ಯಾಂಕ್‌ಗಳ ರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷ ಜ್ಯೋತೀಂದ್ರ ಮೆಹ್ತಾ ಅವರು ಈ ಸಮಿತಿಯ ಸದಸ್ಯರು.

ಉಚಿತ ಕಂಪ್ಯೂಟರ್ ಕಲಿಕಾ ತರಬೇತಿ ಶಿಬಿರ

ಬೆಂಗಳೂರು: ಮಲ್ಲೇಶ್ವರದಲ್ಲಿರುವ ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯು ಮಹಿಳಾ ಉದ್ಯಮಿಗಳು ಮತ್ತು ಗೃಹಿಣಿಯರಿಗೆ ಉಚಿತ ಕಂಪ್ಯೂಟರ್ ಕಲಿಕಾ ತರಬೇತಿ ಶಿಬಿರ ಹಮ್ಮಿಕೊಂಡಿದೆ.

ಮಹಿಳೆಯರಲ್ಲಿ ಕಂಪ್ಯೂಟರ್ ಜ್ಞಾನ ಹೆಚ್ಚಿಸುವುದು ಮತ್ತು ಆತ್ಮ ವಿಶ್ವಾಸ ಬೆಳೆಸುವುದು ಈ ಶಿಬಿರದ ಮುಖ್ಯ ಉದ್ದೇಶ. ಮಾರ್ಚ್ ಮೊದಲ ವಾರದಿಂದ 12 ದಿನಗಳು ಶಿಬಿರ ನಡೆಯಲಿದೆ. ಸಾಮಾನ್ಯ ಕಂಪ್ಯೂಟರ್, ನುಡಿ ತಂತ್ರಾಂಶ, ಅಂತರ್ಜಾಲ ಮತ್ತು ಇ-ಮೇಲ್ ಬಳಕೆ, ಬ್ಯಾಂಕ್ ಉತ್ಪನ್ನಗಳ ಪರಿಚಯ, ದೈನಂದಿನ ಬ್ಯಾಂಕಿಂಗ್ ವ್ಯವಹಾರ, ಇಂಗ್ಲಿಷ್‌ನಲ್ಲಿ ಮಾತನಾಡುವುದು, ಧ್ಯಾನ ಮತ್ತು ಯೋಗದ ಬಗ್ಗೆ ಕಲಿಸಲಾಗುತ್ತದೆ.

ಆಸಕ್ತ ಮಹಿಳಾ ಉದ್ಯಮಿಗಳು ಮತ್ತು ಗೃಹಿಣಿಯರು ಎಂ. ವೆಂಕಟೇಶ ಶೇಷಾದ್ರಿ, ನಿರ್ದೇಶಕರು, ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆ, ಮಲ್ಲೇಶ್ವರ, ಬೆಂಗಳೂರು ಈ ವಿಳಾಸಕ್ಕೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ವಿವರಕ್ಕೆ ದೂ.: 080 23440036 ಅಥವಾ 94485 38107

'ಶಾಲೆಗಳಿಗೆ ನೀರು: ನೆರೆ ರಾಜ್ಯ ಮಾದರಿ ಅನುಸರಿಸಿ'

ಪ್ರಜಾವಾಣಿ ವಾರ್ತೆ


ಪ್ರೊ. ಎಂ.ಆರ್. ದೊರೆಸ್ವಾಮಿ

ಬೆಂಗಳೂರು: 'ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ನೆರೆ ರಾಜ್ಯಗಳ ಮಾದರಿಯನ್ನು ರಾಜ್ಯ ಸರ್ಕಾರ ಅನುಸರಿಸಬೇಕು' ಎಂದು ಸರ್ಕಾರದ ಶೈಕ್ಷಣಿಕ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ ಹೇಳಿದ್ದಾರೆ.

'ಪಕ್ಕದ ತೆಲಂಗಾಣದ ಸರ್ಕಾರಿ ಶಾಲೆಗಳು ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿನ ಸಂಪೂರ್ಣ ಅನುದಾನ ಬಳಸಿಕೊಂಡು ಮಕ್ಕಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಕೇವಲ 100 ದಿನಗಳಲ್ಲಿ ಅಭಿಯಾನದಲ್ಲಿ ಶೇ 100ರಷ್ಟು ಸಾಧನೆ ಮಾಡಲಾಗಿದೆ. ಈ ಮಾದರಿಯನ್ನು ಕರ್ನಾಟಕವೂ ಅನುಸರಿಸಬೇಕು' ಎಂದು ಅವರು ಸಲಹೆ ನೀಡಿದ್ದಾರೆ.

'ಇದೇ ಯೋಜನೆಯಡಿ ಗೋವಾ, ಆಂಧ್ರಪ್ರದೇಶ, ತಮಿಳುನಾಡು, ಹರಿಯಾಣ ಮತ್ತು ಹಿಮಾಚಲ ಪ್ರದೇಶ ಕೂಡ ಸರ್ಕಾರಿ ಶಾಲೆಗಳಿಗೆ ಮತ್ತು ಅಲ್ಲಿನ ಅಡುಗೆ ಕೋಣೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿವೆ' ಎಂದು ಅವರು ಹೇಳಿದ್ದಾರೆ.

'ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ತನ್ನ 'ಪರಿಹಾರ' ಯೋಜನೆಯಡಿಯಲ್ಲಿ ರಾಜ್ಯದ ಸರ್ಕಾರಿ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಈ ಹಣಕಾಸು ವರ್ಷ ಪೂರ್ಣವಾಗುವುದರೊಳಗೆ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಬೇಕು' ಎಂದೂ ದೊರೆಸ್ವಾಮಿ ಒತ್ತಾಯಿಸಿದ್ದಾರೆ.

ಭಾರತದಲ್ಲಿ ಹೆಚ್ಚಲಿದೆ ಕುಬೇರರ ಸಂಖ್ಯೆ

ನವದೆಹಲಿ (ಪಿಟಿಐ): ಭಾರತದಲ್ಲಿ 30 ಮಿಲಿಯನ್ ಡಾಲರ್‌ಗಿಂತ (₹ 217 ಕೋಟಿ) ಹೆಚ್ಚಿನ ಆಸ್ತಿ ಹೊಂದಿರುವ ಕುಬೇರರ ಸಂಖ್ಯೆಯು ಮುಂದಿನ ಐದು ವರ್ಷಗಳಲ್ಲಿ ಶೇಕಡ 63ರಷ್ಟು ಹೆಚ್ಚಳ ಆಗುವ ಸಾಧ್ಯತೆ ಇದೆ ಎಂದು ನೈಟ್ ಫ್ರ್ಯಾಂಕ್ ಇಂಡಿಯಾ ವರದಿ ಹೇಳಿದೆ.

ವರದಿಯ ಪ್ರಕಾರ ವಿಶ್ವದಲ್ಲಿ ಇಷ್ಟು ಆಸ್ತಿ ಹೊಂದಿರುವ ವ್ಯಕ್ತಿಗಳ ಸಂಖ್ಯೆ 5.21 ಲಕ್ಷ. ಇಷ್ಟು ಆಸ್ತಿ ಹೊಂದಿರುವ ಭಾರತೀಯರ ಸಂಖ್ಯೆಯು 6,884. ಈ ಸಂಖ್ಯೆಯು ಐದು ವರ್ಷಗಳಲ್ಲಿ 11,198ಕ್ಕೆ ಏರಿಕೆ ಆಗಲಿದೆ ಎಂದು ವರದಿ ಅಂದಾಜಿಸಿದೆ. ವಿಶ್ವದಲ್ಲಿ ಇಂತಹ ಶ್ರೀಮಂತರ ಪ್ರಮಾಣವು ಐದು ವರ್ಷಗಳಲ್ಲಿ ಶೇ 27ರಷ್ಟು ಹೆಚ್ಚಳ ಆಗಲಿದೆ ಎಂದು ವರದಿ ಹೇಳಿದೆ. ಭಾರತವು ಆರ್ಥಿಕವಾಗಿ ಇನ್ನಷ್ಟು ಬಲಿಷ್ಠವಾಗಲಿದೆ, ಏಷ್ಯನ್ ಸೂಪರ್‌ಪವರ್ ಎಂಬ ಸ್ಥಾನ ಪಡೆದುಕೊಳ್ಳಲಿದೆ ಎಂದು ನೈಟ್ ಫ್ರ್ಯಾಂಕ್ ಇಂಡಿಯಾದ ಅಧ್ಯಕ್ಷ ಶಿಶಿರ್ ಬೈಜಾಲ್ ಹೇಳಿದ್ದಾರೆ.

JAWAHAR NAVODAYA VIDYALAYA, DODDABALLAPUR, BANGALORE RURAL

Date: 24.02.2021

TENDER NOTICE

Sealed Tenders are invited from the reputed firms / manufacturers/ suppliers / distributors/ Services for the supply of following items to this Vidyalaya for the year 2020-21.

1. Tiles 2. Granite 3. Fall ceiling material 4. Cemented Kerb Stones 5. Paver blocks 6. Cement. 7. Labour charges for fixing tiles, fall ceiling etc.

The Tender documents can be obtained from the Office between **9.00 AM to 4.00 PM** on all working days by paying an amount of Rs. 200/- The tender schedule can be downloaded from the Vidyalaya **website https://www.navodaya.gov.in/nvs/nvs-school/BANGALORERURAL/en/home.** The last date for sale of tender from is 18.03.2021 by 1.00 pm submit sealed tenders on 19.03.2021 by **4.00 pm by HAND/POST.** The tenders will be opened on 20.03.2020 at 11.00 am. Contact numbers 8116438494 (Principal) \ 8639711505 (OS).

Sd/- Principal

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100 ದೂರವಾಣಿ : 080–41362000 ಫ್ಯಾಕ್ಸ್ : 080–41362010
ವೆಬ್‌ಸೈಟ್ : www.timken.com/en-in ಇ–ಮೇಲ್: tilinvestor@timken.com

ಈ ಪ್ರಕಾರವಾದ 28 ಷೇರು ಸರ್ಟಿಫಿಕೇಟುಗಳು ಪ್ರತಿ ಷೇರಿಗೆ ರೂ.10/– ರಂತೆ ಕಂಪನಿಯ ಒಟ್ಟಾರೆ 1874 ಈಕ್ವಿಟಿ ಷೇರುಗಳನ್ನು ಹೊಂದಿರುವ ಸಂಖ್ಯೆಗಳು 161899, 161900, 29371, 94624, 9462, 567975, 136620, 136621, 224910, 55529, 121361, 121362, 180116, 51794, 59122, 50381, 115902, 115903, 4566, 27643, 76500, 84512, 156107, 156108, 42275, 55579, 69969 ಹಾಗೂ 46824 ಮತ್ತು ಶಾಲಿನಿ ಎ ಡಿ ಸೌಜ ಜೊತೆಯಲ್ಲಿ ಮಿಸ್ಟರ್ ಐ ಎ ಡಿ ಸೌಜ ಜೊತೆಯಲ್ಲಿ ಮಿಸಸ್ ರೋಸ್ ಡಿ ಸೌಜ, ನೀಲಕಂಠ್ ಕುಮಾರ್ ಷಾ, ಸಸ್‌ವತಿ ಮುಖರ್ಜಿ, ನಿಲೇಶ್ ವಾಡಿಲಾಲ್ ಷಾ ಜೊತೆಯಲ್ಲಿ ವಾಡಿಲಾಲ್ ಮಣಿಲಾಲ್ ಷಾ, ಕಾಂಚನ್‌ಬೆನ್ ಭೋಗಿಲಾಲ್ ಮೆಹ್ತಾ, ಭರತ್ ಜೈನ್, ಗೀತೂ ಸೂಡ್, ಓಂ ಪ್ರಕಾಶ್ ಖನ್ನಾ, ಅಜೋಯ್ ಕುಮಾರ್ ಮುಖರ್ಜಿ ಜೊತೆಯಲ್ಲಿ ಬೇಬಿ ಮುಖರ್ಜಿ, ಶಿವ್‌ಕುಮರ, ಓಂಪ್ರಕಾಶ್ ಮಹವೀರ ಪ್ರಸಾದ್ ಮುರರ್ಕ, ಮನೋಜ್ ನವೀನ್‌ಚಂದ್ರ ಷಾ, ಸತೀಶ್ ಕುಮಾರ್, ರಾಕೇಶ್ ಕುಮಾರ್ ಧವನ್, ಶ್ಯಾಂ ಸುಂದರ್ ಚೌರಾಸಿಯ ಜೊತೆಯಲ್ಲಿ ಮಾಯ ದೇಬಿ ಚೌರಾಸಿಯ ಮತ್ತು ಉಮೇಶ್ ಸಹಜ್ವಾನಿ ಜೊತೆಯಲ್ಲಿ ಕವಿತಾ ಸಹಜ್ವಾನಿ ಇವರ ಹೆಸರುಗಳಲ್ಲಿ ನೋಂದಾಯಿತವಾದ ಟಿಮ್‌ಕೆನ್ ಇಂಡಿಯಾ ನಿಯಮಿತದ ಡಿಸ್ಟಿಂಕ್ಟಿವ್ ಸಂಖ್ಯೆಗಳು. 44724055–104, 44724105–108, 36935901–6000, 42777467–516, 42777517–520, 40796301–400, 43981975–2024, 43982025–028, 41329501–600, 39551701–800, 43547882–931, 43547932–935, 62308178–227, 39178201–300, 39911001–100, 39036901–7000, 43390289–338, 43390339–342, 34455401–500, 36763101–200, 41648801–900, 42450001–100, 44537863–912, 44537913–916, 38226301–400, 39556701–800, 40995701–800 ಮತ್ತು 38681201–300 ಗಳನ್ನು ಒಳಗೊಂಡ ಎಲ್ಲಾ ಷೇರು ಸರ್ಟಿಫಿಕೇಟುಗಳು ಕಾಣೆಯಾಗಿದ್ದು, ಮೇಲೆ ತಿಳಿಸಿರುವ ಎಲ್ಲಾ ಷೇರುದಾರರಿಂದ ಇದರ ಬದಲಾಗಿ ಷೇರು ಸರ್ಟಿಫಿಕೇಟುಗಳ ಪ್ರತಿಗಳನ್ನು ನೀಡಲು ಕಂಪನಿಯು ಅರ್ಜಿಗಳನ್ನು ಸ್ವೀಕರಿಸಿದೆ ಎಂದು ಈ ಮೂಲಕ ಪ್ರಕಟಿಸಲಾಗಿದೆ. ಸದರಿ ಪ್ರಕಟಣೆಯಲ್ಲಿ ತಿಳಿಸಿರುವಂತೆ ಮೂಲ ಷೇರು ಸರ್ಟಿಫಿಕೇಟುಗಳ ಕಣ್ಮರೆ ಬದಲಾಗಿ ಸರ್ಟಿಫಿಕೇಟುಗಳ ಪ್ರತಿಯನ್ನು ನೀಡಲು ಯಾವುದೇ ವ್ಯಕ್ತಿಗೆ (ಗಳಿಗೆ) ಆಕ್ಷೇಪಣೆಗಳು ಇದ್ದಲ್ಲಿ, ಈ ಪ್ರಕಟಣೆಯು ಪ್ರಕಟಗೊಂಡ 7 ದಿನದೊಳಗೆ ಮೇಲೆ ತಿಳಿಸಿರುವ ವಿಳಾಸಕ್ಕೆ ತನ್ನ/ತಮ್ಮ/ಅವರ ಆಕ್ಷೇಪಣೆಗಳನ್ನು ಕಂಪನಿಗೆ ಸಲ್ಲಿಸಬೇಕು ಎಂಬುದಾಗಿ ಇದರಲ್ಲಿ ಸೂಚಿಸಿರುವಂತೆ ನಿಮ್ಮನ್ನು/ತಮ್ಮನ್ನು ವಿನಂತಿಸಲಾಗಿದೆ. ತದನಂತರ ಕಂಪನಿಯು ಕಳೆದು ಹೋಗಿರುವ ಮೂಲ ಷೇರು ಸರ್ಟಿಫಿಕೇಟುಗಳಿಗೆ ಬದಲಾಗಿ ಸರ್ಟಿಫಿಕೇಟುಗಳ ಪ್ರತಿಯನ್ನು ನೀಡಲು ತೀರ್ಮಾನಿಸುತ್ತದೆ. ಸಾರ್ವಜನಿಕರು ಕಳೆದು ಹೋಗಿರುವ ಮೇಲಿನ ಷೇರು ಸರ್ಟಿಫಿಕೇಟುಗಳೊಂದಿಗೆ ಯಾವುದೇ ರೀತಿಯಲ್ಲೂ ಸಹ ವ್ಯವಹರಿಸಬಾರದೆಂದು ಎಚ್ಚರಿಕೆ ನೀಡಲಾಗುತ್ತಿದೆ.

ಸ್ಥಳ: ಬೆಂಗಳೂರು
ದಿನಾಂಕ: 24.02.2021

ಟಿಮ್‌ಕೆನ್ ಇಂಡಿಯಾ ನಿಯಮಿತ ಪರವಾಗಿ
ಸಹಿ/– ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ–ಕಾಂಪ್ಲಯನ್ಸ್

ಸಂಕ್ಷಿಪ್ತ ಸುದ್ದಿ

'ಸ್ವಚ್ಛತಾ ಕಾರ್ಮಿಕರಿಗೆ ಸುರಕ್ಷಾ ಸಾಧನ ಕಡ್ಡಾಯ'

ಬೆಂಗಳೂರು: ಬಿಬಿಎಂಪಿಯ ಎಲ್ಲ ಪೌರಕಾರ್ಮಿಕರಿಗೆ ಹಾಗೂ ಒಳಚರಂಡಿ ಸ್ವಚ್ಛಗೊಳಿಸುವ ಜಲಮಂಡಳಿ ಸಿಬ್ಬಂದಿ ಸೇರಿದಂತೆ ಎಲ್ಲ ಸ್ವಚ್ಛತಾ ಸಿಬ್ಬಂದಿಗೆ ಅಗತ್ಯ ಸುರಕ್ಷಾ ಸಾಧನಗಳನ್ನು ಕಡ್ಡಾಯವಾಗಿ ಒದಗಿಸಬೇಕು. ಹಾಗೂ ಕಾರ್ಮಿಕರು ಅವುಗಳನ್ನು ಬಳಸುವುದನ್ನು ಖಾತರಿಪಡಿಸಿಕೊಳ್ಳಬೇಕು ಎಂದು ನಗರಾಭಿವೃದ್ಧಿ ಇಲಾಖೆ ಬುಧವಾರ ಸುತ್ತೋಲೆ ಹೊರಡಿಸಿದೆ.

ಸ್ವಚ್ಛತಾ ಕಾರ್ಯ ನಿರ್ವಹಿಸುವ ಸಂದರ್ಭಗಳಲ್ಲಿ ಅವಘಡಗಳು ನಡೆಯದಂತೆ ತಡೆಯಲು ಸಾಕಷ್ಟು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಒಳಚರಂಡಿಯನ್ನು ಹಾಗೂ ಮಲಗುಂಡಿಗಳನ್ನು ಸ್ವಚ್ಛಗೊಳಿಸುವಾಗ ಸ್ಥಳದಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಬೇಕು. ಕಾರ್ಮಿಕರಿಗೆ ಅಗತ್ಯ ಇರುವ ಎಲ್ಲ ಪರಿಕರಗಳನ್ನು ಒದಗಿಸಬೇಕು ಎಂದೂ ಸೂಚಿಸಲಾಗಿದೆ.

ಕೆಎಸ್‌ಆರ್‌ಪಿ: 126 ಕಾನ್‌ಸ್ಟೆಬಲ್‌ಗೆ ಪದೋನ್ನತಿ

ಬೆಂಗಳೂರು: ರಾಜ್ಯ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) 126 ಕಾನ್‌ಸ್ಟೆಬಲ್‌ಗಳಿಗೆ ಹೆಡ್ ಕಾನ್‌ಸ್ಟೆಬಲ್ ಹುದ್ದೆಗೆ ಪದೋನ್ನತಿ ನೀಡಲಾಗಿದೆ.

'ಆರು ವರ್ಷ ಸೇವೆ ಪೂರ್ಣಗೊಳಿಸಿದ್ದ 27 ವರ್ಷದ ವಿಶಾಲ್ ಹೊಸಮನಿ ಸೇರಿದಂತೆ ಹಲವರಿಗೆ ಪದೋನ್ನತಿ ನೀಡಿರುವುದು ಇದೇ ಮೊದಲು' ಎಂದು ಕೆಎಸ್‌ಆರ್‌ಪಿ ಎಡಿಜಿಪಿ ಅಲೋಕ್‌ಕುಮಾರ್ ತಿಳಿಸಿದ್ದಾರೆ.

ಹೊಸದಾಗಿ 48 ಕಡೆ ಪಾಸ್ ಕೌಂಟರ್

ಬೆಂಗಳೂರು: ಮಾಸಿಕ ರಿಯಾಯಿತಿ ಪಾಸ್‌ಗಳ ವಿತರಣೆಗೆ ಹೊಸದಾಗಿ 48 ಕೌಂಟರ್‌ಗಳನ್ನು ತೆರೆಯಲಾಗುತ್ತಿದ್ದು, ಗುರುವಾರದಿಂದ ಪಾಸ್ ವಿತರಣೆ ಮಾಡಲಾಗುವುದು ಎಂದು ಬಿಎಂಟಿಸಿ ತಿಳಿಸಿದೆ.

ಬಿಎಂಟಿಸಿ ಬಸ್ ನಿಲ್ದಾಣ ಹಾಗೂ ಇತರೆಡೆ ಸೇರಿ 65 ಕಡೆ ಪಾಸ್ ವಿತರಣೆ ಮಾಡಲಾಗುತ್ತಿತ್ತು. ನಗರದ ಎಲ್ಲ 200 ಬೆಂಗಳೂರು ಒನ್ ಕೇಂದ್ರಗಳಲ್ಲೂ ಪಾಸ್ ಲಭ್ಯವಿತ್ತು. ಇದಲ್ಲದೇ ಹೊಸದಾಗಿ 48 ಕೌಂಟರ್ ತೆರೆಯಲಾಗುತ್ತಿದೆ. 12 ಬಸ್ ನಿಲ್ದಾಣಗಳಲ್ಲಿ ಪಾಸ್ ಕೌಂಟರ್ ಇಲ್ಲದ ಕಾರಣ ಅಲ್ಲಿ ಫೆ.27ರಿಂದ ಮಾ.2 ರವರೆಗೆ ಸಾರಥಿ ವಾಹನಗಳ ಮೂಲಕ ಪಾಸ್ ವಿತರಣೆ ಮಾಡಲಾಗುವುದು ಎಂದು ತಿಳಿಸಿದೆ.

ವಿದ್ಯುತ್ ವ್ಯತ್ಯಯ 27ರಂದು

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 27ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ರಾಮಯ್ಯ ಬಡಾವಣೆ, 8ನೇ ಮೈಲಿ, ಡಿಫೆನ್ಸ್ ಕಾಲೊನಿ, ಮುನಿಕೊಂಡಪ್ಪ ಬಡಾವಣೆ, ಮುನೇಶ್ವರ ನಗರ, ಹೆಸರಘಟ್ಟ ಮುಖ್ಯರಸ್ತೆ, ಮಂಜುನಾಥನಗರ, ಹರಿಕುಮಾರ ಬಡಾವಣೆ, ಸೋಪ್ ಫ್ಯಾಕ್ಟರಿ ಬಡಾವಣೆ, ಗಣಪತಿನಗರ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಯುಜಿಸಿ–ಬಿಎಸ್‌ಆರ್ ಯೋಜನೆಯಡಿ ಯೋಜನಾ ಸಹಾಯಕ (ಪ್ರಾಜೆಕ್ಟ್ ಅಸಿಸ್ಟೆಂಟ್) ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎರಡು ವರ್ಷಗಳ ಅವಧಿಗೆ ತಿಂಗಳಿಗೆ ₹15 ಸಾವಿರ ವೇತನ ನಿಗದಿಪಡಿಸಲಾಗಿದೆ. ಎಂಎಸ್‌ಸಿ ಸಾವಯವ ರಸಾಯನವಿಜ್ಞಾನ ವಿಭಾಗದಲ್ಲಿ ಶೇ 55ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾ.3ರೊಳಗೆ ಸ್ವ–ವಿವರ ಸಲ್ಲಿಸಬೇಕು ಎಂದು ಬೆಂಗಳೂರು ವಿಶ್ವವಿದ್ಯಾಲಯದ ರಸಾಯನವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಎಂ.ಎ. ಪಾಷಾ ತಿಳಿಸಿದ್ದಾರೆ.

ಅರ್ಜಿಯನ್ನು ವಿಭಾಗಕ್ಕೆ ತೆರಳಿ ಪಾಷಾ ಅವರಿಗೆ ಸಲ್ಲಿಸಬಹುದು ಅಥವಾ mdafpasha@gmail.com ಗೆ ಮೇಲ್ ಮಾಡಬಹುದು.

ರಾಮಮಂದಿರಕ್ಕೆ ₹1.01 ಕೋಟಿ ದೇಣಿಗೆ

ಮಂಗಳೂರು: ರಾಮಮಂದಿರ ನಿರ್ಮಾಣಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಎಸ್‌ಸಿಡಿಸಿಸಿ) ಹಾಗೂ ನವೋದಯ ಸ್ವಸಹಾಯ ಸಂಘಗಳ ಮೂಲಕ ಸಂಗ್ರಹಿಸಿದ ₹1.01 ಕೋಟಿ ದೇಣಿಗೆಯನ್ನು ರಾಮಮಂದಿರ ತೀರ್ಥ ಕ್ಷೇತ್ರ ಟ್ರಸ್ಟ್ ಸದಸ್ಯರಾದ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರಿಗೆ ಹಸ್ತಾಂತರಿಸಲಾಯಿತು.

ನಗರದಲ್ಲಿ ಬುಧವಾರ ನಡೆದ ಪೇಜಾವರ ಶ್ರೀಗಳ ಗುರುವಂದನಾ ಕಾರ್ಯಕ್ರಮದಲ್ಲಿ ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಂ.ಎನ್. ರಾಜೇಂದ್ರಕುಮಾರ್, ಸಚಿವ ಮುರುಗೇಶ್ ನಿರಾಣಿ ಅವರು ಚೆಕ್ ಹಸ್ತಾಂತರಿಸಿದರು.

ದಕ್ಷಿಣ ಮಧ್ಯ ರೈಲ್ವೆ

ನಮ್ಮನ್ನು ಅನುಸರಿಸಿ @SCRailwayindia
ದ.ಮ.ರೈಲ್ವೇಯ ಟೆಂಡರ್ ಪ್ರಕಟಣೆಗಳ ವಿವರಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು: www.scr.indianrailways.gov.in

ಬಹಿರಂಗ ಇ–ಟೆಂಡರ್ ಪ್ರಕಟಣೆ ಸಂ. ಸಿ/ಇ.29/ಇಲೆಕ್/ಎಂ/ಎಸ್‌ಸಿ/30/ಎಲ್‌ಸಿ/ಒಟಿ/2020–21 ದಿ: 22.02.2021.

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗೆ ಸಹಿ ಹಾಕಿರುವವರು ಕೆಳಕಂಡ ಕಾಮಗಾರಿಗಾಗಿ **16–03–2021** ರಂದು **15.00 ಗಂಟೆವರೆಗೆ** ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ.ಸಂ.1: ಇ–ಟೆಂಡರ್ ನಂ.: ಇಟೆಂಡರ್ ನಂ. ಸಿ/ಇ.29/ಇಲೆಕ್/ಎಂ/ಎಸ್‌ಸಿ/30/ಎಲ್‌ಸಿ/ಒಟಿ/2020–21 ಇಟೆಂಡರ್ ನಂ. ಇ–ಎಂ–ಎಸ್‌ಸಿ–30–ಒಟಿ–2020–21 **ಕಾಮಗಾರಿ ಹೆಸರು:** ಸಿಕಂದರಾಬಾದ್ ಡಿವಿಜನ್–ಇಲೆಕ್ಟ್ರಿಕಲ್ ಮೈಂಟೇನೆನ್ಸ್ ಡಿಪಾರ್ಟ್‌ಮೆಂಟ್–(1) ದ.ಮ. ಡಿವಿಜನ್‌ನ ಎಲ್‌.ಸಿ. ಗೇಟ್ ನಂ. 12,18,23,52,27,42 ಗಳಲ್ಲಿ ಇಂಟರ್‌ಲಾಕಿಂಗ್ (2) ದ.ಮ. ಡಿವಿಜನ್‌ನ ವಿಕೆಬಿ–ಎಸ್‌ಎಸ್‌ಪಿಡಿ ನಿಲ್ದಾಣಗಳ ಮಧ್ಯೆ ಎಲ್‌.ಸಿ. ನಂ.2 ಇಂಟರ್‌ಲಾಕಿಂಗ್‌ಗೆ ಸಂಬಂಧಿಸಿದ ಸಿಗ್ನಲ್ಲಿಂಗ್ ಅರೇಂಜ್‌ಮೆಂಟ್ಸ್. **ಟೆಂಡರ್ ಮೌಲ್ಯ (ರೂ.):** 2494045.00. **ಇಎಂಡಿ (ರೂ.):** ಶೂನ್ಯ. **ಟೆಂಡರ್ ಫಾರಂ ಶುಲ್ಕ (ರೂ.):** ಶೂನ್ಯ. **ಪೂರ್ಣಗೊಳಿಸುವ ಅವಧಿ:** 90 ದಿನಗಳು.

ಸೀ. ಡಿವಿಜನಲ್ ಎಲೆಕ್ಟ್ರಿಕಲ್ ಇಂಜಿನಿಯರ್, (ಮೈಂಟೇನನ್ಸ್) ಸಿಕಂದರಾಬಾದ್.

A0194 PUB/0124

ಟೆಂಡರ್ ಕುರಿತ ಹೆಚ್ಚಿನ ವಿವರಗಳು/ಷರತ್ತುಗಳಿಗಾಗಿ ಮತ್ತು ಟೆಂಡರ್ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು, ದಯವಿಟ್ಟು ನಮ್ಮ ಕೆಳಗಿನ ವೆಬ್‌ಸೈಟ್‌ಗಳಿಗೆ ಭೇಟಿ ನೀಡಿ:
http://www.ireps.gov.in or www.scr.indianrailways.gov.in

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

B.B.U.L. JAIN VIDYALAYA, 84, K.R. Road, Shankarapuram, Bangalore-4 Phone: 22422936/ 41554379. Requires Qualified, Trained & Experienced TEACHERS for High School- English, Social Science, Maths, Science, P.T., ART and LIBRARIAN. Walk-in Interview on 01-03-2021 from 10am to 1pm.

Accounts & Finance

WANTED ACCOUNTANT, Experienced Knowledge in Tally, GST, TDS. Vedanth Electricals, Banashankari, Near BDA Complex. 9341833353/ 9986033339

General

REQUIRED HR Admin, Manager, Accounts, BE, Diploma, B-Tech, M-Tech, MSc, Mechanical, Electrical, Computer Engineers: 7676760299

WANTED FOR Reputed Company, Graduates Age- 30-70, Bangalore only, Earn: 30,000- 50,000. Contact: 9008305194/ 9880441530.

BUSINESS

Business to Business

Finance

NRI'S INVESTMENT AND FINANCE AVAILABLE ON LOW INTEREST AGAINST PROPERTIES,LAND & BUILDINGS, SITES, FLATS ALSO COMPANIES, BUSINESSES CALL:7411265189

Business

ATTENTION!!! I am in need of Immediate Personal Loan from private financiers, Genuine financier who are willing to lend please call or WhatsApp 8884369438

GET 24% Annual ROI in Your Own Trading/ Demat Account. Capital Required Min 3Lakhs. Call: 7872221837

PUBLIC NOTICE

PUBLIC NOTICE

The undersigned would bring to the Public kind notice that I am the absolute owner of the Property bearing Sy.No.3/2 situated at Amblipura Village, now Bangalore East Taluk from one Nanjappa by virtue of the absolute registered Sale Deed registered vide Document No.6394, Book No.1, Volume N0.4031, Page No.117-123 and same was registered before the Sub-registrar at Bangalore South and also I have purchased another Property bearing Old Sy.No.18, Re-survey No.18/1b situated at Kaikondarahalli Village, now Bangalore East Taluk from Jayarama Reddy, Jayakanathamma, Neethu, Kusuma and Ravichandra on 31-03-2001 which is registered before the Sub-registrar vide Document No.11466/2000-01, Volume No.4839, Page No. 48 to 55 and these Original documents are misplaced on 15.02.2021 at Bellandur for which I have already lodged a Complaint before the jurisdictional Station as well as I am also requesting the General Public in the event of trace-out of the above said documents please contact the undersigned and handover the same.

B.N. Radhamma
W/o Late Narayana Reddy
R/at No.3/2, Amblipura Village, Sarjapura Road, Bellandur Gate, Bangalore-560103.
Mobile No. 9742002200

RENTAL PROPERTIES

Accommodation Available

Commercial

SHOWROOM_&_OFFICE_SPACES FURNISHED & Unfurnished Available for Rent.T Dasarahalli, 8th Mile, Tumkur Road, Ph: 9391024959

House

2BHK, GROUND floor, for LEASE/ RENT, Vidhyagiri Layout, Nagarabhavi Circle, 9880220290

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

REAL ESTATE SELLING

Sites

Hosur Road

APPROX. ONE Acre Industrial Land for Sale. Power, Water available. Papers upto date. Ideal for Pharma as well. Brokers Excuse. Contact: 9620938350/ 9342825263.

Agricultural Land

Out-Station

ಕೃಷಿ ಜಮೀನು ಮಾರಾಟಕ್ಕಿದೆ

ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ಕಬ್ಬಳಿ ಮತ್ತು ನಗರಾಳು ಗ್ರಾಮದ ಸರ್ವೆ ನಂ. 54/1, 226/2 ಮತ್ತು 226/5 ಗಳಲ್ಲಿರುವ ಅನುಕ್ರಮವಾಗಿ 0.33, 1.04, 1.03 ಎಕರೆ ಜಮೀನು ಮಾರಾಟಕ್ಕಿದೆ. ಆಸಕ್ತಿಯುಳ್ಳವರು ದಯವಿಟ್ಟು ಸಂಪರ್ಕಿಸಿ:
ಶ್ರೀ. ರಾಕೇಶ್ ಕುಮಾರ್, ಮೊಬೈಲ್: 9448282251.
ದಲ್ಲಾಳಿ ಮತ್ತು ಬ್ರೋಕರ್‌ಗಳಿಗೆ ಅವಕಾಶವಿಲ್ಲ.

PERSONAL

Change of Name

KALPANA W/O. 14845976N, SEP, Khade Mahendra Ginyandev, Vill: Karanjwan Therla Patoda Beed Maharashtra, name KALPANA to KALPANA MAHENDRA KHADE notary K.V. Mani, Bangalore.

REEBA RAI W/o. 14814781F, HAV/MT, Sanjay Kumar Rai, Vill: Narshingpur, Kanwan, Mohamdabad, Ghazipur, UP, name REEBA RAI to REEVA RAI notary K.V. Mani, Bangalore.

I PRATYUSH PARISH MITTAL S/o. Parish Suresh Mittal residing at 33, H.B. Samaja Road, Basavangudi, Bengaluru-4. My name is Pratyush Parish Mittal in all documents except Old passport. Hence forth, I shall be known as Pratyush Parish Mittal only through affidavit dated 23/2/2021 before Notary Aravind Patil.

RENU TIWARI W/o 14815844L- HAV/MT- JITENDRA TIWARI R/a Arak, Buxar, Bihar, changed name from RENU TIWARI to RENU DEVI notary KV Mani Bangalore.

I, PRABHU Susairaj. H S/o A.S.Henry R/at. No.M-28, 5th cross, Behind seva ashrama school, Swatantranagar, Srirampuram, Bangalore-21, Wrongly mentioned my name as PRABHU SUSAI RAJ in my son SIMEON ISAAC. P's school records/Marks sheet, Here declaring that my correct name is PRABHU SUSAIRAJ. H only vide affidavit 20/02/2021 notary Smt.Vatsala, Bangalore

I, JULLIET. P D/o. J.Paul, W/o. K.John Prakash Residing at No.33, 1st cross, Bachappa Layout, Subbannapalya, Maruthi Sevanagar, Bangalore-33, Have changed my name from ALICE JULLIET. P to JULLIET. P vide affidavit dated 23/02/2021 before notary O.S.Chengappa, Bangalore.

I, PETA Dhakshayani , aged 40, W/o K Bhuloka Reddy residing at #198, P.L.D Venkatesh Building, Madapatna, Jigani Hobli, Bengaluru- 560105 have changed my name from K Dhakshayani to Peta Dhakshayani. Vide Affidavit dated 10/12/2020 sworn before advocate and notary Muniswamy T, Bengaluru

I, SOSAMMA KOCHVE TTIL VARGHESE residing at 202, Royal Greens, 12, 15th Cross, Tankband road, J.P.Park, Mathikere, Bangalore-560054 have changed my name to SUSAMMA RAJU vide affidavit dated 02.02.2021 before notary V.Anjanappa, Bangalore-57.

I, AMITH SELOSTIN FERNANDEZ R/at No.1B, 605, the Tree by Provident, 6th Block, 2nd main Syndicate Bank Layout, Herohalli Bangalore- 560091 have changed my name to AMITH SALUSTINE FERNANDES vide affidavit dated: 23/2/2021 Before Notary N.Nagappa Bangalore

I, SALMA SULTANA, residing at No.94/2, 4th Cross, D Block, Step Down, Matadahalli, R.T.Nagar Post, Bangalore- 560032 have changed my name to SALMA MUSTAFA, vide affidavit dated 23-02-2021 before Notary Y.R.Chandrasekar,, Bangalore.

Lost

IT IS notified for the information that my Original Qualifying Examination Certificate of Main, Secondary Examination of the year 2019 and Roll No.4076786 issued by CBSE has been actually lost. Name of the candidate Rakshith Kumar Y J Contact: 9535350944

ಒಂದೇ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಸೋಂಕಿತರ ಸಂಖ್ಯೆ 26ಕ್ಕೆ ಹೆಚ್ಚಳ

ಬೆಳ್ಳಂದೂರು: ಮತ್ತೆ ಆರು ಮಂದಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳ್ಳಂದೂರು ವಾರ್ಡ್ ವ್ಯಾಪ್ತಿಯ ಎಸ್‌ಜೆಆರ್ ವಾಟರ್‌ಮಾರ್ಕ್ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿಗಳಲ್ಲಿ ಮತ್ತೆ ಆರು ಮಂದಿ ಕೋವಿಡ್ ಹೊಂದಿರುವುದು ಬುಧವಾರ ದೃಢಪಟ್ಟಿದೆ. ಇದರೊಂದಿಗೆ ಈ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಕೋವಿಡ್ ಹೊಂದಿರುವವರ ಸಂಖ್ಯೆ 26ಕ್ಕೆ ಏರಿದೆ.

ಈ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿಗಳಲ್ಲಿ ಫೆ.18ರಿಂದ 22ರವರೆಗೆ ಸೋಂಕಿನ ಲಕ್ಷಣಗಳಿದ್ದ 10 ಮಂದಿಯ ಮೂಗಿನ ದ್ರವದ ಮಾದರಿಗಳನ್ನು ಸಂಗ್ರಹಿಸಿ ಕೋವಿಡ್ ಪರೀಕ್ಷೆ ನಡೆಸಲಾಗಿತ್ತು. ಆ 10 ಮಂದಿಯೂ ಸೋಂಕು ಹೊಂದಿರುವುದು ದೃಢಪಟ್ಟಿತ್ತು. ಸೋಂಕು ಹರಡಿರುವ ಶಂಕೆಯಿಂದ ಇದೇ 22ರಂದು (ಸೋಮವಾರ) ಇಲ್ಲಿನ 501 ನಿವಾಸಿಗಳನ್ನು ಕೋವಿಡ್ ಪರೀಕ್ಷೆಗೊಳಪಡಿಸಿದಾಗ ಮತ್ತೆ 10 ಮಂದಿ ಸೋಂಕು ಹೊಂದಿರುವುದು ದೃಢಪಟ್ಟಿತ್ತು. ಹಾಗಾಗಿ ಇದೇ 23ರಂದು (ಮಂಗಳವಾರ) ಮತ್ತೆ 544 ಮಂದಿಯ ದ್ರವವನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಗಿತ್ತು. ಅದರ ಫಲಿತಾಂಶ ಬುಧವಾರ ಪ್ರಕಟವಾಗಿದ್ದು, ಅವರಲ್ಲಿ ಆರು ಮಂದಿ ಸೋಂಕು ಹೊಂದಿದ್ದಾರೆ. ಈ ಅಪಾರ್ಟ್‌ಮೆಂಟ್ ಸಮುಚ್ಚಯದ 85 ನಿವಾಸಿಗಳ ಮೂಗಿನ ದ್ರವದ ಮಾದರಿಗಳನ್ನು ಬುಧವಾರ ಸಂಗ್ರಹಿಸಲಾಗಿದ್ದು, ಪರೀಕ್ಷೆಗೆ ಕಳುಹಿಸಲಾಗಿದೆ.

ಅಂಕಿ–ಅಂಶ

1,140 ಎಸ್‌ಜೆಆರ್ ಅಪಾರ್ಟ್‌ಮೆಂಟ್ ಸಮುಚ್ಚಯಲ್ಲಿ ಇದುವರೆಗೆ ಕೋವಿಡ್ ಪರೀಕ್ಷೆಗೆ ಒಳಪಟ್ಟವರು

1,055 ಕೋವಿಡ್ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿರುವುದು



ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,04,357 ಒಟ್ಟು ಸೋಂಕಿತರು

3,95,515 ಗುಣಮುಖರಾದವರು

4,379 ಸಕ್ರಿಯ ಪ್ರಕರಣ

4,462 ಸಾವು

ಬುಧವಾರದ ಏರಿಕೆ

174 ದೃಢಪಟ್ಟ ಪ್ರಕರಣ

171 ಗುಣಮುಖ

4 ಸಾವು

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ



ಲಸಿಕೆ: 1.72 ಲಕ್ಷ ಮಂದಿಗೆ ಎರಡನೇ ಡೋಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮೊದಲ ಡೋಸ್ ಕೋವಿಡ್ ಲಸಿಕೆ ಪಡೆದವರಲ್ಲಿ 1,72,964 ಮಂದಿ ಎರಡನೇ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ.

ಈವರೆಗೆ 4.39 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಮೊದಲ ಹಾಗೂ ಎರಡನೇ ಡೋಸ್ ಲಸಿಕೆ ಪಡೆಯಲು ಬುಧವಾರ 63,091 ಮಂದಿಯನ್ನು ಗುರುತಿಸಲಾಗಿತ್ತು. ಅವರಲ್ಲಿ 26,842 (ಶೇ 46ರಷ್ಟು) ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ.

ರಾಜ್ಯದಲ್ಲಿ ಲಸಿಕೆ ವಿತರಣೆ ಪ್ರಾರಂಭವಾದಾಗಿನಿಂದ ಈವರೆಗೆ ನಿಗದಿಪಡಿಸಲಾಗಿದ್ದ 7,28,349 ಆರೋಗ್ಯ ಕಾರ್ಯಕರ್ತರಲ್ಲಿ ಶೇ 60 ರಷ್ಟು ಗುರಿ ಸಾಧ್ಯವಾಗಿದೆ. 2,91,037 ಮುಂಚೂಣಿ ಯೋಧರನ್ನು ಈವರೆಗೆ ಲಸಿಕೆ ಪಡೆಯಲು ಗುರುತಿಸಲಾಗಿತ್ತು. ಅವರಲ್ಲಿ 1,45,174 ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ. ಇದರಿಂದ ಶೇ 50 ರಷ್ಟು ಗುರಿ ಸಾಧ್ಯವಾಗಿದೆ.

6 ಮಂದಿ ಸಾವು: ರಾಜ್ಯದಲ್ಲಿ ಹೊಸದಾಗಿ 334 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.49 ಲಕ್ಷ ದಾಟಿದೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ ನಾಲ್ವರು ಹಾಗೂ ಮೈಸೂರು, ತುಮಕೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,309ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ ಮತ್ತೆ 313 ಮಂದಿ ಗುಣಮುಖರಾಗಿದ್ದಾರೆ.

ಒಂದು ದಿನದ ಅವಧಿಯಲ್ಲಿ 63 ಸಾವಿರ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ರಾಜ್ಯದ 26 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ದಾಟಿಲ್ಲ. ಬೆಂಗಳೂರಿನಲ್ಲಿ 174 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.04 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 25 ಪ್ರಕರಣಗಳು ವರದಿಯಾಗಿದೆ.

ಬಸವಣ್ಣ ಪುತ್ಥಳಿಗೆ ₹25 ಕೋಟಿ ಅನುದಾನಕ್ಕೆ ಆಗ್ರಹ

ಬೆಂಗಳೂರು: ‘ರಸ್ತೆ ನಿರ್ಮಾಣಕ್ಕೆ ಕುಂಬಳಗೋಡಿನ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಒಡೆತನದ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಇದರ ಪರಿಹಾರದ ಹಣ ನೀಡಬೇಕು ಹಾಗೂ ಆಶ್ರಮದ ಆವರಣದಲ್ಲಿ 112 ಅಡಿ ಎತ್ತರದ ಬಸವಣ್ಣನವರ ಪುತ್ಥಳಿ ನಿರ್ಮಾಣಕ್ಕೆ ಸರ್ಕಾರ ₹25 ಕೋಟಿ ಅನುದಾನ ನೀಡಬೇಕು’ ಎಂದು ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಬಸವಕುಮಾರ ಸ್ವಾಮೀಜಿ ಆಗ್ರಹಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ಈ ಎರಡೂ ಬೇಡಿಕೆಗಳನ್ನು ಸರ್ಕಾರ ಮಾ.2ರೊಳಗೆ ಈಡೇರಿಸಬೇಕು. ಇಲ್ಲದಿದ್ದರೆ, ಮಾರ್ಚ್ 3ರಿಂದ ಕುಂಬಳಗೋಡಿನ ಬಸವ ಗಂಗೋತ್ರಿ ಆಶ್ರಮದ ಆವರಣದಲ್ಲಿ ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಗುವುದು’ ಎಂದು ಎಚ್ಚರಿಸಿದರು.

ಅಧಿಕಾರಿಗಳಿಗೆ ಬಿಬಿಎಂಪಿ ಆಯುಕ್ತ ಸೂಚನೆ

ಪಿ.ಎಂ. ಸ್ವನಿಧಿ: ಸಾಲ ನೀಡುವಿಕೆ ಚುರುಕುಗೊಳಿಸಿ

ಪ್ರಜಾವಾಣಿ ವಾರ್ತೆ



ಸಭೆಯಲ್ಲಿ ಎನ್‌.ಮಂಜುನಾಥ ಪ್ರಸಾದ್ ಮಾತನಾಡಿದರು. ರವೀಂದ್ರ ಇದ್ದಾರೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ‘ಪ್ರಧಾನ ಮಂತ್ರಿ ಸ್ವ-ನಿಧಿ’ ಯೋಜನೆಯಡಿ ಬೀದಿ ಬದಿ ವ್ಯಾಪಾರಿಗಳಿಗೆ ವಿವಿಧ ಬ್ಯಾಂಕ್‌ಗಳ ಮೂಲಕ ₹ 10 ಸಾವಿರದವರೆಗೆ ಕಿರು ಸಾಲ ನೀಡುವ ಪ್ರಕ್ರಿಯೆಯನ್ನು ಚುರುಕುಗೊಳಿಸಬೇಕು. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಸೂಚನೆ ನೀಡಿದರು.

ಪ್ರಧಾನಮಂತ್ರಿಯವರ ಆತ್ಮನಿರ್ಭರ್ ಘೋಷವಾಕ್ಯದಂತೆ ಬೀದಿ ವ್ಯಾಪಾರಿಗಳು ಸ್ವಾವಲಂಬಿ ಬದುಕು ಕಟ್ಟಲು ನೆರವಾಗುವ ಯೋಜನೆಯ ಪ್ರಗತಿಯನ್ನು ಆಯುಕ್ತರು ಬುಧವಾರ ಪರಿಶೀಲಿಸಿದರು.

ಪಾಲಿಕೆಯ ಎಲ್ಲ ವಾರ್ಡ್‌ಗಳ ಕಂದಾಯ ಅಧಿಕಾರಿಗಳ ನೇತೃತ್ವದಲ್ಲಿ ಬೀದಿ ವ್ಯಾಪಾರಿಗಳ ಸಮೀಕ್ಷೆ ಕಾರ್ಯ ನಡೆಸಬೇಕು. ಸಮೀಕ್ಷೆಯಲ್ಲಿ ಗುರುತಿಸಿರುವ ಎಲ್ಲ ಬೀದಿ ವ್ಯಾಪಾರಿಗಳಿಗೆ ಕಿರು ಸಾಲ ಪಡೆಯುವ ಅರ್ಜಿಗಳನ್ನು ನೀಡಿ, ಅದನ್ನು ಭರ್ತಿ ಮಾಡಲು ನೆರವಾಗಬೇಕು.

ಬಿಬಿಎಂಪಿ ಸುದ್ದಿ

ಅರ್ಜಿಗಳನ್ನು ಪಿಎಂ ಸ್ವ-ನಿಧಿ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಿ ಬ್ಯಾಂಕ್‌ಗಳಿಂದ ತ್ವರಿತವಾಗಿ ಕಿರು ಸಾಲ ಸಿಗುವಂತೆ ನೋಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ಈ ಯೋಜನೆಯಡಿ ಸಲ್ಲಿಕೆಯಾಗುವ ಅರ್ಜಿಗಳಿಗೆ ತ್ವರಿತವಾಗಿ ಸಾಲ ನೀಡಬೇಕು ಎಂದು ಬ್ಯಾಂಕ್ ಅಧಿಕಾರಿಗಳಿಗೂ ಆಯುಕ್ತರು ಸೂಚಿಸಿದರು.

ಬಿಬಿಎಂಪಿ ವಿಶೇಷ ಆಯುಕ್ತ ರವೀಂದ್ರ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್.ಶಶಿಧರ ಶೆಟ್ಟಿ, ಪೊಲೀಸ್ ಸಿಬ್ಬಂದಿ, ವಿವಿಧ ಬ್ಯಾಂಕ್‌ಗಳ ಅಧಿಕಾರಿಗಳು, ಎಲ್ಲ ವಲಯಗಳ ಜಂಟಿ ಆಯುಕ್ತರು ಉಪಸ್ಥಿತರಿದ್ದರು.

ಅಂಕಿ–ಅಂಶ

85,400 ಬಿಬಿಎಂಪಿ ವ್ಯಾಪ್ತಿಯಲ್ಲಿ ಪಿಎಂ ಸ್ವನಿಧಿ ಯೋಜನೆ ಅಡಿ ಸಾಲ ಒದಗಿಸಲು ನಿಗದಿಪಡಿಸಿದ ಗುರಿ

64,147 ಇದುವರೆಗೆ ವಿತರಿಸಿರುವ ಅರ್ಜಿಗಳು

39,512 ಅರ್ಜಿಗಳನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ

ಮಕ್ಕಳಿಂದ ಭಿಕ್ಷಾಟನೆ ಸಮೀಕ್ಷೆ: ತರಬೇತಿ ಇಂದು

ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿ ಬದಿಗಳಲ್ಲಿ ಭಿಕ್ಷಾಟನೆ ಮಾಡುತ್ತಿರುವ ಮತ್ತು ಸಣ್ಣಪುಟ್ಟ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಮಕ್ಕಳನ್ನು ನಿಖರವಾಗಿ ಸಮೀಕ್ಷೆ ನಡೆಸಲಾಗುತ್ತಿದೆ. ಈ ಬಗ್ಗೆ ಮಾಹಿತಿ ಸಂಗ್ರಹಿಸುವ ತಂಡಕ್ಕೆ ಇದೇ 25ರಂದು (ಗುರುವಾರ) ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಮಕ್ಕಳು ಯಾವ ಕಾರಣಕ್ಕಾಗಿ ಭಿಕ್ಷಾಟನೆ ಅಥವಾ ವ್ಯಾಪಾರದಲ್ಲಿ ತೊಡಗಿದ್ದಾರೆ, ಅವರ ಬಳಿ ನಯವಾಗಿ ಮಾತನಾಡಿ ಮಾಹಿತಿ ಪಡೆಯುವ ಬಗೆ ಹೇಗೆ ಎಂಬ ಕುರಿತು ತಜ್ಞರು ತರಬೇತಿ ನೀಡಲಿದ್ದಾರೆ.

ನಗರದ ಬೀದಿಗಳಲ್ಲಿ ಹಾಗೂ ಸಂಚಾರ ಸಿಗ್ನಲ್‌ಗಳಲ್ಲಿ ಭಿಕ್ಷಾಟನೆ ಹಾಗೂ ಸಣ್ಣಪುಟ್ಟ ವಸ್ತುಗಳನ್ನು ಮಾರಾಟ ಮಾಡುವ 886 ಮಕ್ಕಳನ್ನು ಗುರುತಿಸಲಾಗಿದೆ. ಚಿಣ್ಣರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯದಲ್ಲಿ ತೊಡಗಿರುವ ತಾಣಗಳನ್ನೂ (ಹಾಟ್ ಸ್ಪಾಟ್) ಪಟ್ಟಿಮಾಡಲಾಗಿದೆ. ಸಮೀಕ್ಷಾ ಕಾರ್ಯಕರ್ತರು ಇಂತಹ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ.

‘ಮಾಹಿತಿ ಸಂಗ್ರಹಿಸುವ ತಂಡಗಳ ಸಮೀಕ್ಷೆ ಕಾರ್ಯಕ್ಕೆ ವಾಹನಗಳನ್ನು ಒದಗಿಸಬೇಕು. ಇಂತಹ ಕಾರ್ಯಕರ್ತರಿಗೆ ಉಪಾಹಾರ ಮತ್ತು ಊಟದ ವ್ಯವಸ್ಥೆ ಮಾಡಬೇಕು’ ಎಂದು ಬಿಬಿಎಂಪಿ ಆಯುಕ್ತರು ಎಲ್ಲ ವಲಯಗಳ ಜಂಟಿ ಆಯುಕ್ತರಿಗೆ ಸೂಚನೆ ನೀಡಿದರು.

ಸಮೀಕ್ಷೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.





ಅಪಾಯದ ಹೆರಿಗೆ 2 ತಿಂಗಳ ಬಳಿಕ ಮಗು ಚೇತರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಾಯದ ಹೆರಿಗೆಯಿಂದಾಗಿ ಉಸಿರಾಟದ ಸಮಸ್ಯೆಗೆ ಒಳಗಾಗಿದ್ದ ನವಜಾತ ಶಿಶುವಿಗೆ ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಚಿಕಿತ್ಸೆ ನೀಡಿದ್ದು, ಎರಡು ತಿಂಗಳ ಬಳಿಕ ಮಗು ಚೇತರಿಸಿಕೊಂಡಿದೆ.

ಮಗುವಿನ ತಂದೆ ಮತ್ತು ತಾಯಿ ಇಬ್ಬರೂ ಶ್ರವಣದೋಷ ಸಮಸ್ಯೆ ಎದುರಿಸುತ್ತಿದ್ದರು. ಅವರು ಆಂಧ್ರಪ್ರದೇಶದ ಹಿಂದುಪುರದವರು. ಮಹಿಳೆಯು ಅಲ್ಲಿನ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಸಿಕೊಂಡಾಗ ವೈದ್ಯರು ಹೆರಿಗೆ ವೇಳೆ ಅಪಾಯ ಇರುವುದನ್ನು ಗುರುತಿಸಿ, ಇಲ್ಲಿಗೆ ಶಿಫಾರಸು ಮಾಡಿದರು. 27 ವಾರಗಳ ಗರ್ಭಿಣಿಯಾಗಿದ್ದ ಅವರಿಗೆ ತೀವ್ರ ರಕ್ತಸ್ರಾವವಾಗುತ್ತಿತ್ತು. ಇದರಿಂದಾಗಿ ವೈದ್ಯರು ಕುಟುಂಬದ ಸದಸ್ಯರೊಂದಿಗೆ ಚರ್ಚಿಸಿ, ಶಸ್ತ್ರಚಿಕಿತ್ಸೆಯ ಮೂಲಕ ಮಗುವನ್ನು ಹೊರತೆಗೆದರು ಎಂದು ಆಸ್ಪತ್ರೆ ತಿಳಿಸಿದೆ.

ಮಗು ಜನಿಸಿದಾಗ ಕೇವಲ 980 ಗ್ರಾಂ ತೂಕ ಹೊಂದಿತ್ತು. ಎರಡು ತಿಂಗಳು ಆರೈಕೆ ಮಾಡಲಾಯಿತು. ಆಸ್ಪತ್ರೆಯಿಂದ ಮನೆಗೆ ಕಳುಹಿಸುವಾಗ ಅದರ ತೂಕವು 1.66 ಕೆ.ಜಿಗೆ ಏರಿಕೆಯಾಗಿತ್ತು. ಈಗ ತಾಯಿ ಮತ್ತು ಮಗು ಇಬ್ಬರೂ ಆರೋಗ್ಯದಿಂದ ಇದ್ದಾರೆ.

ದೊಡ್ಡರಂಗೇಗೌಡರಿಗೆ ಅಭಿನಂದನೆ ಇಂದು

ಬೆಂಗಳೂರು: 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಹಿರಿಯ ಸಾಹಿತಿ ಪ್ರೊ. ದೊಡ್ಡರಂಗೇಗೌಡ ಅವರ ಅಭಿನಂದನಾ ಸಮಾರಂಭವನ್ನು ಗುರುವಾರ (ಫೆ.25) ಹಮ್ಮಿಕೊಳ್ಳಲಾಗಿದೆ ಎಂದು ದಿ ಹನುಮಂತನಗರ ಸಹಕಾರಿ ಬ್ಯಾಂಕ್ ಪ್ರಕಟಣೆ ತಿಳಿಸಿದೆ.

ಕೆಂಪೇಗೌಡ ನಗರದಲ್ಲಿರುವ ಉದಯಭಾನು ಕಲಾ ಸಂಘದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಪ್ರತಿಭಾ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದರು.

ವ್ಹೀಲಿಂಗ್; ಯುವಕರ ಬಂಧನ

ಬೆಂಗಳೂರು: ಬ್ಯಾಟರಾಯನಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ವ್ಹೀಲಿಂಗ್ ಮಾಡುತ್ತಿದ್ದ ಆರೋಪದಡಿ ಜೈಕರ್ ಹಾಗೂ ಆತನ ಸ್ನೇಹಿತನನ್ನು ಬಂಧಿಸಿದ್ದ ಪೊಲೀಸರು, ಠಾಣಾ ಜಾಮೀನು ಮೇಲೆ ಬಿಡುಗಡೆ ಮಾಡಿದ್ದಾರೆ.

'ಯುವತಿಯರು ನಡೆದುಕೊಂಡು ಹೋಗುತ್ತಿದ್ದ ರಸ್ತೆಯಲ್ಲಿ ಆರೋಪಿಗಳು ವ್ಹೀಲಿಂಗ್ ಮಾಡುತ್ತಿದ್ದರು. ಸ್ಥಳೀಯರು ಮಾಹಿತಿ ನೀಡಿದ್ದರು. ಅದರಂತೆ ಸ್ಥಳಕ್ಕೆ ಹೋಗಿ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆ.ಆರ್. ಮಾರುಕಟ್ಟೆ ಮೇಲ್ಸೇತುವೆಯಲ್ಲಿ ಆರೋಪಿಗಳು, ವ್ಹೀಲಿಂಗ್ ಮಾಡಿದ್ದರು. ಅದರ ದೃಶ್ಯವನ್ನು ಚಿತ್ರೀಕರಿಸಿ ಫೇಸ್ಬುಕ್‌ನಲ್ಲಿ ಅಪ್‌ಲೋಡ್ ಮಾಡಿದ್ದರು' ಎಂದೂ ತಿಳಿಸಿವೆ.

ವಾಟ್ಸ್‌ಆ್ಯಪ್ ಮೂಲಕ ನಡೆಯುತ್ತಿದ್ದ ಡ್ರಗ್ಸ್ ದಂಧೆ • ಪ್ರಮುಖ ಆರೋಪಿ ಅನಿಕಾ

ಬಿಗ್‌ಬಾಸ್ ಸ್ಪರ್ಧಿ ವಿರುದ್ಧ ಚಾರ್ಜ್‌ಶೀಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಅಕ್ರಮ ಸಾಗಣೆ ಹಾಗೂ ಮಾರಾಟ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಮಾದಕ ವಸ್ತು ನಿಗ್ರಹ ಘಟಕದ (ಎನ್‌ಸಿಬಿ) ಅಧಿಕಾರಿಗಳು, ಕನ್ನಡದ 'ಬಿಗ್‌ಬಾಸ್' ರಿಯಾಲಿಟಿ ಶೋ ಸ್ಪರ್ಧಿ ಆಡಂ ಪಾಷಾ ಸೇರಿದಂತೆ 10 ಮಂದಿ ವಿರುದ್ಧ ಚಾರ್ಜ್‌ಶೀಟ್ (ದೋಷಾರೋಪ ಪಟ್ಟಿ) ಸಲ್ಲಿಸಿದ್ದಾರೆ.


ಕಲ್ಯಾಣ ನಗರದಲ್ಲಿರುವ 'ರಾಯಲ್ ಸೂಟ್ಸ್' ಅಪಾರ್ಟ್‌ಮೆಂಟ್‌ನ ಫ್ಲ್ಯಾಟೊಂದರ ಮೇಲೆ ಕಳೆದ ಆಗಸ್ಟ್ 21ರಂದು ದಾಳಿ ಮಾಡಿದ್ದ ಎನ್‌ಸಿಬಿ ಅಧಿಕಾರಿಗಳು, 145 ಡ್ರಗ್ಸ್ ಮಾತ್ರೆಗಳು ಹಾಗೂ ₹ 2.20 ಲಕ್ಷ ನಗದು ಜಪ್ತಿ ಮಾಡಿದ್ದರು. ಆರೋಪಿಗಳಾದ ದೊಡ್ಡಗುಬ್ಬಿಯ ಡಿ. ಅನಿಕಾ, ಕೇರಳದ ಮೊಹಮ್ಮದ್ ಅನೂಪ, ರಾಜೇಶ್ ರವೀಂದ್ರನ್‌ನನ್ನು ಬಂಧಿಸಿದ್ದರು.




ಆಡಂ ಪಾಷಾ



ಮೊಹಮ್ಮದ್



ಡಿ. ಅನಿಕಾ



ರಾಜೇಶ್

'ಅನಿಕಾ ಖಾತೆಗೆ ₹ 2 ಲಕ್ಷ'

'ಪ್ರಕರಣದ ಪ್ರಮುಖ ಆರೋಪಿ ಅನಿಕಾ. ಆಕೆಯ ಬಳಿ ಆಡಂ ಪಾಷಾ ಸಹ ಡ್ರಗ್ಸ್ ಖರೀದಿ ಮಾಡುತ್ತಿದ್ದ. ಆಕೆಯ ಖಾತೆಗೆ ಆಡಂ ಪಾಷಾ ₹ 2 ಲಕ್ಷ ಜಮೆ ಮಾಡಿದ್ದ. ಡ್ರಗ್ಸ್ ಖರೀದಿ ವಿಚಾರವಾಗಿ ಅನಿಕಾ ಹಾಗೂ ಆಡಂ ನಡುವೆ ವಾಟ್ಸ್‌ಆ್ಯಪ್‌ನಲ್ಲಿ 147 ಸಂದೇಶಗಳು ರವಾನೆಯಾಗಿವೆ. ಈ ಬಗ್ಗೆಯೂ ಪುರಾವೆ ಲಭ್ಯವಾಗಿದೆ' ಎಂದೂ ದೋಷಾರೋಪ ಪಟ್ಟಿಯಲ್ಲಿ ಹೇಳಲಾಗಿದೆ.

ಆರೋಪಿಗಳ ವಿಚಾರಣೆ ನಡೆಸಿ ತನಿಖೆ ಚುರುಕುಗೊಳಿಸಿದ್ದ ಅಧಿಕಾರಿಗಳು, ಆಡಂ ಪಾಷಾ, ಸುಹಾಸ್ ಗೌಡ, ದಿಕ್ಷಿತ್ ಬೋಪಣ್ಣ, ಜಯೇಶ್ ಚಂದ್ರ, ಗರ್ಲಡ್ ಪ್ರವೀಣ್ ಕುಮಾರ್ ಹಾಗೂ ಕೆ. ಜಿಮ್ರಿಸ್‌ನನ್ನು ಬಂಧಿಸಿದ್ದರು. ಈಗ ಅವರೆಲ್ಲರ ವಿರುದ್ಧ ನಗರದ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

'ಆಫ್ರಿಕಾ ಪ್ರಜೆಗಳಿಂದ ಡ್ರಗ್ಸ್ ಖರೀದಿ ಮಾಡುತ್ತಿದ್ದ ಅನಿಕಾ ಹಾಗೂ ಇತರೆ ಆರೋಪಿಗಳು, ದುಪ್ಪಟ್ಟು ಬೆಲೆಗೆ ಮಾರಾಟ ಮಾಡುತ್ತಿದ್ದರು. ವಾಟ್ಸ್‌ಆ್ಯಪ್ ಮೂಲಕವೇ ಗ್ರಾಹಕರನ್ನು ಸಂಪರ್ಕಿಸುತ್ತಿದ್ದ ಆರೋಪಿಗಳು, ಆನ್‌ಲೈನ್ ಮೂಲಕ ಹಣ ಹಾಕಿಸಿಕೊಂಡು ಡ್ರಗ್ಸ್ ವಿಲೇವಾರಿ ಮಾಡುತ್ತಿದ್ದರು' ಎಂದು ಅಧಿಕಾರಿಗಳು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

'ಗ್ರಾಹಕರ ಜೊತೆ ಅನಿಕಾ ನಿರಂತರವಾಗಿ ಒಡನಾಟವಿಟ್ಟುಕೊಳ್ಳುತ್ತಿದ್ದಳು. ಇತರೆ ಆರೋಪಿಗಳ ಮೂಲಕ ಗ್ರಾಹಕರಿಗೆ ಡ್ರಗ್ಸ್ ಪೂರೈಕೆ ಮಾಡುತ್ತಿದ್ದರು. ಕಳೆದ ವರ್ಷ ಅನೂಪ್‌ಗೆ 476 ಬಾರಿ ಕರೆ ಮಾಡಿದ್ದ ಅನಿಕಾ, ಡ್ರಗ್ಸ್ ವ್ಯವಹಾರದ ಬಗ್ಗೆಯೇ ಹೆಚ್ಚು ಮಾತನಾಡಿದ್ದಳು' ಎಂದೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಅಪರಾಧ ಸುದ್ದಿ

ರೌಡಿ ಗ್ಯಾಂಗ್ ಸೆರೆ

ಬೆಂಗಳೂರು: ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ದಾರಿಹೋಕರನ್ನು ಅಡ್ಡಗಟ್ಟಿ ದರೋಡೆ ಮಾಡಲು ಸಂಚು ರೂಪಿಸಿದ್ದ ನಾಲ್ವರು ರೌಡಿಗಳು ಸೇರಿದಂತೆ 11 ಮಂದಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ನಗರದ ರೌಡಿಗಳಾದ ಎಚ್. ಹರೀಶ್ (27), ಪಿ. ವೆಂಕಟೇಶ್ (27), ಮಂಗಳೂರಿನ ರೌಡಿಗಳಾದ ಕಿರಣ್ ಗೌಡ (30), ವಿಶ್ವನಾಥ್ ಭಂಡಾರಿ (30) ಹಾಗೂ ಅವರ ಸಹಚರರಾದ ಎಸ್. ಸತೀಶ್, ಎಲ್. ಹೇಮಂತ್, ಟಿ. ಗಣೇಶ್, ಎನ್. ವಿನೋದ್, ಕಿರಣ್ ಕುಮಾರ್, ವಿ, ಅಣ್ಣಮಲೈ ಬಂಧಿತರು. ಅವರಿಂದ ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಎರಡು ಕಾರಿನಲ್ಲಿ ಮಾರಕಾಸ್ತ್ರಗಳನ್ನು ಇಟ್ಟುಕೊಂಡಿದ್ದ ಆರೋಪಿಗಳು, ಮಾರತ್ತಹಳ್ಳಿ ಬಳಿಯ ಹಾರಿಜನ್ ರಸ್ತೆಗೆ ಬಂದಿದ್ದರು. ರಸ್ತೆಯಲ್ಲಿ ಬರುವ ಕಾರುಗಳು ಹಾಗೂ ದಾರಿಹೋಕರನ್ನು ಅಡ್ಡಗಟ್ಟಿ ಸುಲಿಗೆ ಮಾಡುವುದು ಅವರ ಉದ್ದೇಶವಾಗಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದೂ ತಿಳಿಸಿದರು.



ಆರೋಪಿಗಳಿಂದ ಜಪ್ತಿ ಮಾಡಲಾದ ಮಾರಕಾಸ್ತ್ರಗಳು

ಸೋಮನ ಹತ್ಯೆಗೆ ಸಂಚು: 'ಕಾಡುಬೀಸನಹಳ್ಳಿಯ ಸೋಮ ಹಾಗೂ ಆತನ ಸಹಚರರನ್ನು ಹತ್ಯೆ ಮಾಡಲು ಆರೋಪಿಗಳು ಸಂಚು ರೂಪಿಸಿದ್ದರು. ದರೋಡೆ ನಂತರ ಸೋಮನ ಬಳಿ ಹೋಗಿ ಗಲಾಟೆ ಮಾಡಿ ಕೊಲೆ ಮಾಡಬೇಕೆಂದು ಆರೋಪಿಗಳು ಅಂದುಕೊಂಡಿದ್ದರು. ಅಷ್ಟರಲ್ಲೇ ನಮಗೆ ಸಿಕ್ಕಿಬಿದ್ದರು' ಎಂದು ಪೊಲೀಸರು ಹೇಳಿದರು.

ಲಾರಿ ಹರಿದು ಸೆಕ್ಯುರಿಟಿ ಸಿಬ್ಬಂದಿ ಸಾವು

ಬೆಂಗಳೂರು: ಮುನ್ನೇಕೊಳಾಲು ಬಳಿಯ ರೈಲ್ವೆ ಕೆಳ ಸೇತುವೆ ನಿರ್ಮಾಣ ಕಾಮಗಾರಿ ಸ್ಥಳದಲ್ಲಿ ಲಾರಿ ಚಕ್ರ ಮೈ ಮೇಲೆ ಹರಿದು ಸೆಕ್ಯುರಿಟಿ ಸಿಬ್ಬಂದಿ ಮಹೇಶ್ (24) ಮೃತಪಟ್ಟಿದ್ದಾರೆ.

'ಜಾರ್ಖಂಡ್‌ನ ಮಹೇಶ್, ಖಾಸಗಿ ಏಜೆನ್ಸಿಯೊಂದರಲ್ಲಿ ಸೆಕ್ಯುರಿಟಿ ಸಿಬ್ಬಂದಿ ಆಗಿ ಕೆಲಸಕ್ಕೆ ಸೇರಿದ್ದರು. ಕಾಮಗಾರಿ ಸ್ಥಳದಲ್ಲಿ ಸಾಮಗ್ರಿಗಳನ್ನು ಕಾಯುವ ಕರ್ತವ್ಯಕ್ಕೆ ಅವರನ್ನು ನಿಯೋಜಿಸಲಾಗಿತ್ತು. ಅದೇ ಸ್ಥಳದಲ್ಲಿ ಮಂಗಳವಾರ ರಾತ್ರಿ ಈ ಅವಘಡ ಸಂಭವಿಸಿದೆ' ಎಂದು ಎಚ್‌ಎಎಲ್ ಸಂಚಾರ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

'ಮಲಗಿದ್ದ ಮಹೇಶ್ ಹಾಗೂ ಮತ್ತೊಬ್ಬ ಸೆಕ್ಯುರಿಟಿ ಸಿಬ್ಬಂದಿ ಮೇಲೆ ಟಿಪ್ಪರ್ ಲಾರಿ ಹರಿದು ಮಹೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇನ್ನೊಬ್ಬ ಸಿಬ್ಬಂದಿಗೂ ಗಾಯವಾಗಿದೆ. ಅವರನ್ನು ವೈದೇಹಿ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಕದ್ದ ಆಭರಣ ಮಾರಲು ಬಂದು ಸಿಕ್ಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳವು ಮಾಡಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಹೆಬ್ಬಾಳ ಪೊಲೀಸರು ಬಂಧಿಸಿದ್ದಾರೆ.

'ಮಾಗಡಿ ತಾಲ್ಲೂಕಿನ ಸುನೀಲ್ (30) ಹಾಗೂ ಹೆಬ್ಬಾಳ ಗುಡ್ಡದಹಳ್ಳಿಯ ಸೋಮಣ್ಣ ಲೇಔಟ್‌ನ ಹೇಮಂತ್ (23) ಬಂಧಿತರು. ಅವರಿಂದ ₹ 10 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ₹ 4,890 ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೆಬ್ಬಾಳದ ಪಿಳೇಕಮ್ಮ ದೇವಸ್ಥಾನ ಬಳಿ ಸುತ್ತಾಡುತ್ತಿದ್ದ ಆರೋಪಿಗಳು, ತಮ್ಮ ಬಳಿ ಇದ್ದ ಚಿನ್ನಾಭರಣ ಮಾರಾಟ ಮಾಡಲು ಯತ್ನಿಸುತ್ತಿದ್ದರು. ಕಡಿಮೆ ಬೆಲೆಗೆ ಚಿನ್ನಾಭರಣ ನೀಡುವುದಾಗಿ ಸಾರ್ವಜನಿಕರಿಗೆ ಹೇಳುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಆರೋಪಿಗಳನ್ನು ವಶಕ್ಕೆ ಪಡೆಯಲಾಯಿತು' ಎಂದೂ ತಿಳಿಸಿದರು.



ಬಂಧಿತ ಆರೋಪಿಗಳು ಹಾಗೂ ಜಪ್ತಿ ಮಾಡಲಾದ ಚಿನ್ನಾಭರಣ

ಹಗಲಿನಲ್ಲಿ ಮನೆ ಗುರುತು: 'ಲಾರಿ ಚಾಲಕನಾಗಿದ್ದ ಸುನೀಲ್, ಪ್ಲಂಬಿಂಗ್ ಕೆಲಸ ಮಾಡುತ್ತಿದ್ದ ಹೇಮಂತ್ ಜೊತೆ ಸ್ನೇಹ ಬೆಳೆಸಿದ್ದ. ನಂತರ ಅವರಿಬ್ಬರೂ ಸೇರಿ ಕಳ್ಳತನ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ನಗರದ ಪ್ರಮುಖ ರಸ್ತೆಗಳಲ್ಲಿ ಹಗಲಿನಲ್ಲಿ ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸುತ್ತಿದ್ದರು. ಅಂಥ ಮನೆಗಳಿಗೆ ರಾತ್ರಿ ಹೋಗಿ, ಕಬ್ಬಿಣದ ರಾಡ್‌ನಿಂದ ಬೀಗ ಮುರಿದು ಕೃತ್ಯ ಎಸಗಿ ಪರಾರಿಯಾಗುತ್ತಿದ್ದರು.'

'ಆರ್.ಟಿ.ನಗರದ ಸೀತಪ್ಪ ಲೇಔಟ್‌ನ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪಿಗಳು, ಚಿನ್ನಾಭರಣ ಹಾಗೂ ನಗದು ಕದ್ದುಕೊಂಡು ಪರಾರಿಯಾಗಿದ್ದರು. ಸಂಜಯನಗರ ಹಾಗೂ ಕುಣಿಗಲ್ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ'ಎಂದೂ ಪೊಲೀಸರು ತಿಳಿಸಿದರು.

ಕೊಲೆ ಸಂಚು; ರೌಡಿ ಬಟ್ಟಿ ಬಂಧನ

ಬೆಂಗಳೂರು: ಇಬ್ಬರ ಕೊಲೆಗೆ ಸಂಚು ರೂಪಿಸಿದ್ದ ಆರೋಪದಡಿ ರೌಡಿ ಮಜರ್‌ಖಾನ್ ಅಲಿಯಾಸ್ ಬಟ್ಟಿ ಮಜರ್ (38) ಸೇರಿದಂತೆ ಐವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಡಿ.ಜೆ. ಹಳ್ಳಿ ಠಾಣೆ ವ್ಯಾಪ್ತಿಯ ಮೋದಿ ಗಾರ್ಡನ್ ಬಳಿ ಮಾರಕಾಸ್ತ್ರ ಹಿಡಿದುಕೊಂಡು ನಿಂತಿದ್ದ ಆರೋಪಿಗಳು, ದರೋಡೆ ಹಾಗೂ ಕೊಲೆಗೆ ಹೊಂಚು ಹಾಕಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಕೊಲೆ, ಕೊಲೆ ಯತ್ನ, ದರೋಡೆ ಹಾಗೂ ಕಳ್ಳಬಟ್ಟಿ ಮಾರಾಟ ಪ್ರಕರಣದ ಆರೋಪಿಯಾಗಿದ್ದ ಬಟ್ಟಿ ಮಜರ್ ಹೆಸರು, ಡಿ.ಜೆ.ಹಳ್ಳಿ ಠಾಣೆ ರೌಡಿ ಪಟ್ಟಿಯಲ್ಲಿದೆ' ಎಂದೂ ತಿಳಿಸಿದರು

'ಬಟ್ಟಿ ಮಜರ್ ಹಾಗೂ ಆತನ ಸಹಚರರಾದ ಯೋಗೇಶ್, ರಿಜ್ವಾನ್, ಸುಮಿತ್ ಹಾಗೂ ಪುನೀತ್ ಗ್ಯಾಂಗ್ ಕಟ್ಟಿಕೊಂಡು ಕೃತ್ಯ ಎಸಗುತ್ತಿದ್ದರು. ಹಳೇ ದ್ವೇಷದಿಂದಾಗಿ ಎದುರಾಳಿ ಗುಂಪಿನ ಇಬ್ಬರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಹೇಳಿದರು.



ಬಂಧಿತ ಆರೋಪಿಗಳು



ದಿಶಾ ರವಿ ಬಿಡುಗಡೆ ಸಂಭ್ರಮ

ಬೆಂಗಳೂರು ಕೇಂದ್ರ ಕಾಂಗ್ರೆಸ್ ಪ್ರಚಾರ ಸಮಿತಿ ಸದಸ್ಯರು ಪರಿಸರ ಕಾರ್ಯಕರ್ತೆ ದಿಶಾ ರವಿ ಅವರ ಬಿಡುಗಡೆಯನ್ನು ಸಂಭ್ರಮಿಸಿದರು. ಇದೇ ವೇಳೆ ಕೇಂದ್ರ ಬಿಜೆಪಿ ಸರ್ಕಾರ ಸೇಡಿನ ರಾಜಕಾರಣ ಮಾಡುತ್ತಿದೆ ಹಾಗೂ ಹೋರಾಟಗಾರರ ಮೇಲೆ ಸುಳ್ಳು ಪ್ರಕರಣ ಹಾಕಲಾಗುತ್ತಿದೆ ಎಂದು ಆರೋಪಿಸಿ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಆವರಣದಲ್ಲಿ ಬುಧವಾರ ಸಮಿತಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಮುಖಂಡರಾದ ಜಿ.ಜನಾರ್ದನ್, ಎಸ್. ಮನೋಹರ್, ಶೇಖರ್, ಪ್ರಕಾಶ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಇದ್ದರು.

ಕಾರು ಗುದ್ದಿ ಯುವಕರ ದುರ್ಮರಣ

ಬೆಂಗಳೂರು: ಯಶವಂತಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಅಪರಿಚಿತ ಕಾರೊಂದು ದ್ವಿಚಕ್ರ ವಾಹನಕ್ಕೆ ಗುದ್ದಿದ್ದು, ಇಬ್ಬರು ಯುವಕರು ಮೃತಪಟ್ಟಿದ್ದಾರೆ.

'ರಾಜಾಜಿನಗರದ ಶ್ರೀಕಾಂತ್ (26) ಹಾಗೂ ಗೌತಮ್ (22) ಮೃತರು. ಫೆ. 23ರಂದು ತಡರಾತ್ರಿ ಈ ಅವಘಡ ಸಂಭವಿಸಿದ್ದು, ಅಪಘಾತದ ದೃಶ್ಯ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅಪಘಾತಕ್ಕೆ ಕಾರಣ ಎನ್ನಲಾದ ಕಾರಿನ ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಯಶವಂತಪುರ ಸಂಚಾರ ಪೊಲೀಸರು ಹೇಳಿದರು.

'ಮೃತ ಶ್ರೀಕಾಂತ್, ಸ್ವಿಗ್ಗಿ ಆಹಾರ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದರು. ಗೌತಮ್ ವಿದ್ಯಾರ್ಥಿ. ಒಂದೇ ಪ್ರದೇಶದಲ್ಲಿ ವಾಸವಿದ್ದ ಇಬ್ಬರೂ ಸ್ನೇಹಿತರಾಗಿದ್ದರು.'

'ಫೆ. 23ರಂದು ತಡರಾತ್ರಿ ಇಬ್ಬರೂ ಸೇರಿಕೊಂಡು ದ್ವಿಚಕ್ರ ವಾಹನದಲ್ಲಿ ಆಹಾರ ನೀಡಲು ಗ್ರಾಹಕರ ಮನೆಗೆ ಹೋಗಿದ್ದರು. ಆಹಾರ ಕೊಟ್ಟು ಜಾಲಹಳ್ಳಿ ಕಡೆಯಿಂದ ತುಮಕೂರು ರಸ್ತೆಗೆ ಬರುತ್ತಿದ್ದರು. ಅದೇ ವೇಳೆಯೇ ವೇಗವಾಗಿ ಬಂದ ಕಾರೊಂದು, ದ್ವಿಚಕ್ರ ವಾಹನಕ್ಕೆ ಗುದ್ದಿತ್ತು. ಅದರ ರಭಸಕ್ಕೆ ರಸ್ತೆಯಲ್ಲಿ ಉರುಳಿ ಬಿದ್ದು ತೀವ್ರವಾಗಿ ಗಾಯಗೊಂಡ ಇಬ್ಬರೂ ಮೃತಪಟ್ಟಿದ್ದಾರೆ' ಎಂದೂ ಪೊಲೀಸರು ತಿಳಿಸಿದರು.

ನಾಯಿಗಳನ್ನು ಕೊಲ್ಲುತ್ತಿರುವ ದುಷ್ಕರ್ಮಿಗಳು: ಆರೋಪ

ಬೆಂಗಳೂರು: ಕೆಲವು ದುಷ್ಕರ್ಮಿಗಳು ಬೀದಿನಾಯಿಗಳನ್ನು ಮತ್ತು ಸಾಕುನಾಯಿಗಳನ್ನು ಸಾಯಿಸುತ್ತಿದ್ದಾರೆ ಎಂದು ಚಿಕ್ಕಬೆಳ್ಳಂದೂರು ನಿವಾಸಿಗಳು ಆರೋಪಿಸಿದ್ದಾರೆ.

ಬಡಾವಣೆಯ ಸುತ್ತ–ಮುತ್ತ ಪ್ರಾಣಿಗಳ ಮೂಳೆಗಳು ಮತ್ತು ದೇಹದ ಇನ್ನಿತರೆ ಅಂಗಾಂಗಗಳು ಬಿದ್ದಿರುವುದನ್ನು ಗಮನಿಸಿದ ಸ್ಥಳೀಯರು, ಕ್ಯೂಪಾದಂತಹ ಪ್ರಾಣಿ ದಯಾ ಸಂಘಗಳ ಗಮನಕ್ಕೂ ತಂದಿದ್ದಾರೆ. ಕ್ಯಾಪಾದ ಸದಸ್ಯ ತೇಜೇಶ್ವರ್ ಅವರು ವರ್ತೂರು ಪೊಲೀಸರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ನಾಯಿಗಳ ಮೂಳೆಗಳು ಬಿದ್ದಿರುವುದನ್ನು ತೋರಿಸಿದ್ದಾರೆ.

'ಈ ನಾಯಿಗಳನ್ನು ಯಾರು ಸಾಯಿಸಿದ್ದಾರೆ ಎಂಬ ಶಂಕೆ ನಮಗಿದೆಯೋ ಅವರ ಮನೆಯಿಂದ ಕೇವಲ ಐದು ಅಡಿ ದೂರದಲ್ಲಿ ನಾಯಿಗಳ ತಲೆ ಬುರುಡೆ, ಮೂಳೆಗಳು ಬಿದ್ದಿವೆ. ನಾಯಿಗಳನ್ನು ಸಾಯಿಸಿ, ಸುಡಲಾಗಿದೆ. ಆದರೆ, ಬುರುಡೆಗಳು ಸಿಕ್ಕಿವೆ' ಎಂದು ತೇಜೇಶ್ವರ್ ಹೇಳಿದ್ದು, ಈ ಕುರಿತು ಪೊಲೀಸರಿಗೆ ದೂರನ್ನೂ ನೀಡಿದ್ದಾರೆ. ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

'ನಾಯಿಗಳ ಹತ್ಯೆ ಮಾಡಿದ್ದಾರೆ ಎಂದು ಆರೋಪಿಸಲಾಗುತ್ತಿರುವ ಮನೆಯಲ್ಲಿ ಏರ್‌ಗನ್ ಪತ್ತೆಯಾಗಿದೆ. ಇದಕ್ಕೆ ಪರವಾನಗಿ ಅಗತ್ಯವಿಲ್ಲ. ನಾಯಿಗಳ ಮೂಳೆಗಳ ಜೊತೆಯಲ್ಲಿ, ಹಂದಿಗಳ ಮೂಳೆಗಳೂ ಪತ್ತೆಯಾಗಿವೆ' ಎಂದು ವರ್ತೂರು ಠಾಣೆ ಪೊಲೀಸರು ತಿಳಿಸಿದ್ದಾರೆ.



ನಗರದ ಅವೆನ್ಯೂ ರಸ್ತೆಯಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ರಸ್ತೆಯೆಲ್ಲಾ ದೂಳುಮಯವಾಗಿದೆ. ವಾಹನ ಸಂಚಾರ ನಿರ್ಬಂಧಿಸಿ ಕೆಲಸ ಮಾಡುತ್ತಿರುವುದರಿಂದ ಸಾರ್ವಜನಿಕರು ಕಾಲ್ನಡಿಗೆಯಲ್ಲಿಯೇ ತಮ್ಮ ವ್ಯಾಪಾರ ವಹಿವಾಟು ಮಾಡುತ್ತಿರುವ ದೃಶ್ಯ ಬುಧವಾರ ಕಂಡುಬಂತು ಪ್ರಜಾವಾಣಿ ಚಿತ್ರ

ಕಲಾವಿದೆ ಬಗ್ಗೆ ಅನುಚಿತ ಮಾತಾಡದಂತೆ ಸಂಘಟಕರ ಮನವಿ

ತಿವಿಯಲು ಮುಂದಾದ ಕಲಾವಿದೆ!

ಪ್ರಜಾವಾಣಿ ವಾರ್ತೆ

ಮಂಡ್ಯ: ಕಾಳಿಯ ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡಿದ್ದ ಕಲಾವಿದೆಯೊಬ್ಬರು, ಸಹ ಕಲಾವಿದರೊಬ್ಬರನ್ನು ತ್ರಿಶೂಲದಿಂದ ನಿಜವಾಗಿಯೂ ತಿವಿಯಲು ಮುಂದಾದ ದೃಶ್ಯವಿರುವ ವಿಡಿಯೊ ಕಳೆದೆರಡು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರಲ್ಲಿ ಫೆ.4ರಂದು ನಡೆದ 'ಕೌಂಡಲೀಕನ ವಧೆ' ಪೌರಾಣಿಕ ನಾಟಕ ಪ್ರದರ್ಶನದ ಸಂದರ್ಭದಲ್ಲಿ ಈ ಘಟನೆ ನಡೆದಿದೆ.

ಕಲಾವಿದೆ ಶ್ವೇತಾ ಅವರು ತಮ್ಮ ಪತಿ, ಕಲಾವಿದ ದಿವಂಗತ ಸಿ.ರವಿಕುಮಾರ್ ಅವರ ಸ್ಮರಣೆಯಲ್ಲಿ 12 ದಿನಗಳ ನಾಟಕೋತ್ಸವ ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ರಾಮನಗರದ ಕಲಾವಿದರು ನಾಟಕ ಪ್ರದರ್ಶನ ನೀಡಿದ್ದರು. ಮಹಿಳಾ ಪಾತ್ರಗಳಿಗೆ, ಹೊರಗಿನಿಂದ ಕಲಾವಿದರನ್ನು ಆಹ್ವಾನಿಸಲಾಗಿತ್ತು. ದ್ರೌಪದಿ ಪಾತ್ರದಲ್ಲಿ ಬೆಂಗಳೂರಿನ ದೊಡ್ಡಶ್ರುತಿ ಅಭಿನಯಿಸಿದ್ದರು. ದ್ರೌಪದಿಯು ಕಾಳಿ ಅವತಾರ ತಾಳಿ ಕೌಂಡಲೀಕನನ್ನು ಸಂಹಾರ ಮಾಡುತ್ತಾಳೆ. ಈ ದೃಶ್ಯದಲ್ಲಿ ಅಭಿನಯಿಸುವಾಗ ಕಲಾವಿದೆ ದೊಡ್ಡಶ್ರುತಿ ಅವರು ಕ್ರೋಧದಿಂದ ಕುದಿಯುತ್ತಿದ್ದರು.



ತ್ರಿಶೂಲದಿಂದ ತಿವಿಯುವುದನ್ನು ತಪ್ಪಿಸಿದ ಜನರು

ಸಂಹಾರ ದೃಶ್ಯದಲ್ಲಿ ಕೌಂಡಲೀಕ ಪಾತ್ರಧಾರಿ ನೆಲಕ್ಕೆ ಬಿದ್ದರೂ, ಅವರನ್ನು ಬಿಡದ ಕಾಳಿ ಪಾತ್ರಧಾರಿಯು ತ್ರಿಶೂಲದಿಂದ ನಿಜವಾಗಿಯೂ ತಿವಿಯಲು ಬರುತ್ತಾರೆ. ಇದನ್ನು ಗಮನಿಸಿದ ಸಹಕಲಾವಿದರು,ಸೈಡ್‌ವಿಂಗ್‌ನಲ್ಲಿದ್ದ ಜನರು ಅವರನ್ನು ಹಿಡಿದು, ತಡೆಯುತ್ತಾರೆ. ಆದರೂ ಆ ಕಲಾವಿದೆ ತಿರುಗಿ ಬರುತ್ತಾರೆ, ತಕ್ಷಣ ವೇದಿಕೆಯ ದೀಪಗಳನ್ನು ಆರಿಸಲಾಗುತ್ತದೆ.

ಕಲಾವಿದೆಯನ್ನು ಸೈಡ್‌ವಿಂಗ್‌ನತ್ತ ಕರೆದೊಯ್ದು ಸಹಕಲಾವಿದರು ಸಂತೈಸುತ್ತಿದ್ದರೂ ಅವರ ಕ್ರೋಧ ತಣ್ಣಗಾಗಿರುವುದಿಲ್ಲ. ಈ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಕಾರಣವಾಗಿದೆ. ದೊಡ್ಡಶ್ರುತಿ ಅವರ ಮೇಲೆ ಸಾಕ್ಷಾತ್ ಕಾಳಿಯೇ ಪ್ರವೇಶಿಸಿದ್ದಾಳೆ ಎಂದು ಕೆಲವರು ಸಂದೇಶ ಹಾಕಿದ್ದಾರೆ.

'ಈ ಪಾತ್ರವನ್ನು ಯಾರೇ ಮಾಡಿದರೂ ಹೀಗಾಗುವುದು ಸಹಜ, ಇದರಲ್ಲಿ ಆಶ್ಚರ್ಯ ಪಡುವುದು ಏನೂ ಇಲ್ಲ. ದೊಡ್ಡಶ್ರುತಿ ಉತ್ತಮ ಕಲಾವಿದೆ. ಮಗನ ಅನಾರೋಗ್ಯದಿಂದಾಗಿ ಕಷ್ಟದಲ್ಲಿದ್ದಾರೆ. ಅವರ ಬಗ್ಗೆ ಯಾರೂ ಕೆಟ್ಟದಾಗಿ ಮಾತನಾಡಬಾರದು' ಎಂದು ಸಂಘಟಕಿ, ಶ್ವೇತಾ ಮನವಿ ಮಾಡಿದರು.

'ಒಂದು ಕ್ಷಣ ಏನಾಗುತ್ತಿದೆ ಎಂಬುದೇ ತಿಳಿಯಲಿಲ್ಲ. ಜಾಲತಾಣಗಳಲ್ಲಿ ಕೆಲವರು ಕೆಟ್ಟದಾಗಿ ಸಂದೇಶ ಹಾಕುತ್ತಿದ್ದಾರೆ. ಮಗನ ಭವಿಷ್ಯದ ದೃಷ್ಟಿಯಿಂದ ಇನ್ನು ಮುಂದೆ ಆ ಪಾತ್ರ ಮಾಡದಿರಲು ನಿರ್ಧರಿಸಿದ್ದೇನೆ' ಎಂದು ಕಲಾವಿದೆ ದೊಡ್ಡಶ್ರುತಿ ತಿಳಿಸಿದರು.

ಸುದ್ದಿ 2 ನಿಮಿಷ

'ಪೊಲೀಸ್–ಜನರ ನಡುವಿನ ತಡೆಗೋಡೆ ಕಳಚಿದ ಕೋವಿಡ್'

ಬೆಂಗಳೂರು: 'ಕೊರೊನಾ ಬಂದ ನಂತರ ಸಮಾಜದಲ್ಲಿ ಪೊಲೀಸರು ಹಾಗೂ ಸಾರ್ವಜನಿಕರ ನಡುವೆ ಇದ್ದ ತಡೆಗೋಡೆ ಉರುಳಿತು. ಕೊರೊನಾ ಪರಿಸ್ಥಿತಿಯು ಪೊಲೀಸರ ಅಂತಃಕರಣ ಏನೆಂಬುದನ್ನು ತೋರಿಸಲು ಅವಕಾಶ ಒದಗಿಸಿತು' ಎಂದು ಐಪಿಎಸ್ ಅಧಿಕಾರಿ ಇಶಾ ಪಂತ್ ತಿಳಿಸಿದರು.

ಜನಾಗ್ರಹ ಸಂಸ್ಥೆಯು 'ಕೋವಿಡ್‌-19 ಸಾಂಕ್ರಾಮಿಕ ಸಮಯದಲ್ಲಿ ಬೆಂಗಳೂರಿನಲ್ಲಿ ಪೊಲೀಸಿಂಗ್' ಕುರಿತು ಬುಧವಾರ ಹಮ್ಮಿಕೊಂಡಿದ್ದ ಆನ್‌ಲೈನ್ ಚರ್ಚೆಯಲ್ಲಿ ಅವರು ಮಾತನಾಡಿದರು.

'ಪೊಲೀಸರ ಕುರಿತು ಜನರ ಗ್ರಹಿಕೆಯಲ್ಲೂ ಕೊರೊನಾ ಸಕಾರಾತ್ಮಕ ಭಾವನೆ ಮೂಡಿಸಿದೆ. ಒಂದು ಕೆಲಸವನ್ನು ಪರಿಣಾಮಕಾರಿ ಮಾಡಬೇಕಾದರೆ, ಅದಕ್ಕೆ ಸಾರ್ವಜನಿಕರೊಂದಿಗೆ ಉತ್ತಮ ಸಂಪರ್ಕ ಹಾಗೂ ಸಂವಹನ ಅಗತ್ಯ ಎಂಬುದು ಪೊಲೀಸರಿಗೆ ಅರಿವಾಗಿದೆ. ಜನರ ಜೊತೆಗಿನ ನಮ್ಮ ವರ್ತನೆಯಲ್ಲೂ ಬದಲಾವಣೆಯ ಅಗತ್ಯವಿದೆ' ಎಂದರು.



ಬೆಂಗಳೂರು ಅಪಾರ್ಟ್‌ಮೆಂಟ್ ಸಮುಚ್ಚಯಗಳ ಒಕ್ಕೂಟದ ವಿಕ್ರಂ ರೈ,' ಪೊಲೀಸರು ಮತ್ತು ಸಾರ್ವಜನಿಕರ ನಡುವೆ ನಿರಂತರ ಸಂಪರ್ಕವನ್ನು ವಾರ್ಡ್ ಮತ್ತು ಪೊಲೀಸ್ ಠಾಣೆಯ ಮಟ್ಟಕ್ಕೆ ಒಯ್ಯಬೇಕು' ಎಂದರು.

'ಮಹಿಳೆಯರು ತುಳಿತಕ್ಕೆ ಒಳಗಾಗಿರುವುದು ಹಾಗೂ ಪೊಲೀಸರ ಜೊತೆ ಚರ್ಚೆ ನಡೆಸಲು ಆತ್ಮವಿಶ್ವಾಸದ ಕೊರತೆ ಇರುವುದು ನಾವು ಅಲ್ಪಸಂಖ್ಯಾತರ ಜೊತೆ ಕೆಲಸ ಮಾಡಿದಾಗ ತಿಳಿಯಿತು. ಪೊಲೀಸರು ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಬೇಕು' ಎಂದು ದಿಯಾಫರ್ ಸಂಸ್ಥೆಯ ಸ್ಥಾಪಕಿ ಸರಸ್ವತಿ ಪದ್ಮನಾಭನ್ ಹೇಳಿದರು.

ಮಳಿಗೆಗೆ ನುಗ್ಗಿ ₹ 33 ಲಕ್ಷ ಮೌಲ್ಯದ ಕಾರುಗಳ ಕಳವು

ಬೆಂಗಳೂರು: ಕೋಗಿಲು ಕ್ರಾಸ್ ಬಳಿ ಇರುವ ವಾಹನಗಳ ಮಾರಾಟ ಮಳಿಗೆಯೊಂದಕ್ಕೆ ನುಗ್ಗಿದ್ದ ದುಷ್ಕರ್ಮಿಗಳು, ಸೆಕ್ಯುರಿಟಿ ಸಿಬ್ಬಂದಿಯನ್ನು ಬೆದರಿಸಿ ಎರಡು ಕಾರುಗಳನ್ನು ಕಳವು ಮಾಡಿದ್ದಾರೆ. ಈ ಸಂಬಂಧ ಯಲಹಂಕ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಳಿಗೆಯ ಭದ್ರತೆಗೆ ಸೆಕ್ಯುರಿಟಿ ಸಿಬ್ಬಂದಿ ನಿಯೋಜಿಸಲಾಗಿತ್ತು. ಬುಧವಾರ ನಸುಕಿನಲ್ಲಿ ಮಳಿಗೆಗೆ ಬಂದಿದ್ದ ದುಷ್ಕರ್ಮಿಗಳು, ಸಿಬ್ಬಂದಿಗೆ ಚಾಕು ತೋರಿಸಿ ಜೀವ ಬೆದರಿಕೆ ಹಾಕಿ ಕೃತ್ಯ ಎಸಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಿಬ್ಬಂದಿಯಿಂದ ಕೀ ಕಸಿದುಕೊಂಡಿದ್ದ ಆರೋಪಿಗಳು, ಮಳಿಗೆ ಬಾಗಿಲು ತೆರೆದು ₹ 33 ಲಕ್ಷ ಮೌಲ್ಯದ ಎರಡು ಕಾರುಗಳನ್ನು ಕದ್ದುಕೊಂಡು ಹೋಗಿದ್ದಾರೆ. ಸಿಬ್ಬಂದಿಯೇ ನಿಯಂತ್ರಣ ಕೊಠಡಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು' ಎಂದೂ ಮೂಲಗಳು ತಿಳಿಸಿವೆ.

'ಮಾರ್ಚ್ ಅಂತ್ಯಕ್ಕೆ ಮುಂಗಾರು ಬೆಳೆ ವಿಮೆ ಪರಿಹಾರ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದ ಸಾಲಿನ ಮುಂಗಾರು ಹಂಗಾಮಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ರೈತರಿಗೆ ವಿಮಾ ಕಂಪೆನಿಗಳು ಮಾರ್ಚ್ ಅಂತ್ಯಕ್ಕೆ ಬೆಳೆ ವಿಮೆ ಮೊತ್ತ ನೀಡಲಿವೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ತಿಳಿಸಿದರು.

'ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್' ಯೋಜನೆ ಅಡಿ ರಾಜ್ಯದ ಶೇ 97ರಷ್ಟು ರೈತರ ಆಧಾರ್ ಜೋಡಣೆ ಮಾಡಿ, ನೇರ ನಗದು ಸೌಲಭ್ಯ ದೊರಕಿಸಿರುವ ಸಾಧನೆಗಾಗಿ ಕೇಂದ್ರದ ಕೃಷಿ ಸಚಿವಾಲಯ ಬುಧವಾರ ಪ್ರದಾನ ಮಾಡಿದ ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಕಳೆದ ಮುಂಗಾರು ಹಂಗಾಮಿನಲ್ಲಿ ಕೊರೊನಾ ಲಾಕ್‌ಡೌನ್ ಸಂದರ್ಭ ಸ್ವ-ಗ್ರಾಮಗಳಿಗೆ ಮರಳಿದ ರಾಜ್ಯದ ವಲಸೆ ಕಾರ್ಮಿಕರಿಗೆ ತಮ್ಮ ಜಮೀನಿನಲ್ಲಿ ಉದ್ಯೋಗ ನೀಡಿ ನೆರವಾದ ರೈತರು, ನಂತರ ಸುರಿದ ಭಾರಿ ಮಳೆಯಿಂದ ನಷ್ಟ ಅನುಭವಿಸಿದ್ದಾರೆ. ವಿಮೆ ಮಾಡಿಸಿದವರಿಗೆ ಪ್ರಸಕ್ತ ಹಣಕಾಸು ಸಾಲಿನ ಅಂತ್ಯಕ್ಕೆ ವಿಮಾ ಮೊತ್ತ ದೊರೆಯಲಿದೆ ಎಂದು ಅವರು ಹೇಳಿದರು.

ಕಳೆದ ಮುಂಗಾರು ಹಂಗಾಮಿನಲ್ಲಿ ಪ್ರವಾಹ ಸ್ಥಿತಿ ತಲೆದೋರಿದ್ದರೂ ರಾಜ್ಯದಲ್ಲಿ 140 ಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆ ಮಾಡಲಾಗಿದೆ. ಇದು ಸಾರ್ವಕಾಲಿಕ ದಾಖಲೆಯಾಗಿದೆ ಎಂದು ಅವರು ವಿವರಿಸಿದರು.

ನಿವೃತ್ತ ಡಿಜಿ–ಐಜಿಪಿಗೆ ವಂಚನೆ

ಬೆಂಗಳೂರು: ರಾಜ್ಯ ಪೊಲೀಸ್ ಮಹಾನಿರ್ದೇಶಕರಾಗಿ (ಡಿಜಿ–ಐಜಿಪಿ) ಸೇವೆ ಸಲ್ಲಿಸಿ ನಿವೃತ್ತರಾಗಿರುವ ಅಜಯ್ ಕುಮಾರ್ ಸಿಂಗ್ ಅವರ ಬ್ಯಾಂಕ್ ಖಾತೆಯಿಂದ ₹ 2.13 ಲಕ್ಷ ಡ್ರಾ ಮಾಡಿಕೊಂಡು ವಂಚಿಸಿದ ಪ್ರಕರಣವನ್ನು ಪೂರ್ವ ವಿಭಾಗದ ಸೈಬರ್ ಕ್ರೈಂ ಠಾಣೆಗೆ ವರ್ಗಾಯಿಸಲಾಗಿದೆ.

'ಕಳೆದ ಜುಲೈನಲ್ಲಿ ಅಜಯ್‌ಕುಮಾರ್ ಸಿಂಗ್ ಅವರ ಬ್ಯಾಂಕ್ ಖಾತೆಯಿಂದ ವಂಚಕರು ಹಣ ಡ್ರಾ ಮಾಡಿಕೊಂಡಿದ್ದರು. ಈ ಬಗ್ಗೆ ಪುಲಿಕೇಶಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈಗ ಅದೇ ಪ್ರಕರಣದ ತನಿಖೆ ಹೊಣೆಯನ್ನು ಸೈಬರ್ ಕ್ರೈಂ ಠಾಣೆಗೆ ವರ್ಗಾಯಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೊಬೈಲ್ ಕರೆ ಆಡಿಯೊ ಹುಟ್ಟುಹಾಕಿದ್ದ ವಿವಾದ ಕೊನೆಗೂ ಸುಖಾಂತ್ಯ

ಅಭಿಮಾನಿಗಳ ಪರ ದರ್ಶನ್ ಕ್ಷಮೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ದರ್ಶನ್ ಅಭಿಮಾನಿಗಳು ಮತ್ತು ನಟ ಜಗ್ಗೇಶ್ ಅವರ ನಡುವಿನ ಸಂಘರ್ಷ ಕೊನೆಗೂ ಶಮನ ಕಂಡಿದೆ. 'ನನ್ನ ಅಭಿಮಾನಿಗಳಿಂದ ಹಿರಿಯರಿಗೆ (ಜಗ್ಗೇಶ್ ಅವರಿಗೆ) ನೋವಾಗಿದ್ದರೆ ಅವರ ಪರವಾಗಿ ನಾನೇ ಕ್ಷಮೆಯಾಚಿಸುತ್ತೇನೆ' ಎಂದು ನಟ ದರ್ಶನ್ ಅವರು ಟಿವಿ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

'ವಿವಾದ ಆದ ದಿನ ನಾನು ತಿರುಪತಿಗೆ ಹೋಗಿದ್ದೆ. ಬರುವಾಗ ತಡರಾತ್ರಿ ಆಗಿತ್ತು. ಆ ವೇಳೆಗೆ ನಿರ್ಮಾಪಕ ವಿಖ್ಯಾತ್ ಅವರ ಸುಮಾರು 50ರಿಂದ 60 ಮಿಸ್ಡ್‌ಕಾಲ್‌ಗಳು ಇದ್ದವು. ಆ ಹೊತ್ತಿನಲ್ಲಿ ಕರೆ ಮಾಡುವುದು ಸರಿಯಲ್ಲ ಎಂದು ಹೇಳಿ ಮರುದಿನ ಮಾತನಾಡಿದೆ. ನನ್ನ ಅಭಿಮಾನಿಗಳು ಜಗ್ಗೇಶ್ ಅವರ ಶೂಟಿಂಗ್ ಸೆಟ್‌ಗೆ ಹೋಗಿರುವುದು ಗೊತ್ತಾಗಿದ್ದರೆ ಅಂದೇ ಬೈದು ಬಿಡುತ್ತಿದ್ದೆ' ಎಂದರು.

'ಜಗ್ಗೇಶ್ ನಮ್ಮ ಹಿರಿಯರು. ಹಿರಿಯರು ಯಾವತ್ತೂ ಮುಂದಿರಬೇಕು. ನಾವು ಹಿಂದಿರಬೇಕು. ಒಂದು ವೇಳೆ ಅವರು ಮಾತನಾಡಿದ್ದರೆ ನಮ್ಮ ಬಗ್ಗೆ ತಾನೆ. ನಮ್ಮ ಬಗ್ಗೆಲ್ಲದೆ ಇನ್ಯಾರ ಬಗ್ಗೆ ಮಾತನಾಡಲು ಸಾಧ್ಯ?' ಎಂದ ಅವರು, 'ಆ ವಿವಾದ ಆಗುತ್ತಿದ್ದಂತೆಯೇ ಜಗ್ಗೇಶ್ ಅವರಿಗೆ ಕರೆ ಮಾಡಿದ್ದೆ. ಆದರೆ ಸಂಪರ್ಕ ಸಾಧ್ಯವಾಗಲಿಲ್ಲ' ಎಂದು ಹೇಳಿದರು.

'ಇಷ್ಟಕ್ಕೂ ಈ ವಿವಾದದಲ್ಲಿ ನನ್ನ ಯಾವುದೇ ಪಾತ್ರ ಇಲ್ಲ. ನಿರ್ಮಾಪಕ ವಿಖ್ಯಾತ್ ಅವರಿಗೂ ಇದನ್ನೇ ಹೇಳಿದ್ದೆ. ಕರೆಯ ರೆಕಾರ್ಡಿಂಗನ್ನು ಒಂದೋ ವಿಖ್ಯಾತ್ ಸೋರಿಕೆ ಮಾಡಿರಬೇಕು ಅಥವಾ ಜಗ್ಗೇಶ್ ಅವರು ಮಾಡಿರಬೇಕು. ಇವರಿಬ್ಬರ ನಡುವಿನ ವಿಚಾರ ಇದರಲ್ಲಿ ನನ್ನ ಪಾತ್ರ ಏನಿದೆ? ಆದರೂ ಅವರಿಗೆ ನೋವಾಗಿದ್ದರೆ ಕ್ಷಮೆಯಾಚಿಸುತ್ತೇನೆ' ಎಂದರು.

ಮನಸ್ಸು ಹಗುರವಾಯಿತು: ಜಗ್ಗೇಶ್



ದರ್ಶನ್ ಮಾತಿಗೆ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿದ ಜಗ್ಗೇಶ್, 'ಸಮಯ ಸಂದರ್ಭ ವಿಷಘಳಿಗೆ. ಪ್ರೀತಿ ವಿಶ್ವಾಸಕ್ಕೆ ತಾತ್ಕಾಲಿಕ ಸಮಸ್ಯೆ. ವೈಶಾಲ್ಯತೆ ಚಿಂತನೆ ಹೃದಯ ಇದ್ದಾಗ ಅವಸರದಿಂದ ಮೂಡಿದ ಸರಿಯದ ಮತ್ತು ಸುಳ್ಳು ಪ್ರಶ್ನೆಗಳ ಸುತ್ತಾ! ಕನ್ನಡಕ್ಕೆ ಒಗ್ಗಟ್ಟಿರಲಿ. ಮನಸ್ಸು ಹಗುರವಾಯಿತು ಧನ್ಯವಾದ. ಇನ್ನೆಂದು ಇಂಥ ದಿನ ಬರದಿರಲಿ' ಎಂದಿದ್ದಾರೆ.

ಜಗ್ಗೇಶ್ ಸೇರಿ 10 ಜನ ಬಿಜೆಪಿ ವಕ್ತಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರನಟ ಜಗ್ಗೇಶ್ ಸೇರಿ ಒಟ್ಟು 10 ಜನರನ್ನು ರಾಜ್ಯ ಬಿಜೆಪಿ ವಕ್ತಾರರನ್ನಾಗಿ ನೇಮಿಸಿದೆ. ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಮುಖ್ಯ ವಕ್ತಾರರಾಗಿದ್ದಾರೆ.

ಶಾಸಕರಾದ ರಾಜೂಗೌಡ, ರಾಜಕುಮಾರ್ ಪಾಟೀಲ ತೆಲ್ಕೂರ, ಪಿ.ರಾಜೀವ್, ವಿಧಾನ ಪರಿಷತ್ ಸದಸ್ಯ ತೇಜಸ್ವಿನಿಗೌಡ, ಚಲುವಾದಿ ನಾರಾಯಣಸ್ವಾಮಿ, ಗಿರಿಧರ ಉಪಾಧ್ಯಾಯ, ಎಂ.ಬಿ. ಜಿರಲಿ ಮತ್ತು ಮಹೇಶ್ ಅವರನ್ನು ವಕ್ತಾರರನ್ನಾಗಿ ನೇಮಕ ಮಾಡಲಾಗಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.



ಶಿರಸಿ ಪ್ರತ್ಯೇಕ ಜಿಲ್ಲೆ ರಚನೆಗೆ ಒತ್ತಾಯಿಸಿ ಶಿರಸಿ ನಗರದಲ್ಲಿ ನಾಗರಿಕರು ಪ್ರತಿಭಟನೆ ನಡೆಸಿದರು.

815 ಅಧಿಕಾರಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಪ್ರಾರಂಭವಾದ ದಿನದಿಂದ ಈವರೆಗೆ 1,568 ಎಫ್‌ಐಆರ್ ದಾಖಲಿಸಿದ್ದು, 815 ಸರ್ಕಾರಿ ಅಧಿಕಾರಿಗಳ ವಿರುದ್ಧ ನ್ಯಾಯಾಲಯಗಳಿಗೆ ಆರೋಪ ಪಟ್ಟಿಗಳನ್ನು ಸಲ್ಲಿಸಲಾಗಿದೆ ಎಂದು ತನಿಖಾ ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆ.

'ಐದು ವರ್ಷಗಳಲ್ಲಿ ₹ 120 ಕೋಟಿ ವೆಚ್ಚ ಮಾಡಿ ನಾಲ್ವರಿಗೆ ಮಾತ್ರ ಶಿಕ್ಷೆಯಾಗಿದೆ' ಎಂದು ಕರ್ನಾಟಕ ರಾಷ್ಟ್ರ ಸಮಿತಿಯ ಪದಾಧಿಕಾರಿಗಳು ಮಾಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಎಸಿಬಿ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿದೆ.

'ಈವರೆಗೆ 1,542 ಅಧಿಕಾರಿಗಳನ್ನು ಬಂಧಿಸಲಾಗಿದೆ. ಎಸಿಬಿ ವರದಿ ಆಧಾರದಲ್ಲಿ 1,199 ಅಧಿಕಾರಿಗಳನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. 940 ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಗೆ ಪ್ರಸ್ತಾವ ಸಲ್ಲಿಸಲಾಗಿದೆ'

ಎಸಿಬಿ ಸಲ್ಲಿಸಿರುವ ಆರೋಪಪಟ್ಟಿಗಳನ್ನು ಆಧರಿಸಿ ಆರೋಪಿಗಳ ವಿರುದ್ಧ 35 ವಿಶೇಷ ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಯುತ್ತಿದೆ. 557 ಪ್ರಕರಣಗಳ ವಿಚಾರಣೆ ವಿವಿಧ ಹಂತದಲ್ಲಿವೆ. ಮುರು ಪ್ರಕರಣಗಳಲ್ಲಿ ಆರೋಪ ಸಾಬೀತಾಗಿದ್ದು, ತಪ್ಪಿತಸ್ಥರಿಗೆ ಶಿಕ್ಷೆಯಾಗಿದೆ ಎಂದು ಅಧಿಕಾರಿಗಳು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ₹ 150 ಕೋಟಿ ಮೌಲ್ಯದ 16 ಲಕ್ಷ ಚದರ ಅಡಿ ವಿಸ್ತೀರ್ಣದ ಟಿಡಿಆರ್ ನೀಡಿರುವ ಆರೋಪದಡಿ ಹತ್ತು ಪ್ರಕರಣಗಳನ್ನು ಎಸಿಬಿಯ ಬೆಂಗಳೂರು ನಗರ ಠಾಣೆಯಲ್ಲಿ ದಾಖಲು ಮಾಡಲಾಗಿದೆ. 15 ಅಧಿಕಾರಿಗಳು ಮತ್ತು 59 ಖಾಸಗಿ ವ್ಯಕ್ತಿಗಳ ವಿರುದ್ಧ ತನಿಖೆ ನಡೆಯುತ್ತಿದೆ. ಮೂರು ಪ್ರಕರಣಗಳಲ್ಲಿ ಆರೋಪ ಪಟ್ಟಿ ಸಲ್ಲಿಕೆಯಾಗಿದ್ದು, ಏಳು ಪ್ರಕರಣಗಳ ತನಿಖೆ ಪ್ರಗತಿಯಲ್ಲಿದೆ ಎಂದು ಎಸಿಬಿ ಅಧಿಕಾರಿಗಳು ವಿವರ ನೀಡಿದ್ದಾರೆ.

ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ನಗರ ಯೋಜನಾ ವಿಭಾಗದ ಸಹಾಯಕ ನಿರ್ದೇಶಕ ದೇವೇಂದ್ರಪ್ಪ ಅವರನ್ನು ಲಂಚ ಪ್ರಕರಣದಲ್ಲಿ ಬಂಧಿಸಿದ ಬಳಿಕ ಬೃಹತ್ ಅಕ್ರಮ ಪತ್ತೆ ಮಾಡಲಾಗಿದೆ. ಎಸಿಬಿ ವರದಿ ಆಧಾರದಲ್ಲಿ ಬಿಬಿಎಂಪಿಯ 40 ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಪ್ರಾಥಮಿಕ ಕೃಷಿ ಸಹಕಾರ ಸಂಘದಲ್ಲಿ ನಡೆಯುತ್ತಿದ್ದ ಅಕ್ರಮ ಪತ್ತೆಮಾಡಿದ್ದು, ರೈತರಿಗೆ ₹ 1.6 ಕೋಟಿ ಕೊಡಿಸಲಾಗಿದೆ ಎಂದು ತಿಳಿಸಿದ್ದಾರೆ.

ವಿಜಯಪುರ ಜಿಲ್ಲೆಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ ವಿರುದ್ಧದ ಪ್ರಕರಣದ ತನಿಖೆಯಲ್ಲಿ 43 ಫಲಾನುಭವಿಗಳು ಮತ್ತು ಬಾಗಲಕೋಟೆಯ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಚೇರಿ ಅಧಿಕಾರಿಯ ವಿರುದ್ಧದ ಲಂಚ ಪ್ರಕರಣದ ತನಿಖೆಯಲ್ಲಿ 70 ಫಲಾನುಭವಿಗಳಿಗೆ ಚೆಕ್ ಕೊಡಿಸಲಾಗಿದೆ. 133 ಸರ್ಕಾರಿ ಕಚೇರಿಗಳಲ್ಲಿ ದಿಢೀರ್ ಶೋಧ ನಡೆಸಿದ್ದು, ₹ 17.29 ಕೋಟಿ ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ವಿಶೇಷ ಮೀಸಲಾತಿ ನೀಡುವಂತೆ ಮೊಗವೀರರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮೊಗವೀರ ಸಮುದಾಯಕ್ಕೂ ಸರ್ಕಾರ ವಿಶೇಷ ಮೀಸಲಾತಿ ನೀಡಬೇಕು ಹಾಗೂ ಸಂಕಷ್ಟಕ್ಕೆ ಸಿಲುಕಿರುವ ಮೀನುಗಾರರ ಸಾಲ ಮನ್ನಾ ಮಾಡುವಂತೆ ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘ ಹಾಗೂ ಆಳಸಮುದ್ರ ಮೀನುಗಾರರ ಸಂಘಗಳು ಒತ್ತಾಯಿಸಿವೆ.

ನಗರದಲ್ಲಿ ಸಂಘಗಳ ಪದಾಧಿಕಾರಿಗಳು ಬುಧವಾರ ಜಂಟಿ ಸುದ್ದಿಗೋಷ್ಠಿ ನಡೆಸಿದರು.

ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದ ಅಧ್ಯಕ್ಷ ಜಯ ಸಿ.ಕೋಟ್ಯಾನ್,' ಮೊಗವೀರರ ಕುಲಕಸುಬು ಮೀನುಗಾರಿಕೆ. ಇತ್ತೀಚಿನ ವರ್ಷಗಳಲ್ಲಿ ಮತ್ಸ್ಯೋದ್ಯಮ ನೆಲಕಚ್ಚಿದೆ. ಚಂಡಮಾರುತಗಳ ಅಬ್ಬರ, ತೈಲ ದರ ಏರಿಕೆಯಿಂದ ಕರಾವಳಿ ಭಾಗದಲ್ಲಿ ಮೀನುಗಾರಿಕೆ ಮಾಡಲಾಗದೆ, ಶೇ 90ರಷ್ಟು ಮೀನುಗಾರರು ಸಂಕಷ್ಟದಲ್ಲಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ಹವಾಮಾನ ವೈಪರೀತ್ಯ, ಪರಿಸರ ಮಾಲಿನ್ಯದಿಂದ ಒಂದು ಬಾರಿ ಮೀನುಗಾರಿಕೆಗೆ 12 ದಿನ ಸಮುದ್ರದಲ್ಲೇ ಕಳೆಯುವಂತಾಗಿದೆ. ನೂರಾರು ಕಿ.ಮೀ ದೂರದವರೆಗೆ ಸಮುದ್ರಯಾನ ಮಾಡುವ ಅನಿವಾರ್ಯ ಸೃಷ್ಟಿಯಾಗಿದೆ. ಮೀನುಗಾರರ ಸಾಲ ಮತ್ತು ಬಡ್ಡಿ ಮನ್ನಾ ಮಾಡಬೇಕು' ಎಂದು ಆಗ್ರಹಿಸಿದರು.

'ರಾಜ್ಯ ಸರ್ಕಾರ ನೀಡುತ್ತಿರುವ ಕರ ರಿಯಾಯಿತಿ ಡೀಸೆಲ್ ಪೂರೈಕೆ ಪದ್ಧತಿ ನಿಲ್ಲಿಸಿ, ವಾರ್ಷಿಕ ಕೋಟಾದಲ್ಲಿ ಡೀಸೆಲ್ ನೀಡಬೇಕು. ನಾಡದೋಣಿ ಮೀನುಗಾರರಿಗೆ ಕರ ರಹಿತ ಸೀಮೆಎಣ್ಣೆ ನೀಡಬೇಕು. ಮೀನುಗಾರಿಗೆ ಶೇ 4ರ ಬಡ್ಡಿದರದಲ್ಲಿ ಸಾಲ ಕಲ್ಪಿಸಬೇಕು' ಎಂದು ಆಗ್ರಹಿಸಿದರು.

ಕಾರ್ಯದರ್ಶಿ ಸುಧಾಕರ್ ಕುಂದರ್, 'ಕೂಡಲೇ ಸರ್ಕಾರ ಮೀನುಗಾರರ ನೆರವಿಗೆ ಬರಬೇಕು' ಎಂದು ಮನವಿ ಮಾಡಿದರು.

'ಬೇಡಿಕೆಗಳನ್ನು ಸರ್ಕಾರ ಈಡೇರಿಸದಿದ್ದರೆ, ಮೀನುಗಾರಿಕೆ ಸ್ಥಗಿತಗೊಳಿಸಿ, ಅನಿರ್ದಿಷ್ಟಾವಧಿ ಮುಷ್ಕರ ಕೈಗೊಳ್ಳಲಾಗುವುದು' ಎಂದು ಆಳಸಮುದ್ರ ಮೀನುಗಾರರ ಸಂಘದ ಅಧ್ಯಕ್ಷ ಅಶೋಕ್ ಹಾಗೂ ಮೊಗವೀರ ಸಂಘದ ಸದಸ್ಯರು ಎಚ್ಚರಿಕೆ ನೀಡಿದರು.

ಸಚಿವರು, ಸಂಸದರ ಕಾರು ಖರೀದಿ ದರ ಮಿತಿ ಏರಿಕೆ

ಬೆಂಗಳೂರು: ಕೋವಿಡ್ ಮತ್ತು ಆರ್ಥಿಕ ಸಂಕಷ್ಟದ ನಡುವೆಯೂ ರಾಜ್ಯ ಸರ್ಕಾರ ಸಚಿವರು ಮತ್ತು ಸಂಸದರ ಬಳಕೆಗಾಗಿ ಖರೀದಿಸುವ ಹೊಸ ಕಾರುಗಳ ದರ ಮಿತಿಯನ್ನು ಹೆಚ್ಚಿಸಿದೆ.

ಹುಣಸೋಡು ಸ್ಫೋಟ ಪ್ರಕರಣ: ನಾಲ್ಕು ವಾಹನ, ಒಂದು ಬೈಕ್ ಅವಶೇಷ ಪತ್ತೆ, ಸಾವಿನ ಸಂಖ್ಯೆ ಹೆಚ್ಚಳದ ಶಂಕೆ

ಅತ್ತ ಕ್ರಷರ್‌ಗಳಿಗೆ ಗುತ್ತಿಗೆ, ಇತ್ತ ಸರ್ಕಾರದ ನೆರವು!

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಹುಣಸೋಡು ಸ್ಫೋಟ ಪ್ರಕರಣದ ನಂತರ ಜಿಲ್ಲಾಡಳಿತ ಕಲ್ಲು ಗಣಿಗಾರಿಕೆಯ ಸಮಗ್ರ ಮಾಹಿತಿ ಕಲೆ ಹಾಕಿದ್ದು, ಕ್ವಾರಿ, ಕ್ರಷರ್‌ಗಳಿಗೆ ಜಮೀನು ಗುತ್ತಿಗೆ ನೀಡಿದ ಹಲವು ರೈತರು 'ಕಿಸಾನ್ ಸಮ್ಮಾನ್' ಯೋಜನೆಯಡಿ ಕೇಂದ್ರ, ರಾಜ್ಯ ಸರ್ಕಾರದಿಂದ ಆರ್ಥಿಕ ನೆರವು ಪಡೆದಿರುವುದು ಬೆಳಕಿಗೆ ಬಂದಿದೆ.

ರೈತರು ತಮ್ಮ ಭೂಮಿಯಲ್ಲಿ ಕ್ರಷರ್ ನಡೆಸಲು, ಕಲ್ಲು ತೆಗೆಯಲು ಅತ್ಯಧಿಕ ಬಾಡಿಗೆ ಪಡೆದು ಲೀಸ್ ನೀಡಿದ್ದರೂ ಸರ್ಕಾರ ರೈತರಿಗೆ ನೀಡುವ ಸೌಲಭ್ಯಗಳನ್ನೂ ಪಡೆದಿದ್ದಾರೆ. ಕೇಂದ್ರ ಸರ್ಕಾರ ನೀಡುವ ₹ 6 ಸಾವಿರ, ರಾಜ್ಯ ಸರ್ಕಾರ ನೀಡುವ ₹ 4 ಸಾವಿರ ಅವರ ಖಾತೆಗಳಿಗೆ ಜಮೆಯಾಗಿದೆ. ಆಯಾ ಭಾಗದ ಗ್ರಾಮ ಲೆಕ್ಕಿಗರು, ಕಂದಾಯ ಇನ್‌ಸ್ಪೆಕ್ಟರ್‌ಗಳನ್ನು ಒಳಗೊಂಡ ತಂಡ ಇಂತಹ ರೈತರ ಪಟ್ಟಿ ತಯಾರಿಸಿದೆ.

ನಾಲ್ಕು ವಾಹನ, ಒಂದು ಬೈಕ್ ಅವಶೇಷ ಪತ್ತೆ: ಸ್ಫೋಟ ನಡೆದ ಸ್ಥಳದಲ್ಲಿ ಒಂದು ಲಾರಿ, ಒಂದು ಪಿಕಪ್ ವಾಹನ ಸುಟ್ಟು ಕರಕಲಾಗಿವೆ ಎಂದು ಆರಂಭದ ತನಿಖೆಯಲ್ಲಿ ಪೊಲೀಸರು ಮಾಹಿತಿ ನೀಡಿದ್ದರು. ಆದರೆ, ಸಾರಿಗೆ ಅಧಿಕಾರಿಗಳು ಸ್ಥಳದಲ್ಲಿ ದೊರೆತ ವಾಹನಗಳ ಅವಶೇಷಗಳನ್ನು ಕಲೆ ಹಾಕಿ, ಪರಿಶೀಲಿಸಿದ ನಂತರ ಒಂದು ಲಾರಿ, ಮೂರು ಪಿಕಪ್ ವಾಹನಗಳು ಹಾಗೂ ಒಂದು ಬೈಕ್ ಇದ್ದವು ಎನ್ನುವ ಅಂಶ ದೃಢಪಟ್ಟಿದೆ. ವಾಹನಗಳ ಚಾಸಿಗಳೂ ಲಭ್ಯವಾಗಿವೆ.

ಸಾವಿನ ಸಂಖ್ಯೆ ಹೆಚ್ಚಾಗಿರುವ ಶಂಕೆ: ಸ್ಫೋಟದಲ್ಲಿ ಬೈಕ್ ಸೇರಿ ಐದು ವಾಹನಗಳು ಇದ್ದ ಮಾಹಿತಿ ಖಚಿತವಾದ ನಂತರ ಸಾವಿನ ಸಂಖ್ಯೆಯಲ್ಲೂ ಹೆಚ್ಚಳವಾಗಿರುವ ಸಾಧ್ಯತೆ ಇರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಒಂದು ವಾಹನಕ್ಕೆ ಇಬ್ಬರಂತೆ ಎಂಟು, ಒಬ್ಬ ಬೈಕ್ ಸವಾರ, ಸ್ಥಳದಲ್ಲಿದ್ದ ಇತರರು ಸೇರಿದರೆ ಸಾವಿನ ಸಂಖ್ಯೆ ಹೆಚ್ಚಾಗಿರುವ ಸಾಧ್ಯತೆ ಇದೆ. ಅಂದು ಸ್ಫೋಟ ನಡೆದ ಸ್ಥಳದಲ್ಲಿದ್ದು, ನಾಪತ್ತೆಯಾಗಿರುವ ಕೆಲವರು ಮೃತಪಟ್ಟಿರಬಹುದು ಎನ್ನಲಾಗಿದೆ.

ಸ್ಥಳೀಯರ ಕೈಗೆ ನೋಟಿನ ಕಂತೆಗಳು: ಜ. 21ರ ರಾತ್ರಿ 10.20ಕ್ಕೆ ಸ್ಫೋಟ ನಡೆದು, ಪೊಲೀಸರು ಬರುವ ಮೊದಲೇ ಸ್ಥಳೀಯರು ಸ್ಥಳಕ್ಕೆ ಲಗ್ಗೆ ಹಾಕಿದ್ದರು. ಸ್ಫೋಟ ನಡೆದ ಸ್ಥಳದ ಸಮೀಪ ಹಲವರಿಗೆ ನೋಟಿನ ಕಂತೆಗಳು ದೊರೆತಿವೆ ಎಂಬ ಸುದ್ದಿ ಹಬ್ಬಿತ್ತು. ಮರುದಿನ ಪೊಲೀಸರಿಗೆ ಸ್ಥಳದಲ್ಲಿ ದೊರೆತ ಅರೆ ಸುಟ್ಟ ನೋಟುಗಳು ಅದಕ್ಕೆ ಸಾಕ್ಷಿಯಾಗಿದ್ದವು. ಜಿಲೆಟಿನ್ ಕಡ್ಡಿಗಳು, ಡಿಟೊನೇಟರ್ ಮತ್ತಿತರ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಲು ಬಂದಿದ್ದವರು ದೊಡ್ಡ ಪ್ರಮಾಣದ ಹಣ ತಂದಿದ್ದರು ಎನ್ನಲಾಗಿದ್ದು ವಿಚಾರಣೆ ನಡೆಯುತ್ತಿದೆ.

ಮೂವರ ಜಾಮೀನು ಅರ್ಜಿ ತಿರಸ್ಕೃತ

ಈ ಪ್ರಕರಣದ ಮೂವರು ಆರೋಪಿಗಳ ಜಾಮೀನು ಅರ್ಜಿಗಳನ್ನು ಇಲ್ಲಿನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ತಿರಸ್ಕರಿಸಿದೆ. ಆಂಧ್ರಪ್ರದೇಶದ ನಾಲ್ವರು ಸೇರಿ 10 ಆರೋಪಿಗಳನ್ನು ಇದುವರೆಗೆ ಬಂಧಿಸಲಾಗಿದೆ. ಅವರಲ್ಲಿ 7 ಜನರು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು.

ಜಮೀನಿನ ಮಾಲೀಕರಾದ ಶಂಕರಗೌಡ ಟಿ. ಕುಲಕರ್ಣಿ, ಅವಿನಾಶ್ ಕುಲಕರ್ಣಿ, ಎಸ್.ಎಸ್. ಕ್ರಷರ್ ಮಾಲೀಕ ಸುಧಾಕರ್ ಅವರ ಅರ್ಜಿಗಳನ್ನು ನ್ಯಾಯಾಲಯ ತಿರಸ್ಕರಿಸಿದೆ. ಜಿಲ್ಲೆಗೆ ಸ್ಫೋಟಕಗಳನ್ನು ಪೂರೈಸಿದ ಆರೋಪ ಹೊತ್ತಿರುವ ಆಂಧ್ರ ಪ್ರದೇಶದ ಶ್ರೀರಾಮುಲು, ಮಂಜುನಾಥ್ ಸಾಯಿ, ಪೃಥ್ವಿರಾಜ್ ಸಾಯಿ, ವಿಜಯಕುಮಾರ್ ಅವರ ಅರ್ಜಿ ವಿಚಾರಣೆ ನಡೆಯುತ್ತಿದೆ.

ಡಿಟೋನೇಟರ್ ಪತ್ತೆ: ಪ್ರಕರಣ ದಾಖಲು

ದಾವಣಗೆರೆ: ತಾಲ್ಲೂಕಿನ ಆಲೂರು ಗ್ರಾಮದಲ್ಲಿ ಕಲ್ಲು ಕ್ವಾರಿ ನಡೆಸುತ್ತಿದ್ದ ಸ್ಥಳ ಪರಿಶೀಲನೆ ವೇಳೆ ಬುಧವಾರ ಪೊಲೀಸರಿಗೆ ಒಂದು ಜೀವಂತ ಎಲೆಕ್ಟ್ರಿಕಲ್ ಡಿಟೋನೇಟರ್ ಪತ್ತೆಯಾಗಿದೆ. ಈ ಸಂಬಂಧ ಕ್ವಾರಿ ಮಾಲೀಕ ಕುಮಾರನಾಯ್ಕ ವಿರುದ್ಧ ಪ್ರಕರಣ ದಾಖಲಾಗಿದೆ.

ಅನಧಿಕೃತ ಸ್ಫೋಟಕ ಪತ್ತೆಗೆ ಸಚಿವ ನಿರಾಣಿ ಸೂಚನೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಕಲ್ಲು ಗಣಿಗಾರಿಕೆ ಪ್ರದೇಶಗಳಲ್ಲಿ ಕಾನೂನುಬಾಹಿರವಾಗಿ ಸ್ಫೋಟಕ ವಸ್ತುಗಳ ದಾಸ್ತಾನುಗಳನ್ನು ಪತ್ತೆ ಹಚ್ಚುವಂತೆ ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ್ ನಿರಾಣಿ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.



ಮುರುಗೇಶ್ ನಿರಾಣಿ

ನವದೆಹಲಿಯಿಂದ ಮಂಗಳವಾರ ರಾತ್ರಿ ಬೆಂಗಳೂರಿಗೆ ಬಂದ ಸಚಿವರು ನೇರವಾಗಿ ಹಿರೇನಾಗವಲ್ಲಿಯ ಘಟನಾ ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ರಾಜ್ಯದ ನಾನಾ ಭಾಗಗಳಲ್ಲಿ ಕಲ್ಲು ಗಣಿಗಾರಿಕೆ ಪ್ರದೇಶಗಳಲ್ಲಿ ಕಾನೂನುಬಾಹಿರವಾಗಿ ಸ್ಫೋಟಕ ಸಾಮಗ್ರಿಗಳನ್ನು ಸಂಗ್ರಹಿಸಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿವೆ ಎಂದು ಹೇಳಿದರು.

ಇನ್ನು ಮುಂದೆ ರಾಜ್ಯದ ಯಾವುದೇ ಭಾಗದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಮುನ್ನಚರಿಕಾ ಕ್ರಮ ತೆಗೆದುಕೊಳ್ಳಲಾಗುವುದು. ಮುಂದಿನ ದಿನಗಳಲ್ಲಿ ಸ್ಫೋಟಕ ವಸ್ತುಗಳನ್ನು ಅನುಮತಿ ಪಡೆದವರು ಮಾತ್ರ ಬಳಸಬೇಕು ಎಂಬ ಕಾನೂನು ಜಾರಿ ಮಾಡಲಿದ್ದೇವೆ. ಇದರಿಂದ ಇಂತಹ ಅನಾಹುತಗಳನ್ನು ತಡೆಯಲು ಸಾಧ್ಯವಾಗುತ್ತದೆ ಎಂದರು.

ಕ್ರಿಮಿನಲ್ ಮೊಕದ್ದಮೆ: ಇಲಾಖೆಯಿಂದ ಅನುಮತಿ ಪಡೆಯದೆ ಸ್ಫೋಟಕಗಳನ್ನು ಸಂಗ್ರಹಿಸಿದರೆ ಮತ್ತು ಬಳಸಿದರೆ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಲಾಗುವುದು. ಸ್ಫೋಟಕ ವಸ್ತುಗಳನ್ನು ಬಳಸಲು ಸರ್ಕಾರದಿಂದ ಲೈಸೆನ್ಸ್ ಪಡೆದಿರಬೇಕು. ಇಂತಹ ಘಟನೆಗಳಿಗೆ ಕಾರಣರಾದವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಎಚ್ಚರಿಸಿದರು.

ಜಿಲೆಟಿನ್ ಕಡ್ಡಿಗಾಗಿ ಹುಡುಕಾಟ

ಪ್ರಜಾವಾಣಿ ವಾರ್ತೆ

ಮಂಡ್ಯ: ಹುಣಸೋಡಿನಲ್ಲಿ ನಡೆದ ಸ್ಫೋಟ ಪ್ರಕರಣದ ನಂತರ, ಜಿಲ್ಲೆಯಾದ್ಯಂತ ಅಕ್ರಮ ಕಲ್ಲುಗಣಿಗಾರಿಕೆ ಸ್ಥಗಿತಗೊಳಿಸಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಗಣಿ ಕಂಪನಿಗಳ ಬಳಿ ಅಪಾರ ಪ್ರಮಾಣದ ಜಿಲೆಟಿನ್ ಕಡ್ಡಿ ಹಾಗೂ ಇತರ ಸ್ಫೋಟಕ ಸಂಗ್ರಹವಿದೆ ಎಂಬ ಮಾಹಿತಿ ಇದ್ದು, ಪೊಲೀಸರು ಸ್ಫೋಟಕಗಳ ಹುಡುಕಾಟ ನಡೆಸಿದ್ದಾರೆ.

ಪಾಂಡವಪುರ ತಾಲ್ಲೂಕಿನ ಬೇಬಿಬೆಟ್ಟ ಸೇರಿ ಶ್ರೀರಂಗಪಟ್ಟಣ, ನಾಗಮಂಗಲ ತಾಲ್ಲೂಕಿನ ಕಲ್ಲು ಗಣಿ ಪ್ರದೇಶಗಳಲ್ಲಿ ಜಿಲೆಟಿನ್ ಕಡ್ಡಿಗಳು ರಸ್ತೆಯಲ್ಲೂ ಚೆಲ್ಲಾಡುತ್ತಿವೆ ಎಂಬ ಆರೋಪ ಕೇಳಿ ಬಂದಿತ್ತು. ಈಚೆಗೆ ಜಿಲೆಟಿನ್ ಸ್ಫೋಟಗೊಳ್ಳುತ್ತಿರುವ ಕಾರಣ ಪೊಲೀಸರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಸ್ಫೋಟಕಗಳನ್ನು ವಶಕ್ಕೆ ಪಡೆಯುತ್ತಿದ್ದಾರೆ.

'ಗಣಿ ಪ್ರದೇಶದಲ್ಲಿ ಚೆಕ್‌ಪೋಸ್ಟ್ ತೆರೆಯಲಾಗಿದ್ದು ಅಕ್ರಮ ಗಣಿ ಚಟುವಟಿಕೆ ಮೇಲೆ ನಿಗಾ ವಹಿಸಲಾಗಿದೆ. ಶಿವಮೊಗ್ಗ ಘಟನೆಯ ನಂತರ ಸ್ಫೋಟಕಗಳನ್ನು ವಶಕ್ಕೆ ಪಡೆಯಲಾಗುತ್ತಿದೆ. ಪೊಲೀಸರೊಂದಿಗೆ ಸಂಪರ್ಕದಲ್ಲಿದ್ದು ಅವರಿಗೆ ಸಹಕಾರ ನೀಡುತ್ತಿದ್ದೇವೆ' ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಿರಿಯ ಭೂವಿಜ್ಞಾನಿ ಟಿ.ವಿ. ಪುಷ್ಪಾ ತಿಳಿಸಿದರು.



ಬೇಬಿಬೆಟ್ಟ ಗಣಿ ಪ್ರದೇಶದಲ್ಲಿ ವಶಕ್ಕೆ ಪಡೆದಿರುವ ಜಿಲೆಟಿನ್ ಕಡ್ಡಿ

ಮಧ್ಯಂತರ ತಡೆಯಾಜ್ಞೆ: ಗಣಿಗಾರಿಕೆ ನಿಷೇಧ ಆದೇಶದ ವಿರುದ್ಧ ಕಾನೂನುಬದ್ಧವಾಗಿ ಅನುಮತಿ ಪಡೆದ ಕಲ್ಲು ಗಣಿ ಮಾಲೀಕರು, ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ.

'ಮಾರ್ಚ್ 1ರಂದು ಅಂತಿಮ ಆದೇಶ ಬರುವ ನಿರೀಕ್ಷೆ ಇದೆ. ಗಣಿ ಚಟುವಟಿಕೆಗೆ ಹಾಗೂ ಗುತ್ತಿಗೆ ವಿಸ್ತರಣೆಗೂ ಮಾಲೀಕರು ಒತ್ತಾಯಿಸುತ್ತಿದ್ದು, ಅಂತಿಮ ಆದೇಶದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಜಿಲ್ಲಾಧಿಕಾರಿ ಎಸ್.ಅಶ್ವಥಿ ತಿಳಿಸಿದರು.

ಡಿಬಿಎಲ್‌ಸಿಗೆ ₹ 21 ಕೋಟಿ ದಂಡ

ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ ದಶಪಥ ಕಾಮಗಾರಿ ನಡೆಸುತ್ತಿರುವ ದಿಲೀಪ್ ಬಿಲ್ಡ್‌ಕಾನ್ ಕಂಪನಿ (ಡಿಬಿಎಲ್‌ಸಿ) ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸಿರುವುದು ಸಾಬೀತಾಗಿದ್ದರಿಂದ, ಕಂಪನಿಗೆ ₹ 21 ಕೋಟಿ ದಂಡ ವಿಧಿಸಲಾಗಿದೆ.

ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಚಿವ ಮುರುಗೇಶ ನಿರಾಣಿ ಸ್ಥಳಕ್ಕೆ ಭೇಟಿ ನೀಡಿ, ಮರುಸಮೀಕ್ಷೆಗೆ ಸೂಚನೆ ನೀಡಿದ್ದಾರೆ. ಹೀಗಾಗಿ ಕಳೆದೆರಡು ದಿನಗಳಿಂದ ಮರು ಸಮೀಕ್ಷೆ ನಡೆಯುತ್ತಿದೆ.

ಜಿಲೆಟಿನ್ ಸಾಗಣೆ, ಸಂಗ್ರಹಕ್ಕೆ ನಿರ್ಬಂಧ

ಚಾಮರಾಜನಗರ: ಚಾಮರಾಜನಗರ ಜಿಲ್ಲೆಯಲ್ಲೂ ಬಿಳಿ ಕಲ್ಲು ಕ್ವಾರಿಗಳ ಮೇಲೆ ಗಣಿ ಮತ್ತು ಭೂವಿಜ್ಞಾನ ಇಲಾಖೆಗಳ ಅಧಿಕಾರಿಗಳು ನಿಗಾ ಇಟ್ಟಿದ್ದು, ಎಲ್ಲ ಕ್ವಾರಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಜಿಲ್ಲೆಯಲ್ಲಿ 38 ಬಿಳಿಕಲ್ಲು ಕ್ವಾರಿಗಳಿವೆ. ಅಧಿಕಾರಿಗಳು ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಹನೂರು ತಾಲ್ಲೂಕಿನಲ್ಲಿ ಒಂದು ಕ್ರಷರ್ ಹಾಗೂ ಟಾರು ಮಿಶ್ರಣ ಘಟಕವೊಂದು ಪರವಾನಗಿ ಇಲ್ಲದೇ ಕಾರ್ಯ ನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿತ್ತು. ಎರಡನ್ನೂ ಜಪ್ತಿ ಮಾಡಲಾಗಿದೆ.

'ಜಿಲ್ಲೆಯಲ್ಲಿ ಜಿಲೆಟಿನ್ ಸಾಗಾಟ ಹಾಗೂ ಸಂಗ್ರಹಕ್ಕೆ ನಿರ್ಬಂಧ ವಿಧಿಸಲಾಗಿದೆ. ಕ್ವಾರಿ ಮಾಲೀಕರ ಸಭೆ ನಡೆಸಲಾಗಿದ್ದು, ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ' ಎಂದು ಗಣಿ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಹಿರೇನಾಗವಲ್ಲಿ ಸ್ಫೋಟ ಪ್ರಕರಣ: ರಾಜಕೀಯ ಬಣ್ಣ

'ಗಣಿಗಾರಿಕೆಗೆ ಮತ್ತು ನನಗೂ ತಳುಕು ಹಾಕಲು ಕೆಲವರು ಯತ್ನಿಸಿದ್ದಾರೆ. ಎಂದಿಗೂ ಆ ಪ್ರಯತ್ನ ಫಲ ನೀಡುವುದಿಲ್ಲ. ಕಾನೂನು ಬದ್ಧವಾಗಿ ನಡೆಯುವ ಗಣಿ ಚಟುವಟಿಕೆಗಳಿಗೆ ಮಾತ್ರ ಅವಕಾಶ ಇದೆಯೇ ಹೊರತು, ಅಕ್ರಮಗಳಿಗೆ ಜಿಲ್ಲೆಯಲ್ಲಿ ಎಂದಿಗೂ ಅವಕಾಶ ನೀಡುವುದಿಲ್ಲ'

ತಪ್ಪಿತಸ್ಥರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ: ಸಚಿವ ಸುಧಾಕರ್

ಚಿಕ್ಕಬಳ್ಳಾಪುರ: ಹಿರೇನಾಗವಲ್ಲಿ ಜಿಲೆಟಿನ್ ಸ್ಫೋಟದ ಆರೋಪಿಗಳನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ.ಸುಧಾಕರ್ ಸ್ಪಷ್ಟವಾಗಿ ಹೇಳಿದ್ದಾರೆ.

ಆರೋಪಿಗಳನ್ನು ರಕ್ಷಿಸುವ ಇರಾದೆ ಸರ್ಕಾರಕ್ಕೆ ಇಲ್ಲ. ಕ್ರಷರ್ ಮಾಲೀಕ ಸೇರಿದಂತೆ ಕೆಲವರನ್ನು ಈಗಾಗಲೇ ಬಂಧಿಸಲಾಗಿದೆ. ತಪ್ಪಿತಸ್ಥರು ಎಷ್ಟೇ ಪ್ರಭಾವಿಗಳಾಗಿದ್ದರೂ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು ಎಂದು ಅವರು ಭರವಸೆ ನೀಡಿದ್ದಾರೆ.



ಹಿರೇನಾಗವಲ್ಲಿ ಸ್ಫೋಟ ಪ್ರಕರಣ ಕುರಿತು ಬುಧವಾರ 'ಪ್ರಜಾವಾಣಿ'ಯೊಂದಿಗೆ ದೂರವಾಣಿಯಲ್ಲಿ ಮಾತನಾಡಿದ ಅವರು, ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸುವಂತೆ ಯಾರೂ ಕೇಳಿರಲಿಲ್ಲ. ಆದರೆ, ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದೆ. ಒಂದು ವೇಳೆ ಆರೋಪಿಗಳನ್ನು ರಕ್ಷಿಸುವಂತಿದ್ದರೆ ಘಟನೆಯ ತನಿಖೆಯನ್ನು ಸಿಐಡಿ ತನಿಖೆಗೆ ವಹಿಸುವ ಔಚಿತ್ಯ ಏನಿತ್ತು ಎಂದು ಪ್ರಶ್ನಿಸಿದರು.

'ವಾಸ್ತವ ಸಂಗತಿ ಮರೆಮಾಚಿ ಘಟನೆಗೆ ರಾಜಕೀಯ ಬಣ್ಣ ಬಳಿಯುವ ಜತೆಗೆ ಪ್ರಕರಣಕ್ಕೆ ನನ್ನ ಹೆಸರು ತಳುಕು ಹಾಕುವ ಪ್ರಯತ್ನ ನಡೆಯುತ್ತಿದೆ. ಕೆಲವರು ವೈಯಕ್ತಿಕ ಆರೋಪ ಮಾಡುವ ಕೀಳು ಮಟ್ಟಕ್ಕೆ ಇಳಿದಿದ್ದು ದುರದೃಷ್ಟಕರ. ದುರಂತದಲ್ಲಿ ರಾಜಕಾರಣ ಸರಿಯಲ್ಲ' ಎಂದರು.

'ಆರೋಪಿ ಜತೆ ಒಡನಾಟವಿಲ್ಲ': 'ಭ್ರಮರವಾಸಿನಿ ಕ್ರಷರ್ ಮಾಲೀಕ ನಾಗರಾಜ ರೆಡ್ಡಿ ಜತೆ ನನಗೆ ಯಾವುದೇ ರಾಜಕೀಯ ಒಡನಾಟವಿಲ್ಲ' ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

'ನಾನು 2019ರಲ್ಲಿ ಬಿಜೆಪಿಗೆ ಹೋಗಿದ್ದೇನೆ. ನಾಗರಾಜ 25 ವರ್ಷಗಳಿಂದ ಬಿಜೆಪಿಯಲ್ಲಿದ್ದಾರೆ. ನನಗೂ ಅವರಿಗೂ ಯಾವುದೇ ಸಂಬಂಧವಿಲ್ಲ. ಅವರನ್ನು ಪತ್ತೆ ಹಚ್ಚಿ ಕೂಡಲೇ ಬಂಧಿಸುವಂತೆ ಪೊಲೀಸರಿಗೆ ಸೂಚನೆ ನೀಡಿದ್ದೇನೆ' ಎಂದರು.

ಇಬ್ಬರು ಅಧಿಕಾರಿಗಳ ಅಮಾನತು

ಒಂದನೇ ಪುಟದಿಂದ...

ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಸ್ಫೋಟಕಗಳ ದಾಸ್ತಾನು ಕುರಿತು ಫೆ.7 ರಂದು ಭ್ರಮರವಾಸಿನಿ ಕ್ರಷರ್ ಮೇಲೆ ದಾಳಿ ನಡೆಸಿ ಮಾಲೀಕರ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿತ್ತು. ಆದರೂ, ಆರೋಪಿಗಳನ್ನು ಬಂಧಿಸದ ಕಾರಣ ಇಬ್ಬರನ್ನೂ ಅಮಾನತುಗೊಳಿಸಲಾಗಿದೆ ಎಂದು ಎಸ್.ಪಿ ತಿಳಿಸಿದ್ದಾರೆ.

ಐವರು ಆರೋಪಿಗಳ ಬಂಧನ: ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಗೋರಂಟ್ಲದಲ್ಲಿ ತಲೆಮರೆಸಿಕೊಂಡಿದ್ದ ಎರಡನೇ ಆರೋಪಿ, ಗಣಿಯ ಸಹ ಮಾಲೀಕ ರಾಘವೇಂದ್ರ ರೆಡ್ಡಿ, ನಾಲ್ಕನೇ ಆರೋಪಿ ವೆಂಕಟಶಿವಾ ರೆಡ್ಡಿ, ಐದನೇ ಆರೋಪಿ ಪ್ರವೀಣ್, ಏಳನೇ ಆರೋಪಿ ಚಾಲಕ ರಿಯಾಜ್ ಮತ್ತು ಹದಿನಾಲ್ಕನೇ ಆರೋಪಿ ಮಧುಸೂದನ್ ರೆಡ್ಡಿ ಬಂಧಿತರು. ಇದೇ ಕ್ರಷರ್‌ನ ಇನ್ನೊಬ್ಬ ಮಾಲೀಕ ದೇವನಹಳ್ಳಿಯ ಇಮ್ತಿಯಾಜ್ ಎರಡು ತಿಂಗಳ ಹಿಂದೆ ಮೃತಪಟ್ಟಿದ್ದಾರೆ.

ಸ್ಫೋಟದಲ್ಲಿ ಮೃತಪಟ್ಟ ಆರು ಮಂದಿ ಸೇರಿದಂತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೂ ಒಟ್ಟು 15 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ತಲೆಮರೆಸಿಕೊಂಡಿರುವ ಪ್ರಮುಖ ಆರೋಪಿ, ಬಿಜೆಪಿ ಮುಖಂಡ ಹಾಗೂ ಕ್ರಷರ್ ಮಾಲೀಕ ಜಿ.ಎಸ್.ನಾಗರಾಜ ರೆಡ್ಡಿ ಸೇರಿದಂತೆ ನಾಲ್ವರು ಆರೋಪಿಗಳಿಗಾಗಿ ಪೊಲೀಸರು ಹುಡುಕುತ್ತಿದ್ದಾರೆ.

ಪ್ರಕರಣದ ತನಿಖೆ ಮತ್ತು ಆರೋಪಿಗಳ ಬಂಧನಕ್ಕಾಗಿ ನಾಲ್ಕು ವಿಶೇಷ ತಂಡಗಳನ್ನು ರಚಿಸಲಾಗಿದೆ. ಬಹು ಆಯಾಮಗಳಲ್ಲಿ ತನಿಖೆ ನಡೆಯುತ್ತಿದೆ. ಸಿಐಡಿ ತಂಡ ಕೂಡ ತನಿಖೆ ಮುಂದುವರಿಸಲಿದೆ ಎಂದು ಎಸ್ಪಿ ಮಿಥುನ್ ಕುಮಾರ್ ತಿಳಿಸಿದ್ದಾರೆ.



ಕೋವಿಡ್ ಪರೀಕ್ಷೆ ವರದಿ ವಿಚಾರವಾಗಿ ಬಾವಲಿ ಚೆಕ್‌ಪೋಸ್ಟ್ ಬಂದ್ ಮಾಡಿದ್ದರಿಂದ ಸಾಲುಗಟ್ಟಿ ನಿಂತಿದ್ದ ವಾಹನಗಳು

ಕೋವಿಡ್ ವರದಿ: ಗಡಿಯಲ್ಲಿ ವಾಗ್ವಾದ– ವಾಹನ ದಟ್ಟಣೆ

ಮೈಸೂರು: ಕೋವಿಡ್ ನೆಗೆಟಿವ್ ವರದಿ ವಿಚಾರವಾಗಿ, ಕೇರಳ–ಕರ್ನಾಟಕ ಗಡಿ ಪ್ರದೇಶವಾದ ಮೈಸೂರು ಜಿಲ್ಲೆಯ ಬಾವಲಿ ಚೆಕ್‌ಪೋಸ್ಟ್‌ನಲ್ಲಿ ಕೇರಳದ ವಾಹನ ಚಾಲಕರು, ಪ್ರಯಾಣಿಕರು ಹಾಗೂ ರಾಜ್ಯದ ಅಧಿಕಾರಿಗಳ ನಡುವೆ ಬುಧವಾರ ಮಾತಿನ ಚಕಮಕಿ ನಡೆದಿದೆ.

ಆರ್‌ಟಿ–ಪಿಸಿಆರ್ ವರದಿ ಇದ್ದವರಿಗೆ ಮಾತ್ರ ರಾಜ್ಯ ಪ್ರವೇಶಕ್ಕೆ ಅವಕಾಶ ನೀಡುವುದಾಗಿ ಕೇರಳದ ವಾಹನಗಳನ್ನು ತಡೆಹಿಡಿದರು. ಇದಕ್ಕೆ ಪ್ರತಿಯಾಗಿ ಕೇರಳದವರು ಕೂಡ ಕರ್ನಾಟಕದ ವಾಹನಗಳನ್ನು ತಮ್ಮ ರಾಜ್ಯದೊಳಗೆ ಬಿಡಲಿಲ್ಲ. ಎರಡೂ ಕಡೆ ವಾಹನ ದಟ್ಟಣೆ ನಿರ್ಮಾಣವಾಯಿತು. ಸುಮಾರು ಅರ್ಧ ಕಿ.ಮೀ ದೂರದವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ನೆಗೆಟಿವ್ ವರದಿ ಕೇಳಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಚಾಲಕರು, 'ಕೇರಳ ಸರ್ಕಾರ ಯಾವುದೇ ಸೂಚನೆ ನೀಡಿಲ್ಲ. ಕರ್ನಾಟಕ ರಾಜ್ಯ ಪ್ರವೇಶಕ್ಕೆ ನಮಗೆ ಅವಕಾಶ ನೀಡದಿದ್ದರೆ, ನಾವು ಕೂಡ ಕೇರಳ ಪ್ರವೇಶಿಸಲು ಬಿಡುವುದಿಲ್ಲ' ಎಂದು ಪಟ್ಟು ಹಿಡಿದರು.

'ಪ್ರತಿಸಲ, ಎರಡು ಸಾವಿರ ರೂಪಾಯಿ ಕೊಟ್ಟು ಪರೀಕ್ಷೆ ಮಾಡಿಸಿಕೊಂಡು ಬರಲು ಸಾಧ್ಯವೇ? ಬೇಕಿದ್ದರೆ ನಮ್ಮ (ಕೇರಳ) ಸರ್ಕಾರಕ್ಕೆ ಪತ್ರ ಬರೆಯಿರಿ. ಅವರು ಉಚಿತವಾಗಿ ಪರೀಕ್ಷೆ ಮಾಡುವುದಾಗಿ ಹೇಳಿದ ಮೇಲೆ, ಕಡ್ಡಾಯ ಮಾಡಿ' ಎಂದರು.

ಬಾವಲಿ ಚೆಕ್‌ಪೋಸ್ಟ್‌ಗೆ ತೆರಳಿದ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್, ವಯನಾಡು ಪೊಲೀಸ್ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದರು. ಬಳಿಕ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ಸ್ಥಳದಲ್ಲೇ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ರ್‍ಯಾಪಿಡ್ ಟೆಸ್ಟ್ ಕೂಡ ಮಾಡಲಾಗುತ್ತಿದೆ.

'ಗಡಿಯಲ್ಲಿ ನಾವು ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಿದರೂ ಫಲಿತಾಂಶ ಬರಲು 72 ಗಂಟೆ ಹಿಡಿಯುತ್ತದೆ. ತರಕಾರಿ ಸಾಗಾಟ ಮಾಡುವವರು, ಪ್ರಯಾಣಿಕರು ಅಷ್ಟು ಹೊತ್ತು ಕಾಯುವುದು ಕಷ್ಟ. ಜೊತೆಗೆ ವಾಹನ ದಟ್ಟಣೆ ಹೆಚ್ಚುತ್ತದೆ. ಹೀಗಾಗಿ, ಥರ್ಮಲ್ ಸ್ಕ್ರೀನಿಂಗ್ ಮಾಡಿ ಸಮಸ್ಯೆ ಇಲ್ಲದಿದ್ದರೆ ಒಳಗೆ ಬಿಡುತ್ತಿದ್ದೇವೆ' ಎಂದು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಕೊಡಗಿನ ಮಾಕುಟ್ಟ ಹಾಗೂ ಕುಟ್ಟ ಚೆಕ್‌ಪೋಸ್ಟ್‌ಗಳಲ್ಲಿ ಕೂಡ ಕೋವಿಡ್ ನೆಗೆಟಿವ್ ವರದಿ ತಂದವರಿಗೆ ಮಾತ್ರ ರಾಜ್ಯ ಪ್ರವೇಶಕ್ಕೆ ಅವಕಾಶ ನೀಡುತ್ತಿದ್ದು, ವರದಿ ಇಲ್ಲದೇ ಬಂದವರು ಗಡಿಭಾಗದಲ್ಲಿ ಸಂಕಷ್ಟಕ್ಕೆ ಸಿಲುಕಿದರು. ಇದರಿಂದ ಆಕ್ರೋಶಗೊಂಡ ಪ್ರಯಾಣಿಕರು, ಪೊಲೀಸರೊಂದಿಗೆ ಮಾತಿನ ಚಕಮಕಿ ನಡೆಸಿದರು. ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಗಣಿ ಸ್ಫೋಟಕಗಳ ನಿರ್ವಹಣೆ: ನಿರ್ದಿಷ್ಟ ನಿಯಮಗಳೇ ಇಲ್ಲ

ಒಂದನೇ ಪುಟದಿಂದ...

ಕರ್ನಾಟಕ ಕಿರು ಖನಿಜ ರಿಯಾಯ್ತಿ ನಿಯಮಾವಳಿ 1994 ರ ಅನ್ವಯ ಸ್ಫೋಟಕಗಳ ತಪಾಸಣೆ ಮತ್ತು ಜಪ್ತಿಗೆ ಸಂಬಂಧಿಸಿದಂತೆ ರಾಷ್ಟ್ರ ಮಟ್ಟದಲ್ಲಿ ಮುಖ್ಯ ನಿಯಂತ್ರಕರು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು, ಪೊಲೀಸ್ ಆಯುಕ್ತರು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಗಣಿ ಇಲಾಖೆ ಮಹಾನಿರ್ದೇಶಕರಿಗೆ ಅಧಿಕಾರ ನೀಡಲಾಗಿದೆ. ನಿಯಮಾವಳಿಗಳನ್ನು ಉಲ್ಲಂಘಿಸಿದ ಬಗ್ಗೆ ದೂರು ಬಂದಾಗ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳೇ ತಪಾಸಣೆ ನಡೆಸಿ, ಆ ಕುರಿತ ವರದಿಯನ್ನು ಗಣಿ ಇಲಾಖೆಗೆ ನೀಡುತ್ತಾರೆ.

ಶಿವಮೊಗ್ಗ ಜಿಲ್ಲೆ ಹುಣಸೋಡು ಸ್ಫೋಟದ ಬಳಿಕ ಗೃಹ ಇಲಾಖೆ ಎಚ್ಚೆತ್ತುಕೊಂಡಿದೆ. ಗಣಿ ಇಲಾಖೆ ಜತೆ ಸೇರಿ ಗಣಿಗಳಿಗೆ ಬಳಸುವ ಸ್ಫೋಟಕಗಳ ಬಗ್ಗೆ ಮಾರ್ಗಸೂಚಿ ಸಿದ್ಧಪಡಿಸಲು ಮುಂದಾಗಿದೆ. ಅಲ್ಲದೆ, ರಾಜ್ಯದಲ್ಲಿ ಎಷ್ಟು ಕ್ರಷರ್‌ಗಳಿವೆ ಎಂಬುದರ ಬಗ್ಗೆ ಸರ್ಕಾರದ ಬಳಿ ಪೂರ್ಣ ಮಾಹಿತಿ ಇಲ್ಲ. ಹೀಗಾಗಿ ಕಾನೂನು ಬದ್ಧವಾಗಿ ನಡೆಯುತ್ತಿರುವ ಮತ್ತು ಅಕ್ರಮವಾಗಿ ನಡೆಯುತ್ತಿರುವ ಕ್ರಷರ್‌ಗಳ ಸಂಪೂರ್ಣ ಮಾಹಿತಿ ಪಡೆಯಲು ಸಚಿವ ಮುರಗೇಶ ನಿರಾಣಿ ಸೂಚನೆ ನೀಡಿದ್ದಾರೆ.

ನೆರೆಯ ರಾಜ್ಯಗಳಿಂದ ಸ್ಫೋಟಕ: ಗಣಿಗಾರಿಕೆಗೆ ಬಳಸಲು ಸ್ಫೋಟಕಗಳನ್ನು ನೆರೆಯ ಆಂಧ್ರಪ್ರದೇಶ ಮತ್ತು ತಮಿಳು ನಾಡಿನಿಂದ ಹೆಚ್ಚಿನ ಪ್ರಮಾಣದಲ್ಲಿ ತರಿಸಲಾಗುತ್ತಿದೆ. ಇದರ ಮೇಲೆ ಯಾವುದೇ ನಿಯಂತ್ರಣ ಇಲ್ಲದೇ ಇರುವುದು ಇತ್ತೀಚಿನ ಎರಡು ಸ್ಫೋಟಗಳಿಂದ ಬಯಲಿಗೆ ಬಂದಿದೆ. ಪ್ರತಿ ನಿತ್ಯ ರಾಜ್ಯಕ್ಕೆ ಎಷ್ಟು ಪ್ರಮಾಣದ ಸ್ಫೋಟಕಗಳು, ಎಲ್ಲಿಂದ ಬರುತ್ತಿವೆ ಮತ್ತು ಅವುಗಳನ್ನು ಎಲ್ಲಿಗೆ ಸಾಗಿಸಲಾಗುತ್ತಿದೆ ಎಂಬ ದಾಖಲೀಕರಣ ವ್ಯವಸ್ಥೆಯೂ ಇಲ್ಲ ಎಂದೂ ಮೂಲಗಳು ತಿಳಿಸಿವೆ.

2,493 ಕಲ್ಲು ಗಣಿ ಗುತ್ತಿಗೆಗೆ ಮಂಜೂರು

- ರಾಜ್ಯದಲ್ಲಿ 2,493 ಕಟ್ಟಡ ಕಲ್ಲು ಗಣಿ ಗುತ್ತಿಗೆ ಮಂಜೂರು ಮಾಡಿದ್ದು, ಈ ಪೈಕಿ 1,861 ಕಲ್ಲು ಗಣಿ ಗುತ್ತಿಗೆ ಪ್ರದೇಶದಲ್ಲಿ ಸ್ಫೋಟಕ ಬಳಸಿ ಗಣಿಗಾರಿಕೆ ನಡೆಸಲು ಮತ್ತು 477 ಸ್ಫೋಟಕ ರಹಿತವಾಗಿ ಗಣಿಗಾರಿಕೆ ನಡೆಸಲು ಗಣಿ ಇಲಾಖೆ ಅನುಮತಿ ನೀಡಿದೆ
- 344 ಕಲ್ಲು ಗಣಿ ಗುತ್ತಿಗೆದಾರರು ಕಲ್ಲು ಗಣಿ ಗುತ್ತಿಗೆ ಪ್ರದೇಶದಲ್ಲಿ ಸ್ಫೋಟಕ ಬಳಕೆ ಮಾಡಲು ಲೈಸೆನ್ಸ್ ಹೊಂದಿದ್ದಾರೆ. 1,059 ಜನರು ಸ್ಫೋಟಕ ಬಳಸಲು ಲೈಸೆನ್ಸ್ ಹೊಂದಿರುವ ವ್ಯಕ್ತಿಗಳ ಜತೆ ಒಡಂಬಡಿಕೆ ಮಾಡಿ, ಸ್ಫೋಟ ಮಾಡುತ್ತಿದ್ದಾರೆ.

ಅನುಸರಿಸಬೇಕಾದ ನಿಯಮಗಳು

- ಸ್ಫೋಟಕಗಳ ಸಾಗಣೆಗೆಂದೇ ವಾಹನಗಳಿಗೆ ಪರವಾನಗಿ ಪಡೆಯಬೇಕು.
- ಸ್ಫೋಟಕ ತುಂಬಿದ ವಾಹನಗಳನ್ನು ಜನವಸತಿ ಪ್ರದೇಶಗಳಲ್ಲಿ ಒಯ್ಯುವುದನ್ನು ನಿಷೇಧಿಸಲಾಗಿದೆ.
- ಸೂರ್ಯೋದಯದಿಂದ ಸೂರ್ಯಾಸ್ತದವರೆಗಿನ ಅವಧಿಯಲ್ಲಿ ಸ್ಫೋಟಕ ತುಂಬಿದ ವಾಹನಗಳನ್ನು ಒಯ್ಯುವಂತಿಲ್ಲ
- ಸಾಗಣೆ ಸಂದರ್ಭದಲ್ಲಿ ವಾಹನದಲ್ಲಿ ಅಂಗರಕ್ಷಕರು ಇರಬೇಕು ಮತ್ತು ವಾಹನದ ಎರಡು ತುದಿಗಳಲ್ಲಿ ಕೆಂಪು ಬಾವುಟಗಳನ್ನು ಹಾಕಿರಬೇಕು
- ಪರವಾನಗಿಯಲ್ಲಿ ಸೂಚಿಸಿರುವ ಮಿತಿಗಿಂತ ಹೆಚ್ಚು ಸ್ಫೋಟಕಗಳನ್ನು ಸಂಗ್ರಹಿಸಿಡಬಾರದು

ಪಾರ್ಟಿ ಬಳಿಕ ಕುಡಿದ ಮತ್ತಿನಲ್ಲಿ ಸ್ಫೋಟಕ ಬೆಂಕಿಗೆ ಎಸೆದರು

ಒಂದನೇ ಪುಟದಿಂದ...

ಮಾಲೀಕರ ಸೂಚನೆಯಂತೆ ಕ್ರಷರ್ ಅವರು ಸ್ಫೋಟಕಗಳನ್ನು ಅದೇ ದಿನ ರಾತ್ರಿ ವಾಹನದಲ್ಲಿ ಅರಣ್ಯಕ್ಕೆ ಕೊಂಡೊಯ್ದಿದ್ದರು ಎಂಬ ಮಾಹಿತಿಯನ್ನು ದುರಂತದಲ್ಲಿ ಬದುಕುಳಿದ ವಾಹನ ಚಾಲಕ ರಿಯಾಜ್ ಪೊಲೀಸರ ಎದುರು ಬಾಯ್ಬಿಟ್ಟಿದ್ದಾರೆ.

ಸ್ಫೋಟಕಗಳನ್ನು ಕಾಡಿನಲ್ಲಿ ಬಿಸಾಡಿ ಬರುವ ಯೋಚನೆ ಇತ್ತೇ ಹೊರತು ಬೆಂಕಿಗೆ ಎಸೆಯುವ ಯೋಚನೆ ಇರಲಿಲ್ಲ. ಪಾರ್ಟಿ ಬಳಿಕ ಮದ್ಯದ ಅಮಲಿನಲ್ಲಿ ಅನಿರೀಕ್ಷಿತವಾಗಿ ಸ್ಫೋಟಕಗಳನ್ನು ಬೆಂಕಿಗೆ ಎಸೆದಿದ್ದಾರೆ.

ರಿಯಾಜ್ ಅವರ ವಾಹನದಲ್ಲಿಯೇ ಸ್ಫೋಟಕಗಳನ್ನು ಅರಣ್ಯ ಪ್ರದೇಶಕ್ಕೆ ಸಾಗಿಸಲಾಗಿತ್ತು. ವಾಹನದಲ್ಲಿ ಸ್ಫೋಟಕಗಳಿದ್ದ ಸಂಗತಿಯನ್ನು ತಮಗೆ ತಿಳಿಸಿರಲಿಲ್ಲ ಎಂದು ಪೊಲೀಸರಿಗೆ ತಿಳಿಸಿದ್ದಾರೆ. ರಿಯಾಜ್ ನೀಡಿರುವ ಹೇಳಿಕೆ ಮತ್ತು ಸ್ಥಳ ಪರಿಶೀಲನೆ ನಡೆಸಿದ ತಜ್ಞರು ನೀಡಿದ ವರದಿಯಲ್ಲೂ ಬಹುತೇಕ ಸಾಮ್ಯತೆಗಳಿವೆ.

ಘಟನೆ ನಡೆದ ಸ್ಥಳದಲ್ಲಿ ಮದ್ಯದ ಬಾಟಲಿ, ಸಿಗರೇಟ್ ತುಂಡುಗಳು ಪತ್ತೆಯಾಗಿದ್ದು, ಅಂದು ರಾತ್ರಿ ಪಾರ್ಟಿ ನಡೆದಿರುವುದನ್ನು ಖಚಿತಪಡಿಸಿವೆ. ದುರಂತದಲ್ಲಿ ಬದುಕುಳಿದಿರುವ ರಿಯಾಜ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ವಿರುದ್ಧವೂ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹುಣಸೋಡು ಪರಿಣಾಮ: ಶಿವಮೊಗ್ಗ ಸಮೀಪದ ಹುಣಸೋಡು ಸ್ಫೋಟ ಘಟನೆಯ ನಂತರ ಜಿಲ್ಲಾಡಳಿತ ಮೂರು ಸಭೆ ನಡೆಸಿತ್ತು. ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ, ಸ್ಫೋಟಕಗಳ ಸರಬರಾಜು, ದಾಸ್ತಾನು ಮತ್ತು ಬಳಕೆ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಹಾಗೂ ನಿಯಮಿತವಾಗಿ ಗಣಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಉಸ್ತುವಾರಿ ಸಚಿವ ಡಾ.ಕೆ. ಸುಧಾಕರ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಅದಾದ ನಂತರ ಫೆಬ್ರುವರಿ ಮೊದಲ ವಾರದಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾಡಳಿತ, ಗಣಿ ಇಲಾಖೆ ಮತ್ತು ಪೊಲೀಸ್ ಅಧಿಕಾರಿಗಳ ತಂಡ ಜಿಲ್ಲೆಯ ಎಲ್ಲ ಗಣಿಗಳಿಗೂ ಭೇಟಿ ನೀಡಿ ತಪಾಸಣೆ ನಡೆಸಿತ್ತು. ಭ್ರಮರವಾಸಿನಿ ಕ್ರಷರ್‌ಗೆ ಫೆಬ್ರುವರಿ 7ರಂದು ಎಸ್.ಪಿ ನೇತೃತ್ವದಲ್ಲಿ ಪೊಲೀಸರು ದಾಳಿ ನಡೆಸಿದ್ದರು.

ಲೈಸನ್ಸ್ ಇದೆ: ಭ್ರಮರವಾಸಿನಿ ಕ್ರಷರ್‌ಗೆ ಲೈಸನ್ಸ್ ಇದೆ. ಆದರೆ, ಸ್ಫೋಟಕಗಳ ದಾಸ್ತಾನು ಮತ್ತು ಬಳಕೆಯಲ್ಲಿ ಕಾನೂನು ಪಾಲನೆ ಮಾಡುತ್ತಿರಲಿಲ್ಲ. ದೂರು ದಾಖಲಿಸಿಕೊಂಡು, ಫೆ.7 ರಂದೇ ಕ್ರಷರ್ ಸ್ಥಗಿತಗೊಳಿಸಲು ಆದೇಶಿಸಲಾಗಿತ್ತು. ಸೋಮವಾರ ಪರಿಶೀಲನೆಗಾಗಿ ಪೊಲೀಸರು ಮತ್ತೆ ಸ್ಥಳಕ್ಕೆ ಭೇಟಿ ನೀಡಿದ್ದರು. ಇದರಿಂದ ಆತಂಕಕ್ಕೆ ಒಳಗಾದ ಮಾಲೀಕರು ಅಕ್ರಮವಾಗಿ ದಾಸ್ತಾನು ಮಾಡಿದ್ದ ಸ್ಫೋಟಕಗಳನ್ನು ಸಮೀಪದ ಅರಣ್ಯದಲ್ಲಿ ವಿಲೇವಾರಿ ಮಾಡಲು ಕೆಲಸಗಾರರಿಗೆ ಸೂಚನೆ ನೀಡಿದ್ದರು.

ಪ್ರಮಾಣಪತ್ರ ತಪಾಸಣೆ: ಕೆಲವೆಡೆ ಬಿಗಿ, ಉಳಿದೆಡೆ ನಿರಾತಂಕ

ಕಲಬುರ್ಗಿ/ ಬೀದರ್: ಮಹಾರಾಷ್ಟ್ರದಲ್ಲಿ ಕೊರೊನಾ ಸೋಂಕಿನ ಪ್ರಮಾಣ ಹೆಚ್ಚುತ್ತಿರುವುದರಿಂದ ಬೀದರ್ ಜಿಲ್ಲೆಯ ಮೂರು ಹಾಗೂ ಕಲಬುರ್ಗಿ ಜಿಲ್ಲೆಯ ಒಂದು ಚೆಕ್‌ಪೋಸ್ಟ್‌ಗಳಲ್ಲಿ ಕೋವಿಡ್ ನೆಗೆಟಿವ್ ವರದಿ ಇಲ್ಲದ ವ್ಯಕ್ತಿಗಳನ್ನು ಮರಳಿ ಕಳಿಸಲಾಗುತ್ತಿದೆ.

ಆದರೆ, ಆಳಂದ ತಾಲ್ಲೂಕಿನ ನಿಂಬಾಳ, ಹಿರೋಳಿ, ಖಜೂರಿ ಚೆಕ್‌ಪೋಸ್ಟ್‌ಗಳ ಮೂಲಕ ಬರುವವರಿಗೆ ಕೊರೊನಾ ನೆಗೆಟಿವ್ ಪ್ರಮಾಣಪತ್ರವನ್ನು ಕಡ್ಡಾಯ ಮಾಡಿಲ್ಲ. ಮಹಾರಾಷ್ಟ್ರ ಸಾರಿಗೆ ಸಂಸ್ಥೆ ಹಾಗೂ ಖಾಸಗಿ ವಾಹನಗಳ ಪ್ರವೇಶಕ್ಕೆ ಯಾವುದೇ ನಿರ್ಬಂಧ ವಿಧಿಸಿಲ್ಲ. ಆದರೆ, ಕಾರು, ಜೀಪ್‌ಗಳಲ್ಲಿ ಬರುವವರ ಹೆಸರು ಹಾಗೂ ಫೋನ್ ಸಂಖ್ಯೆಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ.

'ಬಸವಕಲ್ಯಾಣ ತಾಲ್ಲೂಕಿನ ಚಂಡಕಾಪುರ, ಕಮಲನಗರ ಹಾಗೂ ಔರಾದ್ ತಾಲ್ಲೂಕಿನ ವನಮಾರಪಳ್ಳಿ ಸಮೀಪದ ಚೆಕ್‌ಪೋಸ್ಟ್‌ನಲ್ಲಿ ಬುಧವಾರ ಸಂಜೆಯವರೆಗೆ 1,500 ಜನರ ತಪಾಸಣೆ ನಡೆಸಲಾಗಿದೆ. ಕೋವಿಡ್ ನೆಗೆಟಿವ್ ವರದಿ ಇಲ್ಲದ ಕೆಲವರನ್ನು ವಾಪಸ್ ಕಳಿಸಲಾಗಿದೆ' ಎಂದು ಬೀದರ್ ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ವಿ.ಜಿ.ರೆಡ್ಡಿ ತಿಳಿಸಿದ್ದಾರೆ.

ಜಿಲ್ಲೆಯ ಔರಾದ್‌ಗೆ ಲಾತೂರ್ ಜಿಲ್ಲೆಯ ಹನೇಗಾಂವ್‌ನಿಂದ ಬರುತ್ತಿದ್ದ ಮಹಾರಾಷ್ಟ್ರ ಸಾರಿಗೆ ಸಂಸ್ಥೆಯ ಚಾಲಕ ಹಾಗೂ ನಿರ್ವಾಹಕರ ಬಳಿ ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಇರಲಿಲ್ಲ ಎಂಬ ಕಾರಣಕ್ಕೆ ಬಸ್ ಜಿಲ್ಲೆಯ ಗಡಿ ದಾಟಲು ಅಧಿಕಾರಿಗಳು ಅವಕಾಶ ನೀಡಲಿಲ್ಲ.

ಕಲಬುರ್ಗಿಯಿಂದ ಸೊಲ್ಲಾಪುರಕ್ಕೆ ಹೊರಟಿದ್ದ ಮೂರು ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಮಹಾರಾಷ್ಟ್ರದ ಅಧಿಕಾರಿಗಳು ಕೆಲಹೊತ್ತು ತಡೆದು ತಪಾಸಣೆ ನಡೆಸಿದರು. ನಂತರ ಬಸ್‌ಗಳು ಎಂದಿನಂತೆ ಸಂಚಾರ ಆರಂಭಿಸಿದವು ಎಂದು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಕಲಬುರ್ಗಿ ವಿಭಾಗ–2ರ ವಿಭಾಗೀಯ ನಿಯಂತ್ರಣಾಧಿಕಾರಿ ತಿಮ್ಮಾರೆಡ್ಡಿ ಹೀರಾ 'ಪ್ರಜಾವಾಣಿ'ಗೆ ತಿಳಿಸಿದರು.

ಅಫಜಲಪುರ ಗಡಿಯಲ್ಲಿ ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಇಲ್ಲದವರಿಗೆ ಚೆಕ್‌ಪೋಸ್ಟ್ ಸಿಬ್ಬಂದಿ ರಾಜ್ಯದೊಳಗೆ ಬಿಟ್ಟುಕೊಳ್ಳಲಿಲ್ಲ. ಹೀಗಾಗಿ, ಬಸ್ ಹಾಗೂ ಖಾಸಗಿ ವಾಹನಗಳಲ್ಲಿ ಬಂದಿದ್ದವರು ವಾಪಸ್ ಮಹಾರಾಷ್ಟ್ರಕ್ಕೆ ತೆರಳಿದರು.

ಮುಂದುವರಿದ ಜೆಡಿಎಸ್–ಕಾಂಗ್ರೆಸ್ ಮೈತ್ರಿ; ರುಕ್ಮಿಣಿ ಮೇಯರ್, ಅನ್ವರ್ ಉಪ ಮೇಯರ್

ಮೈಸೂರು ಮೇಯರ್ ಗದ್ದುಗೆ ಜೆಡಿಎಸ್‌ಗೆ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಮಹಾನಗರ ಪಾಲಿಕೆಯ ಮೇಯರ್ ಆಗಿ ಜೆಡಿಎಸ್ ಸದಸ್ಯೆ ರುಕ್ಮಿಣಿ ಮಾದೇಗೌಡ ಮತ್ತು ಉಪ ಮೇಯರ್ ಆಗಿ ಕಾಂಗ್ರೆಸ್ ಸದಸ್ಯ ಅನ್ವರ್ ಬೇಗ್ ಆಯ್ಕೆಯಾಗಿದ್ದಾರೆ.

ಬಿಜೆಪಿ ಲೆಕ್ಕಾಚಾರ ತಲೆಕೆಳಗಾಗಿದ್ದು, ಜೆಡಿಎಸ್–ಕಾಂಗ್ರೆಸ್ ಮೈತ್ರಿ ಮುಂದುವರಿದಿದೆ.


ಬುಧವಾರ ನಡೆದ ಚುನಾವಣೆಯಲ್ಲಿ ರುಕ್ಮಿಣಿ ಮಾದೇಗೌಡ, ಅನ್ವರ್ ಬೇಗ್ ತಲಾ 43 ಮತ ಗಳಿಸಿ ಗೆಲುವಿನ ನಗೆ ಬೀರಿದರು. ಬಿಜೆಪಿಯಿಂದ ಸ್ಪರ್ಧಿಸಿದ್ದ ಸುನಂದಾ ಪಾಲನೇತ್ರ, ಸಾತ್ವಿಕ್ ತಲಾ 26 ಮತಗಳಿಸಿ ಪರಾಭವಗೊಂಡರು.

ಕೊನೆ ಕ್ಷಣದವರೆಗೂ ಕುತೂಹಲ ಕೆರಳಿಸಿದ್ದ ಮೇಯರ್–ಉಪ ಮೇಯರ್ ಚುನಾವಣೆಗೆ ಸಂಬಂಧಿಸಿದಂತೆ, ಮೂರೂ ಪಕ್ಷಗಳು ಬುಧವಾರವೂ ಸರಣಿ ಸಭೆ ನಡೆಸಿದವು. ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭಗೊಂಡರೂ, ಮೈತ್ರಿ ನಿರ್ಧಾರವಾಗಿರಲಿಲ್ಲ.

ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಜೆಡಿಎಸ್‌ನ ಶಾಸಕರು, ವಿಧಾನ ಪರಿಷತ್ ಸದಸ್ಯರು, ಪಾಲಿಕೆ ಸದಸ್ಯರನ್ನು ಖುದ್ದು ಭೇಟಿ ಮಾಡಿದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಬಿಜೆಪಿಗೆ ಸಹಕರಿಸುವಂತೆ ಕೋರಿದ್ದರೂ ಕೊನೆ ಕ್ಷಣದಲ್ಲಿ ಬಿಜೆಪಿ–ಜೆಡಿಎಸ್‌ನ ಮೈತ್ರಿಕೂಟ ರಚನೆಯಾಗಲಿಲ್ಲ.

ಕುಮಾರಸ್ವಾಮಿಯನ್ನು ಭೇಟಿ ಮಾಡಿದ ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆ ಮೊಬೈಲ್‌ನಲ್ಲಿ ಮಾತನಾಡಿಸಿದ್ದು, ಕಾಂಗ್ರೆಸ್–ಜೆಡಿಎಸ್‌ನ ಮೈತ್ರಿ ಮುಂದುವರಿಯಲು ಕಾರಣವಾಯಿತು ಎನ್ನಲಾಗಿದೆ.

ಈ ಹಿಂದಿನ ಒಪ್ಪಂದದಂತೆ, ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯು ಮೇಯರ್ ಸ್ಥಾನ ಅಲಂಕರಿಸಬೇಕಿತ್ತು. ಪಕ್ಷದೊಳಗಿನ ನಾಯಕತ್ವದ ಪೈಪೋಟಿಯೇ ಜೆಡಿಎಸ್‌ಗೆ ಮೇಯರ್ ಸ್ಥಾನ ಬಿಟ್ಟುಕೊಟ್ಟಿದೆ ಎಂಬ ಮಾತು ಕಾಂಗ್ರೆಸ್ ಪಾಳೆಯದಿಂದ ಕೇಳಿ ಬಂತು.



ಮೈಸೂರಿನ ಮೇಯರ್ ಆಗಿ ಬುಧವಾರ ಆಯ್ಕೆಯಾದ ರುಕ್ಮಿಣಿ ಅವರಿಗೆ, ಜಿ.ಪಂ. ಸದಸ್ಯರೂ ಆಗಿರುವ ಅವರ ಪತಿ ಮಾದೇಗೌಡ ಮುತ್ತು ಕೊಡುವ ಮೂಲಕ ಸಂಭ್ರಮಿಸಿದರು. ಉಪ ಮೇಯರ್ ಅನ್ವರ್ ಬೇಗ್ ಇದ್ದಾರೆ

ವಿಧಾನ ಪರಿಷತ್ ಸಭಾಪತಿ ಚುನಾವಣೆಯಲ್ಲಿ ಬಿಜೆಪಿ ಜೊತೆ ಕೈಜೋಡಿಸಿ, ಮೈಸೂರಿನಲ್ಲಿ ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಂಡರೆ ಏನರ್ಥ?

ಸಂದೇಶ್ ನಾಗರಾಜ್, ಜೆಡಿಎಸ್‌ನ ವಿಧಾನ ಪರಿಷತ್ ಸದಸ್ಯ

'ಸಿದ್ದರಾಮಯ್ಯ ಬೋನಿಗೆ'

ಮೈತ್ರಿಗೆ ಪ್ರತಿಕ್ರಿಯಿಸಿದ ಸಂಸದ ಪ್ರತಾಪ ಸಿಂಹ, 'ಮೈಸೂರು ಹುಲಿ ಎಂದೇ ಕರೆಸಿಕೊಳ್ಳುತ್ತಿದ್ದ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಎಚ್.ಡಿ.ಕುಮಾರಸ್ವಾಮಿ ಬೋನಿಗೆ ಹಾಕಿದ್ದಾರೆ' ಎಂದರು.

'ಚುನಾವಣೆಯಲ್ಲಿ ತಮ್ಮ ಪಕ್ಷದವರನ್ನು ಮೇಯರ್ ಸ್ಥಾನಕ್ಕೆ ಅಭ್ಯರ್ಥಿಯನ್ನಾಗಿಸಿದರೂ ಕಾಂಗ್ರೆಸ್ ಸದಸ್ಯರು ಕೈ ಎತ್ತಲಿಲ್ಲ. 'ಕೈ' ಬಂಧಿಸಿದ್ದು ಯಾರು? ಕಾಂಗ್ರೆಸ್ ದೂಳೀಪಟವಾಗುವ ಮುನ್ಸೂಚನೆಯಿದು' ಎಂದು ಲೇವಡಿ ಮಾಡಿದರು.

ದಾವಣಗೆರೆ: ಪಕ್ಷೇತರರು, ವಿಧಾನ ಪರಿಷತ್ ಸದಸ್ಯರ ಬೆಂಬಲದಿಂದ ಬಿಜೆಪಿ ಅಧಿಕಾರಕ್ಕೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಇಲ್ಲಿನ ಮಹಾನಗರ ಪಾಲಿಕೆಯ ಮೇಯರ್, ಉಪ ಮೇಯರ್ ಚುನಾವಣೆಗೆ ಸಂಬಂಧಿಸಿದಂತೆ ಮಂಗಳವಾರ ರಾತ್ರಿಯೇ ಅನಿರೀಕ್ಷಿತ ಘಟನೆಗಳು ನಡೆದಿದ್ದರಿಂದ ಬುಧವಾರ ಯಾವುದೇ ತಿರುವು, ಅಚ್ಚರಿಗಳಿಲ್ಲದೇ ಸುಲಭವಾಗಿ ಬಿಜೆಪಿ ಅಧಿಕಾರ ಹಿಡಿಯಿತು. ಮೇಯರ್ ಆಗಿ ಎಸ್.ಟಿ. ವೀರೇಶ್, ಉಪ ಮೇಯರ್ ಆಗಿ ಶಿಲ್ಪಾ ಜಯಪ್ರಕಾಶ್ ಆಯ್ಕೆಯಾದರು.

ಇಬ್ಬರು ಪಕ್ಷೇತರ ಸದಸ್ಯರನ್ನು ಓಲೈಸಲು ಎಲ್ಲ ತಯಾರಿ ಮಾಡಿಕೊಂಡಿದ್ದ ಕಾಂಗ್ರೆಸ್‌ಗೆ ಪಕ್ಷದ ಮೇಯರ್ ಅಭ್ಯರ್ಥಿಯಾಗಿದ್ದ ದೇವರಮನಿ ಶಿವಕುಮಾರ್ ಅವರೇ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಮಂಗಳವಾರ ಬಿಜೆಪಿ ಕಡೆ ಹೋಗಿದ್ದನ್ನು ಕಾಂಗ್ರೆಸ್‌ಗೆ ಅರಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಹಾಗಾಗಿ ಬುಧವಾರ ಯಾವ ಪ್ರತಿರೋಧ, ತಂತ್ರಗಾರಿಕೆಯನ್ನೂ ತೋರದೆ ಚುನಾವಣೆಯ ಶಿಷ್ಟಾಚಾರದಲ್ಲಿ ಭಾಗವಹಿಸಿತು.



ವೀರೇಶ್



ಶಿಲ್ಪಾ

ಸಾಮಾನ್ಯಕ್ಕೆ ಮೀಸಲಾಗಿದ್ದ ಮೇಯರ್ ಸ್ಥಾನಕ್ಕೆ ಬಿಜೆಪಿಯಿಂದ ಎಸ್.ಟಿ. ವೀರೇಶ್, ಕಾಂಗ್ರೆಸ್‌ನಿಂದ ಗಡಿಗುಡಾಳ್ ಮಂಜುನಾಥ್ ಸ್ಪರ್ಧಿಸಿದ್ದರು. ಎಸ್‌ಸಿ ಮಹಿಳೆಗೆ ಮೀಸಲಾಗಿದ್ದ ಉಪ ಮೇಯರ್ ಸ್ಥಾನಕ್ಕೆ ಬಿಜೆಪಿಯಿಂದ ಶಿಲ್ಪಾ ಜಯಪ್ರಕಾಶ್, ಕಾಂಗ್ರೆಸ್‌ನಿಂದ ನಾಗರತ್ನಮ್ಮ ಸ್ಪರ್ಧಿಸಿದ್ದರು. ಬಿಜೆಪಿ ಅಭ್ಯರ್ಥಿಗಳು 29 ಮತ ಪಡೆದರೆ, ಕಾಂಗ್ರೆಸ್ ಅಭ್ಯರ್ಥಿಗಳು 22 ಮತಗಳನ್ನು ಪಡೆದರು.

ಮತದಾನಕ್ಕೆ ಅರ್ಹರಾಗಿರುವ 58 ಮಂದಿಯ ಪಟ್ಟಿಯನ್ನು ತಯಾರಿಸಲಾಗಿತ್ತು. ದೇವರಮನಿ ಶಿವಕುಮಾರ್ ಸದಸ್ಯತ್ವಕ್ಕೆ ನೀಡಿದ ರಾಜೀನಾಮೆ ಅಂಗೀಕಾರ ಆಗಿದ್ದರಿಂದ ಸದಸ್ಯರ ಸಂಖ್ಯೆ 57ಕ್ಕೆ ಇಳಿದಿತ್ತು. ಕಳೆದ ಬಾರಿ ಬಿಜೆಪಿಯನ್ನು ಬೆಂಬಲಿಸಿದ್ದ ಜಯಮ್ಮ ಗೋಪಿ ನಾಯ್ಕ್, ಜೆಡಿಎಸ್‌ನ ಏಕೈಕ ಸದಸ್ಯೆ ನೂರ್‌ಜಹಾನ್ ಬಿ. ಗೈರಾಗಿದ್ದರು. ಬಿಜೆಪಿಯ ಅಧಿಕೃತ 17 ಸದಸ್ಯರು, ಮೂವರು ಪಕ್ಷೇತರರು, ಒಬ್ಬರು ಸಂಸದರು, ಒಬ್ಬರು ಶಾಸಕರು, 7 ವಿಧಾನ ಪರಿಷತ್ ಸದಸ್ಯರು ಸೇರಿ ಒಟ್ಟು 29 ಮಂದಿ ಹಾಜರಾಗಿದ್ದರು.

ಕಾಂಗ್ರೆಸ್‌ನಿಂದ 20 ಸದಸ್ಯರು, ಒಬ್ಬರು ಪಕ್ಷೇತರರು, ಒಬ್ಬರು ವಿಧಾನ ಪರಿಷತ್ ಸದಸ್ಯರು ಮಾತ್ರ ಹಾಜರಾಗಿದ್ದರು. ಸ್ಥಳೀಯ ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಮೂವರು ಎಂಎಲ್‌ಸಿಗಳು ಗೈರು ಹಾಜರಾಗಿದ್ದರು.

ಸ್ವಯಂ ಅಧ್ಯಯನಕ್ಕೆ ಯೂಟ್ಯೂಬ್ ಚಾನೆಲ್

ಅರುಣ ಬ. ಚೂರಿ



ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಅವಶ್ಯಕತೆಯಿದ್ದರೆ ಯೂಟ್ಯೂಬ್ ಚಾನೆಲ್ ವೀಕ್ಷಿಸಿ ಅಧ್ಯಯನ ಮಾಡಬಹುದು. ಇಂತಹ ಯೂಟ್ಯೂಬ್ ಚಾನೆಲ್‌ಗಳ ಆಯ್ಕೆ ಹೇಗಿರಬೇಕು?

ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಆರಂಭಿಸಿದ ಮೇಲೆ ಮೊದಲು ಎದುರಾಗುವ ಪ್ರಶ್ನೆ ಎಂದರೆ ಸ್ವಯಂ ಅಧ್ಯಯನ ಸೂಕ್ತವೋ ಅಥವಾ ತರಬೇತಿಯೊಂದಿಗೆ ಅಧ್ಯಯನ ಸೂಕ್ತವೋ ಎಂಬುದು. ತರಬೇತಿ ಎಂದರೆ ಅದು ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಿ ಯಾವುದು ಸೂಕ್ತ ಎನ್ನುವ ಪ್ರಶ್ನೆ ಎದುರಾಗುತ್ತದೆ. ಇದನ್ನು ಆಯಾ ಅಭ್ಯರ್ಥಿ ತನ್ನ ಸಾಮರ್ಥ್ಯ, ಅವಶ್ಯಕತೆಗೆ ಅನುಸಾರವಾಗಿ ಆಯ್ಕೆ ಮಾಡಿಕೊಳ್ಳಬೇಕು. ಉದಾಹರಣೆಗೆ ಸ್ವಯಂ ಅಧ್ಯಯನದಿಂದ ಪರೀಕ್ಷೆ ಎದುರಿಸಬಲ್ಲೆ ಎಂಬ ವಿಶ್ವಾಸ ಹೊಂದಿರುವವರು ಪಠ್ಯಕ್ರಮ ನೋಡಿಕೊಂಡು ಕಾನ್ಸೆಪ್ಟ್‌ಗಳ ಅನುಸಾರ ತಯಾರಿ ನಡೆಸಬಹುದು.

ಹಾಗೆಯೇ ಮಾರ್ಗದರ್ಶನದ ಅವಶ್ಯಕತೆ ಇರುವ ಅಭ್ಯರ್ಥಿಗಳು ಯೂಟ್ಯೂಬ್‌ನಲ್ಲಿ ದೊರಕಬಹುದಾದ ಹಲವಾರು ಉಚಿತ ಹಾಗೂ ಜನಪ್ರಿಯ ಕೋರ್ಸ್‌ಗಳನ್ನು ಅವಲೋಕಿಸಬೇಕು. ಆದರೆ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದು ನಿಮ್ಮ ತಯಾರಿ ಮಟ್ಟದ ಮೇಲೆ ನಿರ್ಧಾರವಾಗುವಂತಹದ್ದು.

ಉದಾಹರಣೆಗೆ ಕೇವಲ ಶಾರ್ಟ್ ಟ್ರಿಕ್ ತಿಳಿಸಿ ಕೊಡುವಂತಹ ಕೆಲವು ಚಾನೆಲ್‌ಗಳನ್ನು ಆಯ್ಕೆ ಮಾಡಿಕೊಂಡಿದ್ದೀರಿ ಎಂದಿಟ್ಟುಕೊಳ್ಳಿ. ಈ ಸಣ್ಣಪುಟ್ಟ ತಂತ್ರಗಳು ನಿಮಗೆ ಕೇವಲ ಪ್ರಿಲಿಮ್ಸ್ ಪರೀಕ್ಷೆಯಲ್ಲಿ ಫಲ ನೀಡಬಹುದೇ ಹೊರತು ಕಾನ್ಸೆಪ್ಟ್ ಆಧಾರಿತ ಮೇನ್ಸ್ ಪರೀಕ್ಷೆಯಲ್ಲಿ ಅನ್ವಯಿಸಲಾರವು.

ಯೂಟ್ಯೂಬ್ ಚಾನೆಲ್

ಇನ್ನು ಯೂಟ್ಯೂಬ್‌ನಲ್ಲಿ ಪರೀಕ್ಷಾ ತಯಾರಿ ನಡೆಸುವಾಗ ಯಾವ ಪರೀಕ್ಷೆಗೆ ತಯಾರಿ ನಡೆಸುವುದು ಎಂಬುದನ್ನು ಮೊದಲು ನಿರ್ಧರಿಸಿ. ಉದಾಹರಣೆಗೆ ಎಸ್‌ಬಿಐ ಕ್ಲರ್ಕ್‌ಗಾಗಿ ತಯಾರಿ ನಡೆಸುತ್ತಿರುವಾಗ ನಡುವೆ ಇನ್ನು ಯಾವುದೋ ಪರೀಕ್ಷೆಯ ಅಧಿಸೂಚನೆ ಹೊರಬಿದ್ದಲ್ಲಿ ಇದರ ಜೊತೆಗೆ ಆ ಪರೀಕ್ಷೆಗೂ ಅಂದರೆ ಎಸ್‌ಎಸ್‌ಸಿ/ ಕೆಪಿಎಸ್‌ಸಿ/ ರೈಲ್ವೆ/ ಎಲ್‌ಐಸಿ ಮುಂತಾದವುಗಳ ಪ್ರಿಲಿಮ್ಸ್ ಪಠ್ಯಕ್ರಮ ಒಂದೇ ಎಂಬ ಕಾರಣಕ್ಕೆ ಆ ಪರೀಕ್ಷೆಗೂ ತಯಾರಿ ನಡೆಸುವ ದುಸ್ಸಾಹಸಕ್ಕೆ ಕೈ ಹಾಕದಿರಿ. ಇದರಿಂದ ಒಂದಕ್ಕಿಂತ ಹೆಚ್ಚು ಪ್ರಿಲಿಮ್ಸ್ ಪರೀಕ್ಷೆ ತೇರ್ಗಡೆಯಾದರೂ ಮೇನ್ಸ್ ಪರೀಕ್ಷೆಯಲ್ಲಿ ತೇರ್ಗಡೆ ಕಷ್ಟ ಸಾಧ್ಯ ಎಂಬುದು ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಂಶ.

ಹಾಗೆಯೇ ಕೆಲವರು ಒಂದಕ್ಕಿಂತ ಹೆಚ್ಚು ಪರೀಕ್ಷೆಗಳಲ್ಲಿ ತೇರ್ಗಡೆಯಾಗಬಹುದು. ಅದು ಅವರ ವೈಯಕ್ತಿಕ ಜ್ಞಾನ ಹಾಗೂ ತಯಾರಿ ಮೇಲೆ ಅವಲಂಬಿತವಾಗಿರುತ್ತದೆ. ಅಲ್ಲದೆ ಪ್ರಿಲಿಮ್ಸ್ ಪರೀಕ್ಷೆಗಾಗಿ ಸರ್ಕಾರ ಏಕರೂಪ ಸಿಇಟಿಯನ್ನು ಜಾರಿಗೆ ತರುವುದರಲ್ಲಿದೆ.


ಪರೀಕ್ಷಾ ತಯಾರಿ ಕಾರ್ಯಗತಗೊಳಿಸುವುದು ಹೇಗೆ?

ಪರೀಕ್ಷಾ ತಂತ್ರಗಾರಿಕೆಗಾಗಿ ಯೂಟ್ಯೂಬ್‌ನ ಹಲವಾರು ತಂತ್ರಗಳನ್ನು ಅವಲೋಕಿಸಿ ನಂತರ ಒಂದೊಂದರಲ್ಲಿ ಒಂದೊಂದು ಅಂಶಗಳನ್ನು ಪಟ್ಟಿ ಮಾಡಿಕೊಂಡು ಸ್ವತಃ ನೀವೇ ನಿಮ್ಮ ಪರೀಕ್ಷಾ ತಂತ್ರ ರೂಪಿಸಿಕೊಳ್ಳಿ ಅಥವಾ ನಿಮಗೆ ಅನುಕೂಲವಾದ ಮತ್ತು ಮಾನ್ಯವಾದ ಯಾವುದಾದರೂ ಒಂದನ್ನು ಮಾತ್ರ ಅನುಸರಿಸಿ. ಆದರೆ ನಿರಂತರವಾಗಿ ನಿಮ್ಮ ಪರೀಕ್ಷಾ ತಂತ್ರಗಳನ್ನು ಬದಲಾಯಿಸುತ್ತಾ ಹೋಗಬೇಡಿ. ಏಕೆಂದರೆ ಆನ್‌ಲೈನ್‌ನಲ್ಲಿ ನಿಮಗೆ ಲೆಕ್ಕಕ್ಕೆ ಸಿಗದಷ್ಟು ಚಾನೆಲ್‌ಗಳು ಉಚಿತವಾಗಿ ಅಥವಾ ಪೇಯ್ಡ್ ಕೋರ್ಸ್‌ಗಳಿಂದ ನಿತ್ಯ ತರಬೇತಿ ನೀಡಲು ಕಾಯುತ್ತಿರುತ್ತಾರೆ. ಆದರೆ ನೀವು ಅವಲೋಕಿಸಬೇಕಾಗಿರುವುದು ಅವರಿಂದ ನೀವು ಎಷ್ಟು ವಿಷಯ ಅರ್ಥೈಸಿಕೊಂಡಿರಿ ಎಂಬ ವಾಸ್ತವಾಂಶವನ್ನು.

ನವೀಕರಿಸಿದ ವಿಷಯಗಳ ಅಭ್ಯಾಸ

ಇದರಿಂದ ಬಹುತೇಕ ತೊಂದರೆಯಾಗುವುದು ಜನರಲ್ ಅವೇರ್‌ನೆಸ್/ ಪ್ರಚಲಿತ ವಿದ್ಯಮಾನ ವಿಷಯಗಳಿಗೆ. ಉಳಿದ ವಿಷಯಗಳಲ್ಲಿ ಕಾನ್ಸೆಪ್ಟ್ ಕ್ಲಿಯರೆನ್ಸ್‌ಗಳಿಗಾಗಿ ಪ್ರಚಲಿತವಲ್ಲದ ವಿಷಯ ವೀಕ್ಷಿಸಬಹುದು. ಇದನ್ನು ಹೊರತುಪಡಿಸಿದರೆ ಪ್ರಚಲಿತವಿಲ್ಲದ ವಿಷಯಗಳ ಬಗ್ಗೆ ಗಮನ ಹರಿಸದೇ ಇರುವುದೇ ಒಳ್ಳೆಯದು. ಹೀಗಾಗಿ ಯೂಟ್ಯೂಬ್‌ನಲ್ಲಿ ನವೀಕರಿಸಿದ ವಿಷಯಗಳತ್ತ ಗಮನ ಕೊಡಿ. ಏಕೆಂದರೆ ವರ್ಷದಿಂದ ವರ್ಷಕ್ಕೆ ಸ್ಪರ್ಧೆ ಅಥವಾ ಕ್ಲಿಷ್ಟತೆಯನ್ನು ಹೆಚ್ಚಿಸಲು ಹೊಸ ಹೊಸ ಮಾದರಿಯ ಪ್ರಶ್ನೆಗಳನ್ನು ಕೇಳುವುದು ಸಾಮಾನ್ಯ. ಹೀಗಾಗಿ ಹೊಸ ಮಾದರಿಯ ಪ್ರಶ್ನೆಗಳ ಅಭ್ಯಾಸ ಕಡ್ಡಾಯ.

ಯಾವ ಭಾಷೆಯಲ್ಲಿ ಪರೀಕ್ಷೆ ಬರೆಯಬೇಕು?



ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಾವ ಭಾಷೆಯಲ್ಲಿ ಅಂದರೆ ಕನ್ನಡದಲ್ಲಿ ಬರೆಯಬೇಕೆ ಅಥವಾ ಇಂಗ್ಲಿಷ್‌ನಲ್ಲಿಯೇ ಎಂಬ ಗೊಂದಲ ಸ್ಪರ್ಧಾರ್ಥಿಗಳಲ್ಲಿ ಮೂಡುವುದು ಸಹಜ. ಈ ಗೊಂದಲವನ್ನು ತಯಾರಿ ಆರಂಭಿಸುವಾಗಲೇ ಪರಿಹರಿಸಿಕೊಳ್ಳುವುದು ಸೂಕ್ತ.

ಆರ್. ಉಪೇಂದ್ರ ಶೆಟ್ಟಿ

ಸಾಮಾನ್ಯವಾಗಿ ಕರ್ನಾಟಕದ ಅಭ್ಯರ್ಥಿಗಳಲ್ಲಿರುವ ಬಹುಮುಖ್ಯ ಗೊಂದಲವೆಂದರೆ ಯಾವ ಭಾಷೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವುದು ಸೂಕ್ತ ಎಂಬುದು.

ಮಾತೃಭಾಷೆ ಎಂಬುದು ಹೃದಯಕ್ಕೆ ಹತ್ತಿರದ ಮತ್ತು ಭಾವನಾತ್ಮಕ ಭಾಷೆಯಾಗಿರುವುದರಿಂದ ಸಂವಹನಕ್ಕೆ ತುಂಬಾ ಸಹಕಾರಿಯಾಗಿರುತ್ತದೆ. ರಾಜ್ಯ ಸರ್ಕಾರದ ಗ್ರೂಪ್ ಸಿ ಪರೀಕ್ಷೆಗಳಾದ ಎಫ್‌ಡಿಎ/ ಎಸ್‌ಡಿಎ/ ಪಿಎಸ್‌ಐ/ ಇಎಸ್‌ಐ/ ಪಿಡಿಒ/ ಆರ್‌ಎಫ್‌ಒ/ ಟೀಚರ್ಸ್ ನೇಮಕಾತಿಗೆ ಕನ್ನಡದಲ್ಲಿ, ಗ್ರೂಪ್ ಬಿ ಪರೀಕ್ಷೆಗಳಾದ ಕೆಇಎಸ್/ ಸಿಡಿಪಿಒ/ ಎಸಿ ಎಸ್‌ಎಡಿ, ತಾಂತ್ರಿಕ ಹುದ್ದೆಗಳಾದ ಎಇ/ ಜೆಇ/ ಎಸಿಎಫ್ ಹಾಗೂ ತಾಂತ್ರಿಕೇತರ ಹುದ್ದೆಗಳಾದ ಆರ್‌ಐ/ ಸಿಟಿಐ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಗಳಲ್ಲೂ ಬರೆಯಬಹುದು.

ಸಾಮಾನ್ಯವಾಗಿ ಸ್ಪರ್ಧಾತ್ಮಕ ಪ್ರಪಂಚಕ್ಕೆ ಕಾಲಿಟ್ಟಾಗ ಭಾಷೆ ಬಗ್ಗೆ ಗೊಂದಲಕ್ಕೀಡಾಗುವ ಬದಲು ಜ್ಞಾನ ಹೆಚ್ಚಿಸಿಕೊಳ್ಳಲು ಬೇಕಾದ ತಾಲೀಮು ನಡೆಸುವುದು ಸೂಕ್ತ. ರಾಜ್ಯ ಲೋಕಸೇವಾ ಆಯೋಗದ ಕೆಎಎಸ್‌ನಂತಹ ಪರೀಕ್ಷೆಗಳೂ ಸಹ ಕನ್ನಡ, ಇಂಗ್ಲಿಷ್ ದ್ವಿಭಾಷೆಯಲ್ಲಿ ಪ್ರಶ್ನೆ ಪತ್ರಿಕೆಗಳಿರುವುದರಿಂದ ಕನ್ನಡಕ್ಕೆ ಹೆಚ್ಚು ಒತ್ತು ನೀಡಿ. ಕಡ್ಡಾಯ ಇಂಗ್ಲಿಷ್ ಪತ್ರಿಕೆ ಕೇವಲ ಅಭ್ಯರ್ಥಿಯ ಭಾಷಾಜ್ಞಾನ ಮಾನದಂಡವಾಗಿರುವುದರಿಂದ ಎಸ್ಸೆಸ್ಸೆಲ್ಸಿ, ಪಿಯುಸಿ ಮಟ್ಟದ ಇಂಗ್ಲಿಷ್ ಜ್ಞಾನ ಇದ್ದರೆ ಸಾಕು. ಈ ಪತ್ರಿಕೆಯಲ್ಲಿ ತೇರ್ಗಡೆಯಾಗುವುದರ ಕಡೆ ಗಮನ ಹರಿಸಿ. ಇನ್ನುಳಿದ ಎಲ್ಲಾ ಪತ್ರಿಕೆಗಳನ್ನು ಕನ್ನಡದಲ್ಲಿಯೇ ಬರೆಯಲು ಅವಕಾಶವಿರುವುದರಿಂದ ನಿಮಗೆ ಹೆಚ್ಚು ಅಂಕ ಗಳಿಸಿ, ಆಯಾ ಹುದ್ದೆಗೆ ಆಯ್ಕೆಯಾಗಲು ಸಹಕಾರಿಯಾಗುತ್ತದೆ. ಕರ್ನಾಟಕದ ಗ್ರಾಮೀಣ ಅಭ್ಯರ್ಥಿಗಳು ಭಾಷೆಯ ಆಯ್ಕೆಯ ಗೊಂದಲದಿಂದ ಹೊರಬಂದು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಿರೀಕ್ಷಿಸಬಹುದಾದ ಜ್ಞಾನದ ಅವಶ್ಯಕತೆ ಕಡೆ ಗಮನಹರಿಸುವುದು ಸೂಕ್ತ.

ಇನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ವಿಚಾರಕ್ಕೆ ಬಂದರೆ, ಕೇಂದ್ರ ಲೋಕ ಸೇವಾ ಆಯೋಗದ ಐಎಎಸ್/ ಐಪಿಎಸ್/ ಐಎಫ್‌ಒಎಸ್ (Indian forest Service) / ಸಿಡಿಎಸ್ (Combined Defence Services) ಮತ್ತು ಎನ್‌ಡಿಎ (National Defence Services) ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳು ಅದರಲ್ಲೂ ಪೂರ್ವಭಾವಿ ಪರೀಕ್ಷೆಯು ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿರುವುದರಿಂದ ಕೇವಲ ಪ್ರಶ್ನೆಗಳನ್ನು ನಿಮ್ಮ ಭಾಷೆಯಲ್ಲಿ ಅರ್ಥೈಸಿಕೊಂಡು ಉತ್ತರಿಸುವ ಜಾಣ್ಮೆ ನಿಮ್ಮಲ್ಲಿದ್ದರೆ ಸಾಕು, ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆಯಬಹುದು. ನಿಮಗೆ ತಿಳಿದಿರುವಂತೆ ಮುಖ್ಯ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯಬಹುದು.

ಸಮಕಾಲೀನ ಜಗತ್ತಿನಲ್ಲಿ ಎಲ್ಲಾ ಭಾಷೆಗಳ ಕಲಿಕೆಯೂ ಬಲು ಸರಳ. ಇಂಗ್ಲಿಷ್ ಕಲಿಕೆಗಂತೂ ಹಲವು ವೆಬ್‌ಸೈಟ್‌ಗಳು ವೇದಿಕೆ ಕಲ್ಪಿಸಿವೆ. ಅಂತಹ ವೆಬ್‌ಸೈಟ್‌ಗಳೆಂದರೆ,

- www.ncert.nic.in
- www.diksha.gov.in
- www.efluniversity.ac.in
- www.tesol.org
- www.britishcouncil.in
- www.riesielt.org

ಯಾವುದೇ ಒಬ್ಬ ಕಲಿಕಾರ್ಥಿ ಈ ಮೇಲಿನ ವೆಬ್‌ಸೈಟ್‌ಗಳಿಗೆ ಭೇಟಿ ನೀಡಿ ಪ್ರತಿದಿನ ಒಂದರಿಂದ ಒಂದೂವರೆ ಗಂಟೆಗಳ ಕಾಲ ಕಲಿಯಲು ಪ್ರಯತ್ನಿಸಿದರೆ ಖಂಡಿತ ಇಂಗ್ಲಿಷ್ ಭಾಷೆ ಮತ್ತು ವ್ಯಾಕರಣದ ಮೇಲೆ ಪ್ರೌಢಿಮೆ ಸಾಧಿಸಬಹುದು.

ಇನ್ನುಳಿದಂತೆ ಕೇಂದ್ರ ಸರ್ಕಾರ ನಡೆಸುವ ರೈಲ್ವೆ, ಎಸ್‌ಎಸ್‌ಸಿ ಬ್ಯಾಂಕಿಂಗ್, ಗ್ರಾಮೀಣ ಬ್ಯಾಂಕ್‌ಗಳ ಪರೀಕ್ಷೆಗಳನ್ನೂ ಸಹ ಪ್ರಾದೇಶಿಕ (ಕನ್ನಡ) ಭಾಷೆಗಳಲ್ಲಿ ಬರೆಯಲು ಅವಕಾಶ ಕಲ್ಪಿಸಿಕೊಡಬೇಕೆಂಬ ಕೂಗು ಹಲವಾರು ಸಂಘ– ಸಂಸ್ಥೆಗಳಿಂದ ಕೇಳಿಬಂದಿದೆ. ಅದಕ್ಕೆ ಕೇಂದ್ರ ಸರ್ಕಾರವು 2019ರಲ್ಲೇ ಸ್ಪಂದಿಸಿದ್ದು, ಎಸ್‌ಎಸ್‌ಸಿ, ಬ್ಯಾಂಕಿಂಗ್, ರೈಲ್ವೆಯಂತಹ ಮತ್ತು ಗ್ರಾಮೀಣ ಬ್ಯಾಂಕ್‌ಗಳ ಸ್ಪರ್ಧಾತ್ಮಕ ಪರೀಕ್ಷೆಗಳನ್ನು 13 ಪ್ರಾದೇಶಿಕ ಭಾಷೆಗಳಲ್ಲಿ (ಕನ್ನಡವೂ ಸೇರಿದಂತೆ) ಅವಕಾಶ ಕಲ್ಪಿಸಿದೆ. ಇದು ಗ್ರಾಮೀಣ ಭಾಗದ ಕನ್ನಡ ಮಾಧ್ಯಮದ ಯುವಜನತೆಯ ಚೈತನ್ಯವನ್ನು ಮತ್ತಷ್ಟು ಹೆಚ್ಚಿಸಿದೆ.

ಕೇಂದ್ರ ಮತ್ತು ರಾಜ್ಯ ಲೋಕಸೇವಾ ಆಯೋಗ ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಇತರೇ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಇತ್ತೀಚಿನ ಅಂಕಿ–ಅಂಶ ಗಮನಿಸಿದರೆ, ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಯಶಸ್ಸು ಗಳಿಸಿರುವುದು ಕಂಡುಬಂದಿದೆ. ಗ್ರಾಮೀಣ ಭಾಗದ ಅಭ್ಯರ್ಥಿಗಳು ಶ್ರದ್ಧೆ ಮತ್ತು ಧೈರ್ಯದಿಂದ ಐಎಎಸ್/ ಐಪಿಎಸ್/ ಐಎಫ್‌ಒಎಸ್/ ಸಿಡಿಎಸ್/ ಎನ್‌ಡಿಎ/ ಕೆಎಎಸ್ ಹಾಗೂ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳ ಕಡೆ ಗಮನಹರಿಸಬಹುದು.

(ಲೇಖಕ: ಮುಖ್ಯಸ್ಥರು, ಯೂನಿವರ್ಸಲ್ ಕೋಚಿಂಗ್ ಸೆಂಟರ್, ಬೆಂಗಳೂರು)

ಪ್ರಜಾವಾಣಿ ಉದ್ಯೋಗ ವಾರ್ತೆ

ಎನ್‌ಪಿಸಿಐಎಲ್‌ನಲ್ಲಿ 200 ಎಕ್ಸಿಕ್ಯೂಟಿವ್ ಟ್ರೈನಿ ಹುದ್ದೆಗಳು

ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಎನ್‌ಪಿಸಿಐಎಲ್) ಖಾಲಿ ಇರುವ ಟ್ರೈನಿ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.


- **ಹುದ್ದೆ:** ಎಕ್ಸಿಕ್ಯೂಟಿವ್ ಟ್ರೈನಿ
- **ಹುದ್ದೆಗಳ ಸಂಖ್ಯೆ:** 200
- **ಸ್ಥಳ:** ಭಾರತದೆಲ್ಲೆಡೆ
- **ವಿದ್ಯಾರ್ಹತೆ:** ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ ಬಿಇ, ಬಿಟೆಕ್, ಬಿಎಸ್‌ಸಿ, ಎಂಟೆಕ್ ಪದವಿಯನ್ನು ಶೇ 60 ಅಂಕಗಳೊಂದಿಗೆ ಪೂರ್ಣಗೊಳಿಸಿರಬೇಕು.
- **ವಯೋಮಿತಿ:** ಏಪ್ರಿಲ್ 2, 2020ಕ್ಕೆ ಅನ್ವಯವಾಗುವಂತೆ 41 ವರ್ಷ ಮೀರಿರಬಾರದು.
- **ವಯೋಮಿತಿ ಸಡಿಲಿಕೆ:** ಒಬಿಸಿ, 2ಎ, 2ಬಿ, 3ಎ ಹಾಗೂ 3ಬಿ ಅವರಿಗೆ 3 ವರ್ಷ, ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷ ವಯೋಮಿತಿ ಸಡಿಲಿಕೆ ಇದೆ.
- **ಅರ್ಜಿ ಶುಲ್ಕ:** ಸಾಮಾನ್ಯ ಹಾಗೂ ಒಬಿಸಿ ವರ್ಗದ ಪುರುಷ ಅಭ್ಯರ್ಥಿಗಳಿಗೆ ₹500 ಹಾಗೂ ಎಸ್‌ಸಿ, ಎಸ್‌ಟಿ, ಅಂಗವಿಕಲ ಹಾಗೂ ಮಾಜಿ ಸೈನಿಕರಿಗೆ ಅರ್ಜಿ ಶುಲ್ಕವಿಲ್ಲ.
- **ಆಯ್ಕೆ ಪ್ರಕ್ರಿಯೆ:** ವೈಯಕ್ತಿಕ ಸಂದರ್ಶನದ ಮೂಲಕ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಮಾರ್ಚ್ 9, 2021
- **ಹೆಚ್ಚಿನ ಮಾಹಿತಿಗೆ:** https://npcilcareers.co.in/MainSite/default.aspx

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿದ್ಯುತ್ ಜನಕ (ಪರ್ಯಾಯ)

ಎಸ್ಸೆಸ್ಸೆಲ್ಸಿ

ಭೌತಶಾಸ್ತ್ರ



ವಿದ್ಯುತ್ಕಾಂತೀಯ ಪ್ರೇರಣೆಯ ವಿದ್ಯಮಾನದ ಆಧಾರದ ಮೇಲೆ ಯಾಂತ್ರಿಕ ಶಕ್ತಿಯನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುವ ಸಾಧನವನ್ನು ವಿದ್ಯುತ್ ಜನಕ ಎನ್ನುವರು.

ತಿರುಗುವ ಆಯತಾಕಾರದ ಸುರುಳಿ ABCD ಯನ್ನು ಕಾಂತದ ಎರಡು ಧ್ರುವಗಳ ನಡುವೆ ಇರಿಸಲಾಗುತ್ತದೆ. ಸುರುಳಿಯ ಎರಡು ತುದಿಗಳನ್ನು ಉಂಗುರಗಳು R_1 ಮತ್ತು R_2 ಗೆ ಜೋಡಿಸಲಾಗುತ್ತದೆ.

ಈ ಉಂಗುರಗಳನ್ನು ಸ್ಥಿರವಾದ ವಾಹಕ ಕುಂಚಗಳಾದ B_1 ಮತ್ತು B_2ಗಳಿಗೆ ಕ್ರಮವಾಗಿ ಜೋಡಿಸಲಾಗಿದೆ. R_1 ಮತ್ತು R_2ಗಳನ್ನು ಆಂತರಿಕವಾಗಿ ದಂಡಕ್ಕೆ ಜೋಡಿಸಲಾಗುತ್ತದೆ. ಕಾಂತ ಕ್ಷೇತ್ರದೊಳಗೆ ಸುರುಳಿ ತಿರುಗಿಸುವಂತೆ ಮಾಡಲು ದಂಡವನ್ನು ಯಾಂತ್ರಿಕವಾಗಿ ಹೊರಗಿನಿಂದ ತಿರುಗಿಸುವಂತೆ ವ್ಯವಸ್ಥೆ ಮಾಡಲಾಗಿರುತ್ತದೆ. ವಿದ್ಯುತ್ ಪ್ರವಾಹವನ್ನು ಗುರುತಿಸಲು ಕುಂಚಗಳನ್ನು ಗೆಲ್ವನೋಮೀಟರ್‌ಗೆ ಜೋಡಿಸಲಾಗಿದೆ.


ಕಾರ್ಯ

ದಂಡವನ್ನು ಪ್ರದಕ್ಷಿಣೆಯಾಗಿ ತಿರುಗಿಸಿದಾಗ ಸುರುಳಿಯ ಬಾಹು AB ಯು ಮೇಲಕ್ಕೆ ಚಲಿಸುತ್ತದೆ ಮತ್ತು ಬಾಹು CD ಯು ಕೆಳಕ್ಕೆ ಚಲಿಸುತ್ತದೆ. ಫ್ಲೆಮಿಂಗ್‌ನ ಬಲಗೈ ನಿಯಮದ ಪ್ರಕಾರ ಪ್ರೇರಿತ ವಿದ್ಯುತ್ ಪ್ರವಾಹವು AB ಮತ್ತು CD ದಿಕ್ಕಿನ ಮೂಲಕ ಪ್ರವಹಿಸಲಾರಂಭಿಸುತ್ತದೆ. ಹೀಗಾಗಿ ಪ್ರೇರಿತ ವಿದ್ಯುತ್ ಪ್ರವಾಹವು ABCD ದಿಕ್ಕಿನಲ್ಲಿ ಪ್ರವಹಿಸುತ್ತದೆ. ಬಾಹ್ಯ ಮಂಡಲದಲ್ಲಿ ಪ್ರವಾಹವು B_2 ನಿಂದ B_1 ಕಡೆಗೆ ಪ್ರವಹಿಸುತ್ತದೆ. ಅರ್ಧ ಸುತ್ತಿನ ನಂತರ ಬಾಹು CD ಯು ಮೇಲ್ಮುಖವಾಗಿಯೂ ಬಾಹು AB ಯು ಕೆಳಮುಖವಾಗಿಯೂ ಚಲಿಸುವುದರಿಂದ ಪ್ರೇರಿತ ವಿದ್ಯುತ್ ಪ್ರವಾಹವು DCBA ದಿಕ್ಕಿನಲ್ಲಿ ಪ್ರವಹಿಸುತ್ತದೆ ಮತ್ತು ಬಾಹ್ಯ ಮಂಡಲದಲ್ಲಿ B_1ನಿಂದ B_2 ಕಡೆಗೆ ಪ್ರವಹಿಸುತ್ತದೆ. ಈ ಕ್ರಿಯೆಯಲ್ಲಿ ವಿದ್ಯುತ್ ಪ್ರವಾಹದ ಧ್ರುವೀಯತೆಯು ಸಮಯದ ಸಮಾನ ಕಾಲಾವಧಿಗಳ ನಂತರ ಬದಲಾಗುತ್ತಿದ್ದು ಇದನ್ನು ಪರ್ಯಾಯ ವಿದ್ಯುತ್ ಪ್ರವಾಹವೆಂತಲೂ ಈ ಸಾಧನವನ್ನು ಪರ್ಯಾಯ ವಿದ್ಯುತ್ ಜನಕ ಎಂತಲೂ ಕರೆಯುತ್ತಾರೆ.

ನೇರ ವಿದ್ಯುತ್ ಜನಕ

ಸಮಯದ ಸಮಾನ ಕಾಲಾವಧಿಯಲ್ಲಿ ತನ್ನ ದಿಕ್ಕನ್ನು ಬದಲಾಯಿಸಿದ ವಿದ್ಯುತ್ ಪ್ರವಾಹವನ್ನು ನೇರ ವಿದ್ಯುತ್ ಪ್ರವಾಹವೆಂದು ಕರೆಯುತ್ತಾರೆ. ನೇರ ವಿದ್ಯುತ್ ಜನಕಗಳಲ್ಲಿ ಒಡಕು ಉಂಗುರಗಳನ್ನು ದಿಕ್ಪರಿವರ್ತಕಗಳಾಗಿ ಉಪಯೋಗಿಸುತ್ತಾರೆ. ಈ ವ್ಯವಸ್ಥೆಯಲ್ಲಿ ಒಂದು ಕುಂಚವು ಯಾವಾಗಲೂ ಕಾಂತಕ್ಷೇತ್ರದ ಮೇಲ್ಮುಖವಾಗಿ ಚಲಿಸುತ್ತಿರುವ ಬಾಹುವಿನೊಂದಿಗೆ ಸಂಪರ್ಕದಲ್ಲಿದ್ದರೆ ಇನ್ನು ಕುಂಚವು ಯಾವಾಗಲೂ ಕೆಳಮುಖವಾಗಿ ಚಲಿಸುತ್ತಿರುವ ಬಾಹುವಿನೊಂದಿಗೆ ಸಂಪರ್ಕದಲ್ಲಿರುತ್ತದೆ. ಹೀಗಾಗಿ ಈ ವ್ಯವಸ್ಥೆಯಲ್ಲಿ ಒಂದೇ ದಿಕ್ಕಿನಲ್ಲಿ ಪ್ರವಹಿಸುವ ವಿದ್ಯುತ್ ಪ್ರವಾಹ ಉತ್ಪತ್ತಿಯಾಗುತ್ತದೆ.

ಗೃಹಬಳಕೆಯ ವಿದ್ಯುತ್ ಮಂಡಲಗಳು



ವಿದ್ಯುತ್ ಪೂರೈಕೆಯಲ್ಲಿನ ತಂತಿಗಳಲ್ಲಿ ಸಾಮಾನ್ಯವಾಗಿ ಕೆಂಪು ಅವಾಹಕ ಹೊದಿಕೆಯನ್ನು ಸಜೀವ ತಂತಿ (ಧನಾತ್ಮಕ) ಎಂದು ಹಾಗೂ ಕಪ್ಪು ಅವಾಹಕ ಹೊದಿಕೆಯನ್ನು ಹೊಂದಿರುವ ತಂತಿಯನ್ನು ತಟಸ್ಥ ತಂತಿ (ಋಣಾತ್ಮಕ) ಎಂದು ಕರೆಯುವರು.

ಸಾಮಾನ್ಯವಾಗಿ ಮನೆಗಳಲ್ಲಿ ಪ್ರತ್ಯೇಕ ಎರಡು ರೀತಿಯ ವಿದ್ಯುನ್ಮಂಡಲಗಳನ್ನು ಬಳಸಲಾಗುತ್ತಿದ್ದು ಒಂದು 15A ವಿದ್ಯುತ್ ಪ್ರವಾಹ ಪ್ರವಹಿಸುವ ಮಂಡಲಗಳಲ್ಲಿ ಹೆಚ್ಚಿನ ಸಾಮರ್ಥ್ಯವುಳ್ಳ ಗೀಸರ್‌ಗಳು, ಕೂಲರ್‌ಗಳು ಮತ್ತು ತಂಪುಕಾರಗಳನ್ನು ಜೋಡಿಸಲಾಗುತ್ತದೆ ಇನ್ನೊಂದು 5A ವಿದ್ಯುತ್ ಪ್ರವಾಹ ಪ್ರವಹಿಸುವ ಮಂಡಲಗಳಲ್ಲಿ ಕಡಿಮೆ ಸಾಮರ್ಥ್ಯವುಳ್ಳ ಬಲ್ಬ್, ಫ್ಯಾನ್ ಇತ್ಯಾದಿಗಳನ್ನು ಬಳಸಲಾಗುತ್ತದೆ.

ಭೂ ಸಂಪರ್ಕ ತಂತಿ

ಇದು ಕಡಿಮೆ ರೋಧವನ್ನು ಹೊಂದಿರುವ ಭೂ ಸಂಪರ್ಕಕ್ಕೆ ಪಥವನ್ನು ಉಂಟು ಮಾಡುವ ಸಂಪರ್ಕವಾಗಿದೆ. ಇದು ಲೋಹಗಳ ಮೇಲ್ಮೈಗೆ ಸಂಪರ್ಕವನ್ನು ಮಾಡಲಾಗಿದ್ದು, ಉಪಕರಣಕ್ಕೆ ಯಾವುದೇ ರೀತಿಯ ಹೆಚ್ಚಿನ ವಿದ್ಯುತ್ ಸೋರಿಕೆಯಾದಲ್ಲಿ ಅದರ ವಿಭವಾಂತರವನ್ನು ಭೂಮಿಯ ವಿಭವಾಂತರಕ್ಕೆ ಸಮನಾಗಿ ಉಪಕರಣವನ್ನು ಆಘಾತದಿಂದ ಸಂರಕ್ಷಿಸುತ್ತದೆ.

ವಿದ್ಯುತ್ ಫ್ಯೂಸ್

ವಿದ್ಯುನ್ಮಂಡಲದಲ್ಲಿ ಹ್ರಸ್ವ ಮಂಡಲವಾದಾಗ ವಿದ್ಯುತ್ ಫ್ಯೂಸ್ ಜೌಲ್‌ನ ತಾಪದಿಂದ ಕರಗಿ ವಿದ್ಯುತ್ ಸಂಪರ್ಕ ಕಡಿತಗೊಳ್ಳುತ್ತದೆ. ಇದರಿಂದ ಉಪಕರಣಗಳು ಆಘಾತದಿಂದ ಸುರಕ್ಷಿತವಾಗಿರುತ್ತವೆ.

ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್ ಬೆಂಗಳೂರು

ಪ್ರಜಾವಾಣಿ ನೋಡಿಯೊ

https://bit.ly/3dITPOw

ಹತ್ತನೇ ತರಗತಿ ಇಂಗ್ಲಿಷ್ ಮಾಧ್ಯಮದ ರಸಾಯನ ಶಾಸ್ತ್ರ ವಿಭಾಗದ 'ಮೆಟಲ್ಸ್ ಅಂಡ್ ನಾನ್ ಮೆಟಲ್ಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಸರಪಳಿ ಕ್ರಿಯೆಗಳು

ದ್ವಿತೀಯ ಪಿಯುಸಿ

ಭೌತಶಾಸ್ತ್ರ

ಬೈಜಿಕ ಕ್ರಿಯೆಗಳ ಸಮೀಕರಣಗಳನ್ನು ಗಮನಿಸಿದಾಗ ಸರಾಸರಿ ಮೂರು ನ್ಯೂಟ್ರಾನ್‌ಗಳು ಹೊರಹೊಮ್ಮಿವೆ. ಈ ನ್ಯೂಟ್ರಾನ್‌ಗಳು ಮುಂದಿನ ಬೈಜಿಕ ವಿದಳನ ಕ್ರಿಯೆಗೆ ಕಾರಣೀಕರ್ತವಾಗಿವೆ. ಆದ್ದರಿಂದ ಈ ವಿದಳನ ಕ್ರಿಯೆಯನ್ನು ಸ್ವಯಂಪ್ರೇರಿತ 'ವಿದಳನ ಕ್ರಿಯೆ' ಎನ್ನುವರು. ಇದನ್ನು 'ಸರಪಳಿ ಕ್ರಿಯೆ' ಎಂತಲೂ ಕರೆಯುತ್ತಾರೆ.

- ವಿದಳನ ಕ್ರಿಯೆಯಲ್ಲಿ ಬಿಡುಗಡೆಯಾಗುವ ನ್ಯೂಟ್ರಾನ್‌ಗಳ ಸಂಖ್ಯೆಯನ್ನು ನಿಯಂತ್ರಿಸುವುದರಿಂದ ವಿದಳನ ಕ್ರಿಯೆಯ ದರವನ್ನು ನಿಯಂತ್ರಿಸಬಹುದು. ಇದನ್ನು ನಿಯಂತ್ರಿತ ಸರಪಳಿ ಕ್ರಿಯೆ ಎನ್ನುವರು. ಇದನ್ನು ಬೈಜಿಕ ಕ್ರಿಯಾಕಾರಿಗಳಲ್ಲಿ ಬಳಸುತ್ತಾರೆ.
- ವಿದಳನ ಕ್ರಿಯೆಯಲ್ಲಿ ಬಿಡುಗಡೆಯಾದ ನ್ಯೂಟ್ರಾನ್‌ಗಳ ಸಂಖ್ಯೆಯನ್ನು ನಿಯಂತ್ರಿಸದಿದ್ದಾಗ ವಿದಳನ ಕ್ರಿಯೆಯ ಆವೃತ್ತಿಯ ಹೆಚ್ಚಾಗಿ ದೊಡ್ಡದಾದ ಸ್ಫೋಟ ಸಂಭವಿಸಬಹುದು. ಇದನ್ನು ಅನಿಯಂತ್ರಿಕ ಸರಪಳಿ ಪ್ರಿಯೆ ಎನ್ನುತ್ತಾರೆ. ಇದನ್ನು ಬೈಜಿಕ ಬಾಂಬ್‌ಗಳಲ್ಲಿ ಬಳಸಲಾಗುತ್ತದೆ.

ವಿದಳನ ಕ್ರಿಯೆಯಲ್ಲಿ

$$\text{ಗುಣಾಂಕ } k = \frac{\text{ಒಂದು ತಲೆಮಾರಿನಿಂದ ಉತ್ಪತ್ತಿಯಾದ ವಿದಳನ ಸಂಖ್ಯೆ}}{\text{ಹಿಂದಿನ ತಲೆಮಾರಿನಿಂದ ಉತ್ಪತ್ತಿಯಾದ ವಿದಳನ ಸಂಖ್ಯೆ}}$$

- $k = 1$ ಇದ್ದಾಗ ಕ್ರಿಯಾಕಾರಿಯು ಕ್ರಾಂತಿ ಸ್ಥಿತಿಯಲ್ಲಿದೆ ಎನ್ನಲ್ಪಡುತ್ತದೆ.
- $k > 1$ ಇದ್ದಾಗ ಕ್ರಿಯಾದಾರ ಮತ್ತು ಕ್ರಿಯಾಕಾರಿ ಶಕ್ತಿಯು ಫಲನರೀತ್ಯಾ ಹೆಚ್ಚಾಗುತ್ತದೆ.
- $k < 1$ ಇದ್ದಾಗ ಕ್ರಿಯಾದರ ಮತ್ತು ಕ್ರಿಯಾಕಾರಿ ಶಕ್ತಿಯು ಕಡಿಮೆಯಾಗಿ ನಂತರ ಸ್ಥಗಿತಗೊಳ್ಳಬಹುದು.

ಆದ್ದರಿಂದ K ಬೆಲೆಯನ್ನು ಒಂದನ್ನಾಗಿ ಉಳಿಸಿಕೊಳ್ಳುವುದು ಬಹುಮುಖ್ಯವಾಗಿದೆ.

ಬೈಜಿಕ ಕ್ರಿಯಾಕಾರಿ (ಚಿತ್ರ 1.1)

ಬೈಜಿಕ ಕ್ರಿಯಾಕಾರಿಯು ಸ್ವಯಂ ಪ್ರೇರಿತ ವಿದಳನ ಮತ್ತು ನಿಯಂತ್ರಿತ ಸರಪಳಿ ಕ್ರಿಯೆಯಿಂದ ಬೈಜಿಕ ಶಕ್ತಿಯನ್ನು ಒದಗಿಸುವ ಸಾಧನವಾಗಿದೆ.

ಬೈಜಿಕ ಕ್ರಿಯಾಕಾರಿಗಳಲ್ಲಿ 6 ಮುಖ್ಯ ಭಾಗಗಳಿವೆ.

(1) ಬೈಜಿಕ ಇಂಧನ (2) ಮಂದಕಾರಿಗಳು (3) ಸುರಕ್ಷಾ ಸರಳುಗಳು
(4) ನ್ಯೂಟ್ರಾನ್ ಪ್ರತಿಫಲಕಗಳು
(5) ಶೀತಲಕಾರಿಗಳು
(6) ನಿಯಂತ್ರಣ ಪಾತ್ರೆಗಳು

(1) ಬೈಜಿಕ ಇಂಧನ: ವಿದಳನ ಹೊಂದುವ ಪದಾರ್ಥವನ್ನು ಇಂಧನವಾಗಿ ಬಳಸಲಾಗುತ್ತಿದ್ದು, ಅದನ್ನು ಕ್ರಿಯಾಕಾರಿಯ ಮಧ್ಯಭಾಗದಲ್ಲಿ ಇರಿಸಲಾಗುತ್ತದೆ. ಇಲ್ಲಿ ಸಾಮಾನ್ಯವಾಗಿ $^{238}_{92}U$ ಐಸೋಟೋಪನ್ನು ಬಳಸಲಾಗುತ್ತದೆ.


ಯುರೇನಿಯಂ ಒಂದು ನ್ಯೂಟ್ರಾನ್ ಹೀರಿಕೊಂಡಾಗ ಪ್ಲುಟೋರಿಯಂ ಅನ್ನು ಬಿಡುಗಡೆಗೊಳಿಸಿ ಹೆಚ್ಚಿನ ಶಕ್ತಿಯನ್ನು ಕೊಡುತ್ತದೆ.

$$^{238}_{92}U + n \rightarrow {}^{239}_{92}U \rightarrow {}^{239}_{93}Np + e + v$$

$$^{239}_{93}Np \rightarrow {}^{239}_{94}Pu + e + v$$

(2) ಮಂದಕಾರಿ: ಕ್ರಿಯಾಕಾರಿಗಳಲ್ಲಿ ನ್ಯೂಟ್ರಾನ್‌ಗಳನ್ನು ನಿಧಾನಗೊಳಿಸಲು ವಿದಳನ ನ್ಯೂಕ್ಲಿಯಸ್‌ಗಳೊಂದಿಗೆ ಒದಗಿಸುವ ಹಗುರ ನ್ಯೂಕ್ಲಿಯಸ್‌ಗಳನ್ನು ಮಂದಕಾರಿ ಎನ್ನುವರು. ನ್ಯೂಟ್ರಾನ್‌ಗಳನ್ನು ನಿಧಾನಗೊಳಿಸದೇ ಇದ್ದರೆ ಹೆಚ್ಚಿನ ಶಕ್ತಿಯೊಂದಿಗಿರುವ ನ್ಯೂಟ್ರಾನ್‌ಗಳು ಮುಂದಿನ ವಿದಳನ ಕ್ರಿಯೆಗೆ ಸಿಗದೆ ತಪ್ಪಿಸಿಕೊಂಡು ಹೋಗಬಹುದು. ಸಾಮಾನ್ಯವಾಗಿ ಮಂದಕಾರಿಗಳಾಗಿ ನೀರು, ಭಾರಜಲ (D_2O) ಅಥವಾ ಗ್ರಾಫೈಟುಗಳನ್ನು ಬಳಸುತ್ತಾರೆ.

(ಚಿತ್ರ 1.1)



(3) ಸುರಕ್ಷಾ ಸರಳುಗಳು: ಬೈಜಿಕ ಕ್ರಿಯೆಯ ದರವನ್ನು ನಿಯಂತ್ರಿಸಲು ಬಳಸುವ ಸಾಧನವನ್ನು ಸುರಕ್ಷಾ ಸರಳುಗಳು ಎನ್ನುವರು. ಸಾಮಾನ್ಯವಾಗಿ ಕ್ಯಾಡ್ಮಿಯಂನಿಂದ ಮಾಡಲ್ಪಟ್ಟ ಈ ಸರಳುಗಳು ನ್ಯೂಟ್ರಾನ್‌ಗಳನ್ನು ಹೀರಿಕೊಂಡು ವಿದಳನ ಕ್ರಿಯೆಯನ್ನು ನಿಯಂತ್ರಿಸುತ್ತವೆ.

(4) ನ್ಯೂಟ್ರಾನ್ ಪ್ರತಿಫಲಕಗಳು: ನ್ಯೂಟ್ರಾನ್‌ಗಳ ಸೋರಿಕೆಯನ್ನು ತಗ್ಗಿಸಲು ಪ್ರತಿಫಕಗಳನ್ನು ಬಳಸಲಾಗುತ್ತದೆ.

(5) ಶೀತಲಕಾರಿಗಳು: ವಿದಳನ ಕ್ರಿಯೆಯಲ್ಲಿ ಬಿಡುಗಡೆಯಾದ ಶಾಖ-ಶಕ್ತಿಯನ್ನು ಶೀತಲಕಾರಿಗಳು ಹೊರ ತೆಗೆಯಲಾಗುತ್ತವೆ. ಶೀತಲಕಾರಿಗಳು ಶಾಖ ಶಕ್ತಿಯನ್ನು ನೀರಿನೊಂದಿಗೆ ಹಬೆ ಉತ್ಪಾದಕದಲ್ಲಿ ವಿನಿಮಯಗೊಳಿಸಿ ಆ ಹಬೆಯನ್ನು ಟರ್ಬೈನ್ ತಿರುಗಿಸುವಲ್ಲಿ ಬಳಸಲಾಗುತ್ತದೆ.

(6) ನಿಯಂತ್ರಣ ಪಾತ್ರೆಗಳು: ವಿದಳನ ಕ್ರಿಯೆಯಲ್ಲಿ ಹೊರಹೊಮ್ಮುವ ವಿಕಿರಣಪಟು ವಿದಳನ ಉತ್ಪನ್ನಗಳನ್ನು ಹೊರ ಹೋಗದಂತೆ ನಿಯಂತ್ರಿಸಲು ಕಾಂಕ್ರೀಟ್ ಮತ್ತು ಕಬ್ಬಿಣದಿಂದ ಮಾಡಿದ ನಿಯಂತ್ರಣ ಪಾತ್ರೆಗಳನ್ನು ಬಳಸುತ್ತಾರೆ.

ಪ್ರಜಾವಾಣಿ ನೋಡಿಯೊ

https://bit.ly/2NsYKZe

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಮೋಷನ್ ಆಫ್ ಚಾರ್ಜ್ಡ್ ಪಾರ್ಟಿಕಲ್ಸ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಗುರುವಾರ • ಫೆಬ್ರುವರಿ 25, 2021 ಪ್ರಜಾವಾಣಿ

ಪಂಚಮಸಾಲಿ ಮೀಸಲು: ಪ್ರವರ್ಗ 2ಎ ಮೀಸಲಾತಿಗಾಗಿ ಧರಣಿ ಮುಂದುವರಿಕೆ

ಕಾಲಾವಕಾಶ ಕೇಳಿದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗಾಯತ ಪಂಚಮಸಾಲಿ ಸಮುದಾಯದ ಮೀಸಲಾತಿ ಪರಿಷ್ಕರಿಸಬೇಕೆಂಬ ಬೇಡಿಕೆ ಈಡೇರಿಸಲು ಸರ್ಕಾರ ಸಮಯಾವಕಾಶ ಕೋರಿದೆ.


ಹೋರಾಟದ ನೇತೃತ್ವ ವಹಿಸಿ, ಧರಣಿ ನಡೆಸುತ್ತಿರುವ ಕೂಡಲ ಸಂಗಮ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ಬುಧವಾರ ಭೇಟಿಯಾದ ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ, ಸಣ್ಣ ಕೈಗಾರಿಕೆ ಸಚಿವ ಸಿ.ಸಿ. ಪಾಟೀಲ ಅವರು, ಬೇಡಿಕೆ ಈಡೇರಿಸಲು ಸ್ವಲ್ಪ ಅವಕಾಶ ಕೊಡಿ ಎಂದು ಮನವಿ ಮಾಡಿದರು.

‘ಹಲವು ಬಾರಿ ಕಾಲಾವಕಾಶ ನೀಡಲಾಗಿದೆ. ಎಷ್ಟು ದಿನದೊಳಗೇ ಮೀಸಲಾತಿ ಕೊಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಿ. ನಂತರವೇ ಹೋರಾಟ ಕೈಬಿಡುತ್ತೇವೆ’ ಎಂದೂ ಸ್ವಾಮೀಜಿ ಪುನರುಚ್ಚರಿಸಿದರು.

‘ಹಿಂದುಳಿದ ವರ್ಗಗಳ ಆಯೋಗಕ್ಕೆ ವರದಿ ಕಳಿಸಬೇಕು. ಆ ವರದಿ ನಂತರವೇ ಮೀಸಲಾತಿ ಪ್ರಕಟಿಸಬೇಕಾಗುತ್ತದೆ. ಇಂತಿಷ್ಟೇ ದಿನಗಳಲ್ಲಿ ವರದಿ ನೀಡಿ ಎಂದು ಹೇಳುವ ಅಧಿಕಾರ ನಮ್ಮ ಕೈಯಲ್ಲಿಲ್ಲ’ ಎಂದು ಬೊಮ್ಮಾಯಿ ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ನಗರದಲ್ಲಿ ಬುಧವಾರವೂ ಧರಣಿ ನಡೆಸಿದ ಸ್ವಾಮೀಜಿ, ‘ನ್ಯಾಯ ಮಾರ್ಗದಲ್ಲಿ ಧರಣಿ ಸತ್ಯಾಗ್ರಹ ಮಾಡುತ್ತಿದ್ದೇವೆ. ಮಾ.4ರವರೆಗೆ ಸರ್ಕಾರಕ್ಕೆ ಗಡುವು ನೀಡಿದ್ದೇವೆ. ಆ ನಂತರ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತೇವೆ’ ಎಂದು ಪುನರುಚ್ಚರಿಸಿದರು.

‘ಮೀಸಲಾತಿಗಾಗಿ ನಡೆಯುತ್ತಿರುವ ಧರಣಿಯಿಂದ ನಾನು ಬೇಕಿದ್ದರೆ ಹಿಂದೆ ಸರಿಯುತ್ತೇನೆ. ನಮ್ಮ ಸಮುದಾಯದವರೇ ಆದ ಸಚಿವರಾದ ಮುರುಗೇಶ ನಿರಾಣಿ ಮತ್ತು ಸಿ.ಸಿ.ಪಾಟೀಲ ಅವರೇ ಸಮುದಾಯಕ್ಕೆ ನ್ಯಾಯ ಕೊಡಿಸಲಿ’ ಎಂದು ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಹೇಳಿದರು.



ಬಸವಜಯ ಮೃತ್ಯುಂಜಯ ಸ್ವಾಮೀಜಿಯವರೊಂದಿಗೆ ಬಸವರಾಜ ಬೊಮ್ಮಾಯಿ, ಸಿ.ಸಿ. ಪಾಟೀಲ ಮಾತುಕತೆ ನಡೆಸಿದರು. ಪಂಚಮಸಾಲಿ ಮುಖಂಡರಾದ ಪ್ರಭಾಕರಗೌಡ, ವಿಜಯಾನಂದ ಕಾಶಪ್ಪನವರ ಇದ್ದರು

‘ಈ ಹೋರಾಟದಲ್ಲಿ ಯಾವುದೇ ರಾಜಕೀಯ ಇಲ್ಲ. ಇದು ಪಕ್ಷಾತೀತ ಹೋರಾಟ.ಇಬ್ಬರು ಸಚಿವರು ಕೂಡ ಸಮಾವೇಶಕ್ಕೆ ಬಂದು ನಂತರ ಏಕೆ ಉಲ್ಟಾ ಹೊಡೆದಿದ್ದಾರೋ ಗೊತ್ತಿಲ್ಲ. ಅವರು ರಾಜಕೀಯ ಹೋರಾಟ ಎನ್ನುವುದನ್ನು ನಿಲ್ಲಿಸಲಿ. ಅವರೇ ಸರ್ಕಾರದೊಂದಿಗೆ ಮಾತನಾಡಿ ನಮ್ಮ ಸಮುದಾಯಕ್ಕೆ ಮೀಸಲಾತಿ ನ್ಯಾಯ ಕೊಡಿಸಲಿ’ ಎಂದರು.

‘ನಾನು ಮಹಾಸಭಾದ ಸ್ವಯಂಘೋಷಿತ ರಾಷ್ಟ್ರೀಯ ಅಧ್ಯಕ್ಷನಲ್ಲ. ಸ್ವಾಮೀಜಿಯವರ ಸಮ್ಮುಖದಲ್ಲೇ 2017ರಲ್ಲಿ ಅಧ್ಯಕ್ಷನಾದವನು’ ಎಂದೂ ಹೇಳಿದರು.

ಶಾಸಕರಾದ ಅರವಿಂದ ಬೆಲ್ಲದ, ಸಿದ್ದು ಸವದಿ, ಮಾಜಿ ಸಂಸದ ಮಂಜುನಾಥ ಕುನ್ನೂರು, ಮಾಜಿ ಶಾಸಕರಾದ ಎಂ.ಪಿ. ನಾಡಗೌಡ, ಎಚ್.ಎಂ. ಚಂದ್ರಶೇಖರಪ್ಪ, ಶಶಿಕಾಂತ ಅಕ್ಕಪ್ಪನಾಯಕ, ರಾಜ್ಯ ಪಂಚಸೇನೆ ಅಧ್ಯಕ್ಷ ಡಾ.ಬಿ.ಎಸ್. ಪಾಟೀಲ, ಮುಖಂಡರಾದ ಡಾ. ವಿಜಯಮಹಾಂತೇಶ ಬಾರಿಗಿಡದ, ವಿಜಯ್ ಪೂಜಾರಿ ಧರಣಿಯಲ್ಲಿ ಪಾಲ್ಗೊಂಡಿದ್ದರು.

ಉತ್ತರ ಪ್ರದೇಶ: ಧಾರ್ಮಿಕ ಮತಾಂತರ ತಡೆ ಮಸೂದೆಗೆ ಒಪ್ಪಿಗೆ

ಲಖನೌ (ಪಿಟಿಐ): ವಿರೋಧಪಕ್ಷಗಳ ಪ್ರತಿಭಟನೆ, ಗದ್ದಲದ ನಡುವೆಯೂ ಉತ್ತರಪ್ರದೇಶದ ವಿಧಾನಸಭೆಯಲ್ಲಿ ಧಾರ್ಮಿಕ ಮತಾಂತರ ತಡೆಯುವ ಮಸೂದೆಗೆ ಬುಧವಾರ ಅನುಮೋದನೆ ದೊರೆತಿದೆ. ಇದನ್ನು ಉಲ್ಲಂಘಿಸಿದರೆ 10 ವರ್ಷದವರೆಗೆ ಜೈಲು ಮತ್ತು ಗರಿಷ್ಠ ₹ 50 ಸಾವಿರ ದಂಡ ವಿಧಿಸಲಾಗುತ್ತದೆ.

ಕಳೆದ ವರ್ಷ ನವೆಂಬರ್‌ನಲ್ಲಿ ಜಾರಿಗೊಳಿಸಲಾಗಿದ್ದ ಸುಗ್ರೀವಾಜ್ಞೆಯ ಬದಲಾಗಿ ‘ಉತ್ತರ ಪ್ರದೇಶ ಕಾನೂನುಬಾಹಿರ ಮತಾಂತರ ಧಾರ್ಮಿಕ ಮಸೂದೆ–2021’ ವಿಧಾನಸಭೆಯಲ್ಲಿ ಮಂಡಿಸಲಾಗಿತ್ತು. ಈ ಮಸೂದೆಯನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಬೇಕು ಎಂದು ಕಾಂಗ್ರೆಸ್ ಮತ್ತು ಬಿಎಸ್‌ಪಿ ಒತ್ತಾಯಿಸಿತ್ತು.

ಈ ಕಾಯ್ದೆ ಅನುಸಾರ, ಮತಾಂತರದ ಉದ್ದೇಶಕ್ಕೆ ವಿವಾಹವಾದರೆ ಅದನ್ನು ಅನೂರ್ಜಿತ ಎಂದು ಘೋಷಿಸಲಾಗುತ್ತದೆ. ಅಲ್ಲದೇ ಮದುವೆಯ ನಂತರ ಧರ್ಮವನ್ನು ಬದಲಾಯಿಸಲು ಬಯಸುವವರು ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಬೇಕಾಗುತ್ತದೆ.

ಸುದ್ದಿ 2 ನಿಮಿಷ

‘ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದವರಿಗೆ ಸವಲತ್ತು ಬೇಡ’


ಮೈಸೂರು: ಆದಿವಾಸಿಗಳಿಗೆ ನೀಡುವ ಸವಲತ್ತುಗಳನ್ನು, ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ ಬುಡಕಟ್ಟು ಜನರಿಗೆ ವಿತರಿಸಬಾರದು ಎಂದು ಸಂಸದ ಪ್ರತಾಪಸಿಂಹ ತಾಕೀತು ಮಾಡಿದರು.

ಮೈಸೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ನಡೆದ ತ್ರೈಮಾಸಿಕ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಸಭೆಯಲ್ಲಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

‘ಕುತ್ತಿಗೆಯಲ್ಲಿ ಶಿಲುಬೆ ಹಾಕಿಕೊಂಡು ಓಡಾಡುವವರನ್ನು ಗುರುತಿಸಬೇಕು. ಅವರಿಗೆ ಸೌಲಭ್ಯ ವಿತರಿಸುತ್ತಿದ್ದರೆ ಕೂಡಲೇ ನಿಲ್ಲಿಸಬೇಕು. ಮೀಸಲಾತಿ ಸೌಲಭ್ಯ ನೀಡಬಾರದು. ಈ ಕುರಿತು ಗಂಭೀರವಾಗಿ ಗಮನ ಹರಿಸಬೇಕು’ ಎಂದು ತಾಕೀತು ಮಾಡಿದರು.

‘ಸರ್ಕಾರ ನೀಡುವ ಎಲ್ಲ ಸವಲತ್ತುಗಳು ಎಲ್ಲ ಹಾಡಿಗಳ ಜನರಿಗೆ ಸಿಕ್ಕಿದ್ದರೆ ಜನರೇಕೆ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದುತ್ತಿದ್ದರು? ಎಲ್ಲವನ್ನೂ ಏಸುಸ್ವಾಮಿ ಕೊಟ್ಟ ಎಂದು ಹೇಳಿಕೊಂಡು ಏಕೆ ಓಡಾಡುತ್ತಿದ್ದರು?’ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಸವರ್ಣೀಯರ ಬೀದಿಗಳ ಕಡೆಗೂ ಗಮನ ಕೊಡಿ: ‘ನರೇಗಾ ಸೇರಿದಂತೆ ಇತರ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ವಾಸವಿರುವ ಕಾಲೊನಿಗಳಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಆದರೆ, ಸವರ್ಣೀಯರು ಇರುವ ಕಾಲೊನಿಗಳಲ್ಲಿ ಅಭಿವೃದ್ಧಿ ಕಾರ್ಯ ನಡೆದಿಲ್ಲ. ಮುಂದಿನ ದಿನಗಳಲ್ಲಿ ಅವರ ಕಾಲೊನಿಗಳಿಗೂ ಆದ್ಯತೆ ನೀಡಿ’ ಎಂದರು.



‘ಕಾಶ್ಮೀರದಲ್ಲಿ ಪರಿಸ್ಥಿತಿ ಸುಧಾರಣೆ’

ನವದೆಹಲಿ (ಪಿಟಿಐ): ‘ಜಮ್ಮು–ಕಾಶ್ಮೀರದಲ್ಲಿ ಪರಿಸ್ಥಿತಿ ಈಗ ಮೊದಲಿಗಿಂತಲೂ ಅಪಾರ ಸುಧಾರಿಸಿದೆ. ಆದರೆ, ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆಯಿಂದ ಇನ್ನೂ ಬೆದರಿಕೆ ಇದೆ’ ಎಂದು ಸೇನಾ ಮುಖ್ಯಸ್ಥ ಎಂ.ಎಂ. ನರವಣೆ ತಿಳಿಸಿದ್ದಾರೆ.

‘ಭಯೋತ್ಪಾದನೆಗೆ ಪಾಕಿಸ್ತಾನ ನಿರಂತರವಾಗಿ ಬೆಂಬಲ ನೀಡುತ್ತಿದೆ. ಗಡಿ ನಿಯಂತ್ರಣ ರೇಖೆಯಾಚೆಗಿನ ಭಯೋತ್ಪಾದಕರ ಚಟುವಟಿಕೆಗಳು ನಡೆಯುತ್ತಿವೆ. ಈ ಭಯೋತ್ಪಾದಕರು ಭಾರತದ ಒಳಗೆ ನುಸುಳಲು ಸದಾ ಪ್ರಯತ್ನಿಸುತ್ತಿದ್ದಾರೆ’ ಎಂದು ತಿಳಿಸಿದ್ದಾರೆ.

ವಿವೇಕಾನಂದ ಅಂತರರಾಷ್ಟ್ರೀಯ ಪ್ರತಿಷ್ಠಾನ ಬುಧವಾರ ಆಯೋಜಿಸಿದ್ದ ವೆಬಿನಾರ್‌ನಲ್ಲಿ ಮಾತನಾಡಿದ ಅವರು, ‘ಇತ್ಯರ್ಥವಾಗದ ಗಡಿ ವಿಷಯ ಮತ್ತು ಹಿಂಸಾಚಾರದಿಂದ ಯಾರಿಗೂ ಉಪಯೋಗವಾಗುವುದಿಲ್ಲ. ಗಡಿ ಪ್ರದೇಶದಲ್ಲಿ ನಾವು ಸದಾ ಶಾಂತಿ ಬಯಸುತ್ತೇವೆ’ ಎಂದು ಹೇಳಿದ್ದಾರೆ.

‘ಜಮ್ಮು ಮತ್ತು ಕಾಶ್ಮೀರದಲ್ಲಿ ಈಗ ಭಯೋತ್ಪಾದನೆ ಕೃತ್ಯಗಳು ಕಡಿಮೆಯಾಗಿವೆ. ಗಡಿ ನಿಯಂತ್ರಣ ರೇಖೆಯಲ್ಲಿ ಭಯೋತ್ಪಾದಕರು ನುಸುಳುವುದು ಸಹ ಅತಿ ಕಡಿಮೆಯಾಗಿದೆ. ಕಲ್ಲು ತೂರಾಟ ಮತ್ತು ಸುಧಾರಿತ ಸ್ಫೋಟಕಗಳ ದಾಳಿಗಳು ಸಹ ಇತ್ತೀಚೆಗೆ ನಡೆದಿಲ್ಲ’ ಎಂದು ಹೇಳಿದರು.

ಹಳೆ ವಿಮಾನ ನಿಲ್ದಾಣ ರಸ್ತೆ ಸಿಗ್ನಲ್ ಮುಕ್ತ ಕಾರಿಡಾರ್– ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ವೀಕ್ಷಣೆ

ಕಾಮಗಾರಿ ಪೂರ್ಣಗೊಳಿಸಲು ಸೆಪ್ಟೆಂಬರ್ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆ ವಿಮಾನ ನಿಲ್ದಾಣ ರಸ್ತೆಯನ್ನು ಸಿಗ್ನಲ್‌ರಹಿತ ಕಾರಿಡಾರ್ ಆಗಿ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಬುಧವಾರ ಪರಿಶೀಲಿಸಿದರು.

ಈ ಯೋಜನೆಯಡಿ ವಿಂಡ್ ಟನಲ್ ರಸ್ತೆ ಜಂಕ್ಷನ್, ಸುರಂಜನ್‌ದಾಸ್ ಜಂಕ್ಷನ್ ಮತ್ತು ಕುಂದಲಹಳ್ಳಿ ಜಂಕ್ಷನ್‌ಗಳಲ್ಲಿ ಕೆಳಸೇತುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಮೂರೂ ಕಾಮಗಾರಿಗಳ ತಪಾಸಣೆ ನಡೆಸಿದ ಆಡಳಿತಾಧಿಕಾರಿ, ಈ ಯೋಜನೆಯನ್ನು 2021ರ ಸೆಪ್ಟೆಂಬರ್ ಒಳಗೆ ಪೂರ್ಣಗೊಳಿಸಬೇಕು ಎಂದು ಗಡುವು ವಿಧಿಸಿದರು.

ವಿಂಡ್ ಟನಲ್ ರಸ್ತೆ ಜಂಕ್ಷನ್: ವಿಂಡ್‌ಟನಲ್ ಜಂಕ್ಷನ್ ಕೆಳಸೇತುವೆ ನಿರ್ಮಾಣಕ್ಕಾಗಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮತ್ತು ನ್ಯಾಷನಲ್ ಏರೊನಾಟಿಕಲ್ ಲಿಮಿಟೆಡ್ (ಎನ್‌ಎಎಲ್) ಸಂಸ್ಥೆಗೆ ಸೇರಿದ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಒಂದು ಭಾಗದಲ್ಲಿ ಕೆಳಸೇತುವೆಯ ತಡೆಗೋಡೆ ಕಾಮಗಾರಿ ಪೂರ್ಣಗೊಂಡಿದೆ.



ವಿಂಡ್ ಟನೆಲ್ ಜಂಕ್ಷನ್ ಬಳಿ ನಡೆಯುತ್ತಿರುವ ಕೆಳಸೇತುವೆ ಕಾಮಗಾರಿಯನ್ನು ಗೌರವ್ ಗುಪ್ತ ಪರಿಶೀಲಿಸಿದರು. ಎಂ.ಆರ್.ವೆಂಕಟೇಶ್, ಮನೋಜ್ ಜೈನ್ ಹಾಗೂ ಇತರರು ಇದ್ದಾರೆ

‘ರಸ್ತೆಯ ಇನ್ನೊಂದು ಭಾಗದಲ್ಲಿ ವಾಹನ ಸಂಚಾರಕ್ಕೆ ಬದಲಿ ಮಾರ್ಗ ಗುರುತಿಸಿ, ತಡೆಗೋಡೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಬೇಕು. ಕಾಂಕ್ರೀಟ್ ಬಾಕ್ಸ್ ಅನ್ನು ಮೊದಲೇ ಸಿದ್ಧಪಡಿಸಿ ಸ್ಥಳಕ್ಕೆ ತಂದು ಜೋಡಿಸುವ ತಂತ್ರಜ್ಞಾನ ಬಳಸಿ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು’ ಎಂದು ಗೌರವ್ ಗುಪ್ತ ಸೂಚಿಸಿದರು.

ಸುರಂಜನ್ ದಾಸ್ ಜಂಕ್ಷನ್: ಸುರಂಜನ್ ದಾಸ್ ಜಂಕ್ಷನ್‌ನ ಕೆಳ ಸೇತುವೆಯಲ್ಲಿ ಮಾರತಹಳ್ಳಿ ಕಡೆಯಿಂದ ನಗರದತ್ತ ಬರುವ ಮಾರ್ಗದ ತಡೆಗೋಡೆ ಕಾಮಗಾರಿ ಪೂರ್ಣಗೊಂಡಿದೆ. ಮತ್ತೊಂದು ಭಾಗದಲ್ಲಿ ಕೆಲವು ಮರಗಳ ಸ್ಥಳಾಂತರ ಮಾಡಬೇಕಿದೆ. ಮರಗಳನ್ನು ಬೇರೆಡೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ ರಂಗನಾಥ ಸ್ವಾಮಿ ಅವರಿಗೆ ಆಡಳಿತಾಧಿಕಾರಿ ಸೂಚನೆ ನೀಡಿದರು. ಇನ್ನೊಂದು ಬದಿಯ ತಡೆಗೋಡೆ ಕಾಮಗಾರಿಯನ್ನು ಶೀಘ್ರವೇ ಕೈಗೆತ್ತಿಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಕುಂದಲಹಳ್ಳಿ ಜಂಕ್ಷನ್: ಕುಂದಲಹಳ್ಳಿ ಜಂಕ್ಷನ್ ಬಳಿಯ ಕೆಳಸೇತುವೆ ಕಾಮಗಾರಿಯ ಎರಡೂ ಬದಿಯ ತಡೆಗೋಡೆ ಕಾಮಗಾರಿಗಳು ಪೂರ್ಣಗೊಂಡಿವೆ. ಇಲ್ಲಿ ಸರ್ವೀಸ್ ರಸ್ತೆ ಕಾಮಗಾರಿ ಅನುಷ್ಠಾನಕ್ಕೆ ಇನ್ನೂ 27 ಸ್ವತ್ತುಗಳ ಭೂಸ್ವಾಧೀನ ಮಾಡಬೇಕಿದೆ. ಇವುಗಳ ಭೂಸ್ವಾಧೀನಕ್ಕೆ ಅನುಮತಿ ದೊರೆತಿದೆ. 10 ದಿನಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳಲಿದ್ದು, ಕಾಮಗಾರಿ ನಡೆಸಲು ಬಳಿಕ ಯಾವುದೇ ಅಡ್ಡಿ ಇಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಈ ಕಾಮಗಾರಿಯನ್ನು ಇದೇ ವರ್ಷದ ಜೂನ್ ಒಳಗೆ ಪೂರ್ಣಗೊಳಿಸುವಂತೆ ಆಡಳಿತಾಧಿಕಾರಿ ಸೂಚಿಸಿದರು. ವಿಶೇಷ ಆಯುಕ್ತ (ಯೋಜನೆ) ಮನೋಜ್ ಜೈನ್, ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಎಂ.ಆರ್.ವೆಂಕಟೇಶ್, ಸೂಪರಿಂಟೆಂಡಿಂಗ್ ಎಂಜಿನಿಯರ್ ಲೋಕೇಶ್ ಜೊತೆಯಲ್ಲಿದ್ದರು.



ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಸಚಿವ ಅರವಿಂದ ಲಿಂಬಾವಳಿ ಸನ್ಮಾನಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಅಭಿನಂದನೆ

ಪ್ರಜಾವಾಣಿ ವಾರ್ತೆ

ಕೆ.ಆರ್. ಪುರ: ರಾಜ್ಯದಲ್ಲಿ ಬಿಜೆಪಿ ಸರ್ಕಾರದ ದಕ್ಷ ಆಡಳಿತಕ್ಕೆ ಸಾಕ್ಷಿಯಾಗಿ ಕ್ಷೇತ್ರದ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಜಯ ಗಳಿಸಿದ್ದಾರೆ ಎಂದು ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

ಕೆ.ಆರ್.ಪುರ ಸಮೀಪದ ಕಾಟಂನಲ್ಲೂರಿನಲ್ಲಿ ಹಮ್ಮಿಕೊಂಡಿದ್ದ ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಿಜೆಪಿ ಗ್ರಾಮಾಂತರ ಘಟಕದ ಅಧ್ಯಕ್ಷ ನಟರಾಜು, ಮುಖಂಡರಾದ ರಾಜಾರೆಡ್ಡಿ, ಜಯಚಂದ್ರಾರೆಡ್ಡಿ, ಪಾಪಣ್ಣ, ಬಿಳಿಶಿವಾಲೆ ಆನಂದ್, ಜಿಲ್ಲಾ ಪಂಚಾಯತಿ ಸದಸ್ಯ ಗಣೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಎಸ್. ಎಲ್. ಎನ್. ಮಂಜುನಾಥ್, ಕಣ್ಣೂರು ಅಶೋಕ್, ರಾಂಪುರ ವೇಣುಗೋಪಾಲ್, ಮಂಜುಳಾ ವಿ.ನಾಗರಾಜ್,ಕೆ.ವಿ.ನಾಗರಾಜ್ ಇದ್ದರು.

‘ನಿಯಮಿತ ರಕ್ತದಾನ, ಆರೋಗ್ಯಕ್ಕೆ ವರದಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಕ್ತವನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲ. ಮಾನವೀಯ ದೃಷ್ಟಿಯಿಂದ ಪ್ರತಿಯೊಬ್ಬರೂ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು’ ಎಂದು ದಿ ಆಕ್ಸ್‌ಫರ್ಡ್ ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಡಾ. ಆರ್. ಕಾವ್ಯಶ್ರೀ ಹೇಳಿದರು.

ಕಾಲೇಜಿನ ಎನ್‌ಎಸ್‌ಎಸ್ ಘಟಕ, ದಿ ಆಕ್ಸ್‌ಫರ್ಡ್ ಆಸ್ಪತ್ರೆ ಹಾಗೂ ನಾರಾಯಣ ಹೃದಯಾಲಯದ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ರಕ್ತದಾನ ಶಿಬಿರದಲ್ಲಿ ಮಾತನಾಡಿದ ಅವರು, ‘ರಕ್ತದಾನ ಮಹಾದಾನ. ನಿಯಮಿತವಾಗಿ ರಕ್ತದಾನ ಮಾಡುವುದರಿಂದ ನಮ್ಮ ಆರೋಗ್ಯ ವೃದ್ಧಿಯಾಗುವುದರ ಜೊತೆಗೆ ಬೇರೆಯವರ ಜೀವವನ್ನೂ ಉಳಿಸಬಹುದು’ ಎಂದು ಹೇಳಿದರು.

ಎನ್.ಎಸ್.ಎಸ್ ಘಟಕದ ಕಾರ್ಯಕ್ರಮಾಧಿಕಾರಿ ಎನ್. ಮರಿಸ್ವಾಮಿ. ಡಾ. ಗಿರೀಶ್ ಸಿ.ಜೆ ಮತ್ತು ಎನ್‌ಎಸ್‌ಎಸ್ ಸ್ವಯಂ ಸೇವಕರು ಭಾಗಿಯಾಗಿದ್ದರು.

ಮದುವೆಗಳಲ್ಲಿ ಮಾರ್ಷಲ್‌ಗಳಿಂದ ಆರೋಗ್ಯ ಪಾಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹಮ್ಮಿಕೊಳ್ಳುವ ಮದುವೆ ಮತ್ತಿತರ ಸಮಾರಂಭಗಳಲ್ಲಿ ಕೋವಿಡ್ ನಿಯಂತ್ರಣ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸುವ ಕಾರ್ಯವನ್ನು ಬಿಬಿಎಂಪಿ ನಿಯೋಜಿಸಿರುವ ಮಾರ್ಷಲ್‌ಗಳು ಬುಧವಾರದಿಂದಲೇ ಆರಂಭಿಸಿದ್ದಾರೆ.

ವಿವಿಧ ವಲಯಗಳಲ್ಲಿ ಮಾರ್ಷಲ್‌ಗಳ ಒಟ್ಟು 20 ತಂಡಗಳು ಮದುವೆ ಹಾಗೂ ಇನ್ನಿತರ ಸಮಾರಂಭಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದವು.

‘ಒಟ್ಟು 66 ಮಾರ್ಷಲ್‌ಗಳು ಬುಧವಾರ ವಿವಿಧ ಸಮಾರಂಭಗಳಿಗೆ ಭೇಟಿ ನೀಡಿ ಕೋವಿಡ್ ನಿಯಂತ್ರಣದ ಸಲುವಾಗಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ತಿಳಿ ಹೇಳಿದ್ದಾರೆ. ಅವರು ಭೇಟಿ ನೀಡಿದ ಬಹುತೇಕ ಎಲ್ಲ ಕಡೆ ಕೋವಿಡ್ ಸೋಂಕು ತಡೆಗಟ್ಟಲು ಬಿಬಿಎಂಪಿ ಸೂಚಿಸಿರುವ ನಿಯಮಗಳನ್ನು ಪಾಲನೆ ಮಾಡುತ್ತಿರುವುದು ಕಂಡು ಬಂದಿದೆ. ಎಲ್ಲೂ ಯಾರಿಗೂ ದಂಡ ವಿಧಿಸುವ ಪ್ರಮೇಯ ಎದುರಾಗಿಲ್ಲ’ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ‘ಪ್ರಜಾವಾಣಿ’ಗೆ ತಿಳಿಸಿದರು.



ಬಾಣಸವಾಡಿ ಮುಖ್ಯರಸ್ತೆಯ ಬಳಿಯ ರೇಣುಕಾ ಕಲ್ಯಾಣ ಮಂಟಪದಲ್ಲಿ ಬುಧವಾರ ಏರ್ಪಡಿಸಿದ್ದ ಮದುವೆ ಸಮಾರಂಭಕ್ಕೆ ಭೇಟಿ ನೀಡಿದ ಮಾರ್ಷಲ್‌ಗಳು ಕೋವಿಡ್ ನಿಯಂತ್ರಣಕ್ಕಾಗಿ ವಹಿಸಬೇಕಾದ ಮುನ್ನೆಚ್ಚರಿಕೆಗಳ ಬಗ್ಗೆ ಮಾಹಿತಿ ನೀಡಿದರು

‘ಗುರುವಾರವೂ ನಗರದಲ್ಲಿ ನಡೆಯುವ ಎಲ್ಲ ಸಮಾರಂಭಗಳಿಗೆ ಮಾರ್ಷಲ್‌ಗಳು ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ’ ಎಂದರು.

‘ಸಮಾರಂಭಗಳಿಗೆ ನೂರಾರು ಮಂದಿ ಭೇಟಿ ನೀಡುತ್ತಾರೆ. ಅವರಲ್ಲಿ ಒಬ್ಬರು ಕೋವಿಡ್ ಸೋಂಕು ಹೊಂದಿದ್ದರೂ ಅಪಾಯಕಾರಿ. ಸರಿಯಾದ ನಿಯಂತ್ರಣ ಕ್ರಮ ಅನುಸರಿಸದೇ ಹೋದರೆ ಒಬ್ಬರಿಂದ ನೂರಾರು ಮಂದಿಗೆ ಸೋಂಕು ಹರಡುವ ಸಾಧ್ಯತೆ ಇದೆ. ಹಾಗಾಗಿ ಸಮಾರಂಭಗಳಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಪರಸ್ಪರ ಎರಡು ಮೀಟರ್ ಅಂತರ ಕಾಪಾಡಬೇಕು. ಗುಂಪುಗೂಡುವುದನ್ನು ತಪ್ಪಿಸಬೇಕು’ ಎಂದು ಆಯುಕ್ತರು ತಿಳಿಸಿದರು.

ಚಿತ್ರಾವಳಿ



ದಿನ ಬಳಕೆ ವಸ್ತುಗಳು ಹಾಗೂ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಮತ್ತು ಪಕ್ಷದ ಬೆಂಗಳೂರು ಮಹಾನಗರ ಘಟಕದ ಸದಸ್ಯರು ನಗರದ ಮೌರ್ಯ ವೃತ್ತದಲ್ಲಿ ಬುಧವಾರ ಪ್ರತಿಭಟನೆ ಮಾಡಿದರು



ದಿನ ಬಳಕೆ ವಸ್ತುಗಳು ಹಾಗೂ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ಆಮ್ ಆದ್ಮಿ ಪಕ್ಷದ ಸದಸ್ಯರು ನಗರದಲ್ಲಿ ಪ್ರತಿಭಟನೆ ನಡೆಸಿದರು



ಯಲಹಂಕ ಕೆರೆಯ ಆವರಣದಲ್ಲಿರುವ ಕರಗ ಮಂಟಪದ ಕಲ್ಯಾಣಿ ಮೆಟ್ಟಿಲುಗಳಿಗೆ ಗ್ರ್ಯಾನೈಟ್ ಮತ್ತು ಕಲ್ಯಾಣಿ ಸುತ್ತಲೂ ಕಬ್ಬಿಣದ ಸರಳು ಅಳವಡಿಸುವ ₹1 ಕೋಟಿ ವೆಚ್ಚದ ಕಾಮಗಾರಿಗೆ ಶಾಸಕ ಎಸ್.ಆರ್.ವಿಶ್ವನಾಥ್ ಚಾಲನೆ ನೀಡಿದರು. ನಂತರ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು.

‘ಮಹಿಳಾ ನಾಯಕತ್ವ ಅಗತ್ಯ’

ಯಲಹಂಕ: ’ಮಹಿಳಾ ನಾಯಕತ್ವ ಬೆಳೆಯುವುದು ಇಂದಿನ ಅಗತ್ಯವಾಗಿದ್ದು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಬೇಕು. ಈ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷವು ಎಲ್ಲ ರೀತಿಯ ಪ್ರೋತ್ಸಾಹ ಮತ್ತು ಸೂಕ್ತ ಸ್ಥಾನಮಾನಗಳನ್ನು ನೀಡಲಿದೆ‘ ಎಂದು ಶಾಸಕ ಕೃಷ್ಣಬೈರೇಗೌಡ ಹೇಳಿದರು.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಮಹಿಳಾ ಕಾಂಗ್ರೆಸ್ ಸಮಿತಿಯನ್ನು ರಚಿಸಲು ಹಾಗೂ ಮಹಿಳಾ ಸಾಧಕಿಯರನ್ನು ಗುರುತಿಸುವ ಸಲುವಾಗಿ ಸಹಕಾರ ನಗರದಲ್ಲಿ ಆಯೋಜಿಸಿದ್ದ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

’ಹಿಂದಿನಿಂದಲೂ ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರದಲ್ಲಿ ಆಡಳಿತದ ಅವಧಿಯಲ್ಲಿ ಮಹಿಳೆಯರಿಗೆ ಉನ್ನತ ಹುದ್ದೆಗಳನ್ನು ನೀಡುತ್ತಾ ಬಂದಿದೆ. ಮುಂದೆಯೂ ಸಹ ಅಗತ್ಯ ಸಹಕಾರ ಮತ್ತು ಸ್ಥಾನಮಾನಗಳನ್ನು ನೀಡಲಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು‘ ಎಂದರು.

ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಎನ್.ಎನ್.ಶ್ರೀನಿವಾಸಯ್ಯ, ಬಿ.ಕೆ.ಮಂಜುನಾಥಗೌಡ, ವಿ.ವಿ. ಪಾರ್ತಿಬರಾಜನ್, ಶುಕೂರ್ ಅಹಮದ್, ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಮಹಿಳಾ ಕಾಂಗ್ರೆಸ್ ಮುಖಂಡರಾದ ಸುಷ್ಮಾ ಮುನಿರಾಜು, ಜ್ಯೋತಿ ಕಲ್ಲೇಶ್, ಹಂಸವೇಣಿ ಮಂಜುನಾಥ್, ಮಂಗಳಾ, ಶಾಂತಾ ಇದ್ದರು.



ಸಭೆಯನ್ನು ಉದ್ದೇಶಿಸಿ ಕೃಷ್ಣಬೈರೇಗೌಡ ಮಾತನಾಡಿದರು

ಬಿ.ಎಸ್.ನಾರಾಯಣ ಅಂತರಕಾಲೇಜು ಉದ್ಯೋಗಿಗಳ ಕ್ರೀಡಾಕೂಟ

ವಾಲಿಬಾಲ್: ಬಿಎಂಎಸ್‌ಐಟಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಯಲಹಂಕ: ಬಿಎಂಎಸ್ ಶಿಕ್ಷಣ ಸಂಸ್ಥೆಯು ಆಯೋಜಿಸಿದ್ದ ಬಿ.ಎಸ್. ನಾರಾಯಣ ಅಂತರಕಾಲೇಜು ಉದ್ಯೋಗಿಗಳ ಕ್ರೀಡಾಕೂಟವನ್ನು ಸಂಸ್ಥೆಯ ನಿರ್ದೇಶಕ ಡಾ.ಎ.ಶ್ರೀನಿವಾಸನ್ ಉದ್ಘಾಟಿಸಿದರು.

ಕ್ರೀಡಾಕೂಟದಲ್ಲಿ ಬೋಧಕರು ಮತ್ತು ಬೋಧಕೇತರ ಸಿಬ್ಬಂದಿಯನ್ನು ಒಳಗೊಂಡಂತೆ 42 ತಂಡಗಳು ಭಾಗವಹಿಸಿದ್ದವು.

ಈ ವೇಳೆ ಮಾತನಾಡಿದ ಶ್ರೀನಿವಾಸನ್, ’ತಾಂತ್ರಿಕ ಮತ್ತು ಎಂಜಿನಿಯರಿಂಗ್ ಶಿಕ್ಷಣಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳಲ್ಲಿ ಕ್ರೀಡಾ ಮತ್ತು ಆರೋಗ್ಯದ ಕುರಿತು ಅರಿವುಮೂಡಿಸುವ ಸಲುವಾಗಿ ಈ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ‘ ಎಂದು ಹೇಳಿದರು.

ಬಿಎಂಎಸ್ ಪ್ರಾಂಶುಪಾಲ ಡಾ.ಬಿ.ವಿ.ರವಿಶಂಕರ್, ಉಪಪ್ರಾಂಶುಪಾಲ ಡಾ.ಎಸ್.ಮುರಳೀಧರ್, ದೈಹಿಕಶಿಕ್ಷಣ ನಿರ್ದೇಶಕ ಡಾ.ಎಂ.ಶಿವರಾಮರೆಡ್ಡಿ ಉಪಸ್ಥಿತರಿದ್ದರು.



ವಾಲಿಬಾಲ್ ಪಂದ್ಯದಲ್ಲಿ ಪ್ರಶಸ್ತಿ ಗಳಿಸಿದ ಬಿಎಂಎಸ್ ಐಟಿ ತಂಡ

ಬಹುಮಾನ: ವಾಲಿಬಾಲ್ ಪುರುಷರ ವಿಭಾಗದಲ್ಲಿ ಬಿಎಂಎಸ್ ಐಟಿ ತಂಡವು ಪ್ರಶಸ್ತಿ ಗೆದ್ದುಕೊಂಡಿತು. ಏಟ್ರಿಯಾ ತಾಂತ್ರಿಕ ಶಿಕ್ಷಣ ಸಂಸ್ಥೆಯು ದ್ವಿತೀಯ ಸ್ಥಾನ ಗಳಿಸಿತು.

ಮಹಿಳೆಯರ ಥ್ರೋಬಾಲ್ ಪಂದ್ಯದಲ್ಲಿ ಬಿಎಂಎಸ್ ಮಹಿಳಾ ಕಾಲೇಜು ತಂಡ ಪ್ರಥಮ ಹಾಗೂ ಸೇಂಟ್ ಜೋಸೆಫ್ ಕಾಲೇಜು ತಂಡ ದ್ವಿತೀಯ ಸ್ಥಾನ ಗಳಿಸಿತು. ಬ್ಯಾಡ್ಮಿಂಟನ್ ಪಂದ್ಯದಲ್ಲಿ ಬಿಎಂಎಸ್ ಮಹಿಳಾ ಕಾಲೇಜು ಮತ್ತು ಸಿಂಧಿ ಕಾಲೇಜು ತಂಡಗಳು ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದವು.

ಬಸವಕಲ್ಯಾಣ: 18 ಮಂದಿ ಬಿಜೆಪಿ ಟಿಕೆಟ್ ಆಕಾಂಕ್ಷಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವಕಲ್ಯಾಣ ವಿಧಾನಸಭಾ ಕ್ಷೇತ್ರಕ್ಕೆ ನಡೆಯಲಿರುವ ಉಪಚುನಾವಣೆ ಅಭ್ಯರ್ಥಿ ಆಯ್ಕೆಗೆ ಸಂಬಂಧಿಸಿದಂತೆ ಬಿಜೆಪಿ ಟಿಕೆಟ್ ಆಕಾಂಕ್ಷಿಗಳ ಸಭೆಯನ್ನು ಕ್ಷೇತ್ರದ ಚುನಾವಣಾ ಉಸ್ತುವಾರಿಯೂ ಆಗಿರುವ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಬುಧವಾರ ಇಲ್ಲಿ ಸಭೆ ನಡೆಸಿದರು.

ಬಿಜೆಪಿ ಟಿಕೆಟ್ ಬಯಸಿರುವ 18 ಕ್ಕೂ ಹೆಚ್ಚು ಆಕಾಂಕ್ಷಿಗಳು ಈ ಸಭೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯ ಹಂಚಿಕೊಂಡರು. ಉಪಚುನಾವಣೆಯಲ್ಲಿ ಅಭ್ಯರ್ಥಿಯನ್ನು ಗೆಲ್ಲಿಸುವ ರಣತಂತ್ರದ ಕುರಿತು ಚರ್ಚೆ ನಡೆಯಿತು.

ಟಿಕೆಟ್ ಆಕಾಂಕ್ಷಿಗಳ ವಿವರಗಳನ್ನು ಪಕ್ಷದ ವರಿಷ್ಠರಿಗೆ ಕಳಿಸಲಾಗುವುದು. ಅಂತಿಮ ತೀರ್ಮಾನವನ್ನು ಪಕ್ಷದ ವರಿಷ್ಠರೇ ಕೈಗೊಳ್ಳುತ್ತಾರೆ. ಅವರು ಯಾವುದೇ ತೀರ್ಮಾನ ಕೈಗೊಂಡರೂ ಸಹ ಎಲ್ಲರೂ ಸಹಮತದಿಂದ ಮತ್ತು ಒಗ್ಗಟ್ಟಿನಿಂದ ವರಿಷ್ಠರು ಸೂಚಿಸುವ ಅಭ್ಯರ್ಥಿಯ ಗೆಲುವಿಗೆ ಸಮರೋಪಾದಿಯಲ್ಲಿ ಶ್ರಮಿಸುವುದು ಅಗತ್ಯ ಎಂದು ಲಕ್ಷ್ಮಣ ಸವದಿ ಹೇಳಿದರು.

‘ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಭಾರಿ ಬಹುಮತದಿಂದ ಗೆಲ್ಲಿಸುವುದು ನಮ್ಮ ಕರ್ತವ್ಯ. ಆದ್ದರಿಂದ ಯಾವುದೇ ಭಿನ್ನಾಭಿಪ್ರಾಯಗಳನ್ನು ಇಟ್ಟುಕೊಳ್ಳದೇ ಪಕ್ಷದ ಹಿತದೃಷ್ಟಿಯಿಂದ ಒಟ್ಟಾಗಿ ಕೆಲಸ ಮಾಡಬೇಕು’ ಎಂದು ಸವದಿ ಮನವಿ ಮಾಡಿದರು.

ಸಚಿವರಾದ ಪ್ರಭು ಚವ್ಹಾಣ, ವಿ.ಸೋಮಣ್ಣ, ಬೀದರ್ ಸಂಸದ ಭಗವಂತ ಖೂಬಾ, ಬಿಜೆಪಿ ಉಪಾಧ್ಯಕ್ಷ ಮಾಲೀಕಯ್ಯ ಗುತ್ತೇದಾರ್, ಶಾಸಕ ರಾಜಕುಮಾರ್ ಪಾಟೀಲ ತೇಲ್ಕೂರ್ ಸಭೆಯಲ್ಲಿ ಭಾಗವಹಿಸಿದ್ದರು.

‘ಯಾರನ್ನೂ ಭೇಟಿಯಾಗಿಲ್ಲ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ನಾನು ದೆಹಲಿಗೆ ತೆರಳಿದ್ದು ನಿಜ. ಆದರೆ ನಾಯಕರನ್ನು ಭೇಟಿಯಾಗಿಲ್ಲ’ ಎಂದು ಸಚಿವ ಮುರುಗೇಶ್ ನಿರಾಣಿ ಸ್ಪಷ್ಟಪಡಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವೈಯಕ್ತಿಕ ಕೆಲಸ ಮತ್ತು ಇಲಾಖೆಯ ಕೆಲಸದ ನಿಮಿತ್ತ ದೆಹಲಿಗೆ ಹೋಗಿದ್ದೆ. ಇದರ ಹೊರತು ದೆಹಲಿಗೆ ಯಾವುದೇ ರಾಷ್ಟ್ರೀಯ ನಾಯಕರು ನನ್ನನ್ನು ಕರೆಸಿಲ್ಲ. ನಾನು ಯಾರನ್ನೂ ಭೇಟಿಯೂ ಆಗಿಲ್ಲ’ ಎಂದು ಹೇಳಿದರು.

ಸಂಸದೀಯ ಮೌಲ್ಯಗಳ ಕುಸಿತ ತಡೆಗಟ್ಟಲು ಆತ್ಮಾವಲೋಕನ ಸಭೆ

ಮೌಲ್ಯ ಮರೆತರೆ ಅರಾಜಕತೆ: ಕಾಗೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೌಲ್ಯಗಳನ್ನು ಮರೆತರೆ ಮುಂದೊಂದು ದಿನ ಅರಾಜಕತೆ ಎದುರಾಗಬಹುದು. ಅಂಥ ಪರಿಸ್ಥಿತಿ ಬರುವುದನ್ನು ತಡೆಯಬೇಕು ಎಂದು ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಕಾಮನ್‌ವೆಲ್ತ್ ಸಂಸದೀಯ ಸಂಘದ ಕರ್ನಾಟಕ ಶಾಖೆಯ ವತಿಯಿಂದ 'ಸಂಸದೀಯ ಮೌಲ್ಯಗಳ ಕುಸಿತ ತಡೆಗಟ್ಟಲು ಒಂದು ಆತ್ಮಾವಲೋಕನ' ಕುರಿತು ಬುಧವಾರ ಇಲ್ಲಿ ನಡೆದ ಸಭೆಯಲ್ಲಿ ಮಾತನಾಡಿದರು.

'ಮೌಲ್ಯಗಳನ್ನು ಉಳಿಸಿಕೊಳ್ಳುವ ಬಗ್ಗೆ ವಿಶ್ವಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿವೆ. ಹೀಗಾಗಿ, ಸಂಸದೀಯ ವ್ಯವಸ್ಥೆ ಹೇಗಿರಬೇಕು ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಲು ಈ ಸಭೆ ಆಯೋಜಿಸಲಾಗಿದೆ' ಎಂದರು.

'ಜನಪ್ರತಿನಿಧಿಗಳು ಜನರ ಧ್ವನಿಯಾಗಬೇಕು. ವ್ಯವಸ್ಥೆಯ ಸುಳಿ ಆಗಬಾರದು. ಸಂವಿಧಾನದ ಚೌಕಟ್ಟಿನಲ್ಲಿ ಆಡಳಿತ ನಡೆಸುವ ವಿಚಾರದಲ್ಲಿ ರಾಜ್ಯ ಮೇಲ್ಪಂಕ್ತಿ ಆಗಬೇಕು' ಎಂದೂ ಅವರು ಹೇಳಿದರು.

ಚಿಂತಕ ಗುರುರಾಜ ಕರಜಗಿ ಮಾತನಾಡಿ, 'ಇವತ್ತಿನ ಮೌಲ್ಯಗಳ ಬಗ್ಗೆ ನಮಗೆ ಬೇಸರವಿದೆ. ಜನಪ್ರತಿನಿಧಿಗಳು ಜನರಿಗೆ ಮಾದರಿಯಾಗಬೇಕು. ಆದರೆ, ಇವತ್ತಿನ ಸನ್ನಿವೇಶ ಹಾಗಿಲ್ಲ. ಜನರನ್ನು ಯಾವಾಗಲೂ ಹಿಡಿದಿಡಲು ಸಾಧ್ಯವಿಲ್ಲ. ಅವರ ಆಕ್ರೋಶದ ಕಟ್ಟೆ ಯಾವಾಗ ಬೇಕಾದರೂ ಒಡೆಯಬಹುದು. ಇದನ್ನು ಜನಪ್ರತಿನಿಧಿಗಳು ಅರ್ಥ ಮಾಡಿಕೊಳ್ಳಬೇಕು' ಎಂದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್. ಆರ್. ಪಾಟೀಲ, ಸಚಿವರಾದ ಜಗದೀಶ ಶೆಟ್ಟರ್, ಅರವಿಂದ ಲಿಂಬಾವಳಿ, ಮಾಜಿ ಸಭಾಪತಿ ಡಿ.ಎಚ್. ಶಂಕರಮೂರ್ತಿ, ಶಾಸಕರಾದ ಡಿ.ಕೆ. ಶಿವಕುಮಾರ್, ಎಚ್.ಕೆ. ಪಾಟೀಲ, ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ಕೆ.ಆರ್. ರಮೇಶ್ ಕುಮಾರ್, ಬೋಪಯ್ಯ, ಎಚ್. ವಿಶ್ವನಾಥ್, ಸಂಸದ ಶಿವಕುಮಾರ್ ಉದಾಸಿ ಹಾಗೂ ಸಂಸದರು, ಶಾಸಕರು, ವಿವಿಧ ಕ್ಷೇತ್ರಗಳ ಪ್ರಮುಖರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.


ಸಂಸದೀಯ ಮೌಲ್ಯಗಳ ಕುಸಿತ ತಡೆಗಟ್ಟುವ ಕುರಿತ ಆತ್ಮಾವಲೋಕನ ಸಭೆಯಲ್ಲಿ ಬಿ.ಎಸ್. ಯಡಿಯೂರಪ್ಪ, ವಿಶ್ವೇಶ್ವರ ಹೆಗಡೆ ಕಾಗೇರಿ, ಬಸವರಾಜ ಹೊರಟ್ಟಿ, ಸಿದ್ದರಾಮಯ್ಯ, ಎಸ್.ಆರ್ ಪಾಟೀಲ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ವ್ಯಾಪಾರವಾಗಿರುವ ಚುನಾವಣೆ: ಸಿದ್ದರಾಮಯ್ಯ

ಚುನಾವಣಾ ವ್ಯವಸ್ಥೆ ಬದಲಾಗದ ಹೊರತು ಸಂವಿಧಾನದ ಮೌಲ್ಯಗಳ ಕುಸಿತ ತಡೆಯಲು ಸಾಧ್ಯವಿಲ್ಲ ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಹಿಂದೆ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಮತದಾರರೇ ಹಣ ಕೊಟ್ಟು ಹರಸುತ್ತಿದ್ದರು. ಈಗ ಮತ ಕೇಳಬೇಕಾದರೆ ಹಣ ಕೊಡಲೇಬೇಕು. ಕ್ರಿಮಿನಲ್‌ಗಳು, ಶ್ರೀಮಂತರು, ಹೊಡಿ–ಬಡಿ ಸಂಸ್ಕೃತಿಯವರು ಚುನಾವಣಾ ಕಣಕ್ಕೆ ಇಳಿಯುತ್ತಿದ್ದಾರೆ. ಚುನಾವಣೆ ಎಂದರೆ ವ್ಯಾಪಾರ, ಹರಾಜು ಎನ್ನುವಂತಾಗಿದೆ. ಚುನಾವಣಾ ವ್ಯವಸ್ಥೆ ದಿಕ್ಕಾಪಾಲಾಗಿದೆ. ಮಾಧ್ಯಮದವರಂತೂ ಉದ್ಯಮಿ, ಪತ್ರಕರ್ತ, ರಾಜಕಾರಣಿ ಹೀಗೆ ಎಲ್ಲ ಪಾತ್ರಗಳನ್ನು ನಿಭಾಯಿಸುತ್ತಿರುವುದರಿಂದ ನಾಲ್ಕನೇ ಆಧಾರ ಸ್ತಂಭ ಗಟ್ಟಿಯಾಗಿ ನಿಲ್ಲುವುದಾದರೂ ಹೇಗೆ ಎಂದು ಪ್ರಶ್ನಿಸಿದರು.

ಚುನಾವಣೆಯನ್ನು ಸರ್ಕಾರವೇ ನಡೆಸುವ ವ್ಯವಸ್ಥೆ ಜಾರಿಗೆ ಬರಬೇಕು. ನಾಮಪತ್ರ ಸಲ್ಲಿಸಿದ ಬಳಿಕ ಅಭ್ಯರ್ಥಿಗಳು ಪ್ರಚಾರಕ್ಕೆ ಹೋಗುವಂತಿರಬಾರದು. ಅಧಿಕಾರಕ್ಕಾಗಿ ನಾವೇ ಮೌಲ್ಯಗಳನ್ನು ನಾಶ ಮಾಡುತ್ತಿದ್ದೇವೆ. 10 ನೇ ಷೆಡ್ಯೂಲ್ ಇನ್ನಷ್ಟು ಬಲಗೊಳ್ಳಬೇಕು. ಪಕ್ಷಾಂತರ ತಡೆಯಲು ಕಾನೂನು ಜಾರಿಗೆ ತರಲಾಯಿತು. ಆದರೂ ಶಾಸಕರು ರಂಗೋಲಿ ಕೆಳಗೆ ನುಸುಳುತ್ತಾರೆ ಎಂದರು.

ಜನಪ್ರತಿನಿಧಿಗಳು ಜನರ ಮನಸ್ಸಿನಲ್ಲಿ ಉಳಿಯುವಂಥ ಕೆಲಸ ಮಾಡಿ ಹೋಗಬೇಕು. ಇಲ್ಲದೇ ಹೋದರೆ ರಾಷ್ಟ್ರಪತಿಯಾದರೂ ಜನ ಗುರುತಿಸಲ್ಲ

ಗುರುರಾಜ ಕರಜಗಿ, ಚಿಂತಕ

ದಮನಿತರ ಧ್ವನಿ ಆಗಬೇಕು: ಸಿ.ಎಂ

'ಹಿಂದೆ ರಾಜಕೀಯ ಮುತ್ಸದ್ದಿಗಳಿದ್ದರು. ಅವರು ದೇಶಕ್ಕಾಗಿ ನಾವು ಎಂಬ ಭಾವನೆಯಲ್ಲಿದ್ದರು. ನಂತರ ಬಂದವರು ದೇಶ ಇರುವುದು ನಮಗಾಗಿ ಅಂದರು. ಇದೇ ಅಂದು ಮತ್ತು ಇಂದಿನ ವ್ಯತ್ಯಾಸ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

'ಜನಪ್ರತಿನಿಧಿಗಳು ಆದರ್ಶಪ್ರಾಯರಾಗಿರ ಬೇಕು. ಸ್ವಾರ್ಥಕ್ಕಾಗಿ ಅಧಿಕಾರ ಬಳಸಬಾರದು. ಇದು ಬಸವಣ್ಣನವರ ಆಶಯ. ಜನರಿಂದ ಆರಿಸಿ ಬಂದವರಿಗೆ ಜನರ ಕಾಳಜಿ ಇರಬೇಕು. ಸಾಮಾಜಿಕ ಮೌಲ್ಯಗಳು ಇಂದು ಕುಸಿಯುತ್ತಿವೆ. ಶೋಷಿತರ, ದಮನಿತರ ಧ್ವನಿಯಾಗಬೇಕು. ಅಹಿತಕರ ಘಟನೆ ನಡೆಯದ ರೀತಿ ಸದನದಲ್ಲಿ ನಾವು ನಡೆದುಕೊಳ್ಳಬೇಕು. ಆಗ ಮಾತ್ರ ಪ್ರಜಾಪ್ರಭುತ್ವದ ಅನುಷ್ಠಾನ ಸಾಧ್ಯ' ಎಂದರು.


ರಾಜ್ಯ ಸರ್ಕಾರಿ ನೌಕರರ ಏಕಾಏಕಿ ವಿಚಾರಣೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವಿರುದ್ಧ ಅನಾಮಧೇಯ ದೂರುಗಳನ್ನು ಏಕಾಏಕಿ ತನಿಖೆಗೆ ನಡೆಸದಿರಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಿರ್ಧರಿಸಿದ್ದಾರೆ.

ಅನಾಮಧೇಯ ದೂರುಗಳು ಹೆಚ್ಚುತ್ತಿರುವ ಕಾರಣ ಮುಖ್ಯ ಕಾರ್ಯದರ್ಶಿ ರವಿಕುಮಾರ್ ಅವರಿಗೆ ಈ ಬಗ್ಗೆ ಮುಖ್ಯಮಂತ್ರಿ ಪತ್ರ ಬರೆದಿದ್ದಾರೆ.

ಪೂರ್ಣ ವಿಳಾಸ ಸಹಿತವಿರುವ ದೂರುಗಳನ್ನು ವಿಚಾರಣೆಗೆ ಪರಿಗಣಿಸುವುದು ಎಂಬುದನ್ನು ಬದಲಿಸಿ, ದೂರು ನೀಡಿರುವ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಖಚಿತಪಡಿಸಿಕೊಂಡು ದೂರುದಾರರು ಅಗತ್ಯ ದಾಖಲೆಗಳನ್ನು ಒದಗಿಸಿದ ಬಳಿಕ, ಆರೋಪ ಮೇಲ್ನೋಟಕ್ಕೆ ಸರಿ ಎಂದು ಕಂಡು ಬಂದರೆ ಮಾತ್ರ ವಿಚಾರಣೆಗೆ ಪರಿಗಣಿಸುವುದಾಗಿ ಆದೇಶ ಹೊರಡಿಸುವಂತೆ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ.


ಯಡಿಯೂರಪ್ಪ

ರಾಜ್ಯದ ಅಧಿಕಾರಿ, ನೌಕರರು ಮುಕ್ತ ಮತ್ತು ನಿರ್ಭೀತಿಯಿಂದ ಕರ್ತವ್ಯ ನಿರ್ವಹಿಸಲು ಹಾಗೂ ಆಡಳಿತ ವ್ಯವಸ್ಥೆಯಲ್ಲಿನ ಕಾನೂನಿನ ದುರುಪಯೋಗ ತಡೆಗಟ್ಟುವ ಉದ್ದೇಶದಿಂದ ಈ ಆದೇಶ ಹೊರಡಿಸಲು ಸೂಚಿಸಿದ್ದಾರೆ.

ನಕಲಿ ಹೆಸರು, ನಕಲಿ ವಿಳಾಸ ಬಳಸಿಕೊಂಡು ಬೇನಾಮಿ ದೂರುಗಳನ್ನು ನೀಡುತ್ತಿದ್ದಾರೆ. ಅನಗತ್ಯವಾಗಿ ವಿಚಾರಣೆಗೆ ಒಳಪಡಿಸುವುದರಿಂದ ಅಧಿಕಾರಿ, ನೌಕರರಿಗೆ ದೈನಂದಿನ ಕೆಲಸ ಕಾರ್ಯಗಳಲ್ಲಿ ಹಸ್ತಕ್ಷೇಪ ಉಂಟಾಗಿ ದಕ್ಷ ಹಾಗೂ ಪ್ರಾಮಾಣಿಕ ನೌಕರರಿಗೆ ತೊಂದರೆ ಉಂಟಾಗುತ್ತಿದೆ. ಅಲ್ಲದೆ, ಆಡಳಿತಾತ್ಮಕ ಸಮಸ್ಯೆಗಳು ಉದ್ಭವವಾಗಿ ಸರ್ಕಾರಿ ಕೆಲಸ ಕಾರ್ಯಗಳು, ಯೋಜನೆಗಳು ಕುಂಠಿತವಾಗುತ್ತಿವೆ. ಇದನ್ನು ತಪ್ಪಿಸಿ, ನಿರ್ಭೀತಿಯಿಂದ ಅಧಿಕಾರಿ, ನೌಕರರು ಕರ್ತವ್ಯ ನಿರ್ವಹಿಸಲು ಅನುಕೂಲ ಕಲ್ಪಿಸ ಬೇಕು ಎಂದು ರಾಜ್ಯ ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರು ಮುಖ್ಯಮಂತ್ರಿಗೆ ಮನವಿ ಮಾಡಿ ದ್ದರು.



ಸನ್ಮಾನ

ಜೆ.ಪಿ. ನಗರದ ಕಪ್ಪಣ್ಣ ಅಂಗಳದಲ್ಲಿ ಬುಧವಾರ ಅಂಕುರ ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಗೆ ನೂತನವಾಗಿ ಸದಸ್ಯರಾದ (ಕುಳಿತವರು ಎಡದಿಂದ) ಜೋಗಿಲ ಸಿದ್ದರಾಜು, ಸಿ.ಎಂ.ನರಸಿಂಹಮೂರ್ತಿ ಅವರನ್ನು ಸನ್ಮಾನಿಸಲಾಯಿತು. (ನಿಂತವರು ಎಡದಿಂದ) ಮಂಜುನಾಥ್, ಉಷಾ ಬಸಪ್ಪ, ಡಾ.ಕಾ.ವೆಂ.ಶ್ರೀನಿವಾಸಮೂರ್ತಿ, ಡಾ.ವೇಮಗಲ್ ನಾರಾಯಣಸ್ವಾಮಿ, ಶ್ರೀನಿವಾಸ ಜಿ. ಕಪ್ಪಣ್ಣ ಇದ್ದಾರೆ –ಪ್ರಜಾವಾಣಿ ಚಿತ್ರ



ವೈದ್ಯಕೀಯ ಕಾಲೇಜುಗಳಲ್ಲಿ ಏಜೆಂಟರು ಅಕ್ರಮವಾಗಿ ವೈದ್ಯಕೀಯ ಸೀಟುಗಳನ್ನು ಬ್ಲಾಕ್ ಮಾಡುತ್ತಿರುವುದನ್ನು ವಿರೋಧಿಸಿ, ಎಬಿವಿಪಿ ಕಾರ್ಯಕರ್ತರು ನಗರದ ಎಸ್‌ಬಿಎಂ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ


ಕಾರಿಡಾರ್‌ನಲ್ಲಿ ಮೊಬೈಲ್‌ನಲ್ಲಿ ಹರಟೆ ಹೊಡೆದರೆ ಶಿಸ್ತುಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಚೇರಿ ಸಮಯದಲ್ಲಿ ಶಿಸ್ತು ಪಾಲಿಸದೆ, ಕಾರಿಡಾರ್‌ನಲ್ಲಿ ನಿಂತು ಮೊಬೈಲ್‌ನಲ್ಲಿ ಗಂಟೆಗಟ್ಟಲೆ ಹರಟೆ ಹೊಡೆಯುವ ವಿಧಾನಪರಿಷತ್ತಿನ ಸಿಬ್ಬಂದಿಗೆ ಚಾಟಿ ಬೀಸಲು ಸಭಾಪತಿ ಬಸವರಾಜ ಹೊರಟ್ಟಿ ನಿರ್ಧರಿಸಿದ್ದಾರೆ.

ಅಷ್ಟೇ ಅಲ್ಲ, ಸಚಿವಾಲಯದಲ್ಲಿ ಅಳವಡಿಸಿರುವ ಹಲವು ಸಿಸಿಟಿವಿ ಕ್ಯಾಮೆರಾಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಅವುಗಳನ್ನು ಉದ್ದೇಶಪೂರ್ವಕವಾಗಿ ಕೆಲವರು ಹಾಳು ಮಾಡುತ್ತಿರುವ ದೂರುಗಳನ್ನು ಗಂಭೀರವಾಗಿ ಪರಿಗಣಿಸಿರುವ ಹೊರಟ್ಟಿ, ಅಂಥವರ ವಿರುದ್ಧವೂ ಕಠಿಣ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಪರಿಷತ್ ಕಾರ್ಯದರ್ಶಿ ಕೆ.ಆರ್. ಮಹಾಲಕ್ಷ್ಮಿ ಅವರಿಗೆ ಟಿಪ್ಪಣಿ ಮೂಲಕ ಕಟ್ಟುನಿಟ್ಟಿನ ನಿರ್ದೇಶನ ನೀಡಿರುವ ಹೊರಟ್ಟಿ, 'ನೀವು ಕಾರ್ಯದರ್ಶಿಯಂಥ ಉನ್ನತ ಹುದ್ದೆಯಲ್ಲಿರುವುದರಿಂದ ಯಾವುದೇ ಮುಲಾಜಿಲ್ಲದೆ ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಆ ಮೂಲಕ ಆಡಳಿತವನ್ನು ಚುರುಕುಗೊಳಿಸಬೇಕು. ಟಿಪ್ಪಣಿಯಲ್ಲಿ ಸೂಚಿಸಿರುವ ಎಲ್ಲ ಅಂಶಗಳನ್ನು ಜಾರಿಗೊಳಿಸಲು ತಕ್ಷಣ ಕ್ರಮಗಳನ್ನು ತೆಗೆದುಕೊಂಡು ಕಾರ್ಯರೂಪಕ್ಕೆ ತರಬೇಕು' ಎಂದೂ ಹೇಳಿದ್ದಾರೆ.


ಬಸವರಾಜ ಹೊರಟ್ಟಿ


'ವಿಧಾನ ಪರಿಷತ್ ಸಚಿವಾಲಯದಲ್ಲಿ ಸಿಬ್ಬಂದಿಗೆ ಬಯೋಮೆಟ್ರಿಕ್ ಪದ್ಧತಿ ಕಡ್ಡಾಯವಾಗಿ ಜಾರಿಗೊಳಿಸಬೇಕು. ಅದರ ವರದಿಯನ್ನು ಪ್ರತಿ ತಿಂಗಳು ನನ್ನ ಆಪ್ತ ಶಾಖೆಗೆ ತಲುಪಿಸಬೇಕು. ಈ ನಿಯಮ ಉಲ್ಲಂಘಿಸಿದವರ ವಿರುದ್ಧ ತೆಗೆದುಕೊಂಡ ಶಿಸ್ತು ಕ್ರಮದ ಬಗ್ಗೆಯೂ ಮಾಹಿತಿ ನೀಡಬೇಕು' ಎಂದು ಕಾರ್ಯದರ್ಶಿಗೆ ಹೊರಟ್ಟಿ ಸೂಚನೆ ನೀಡಿದ್ದಾರೆ.

'ಪರಿಷತ್ತಿನಲ್ಲಿ ಕಾರ್ಯ ನಿರ್ವಹಿಸುವ 'ಡಿ' ಗ್ರೂಪ್ (ಚಾಲಕರ ಸಹಿತ) ಸಿಬ್ಬಂದಿ ಕಡ್ಡಾಯವಾಗಿ ಸಮವಸ್ತ್ರ ಧರಿಸುವಂತೆ ಸುತ್ತೋಲೆ ಹೊರಡಿಸಬೇಕು. ಪರಿಷತ್ತಿನ ಪ್ರತಿ ಶಾಖೆಯ ಸಿಬ್ಬಂದಿಯ ಚಲನ ವಲನವನ್ನು ಪುಸ್ತಕದಲ್ಲಿ ಕಡ್ಡಾಯವಾಗಿ ನಿರ್ವಹಿಸಬೇಕು. ಪರಿಷತ್ತಿನ ಕೆಲಸ ಬಿಟ್ಟು ಹೊರಗಡೆ ಹೋದ ಸಿಬ್ಬಂದಿ ಮಾಡಿದ ಪ್ರಮಾದಗಳಿಗೆ ವಿಧಾನ ಪರಿಷತ್ ಆಗಲಿ, ಸರ್ಕಾರವಾಗಲಿ ಹೊಣೆಯಲ್ಲ' ಎಂದೂ ಹೇಳಿರುವ ಹೊರಟ್ಟಿ, 'ಸದನಲ್ಲಿ ಮಸೂದೆಗಳನ್ನು ಮಂಡಿಸುವ ಸಂದರ್ಭದಲ್ಲಿ ಸದಸ್ಯರ ಬೇಡಿಕೆಯಂತೆ ಅವುಗಳನ್ನು 2–3 ದಿನಗಳ ಮೊದಲೇ ನೀಡಲು ಕ್ರಮ ತೆಗೆದುಕೊಳ್ಳಬೇಕು' ಎಂದೂ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಬಸನಗೌಡ ಯತ್ನಾಳ ಆರೋಪ ನ್ಯಾಯಯುತ: ಎಚ್. ವಿಶ್ವನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಮತ್ತು ಅವರ ಕುಟುಂಬದ ವಿರುದ್ಧ ಸಂವಿಧಾನದ ಚೌಕಟ್ಟಿನಲ್ಲೇ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿದ್ದಾರೆ. ಅವರ ಆರೋಪದಲ್ಲಿ ನ್ಯಾಯವಿದೆ' ಎಂದು ವಿಧಾನಪರಿಷತ್ ಬಿಜೆಪಿ ಸದಸ್ಯ ಎಚ್. ವಿಶ್ವನಾಥ್ ಹೇಳಿದರು.


ಎಚ್. ವಿಶ್ವನಾಥ್

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಪಕ್ಷ, ಸರ್ಕಾರದ ವಿರುದ್ಧ ಯತ್ನಾಳ ಹೇಳಿಕೆ ನೀಡಿಲ್ಲ. ಜನವಿರೋಧಿ ಭಾಷಣಗಳನ್ನೂ ಮಾಡಿಲ್ಲ. ಸರ್ಕಾರದ ರೀತಿನೀತಿಗಳ ಬಗ್ಗೆ ಹೇಳಿದ್ದಾರೆ. ಮುಖ್ಯಮಂತ್ರಿ ಮತ್ತು ಅವರ ಕುಟುಂಬದ ಭ್ರಷ್ಟಾಚಾರದ ಬಗ್ಗೆ ಮಾತನಾಡಿದ್ದಾರೆ' ಎಂದು ಸಮರ್ಥಿಸಿದರು.

'ಮಂತ್ರಿಗಳ ನಿರಾಸಕ್ತಿ, ಅವರ ನಡವಳಿಕೆ ಬಗ್ಗೆಯೂ ಯತ್ನಾಳ ಹೇಳಿದ್ದಾರೆ. ವಿರೋಧ ಪಕ್ಷಗಳು ಸುಮ್ಮನಾದರೆ ಇನ್ನೇನು ಮಾಡಬೇಕು' ಎಂದೂ ಪ್ರಶ್ನಿಸಿದರು.

ಸರ್ಕಾರ ವಿಫಲ: 'ರಾಜ್ಯದಲ್ಲಿ ವಿವಿಧ ಸಮುದಾಯಗಳ ಮೀಸಲಾತಿ ಚಳವಳಿ, ಹೋರಾಟ ಹೆಚ್ಚುತ್ತಿದೆ. ಮೇಲ್ವರ್ಗದಿಂದ ಹಿಡಿದು ಎಲ್ಲರೂ ಬೀದಿಗಿಳಿದಿದ್ದಾರೆ. ಮೆರವಣಿಗೆ, ಸತ್ಯಾಗ್ರಹ ಮಾಡುತ್ತಿದ್ದಾರೆ. ಆದರೆ, ಸರ್ಕಾರ ಯಾವ ವಿಚಾರದಲ್ಲೂ ತಲೆಕೆಡಿಸಿಕೊಳ್ಳುತ್ತಿಲ್ಲ. ಈ ವಿಷಯ ನಿಭಾಯಿಸುವಲ್ಲಿ ಸರ್ಕಾರ ವಿಫಲವಾಗಿದೆ' ಎಂದರು.

'ಮೀಸಲಾತಿ ಕೇಳಲು ಜನತಂತ್ರ ವ್ಯವಸ್ಥೆಯಲ್ಲಿ ಅವಕಾಶವಿದೆ. ಸರ್ಕಾರ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಿಳಿವಳಿಕೆ ನೀಡಬೇಕು. ಕೇವಲ ಮನವಿ ಸ್ವೀಕರಿಸಿದರೆ ಎಲ್ಲವೂ ಮುಗಿಯುವುದಿಲ್ಲ. ಈಗಲೇ ಮೀಸಲಾತಿ ಘೋಷಿಸುವಂತೆ ಪಂಚಮಸಾಲಿ ಸ್ವಾಮೀಜಿಗಳು ಪಟ್ಟು ಹಿಡಿದಿದ್ದಾರೆ. ಕುರುಬ ಸಮುದಾಯ ಕೂಡ ಮೀಸಲಾತಿ ಕೇಳುತ್ತಿದೆ. ಕುಲಶಾಸ್ತ್ರ ಅಧ್ಯಯನ ಆಗಬೇಕಿದೆ. ಕೇಳಿದ ಕೂಡಲೇ ಕೊಡಲು ಬರುವು ದಿಲ್ಲ. ಆದರೆ, ಸರ್ಕಾರ ನಮಗೆ ಸಂಬಂಧವೇ ಇಲ್ಲ ಎಂಬಂತೆ ಸುಮ್ಮನಿದೆ' ಎಂದರು.

ನಟ ಜಗ್ಗೇಶ್ ಸೇರಿ 10 ಜನ ಬಿಜೆಪಿ ವಕ್ತಾರರು

ಬೆಂಗಳೂರು: ಚಿತ್ರನಟ ಜಗ್ಗೇಶ್ ಸೇರಿ ಒಟ್ಟು 10 ಜನರನ್ನು ರಾಜ್ಯ ಬಿಜೆಪಿ ವಕ್ತಾರರನ್ನಾಗಿ ನೇಮಿಸಿದೆ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಮುಖ್ಯ ವಕ್ತಾರರಾಗಿದ್ದಾರೆ.

ಶಾಸಕರಾದ ರಾಜೂಗೌಡ, ರಾಜಕುಮಾರ್ ಪಾಟೀಲ ತೆಲ್ಕೂರ, ಪಿ.ರಾಜೀವ್, ವಿಧಾನ ಪರಿಷತ್ ಸದಸ್ಯೆ ತೇಜಸ್ವಿನಿಗೌಡ, ಚಲುವಾದಿ ನಾರಾಯಣಸ್ವಾಮಿ, ಗಿರಿಧರ ಉಪಾಧ್ಯಾಯ, ಎಂ.ಬಿ. ಜಿರಲಿ ಮತ್ತು ಮಹೇಶ್ ಅವರನ್ನು ವಕ್ತಾರರನ್ನಾಗಿ ನೇಮಕ ಮಾಡಲಾಗಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಜೋತು ಬಿದ್ದ ಕೇಬಲ್: ಅಪರೇಟರ್‌ಗಳ ವಿರುದ್ಧ ಕ್ರಮಕ್ಕೆ ಹೈಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾದಚಾರಿ ಮಾರ್ಗ ಮತ್ತು ರಸ್ತೆಗಳಲ್ಲಿ ಕೇಬಲ್‌ಗಳು ಜೋತು ಬಿದ್ದಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಆಪರೇಟರ್‌ಗಳ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು ನಿಲುವು ಸ್ಪಷ್ಟಪಡಿಸುವಂತೆ ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೇಬಲ್ ಟೆಲಿವಿಷನ್ ನೆಟ್‌ವರ್ಕ್(ನಿಯಂತ್ರಣ) ಕಾಯ್ದೆ –1995ರ ಪ್ರಕಾರ ಕ್ರಿಮಿನಲ್ ಕ್ರಮ ಜರುಗಿಸಲು ಬಿಬಿಎಂಪಿಗೆ ಅಧಿಕಾರ ಇದೆ ಎಂದು ನ್ಯಾಯಾಲಯ ಹೇಳಿದೆ.

ವಕೀಲ ಎನ್.ಪಿ. ಅಮೃತೇಶ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.



'ವಿದ್ಯುತ್ ಕೇಬಲ್‌ಗಳು ಇಡೀ ನಗರದಲ್ಲಿ ಅಪಾಯಕಾರಿಯಾಗಿ ತೂಗಾಡುತ್ತಿವೆ. 2015ರಿಂದ 2019ರ ನಡುವೆ 507 ಜನ ವಿದ್ಯುತ್ ಸ್ಪರ್ಶದಿಂದ ಪ್ರಾಣ ಕಳೆದುಕೊಂಡಿದ್ದಾರೆ. ಹೈಟೆನ್ಷನ್ ತಂತಿಯ ಕೆಳಗೆ 7 ಸಾವಿರಕ್ಕೂ ಹೆಚ್ಚು ಕಟ್ಟಡಗಳಿವೆ' ಎಂದು ಅರ್ಜಿದಾರರು ವಿವರಿಸಿದ್ದಾರೆ.

'ಯಾವುದೇ ಕೇಬಲ್ ಅಳವಡಿಸುವ ಮೊದಲು ಸ್ಥಳೀಯ ಪ್ರಾಧಿಕಾರದ ಅನುಮತಿ ಪಡೆಯುವುದು ಕಡ್ಡಾಯ. ಈ ಕೇಬಲ್‌ಗಳು ನಾಗರಿಕರಿಗೆ ತೊಂದರೆ ಉಂಟು ಮಾಡುತ್ತಿದ್ದರೆ ಕ್ರಮ ಜರುಗಿಸಲು ಇರುವ ಅಧಿಕಾರವನ್ನು ಪಾಲಿಕೆ ಬಳಸಿಕೊಳ್ಳಬೇಕು' ಎಂದು ಪೀಠ ತಿಳಿಸಿತು.

ವಿದ್ಯುತ್ ತಂತಿ ಮತ್ತು ಎಲ್ಲ ಕೇಬಲ್‌ಗಳನ್ನು ನೆಲದೊಳಗೆ ಕೊಂಡೊಯ್ಯುವ ಕಾರ್ಯವನ್ನು ಹಂತ–ಹಂತವಾಗಿ ಮಾಡಲಾಗುತ್ತಿದೆ ಎಂದು ಬಿಬಿಎಂಪಿ ಪರ ವಕೀಲರು ಮಾಹಿತಿ ನೀಡಿದರು. ಯಾವ ರೀತಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂಬುದರ ಕುರಿತು ಪ್ರಮಾಣಪತ್ರ ಸಲ್ಲಿಸುವಂತೆ ಪೀಠ ನಿರ್ದೇಶನ ನೀಡಿತು.

ಹತ್ತೂರು ಗ್ರಾಮದಲ್ಲಿ ಮೈಸೂರು ಒಡೆಯರ ಕಾಲದ ಚಿನ್ನದ ನಾಣ್ಯ ಪತ್ತೆ

ಹೊನ್ನಾಳಿ: ತಾಲ್ಲೂಕಿನ ಹತ್ತೂರು ಗ್ರಾಮದಲ್ಲಿ ಮೈಸೂರಿನ ಮೂರನೇ ಕೃಷ್ಣರಾಜ ಒಡೆಯರ ಕಾಲಾವಧಿಯ ಬಂಗಾರದ ನಾಣ್ಯ ಪತ್ತೆಯಾಗಿದೆ.

ಇತ್ತೀಚೆಗೆ ಹೊನ್ನಾಳಿ ತಾಲ್ಲೂಕಿನ ಹತ್ತೂರು ಗ್ರಾಮದಲ್ಲಿ ಶ್ರೀ ಮೃತ್ಯುಂಜಯ ಶಿವಾಚಾರ್ಯ ಕಲಾ ಮತ್ತು ವಾಣಿಜ್ಯ ಕಾಲೇಜಿನಿಂದ ಕ್ಷೇತ್ರ ಕಾರ್ಯ ಕೈಗೊಂಡಾಗ ಬಂಗಾರದ ನಾಣ್ಯ ಪತ್ತೆಯಾಗಿದೆ.


ಈ ಬಗ್ಗೆ ಮಾಹಿತಿ ನೀಡಿದ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರವೀಣ ದೊಡ್ಡಗೌಡ್ರ, 'ಈ ನಾಣ್ಯವು ಹತ್ತೂರು ಗ್ರಾಮದ ಹೊಸ್‌ಮನೆ ವಂಶದವರ ಬಳಿ ಇದ್ದು, (ಪಾರಂಪರಿಕವಾಗಿ ಬಂದಿರುವ ನಾಣ್ಯ) ಇದು ನಾಣ್ಯವೆಂದು ಅರಿವು ಇಲ್ಲದೆ ಪೂಜೆ ಸಲ್ಲಿಸುತ್ತಿದ್ದರು. ಕ್ಷೇತ್ರ ಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಈ ನಾಣ್ಯ ಕಂಡುಬಂದಿತು' ಎಂದು ತಿಳಿಸಿದ್ದಾರೆ.

'ಅರಣ್ಯ ಸಿಬ್ಬಂದಿಗೆ ಇಂಧನ ಭತ್ಯೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ರಕ್ಷಣೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿರುವ ಅರಣ್ಯ ಇಲಾಖೆಯ ಕೆಳಹಂತದ ಸಿಬ್ಬಂದಿಗೆ ಇಂಧನ ಭತ್ಯೆ ನೀಡಬೇಕಾದ ಅಗತ್ಯವಿದೆ ಎಂದು ಅರಣ್ಯ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ಅರಣ್ಯ ಭವನದಲ್ಲಿ ಬುಧವಾರ ನಡೆದ ಹಿರಿಯ ಐಎಫ್‌ಎಸ್ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, 'ಇಲಾಖೆಯ ಕೆಳಹಂತದ ಸಿಬ್ಬಂದಿಗೆ ವಾಹನ ಸೌಲಭ್ಯ ನೀಡಿಲ್ಲ. ಅರಣ್ಯ ರಕ್ಷಣೆಗಾಗಿ ಅವರು ಸ್ವಂತ ವಾಹನವನ್ನೇ ಬಳಕೆ ಮಾಡುತ್ತಿದ್ದಾರೆ. ಅಂತಹ ಸಿಬ್ಬಂದಿಗೆ ಇಂಧನ ಭತ್ಯೆಯನ್ನಾದರೂ ನೀಡಬೇಕಿದೆ' ಎಂದರು.


ಅರವಿಂದ ಲಿಂಬಾವಳಿ

ಕಾಡು ಪ್ರಾಣಿಗಳ ದಾಳಿಯಿಂದ ಸಣ್ಣ ಸಾಕು ಪ್ರಾಣಿಗಳು ಮೃತಪಟ್ಟರೆ ₹ 5,000 ಮತ್ತು ದೊಡ್ಡ ಪ್ರಾಣಿಗಳು ಮೃತಪಟ್ಟರೆ ₹ 10,000 ಪರಿಹಾರ ನೀಡಲಾಗುತ್ತಿದೆ. ಈ ಮೊತ್ತವನ್ನು ಹೆಚ್ಚಿಸಬೇಕಿದೆ. ಕಾಡು ಪ್ರಾಣಿಗಳ ದಾಳಿಯಿಂದ ಮನುಷ್ಯರು ಮೃತಪಟ್ಟಾಗ ನೀಡುವ ಪರಿಹಾರದ ಮೊತ್ತವನ್ನೂ ಹೆಚ್ಚಿಸುವ ಅಗತ್ಯವಿದೆ ಎಂದು ಹೇಳಿದರು.

ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿ ನೀಡುವುದರಿಂದ ವನ್ಯಜೀವಿಗಳಿಗೆ ತೊಂದರೆ ಆಗುತ್ತಿದೆ. ಈ ಕಾರಣದಿಂದಾಗಿ ಪ್ರಾಣಿಗಳು ಜನವಸತಿ ಪ್ರದೇಶಗಳಿಗೆ ನುಗ್ಗುತ್ತಿವೆ. ಈ ಸಮಸ್ಯೆ ನಿಯಂತ್ರಿಸುವ ಉದ್ದೇಶದಿಂದ ಅರಣ್ಯ ಪ್ರದೇಶದಲ್ಲಿ ಯಾವುದೇ ರೀತಿಯ ಗಣಿಗಾರಿಕೆಗೆ ಅನುಮತಿ ನೀಡಬಾರದು ಎಂದು ಸಚಿವರು ಹೇಳಿದರು.

ಅರಣ್ಯ ಪ್ರದೇಶ ಹೆಚ್ಚಳ ಅಗತ್ಯ: ಸಭೆ ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, 'ರಾಜ್ಯದಲ್ಲಿ ಒಟ್ಟು ಭೂಪ್ರದೇಶದ ಶೇಕಡ 22.8ರಷ್ಟು ಅರಣ್ಯ ಪ್ರದೇಶವಿದೆ. ಅದನ್ನು ಶೇ 33ಕ್ಕೆ ಹೆಚ್ಚಿಸಬೇಕಿದೆ. ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿದರು.

ಹೆಚ್ಚಿನ ಸಂಖ್ಯೆಯಲ್ಲಿ ಹಣ್ಣಿನ ಗಿಡಗಳನ್ನು ನೆಡುವುದಕ್ಕೆ ಆದ್ಯತೆ ನೀಡಬೇಕು. ಅರಣ್ಯ ವಾಸಿಗಳು ಮತ್ತು ರೈತರ ಜತೆ ಸೌಹಾರ್ದಯುತ ಸಂಬಂಧ ಇರಿಸಿಕೊಂಡು ಅರಣ್ಯ ಅಭಿವೃದ್ಧಿ ಮಾಡಬೇಕು. ಬೇಸಿಗೆ ಸಮೀಪಿಸುತ್ತಿದ್ದು, ಕಾಡ್ಗಿಚ್ಚು ಹಬ್ಬುವ ಅಪಾಯವಿದೆ. ಕಾಡ್ಗಿಚ್ಚು ನಿಯಂತ್ರಣಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಅವರು ನಿರ್ದೇಶನ ನೀಡಿದರು.

ಅರಣ್ಯ ಮತ್ತು ಪರಿಸರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಂದೀಪ್ ದವೆ, ಅರಣ್ಯ ಪಡೆಗಳ ಮುಖ್ಯಸ್ಥರಾಗಿರುವ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸಂಜಯ್ ಮೋಹನ್ ಮತ್ತು ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ವಿಜಯ್ ಕುಮಾರ್ ಗೋಗಿ ಸಭೆಯಲ್ಲಿದ್ದರು.

ಬೋಧನಾ ಶುಲ್ಕ ಕಡಿತ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೋಧನಾ ಶುಲ್ಕ ಶೇ 70ರಷ್ಟು ಮಾತ್ರ ಪಡೆಯಬೇಕು ಎಂದು ಸರ್ಕಾರ ಹೊರಡಿಸಿದ್ದ ಸುತ್ತೋಲೆ ಪ್ರಶ್ನಿಸಿ ಖಾಸಗಿ ಶಾಲೆಗಳ ಸಂಘಗಳು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ನೀಡಿದೆ.

'ಶೇ 70ರಷ್ಟು ಶುಲ್ಕ ಸಂಗ್ರಹಿಸಬೇಕು ಮತ್ತು ಶುಲ್ಕದ ವಿವರ ಒಳಗೊಂಡ ಪಟ್ಟಿ ಪ್ರಕಟಿಸಬೇಕು. ಲೆಕ್ಕಪರಿಶೋಧನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಸುತ್ತೋಲೆ ಹೊರಡಿಸಿ ಸರಿಯಲ್ಲ' ಎಂದು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ನಿರ್ವಹಣಾ ಒಕ್ಕೂಟ ಅರ್ಜಿಯಲ್ಲಿ ತಿಳಿಸಿದೆ.

'ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೆ ಸಂವಿಧಾನದ 30ನೇ ವಿಧಿಯ ಪ್ರಕಾರ ರಕ್ಷಣೆ ಇದೆ. 2019-20ರಲ್ಲಿ ಸಂಗ್ರಹಿಸಿದ ಶುಲ್ಕದಲ್ಲಿ ಶೇ 30ರಷ್ಟು ಕಡಿತ ಮಾಡಬೇಕು ಎಂಬುದು ನಮ್ಮ ಹಕ್ಕುಗಳ ಮೇಲೆ ಪರಿಣಾಮ ಬೀರುತ್ತದೆ. 2020-21ರ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಶುಲ್ಕ ಮತ್ತು ಇತರ ಶುಲ್ಕಗಳಿಲ್ಲದ ಕಾರಣ ಶೇ 50ರಷ್ಟು ಕಡಿತ ಇದೆ. ಆನ್‌ಲೈನ್ ತರಗತಿ ನಡೆಸಲು ಶಿಕ್ಷಣ ಸಂಸ್ಥೆಗಳಿಗೆ ಖರ್ಚು ಹೆಚ್ಚಾಗುತ್ತಿದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

'10 ಸಾವಿರ ಲೀಟರ್ ಸಾಮರ್ಥ್ಯದ ನೀರಿನ ಟ್ಯಾಂಕ್, ಅಗ್ನಿ ಸುರಕ್ಷತೆಗಾಗಿ ಶಾಲಾ ಆವರಣದ ಸುತ್ತ ಸ್ಥಳಾವಕಾಶ, ಅಗ್ನಿ ಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆಯುವುದು ಸೇರಿ ಮೂಲಸೌಕರ್ಯ ಒದಗಿಸಬೇಕು' ಎಂಬ ಅಂಶವನ್ನು ಕರ್ನಾಟಕ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ(ಕೆಎಎಂಎಸ್) ಪ್ರಶ್ನಿಸಿದೆ.

'ಕೋವಿಡ್ ಕಾರಣದಿಂದ ಶಾಲಾ ಆಡಳಿತ ಮಂಡಳಿಗಳು ಹಣಕಾಸಿನ ಬಿಕ್ಕಟ್ಟು ಎದುರಿಸುತ್ತಿವೆ. ಅನೇಕ ಪೋಷಕರು ಶುಲ್ಕ ಪಾವತಿಸಿಲ್ಲ. ಮೂಲಸೌಕರ್ಯ ಒದಗಿಸುವುದು ಕಷ್ಟ' ಎಂದು ಹೇಳಿದೆ.

ಸರ್ಕಾರಕ್ಕೆ ನೋಟಿಸ್ ನೀಡಲು ಆದೇಶಿಸಿದ ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಪೀಠ, ಆಕ್ಷೇಪಣೆ ಸಲ್ಲಿಸಲು ನಿರ್ದೇಶನ ನೀಡಿದೆ.

ಕೇರಳ: ಆರ್‌ಎಸ್‌ಎಸ್ ಕಾರ್ಯಕರ್ತನ ಕೊಲೆ

ಆಲಪ್ಪುಳ (ಪಿಟಿಐ): ಕೇರಳದ ಆಲಪ್ಪುಳ ಜಿಲ್ಲೆಯ ಚೆರ್ತಲಾ ಬಳಿಯ ನಾಗಮಕುಲಂಗರದಲ್ಲಿ ಬುಧವಾರ ಎಸ್‌ಡಿಪಿಐ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರ ನಡುವೆ ನಡೆದ ಘರ್ಷಣೆಯಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರೊಬ್ಬರು ಮೃತಪಟ್ಟಿದ್ದಾರೆ.

ಮೃತಪಟ್ಟವರನ್ನು ನಂದು ಎಂದು ಗುರುತಿಸಲಾಗಿದೆ. ಘಟನೆಯಲ್ಲಿ ಕೆಲವರಿಗೆ ಗಾಯಗಳಾಗಿವೆ.

ಆರ್‌ಎಸ್‌ಎಸ್ ಕಾರ್ಯಕರ್ತನ ಹತ್ಯೆಯನ್ನು ಖಂಡಿಸಿರುವ ಬಿಜೆಪಿ ಕೇರಳ ರಾಜ್ಯ ಘಟಕದ ಅಧ್ಯಕ್ಷ ಕೆ. ಸುರೇಂದ್ರನ್ ಅವರು, ಈ ಘಟನೆ ಹಿಂದೆ ಪಿಎಫ್‌ಐ ಕೈವಾಡ ಇದೆ ಎಂದು ಆರೋಪಿಸಿದ್ದಾರೆ.

ಎಪಿಎಂಸಿ: ಶೇ 50ರಷ್ಟು ಗುತ್ತಿಗೆ ಸಿಬ್ಬಂದಿ ಕೆಲಸದಿಂದ ಬಿಡುಗಡೆ

ಸಿಬ್ಬಂದಿಯೂ ಇಲ್ಲ, ಆದಾಯವೂ ಇಲ್ಲ

• ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ಕೃಷಿ ಉತ್ಪನ್ನ ಮಾರುಕಟ್ಟೆ (ಎಪಿಎಂಸಿ)ಯ ಹೊರಗಡೆ ಮಾರಾಟವಾಗುವ ಕೃಷಿ ಉತ್ಪನ್ನಗಳಿಗೆ ವಿಧಿಸುತ್ತಿದ್ದ ಸೆಸ್ ಸಂಗ್ರಹಕ್ಕೆ ಕಡಿವಾಣ ಬಿದ್ದ ಮೇಲೆ ಹುಬ್ಬಳ್ಳಿಯ ಬಸವೇಶ್ವರ ಕೃಷಿ ಉತ್ಪನ್ನ ಮಾರುಕಟ್ಟೆಯ ಆದಾಯ ಕುಸಿತವಾಗಿದೆ. ಇದರಿಂದಾಗಿ ನಿರ್ವಹಣೆ ವೆಚ್ಚ ಭರಿಸಲಾಗದೆ ಶೇ 50ರಷ್ಟು ಸಿಬ್ಬಂದಿಯನ್ನು ಮನೆಗೆ ಕಳುಹಿಸಲಾಗಿದೆ.

ಮಾರುಕಟ್ಟೆ ಹೊರಗಡೆ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಮುಕ್ತ ವಹಿವಾಟಿಗೆ ಅವಕಾಶ ನೀಡಿರುವುದು ಹಾಗೂ ವ್ಯಾಪಾರಸ್ಥರಿಂದ ಸಂಗ್ರಹಿಸುತ್ತಿದ್ದ ಸೆಸ್ ಪ್ರಮಾಣ ಕಡಿತಗೊಳಿಸಲಾಗಿದೆ. ಇದರಿಂದಾಗಿ 2019ರ ಜನವರಿಗೆ ₹7.86 ಕೋಟಿ ಇದ್ದ ಸೆಸ್ ಪ್ರಮಾಣ 2020ರ ಜನವರಿಗೆ ₹1.72 ಕೋಟಿಗೆ ಕುಸಿದಿದೆ.

2020ರ ಆಗಸ್ಟ್‌ನಲ್ಲಿ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದು ಮಾರುಕಟ್ಟೆ ಪ್ರಾಂಗಣದ ಹೊರಗೆ ಮುಕ್ತ ವಹಿವಾಟಿಗೆ ಅವಕಾಶ ಕಲ್ಪಿಸಿದ ನಂತರ ಹೊರಗಡೆ ನಡೆಯುತ್ತಿದ್ದ ವಹಿವಾಟಿನಿಂದ ಬರುತ್ತಿದ್ದ ಆದಾಯ ನಿಂತು ಹೋಗಿದೆ. ಜೊತೆಗೆ ಈ ಮೊದಲು ಎಪಿಎಂಸಿಯ ಒಳಗೆ ವ್ಯಾಪಾರಸ್ಥರಿಂದ ಪ್ರತಿ ₹100 ವಹಿವಾಟಿಗೆ ಒಂದೂವರೆ ರೂಪಾಯಿ ಸೆಸ್ ಸಂಗ್ರಹಿಸಲಾಗುತ್ತಿತ್ತು. ಅದನ್ನು ಈಗ 60 ಪೈಸೆಗೆ ಇಳಿಸಿರುವುದೂ ಆದಾಯ ಕುಸಿತಕ್ಕೆ ಕಾರಣವಾಗಿದೆ.



ಹುಬ್ಬಳ್ಳಿ ಎಪಿಎಂಸಿಯ ಆಡಳಿತ ಕಚೇರಿ ಕಟ್ಟಡ

ಕಾಳು ಹಾಗೂ ತರಕಾರಿ ವ್ಯಾಪಾರಕ್ಕೆ ಪ್ರಸಿದ್ಧಿ ಪಡೆದಿರುವ ಮಾರುಕಟ್ಟೆಗೆ ಧಾರವಾಡ ಜಿಲ್ಲೆಯಲ್ಲದೆ, ಬಾಗಲಕೋಟೆ, ಧಾರವಾಡ, ಹಾವೇರಿ, ಗದಗ, ದಾವಣಗೆರೆ, ಕೊಪ್ಪಳ ಜಿಲ್ಲೆಗಳಿಂದಲೂ ಉತ್ಪನ್ನಗಳು ಮಾರುಕಟ್ಟೆಗೆ ಬರುತ್ತವೆ.

ಪ್ರಜಾವಾಣಿ ವಿಶೇಷ

ಎರಡೂವರೆ ವರ್ಷಗಳಲ್ಲಿ ಆರು ಮಂದಿ ಹೆಚ್ಚುವರಿ ನಿರ್ದೇಶಕರು: ಎರಡೂವರೆ ವರ್ಷಗಳಲ್ಲಿ ಆರು ಮಂದಿ ಹೆಚ್ಚುವರಿ ನಿರ್ದೇಶಕರಾಗಿದ್ದಾರೆ. ಅವರಲ್ಲಿ ನಾಲ್ವರು ಪ್ರಭಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ಪೂರ್ಣ ಪ್ರಮಾಣದ ಹೆಚ್ಚುವರಿ ನಿರ್ದೇಶಕರನ್ನು ನೇಮಕ ಮಾಡದ ಪರಿಣಾಮ ಎಪಿಎಂಸಿ ಆಡಳಿತ ಸರಾಗವಾಗಿ ಸಾಗುತ್ತಿಲ್ಲ ಎನ್ನುವ ಮಾತಿದೆ.

2018ರಲ್ಲಿ ಬೆಳಗಾವಿ ಎಪಿಎಂಸಿ ಕಾರ್ಯದರ್ಶಿಯಾಗಿದ್ದ ಗುರುಪ್ರಸಾದ, ನಂತರ ಏಳು ತಿಂಗಳ ಕಾರ್ಯ ನಿರ್ವಹಿಸಿದ ಬ್ಯಾಡಗಿ ಎಪಿಎಂಸಿಯ ಕಾರ್ಯದರ್ಶಿ ಎಸ್.ಬಿ. ನ್ಯಾಮಗೌಡರ, ಈಗ ಬೆಳಗಾವಿ ಎಪಿಎಂಸಿ ಕಾರ್ಯದರ್ಶಿಯಾಗಿರುವ ಕೆ.ಕೋಡಿಗೌಡ ಸೇರಿದಂತೆ ಹಲವರು ಇಲ್ಲಿನ ಪ್ರಭಾರಿ ಹೆಚ್ಚುವರಿ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದ್ದಾರೆ. ವಾರದಲ್ಲಿ ಎರಡರಿಂದ ಮೂರು ದಿನ ಮಾತ್ರ ಇಲ್ಲಿಗೆ ಬರುತ್ತಾರೆ.

ಎಪಿಎಂಸಿಯಲ್ಲಿ 47 ಮಂದಿ ಕಾಯಂ ಸಿಬ್ಬಂದಿ ಇರಬೇಕಾಗಿತ್ತು. 17 ಮಂದಿ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು, 30 ಹುದ್ದೆಗಳು ಖಾಲಿ ಇವೆ. ಸಿಬ್ಬಂದಿ ಕೊರತೆಯಿಂದಾಗಿ ಕೆಲಸದ ಒತ್ತಡ ಜಾಸ್ತಿಯಾಗಿದ್ದು, ಇಲ್ಲಿ ಇರಲು ಯಾರೂ ಬಯಸುತ್ತಿಲ್ಲ ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಸಿಬ್ಬಂದಿಯೊಬ್ಬರು ಹೇಳಿದರು.

ಸಿಬ್ಬಂದಿ ಕಡಿತ: ಎಪಿಎಂಸಿ ಆದಾಯ ಕುಸಿತದ ಹಿನ್ನೆಲೆಯಲ್ಲಿ ಗುತ್ತಿಗೆ ಆಧಾರದ ಮೇಲಿದ್ದ ಶೇ 50ರಷ್ಟು ಸಿಬ್ಬಂದಿ ಕಡಿತಗೊಳಿಸುವಂತೆ ಸರ್ಕಾರ ಆದೇಶಿಸಿದೆ. ಅದರ ಪ್ರಕಾರ ಹುಬ್ಬಳ್ಳಿಯಲ್ಲಿನ ಗುತ್ತಿಗೆ ಸಿಬ್ಬಂದಿ ಸಂಖ್ಯೆಯನ್ನೂ ಕಡಿತ ಮಾಡಲಾಗಿದೆ ಎಂದು ಪ್ರಭಾರಿ ಹೆಚ್ಚುವರಿ ನಿರ್ದೇಶಕ ಕೆ. ಕೋಡಿಗೌಡರ 'ಪ್ರಜಾವಾಣಿ'ಗೆ ತಿಳಿಸಿದರು.

ಪಶುಪಾಲಕರಿಗೆ ಪರಿಹಾರ: ಸಿ.ಎಂಗೆ ಸಿದ್ದರಾಮಯ್ಯ ಪತ್ರ


ಬೆಂಗಳೂರು: 'ಆಕಸ್ಮಿಕವಾಗಿ ಮರಣ ಹೊಂದಿದ ಕುರಿ, ಮೇಕೆ, ಹಸು, ಎಮ್ಮೆಗಳಿಗೆ ಈ ಹಿಂದೆ ನೀಡುತ್ತಿದ್ದಂತೆ ₹ 5 ಸಾವಿರದಿಂದ ₹ 10ಸಾವಿರವರೆಗೆ ಪರಿಹಾರ ನೀಡಬೇಕು' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದು ಒತ್ತಾಯಿಸಿದ್ದಾರೆ.

'ಪಶುಪಾಲಕರಿಗೆ ಪರಿಹಾರ ನೀಡುವ 'ಅನುಗ್ರಹ' ಯೋಜನೆಯನ್ನು ಸ್ಥಗಿತಗೊಳಿಸುವ ಮೂಲಕ ರಾಜ್ಯ ಸರ್ಕಾರ ಪಶುಪಾಲಕ ವಿರೋಧಿ ನಿಲುವು ತೆಗೆದುಕೊಂಡಿದೆ' ಎಂದೂ ಪತ್ರದಲ್ಲಿ ಅವರು ಟೀಕಿಸಿದ್ದಾರೆ.

'ಶಿರಾ ತಾಲ್ಲೂಕಿನ ಕುಂಟನಹಟ್ಟಿ ಗ್ರಾಮದ ಚಿತ್ತಣ್ಣ ಎಂಬವರ 200 ಕುರಿಗಳು ವಿಷಕಾರಿ ಮೇವು ತಿಂದು ಕಡೂರು ತಾಲ್ಲೂಕಿನ ಹುಲಿಯನಹಳ್ಳಿಯಲ್ಲಿ ಸಾವಿಗೀಡಾಗಿವೆ. ಕುರಿಗಾಹಿಗಳು ಈ ರೀತಿ ಊರಿಂದ ಊರಿಗೆ ವಲಸೆ ಹೋಗುವಾಗ ಈ ರೀತಿಯ ದುರಂತಗಳು ಪದೇ ಪದೇ ಸಂಭವಿಸುತ್ತಲೇ ಇರುತ್ತವೆ. 2020 ಏಪ್ರಿಲ್ 24ರಂದು ಹಿರಿಯೂರು ತಾಲ್ಲೂಕಿನ ರಾಮಕೃಷ್ಣಪ್ಪ ಎಂಬವರ 60 ಕುರಿಗಳು ಸಾವಿಗೀಡಾದಗಲೂ ಪರಿಹಾರ ನೀಡುವಂತೆ ಪತ್ರ ಬರೆದಿದ್ದೆ. ವಿಧಾನಸಭೆಯಲ್ಲೂ ಈ ವಿಷಯ ಪ್ರಸ್ತಾಪಿಸಿದ್ದೆ. ಆದರೆ, ಪಶುಪಾಲರು ಮತ್ತು ರೈತರನ್ನು ಸರ್ಕಾರ ಕಡೆಗಣಿಸುತ್ತಿದೆ' ಎಂದು ಸಿದ್ದರಾಮಯ್ಯ ದೂರಿದ್ದಾರೆ.

'ಅನುಗ್ರಹ ಯೋಜನೆಗೆ ಸಾವಿರಾರು ಕೋಟಿ ಹಣ ಅಗತ್ಯ ಇಲ್ಲ. ಕೇವಲ ₹ 50 ಕೋಟಿ ಮೀಸಲಿಟ್ಟರೆ ಸಾಕು. ಪಶುಪಾಲಕರು, ರೈತರ ಮನೆಯ ದೀಪಗಳು ನೆಮ್ಮದಿಯಿಂದ ಬೆಳಗಬಹುದು. ಹೀಗಾಗಿ, ಚಿತ್ತಣ್ಣ ಎಂಬವರ ಮರಣ ಹೊಂದಿದ ಕುರಿ ಗಳಿಗೆ ತಕ್ಷಣ ಪರಿಹಾರ ಬಿಡುಗಡೆ ಮಾಡಬೇಕು' ಎಂದೂ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಯಾವುದನ್ನಾದರೂ ಸರಳವಾಗಿಸುವುದರ ಹಿಂದೆ ಕಠಿಣ ಪರಿಶ್ರಮ ಇರುತ್ತದೆ.

-ಸ್ಟೀವ್ ಜಾಬ್ಸ್

ದಿಶಾ 'ದೇಶದ್ರೋಹ' ಪ್ರಕರಣ ಪ್ರಭುತ್ವಕ್ಕೆ ವಿವೇಕ ಮೂಡೀತೇ?

ದೇಶದ್ರೋಹದ ಅಪರಾಧವೆಂದರೆ ಏನು ಎಂಬುದನ್ನು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124(ಎ) ವ್ಯಾಖ್ಯಾನಿಸುತ್ತದೆ. ಆದರೆ, ಈ ಸೆಕ್ಷನ್ ಅನ್ನು ಅಕ್ಷರಶಃ ವ್ಯಾಖ್ಯಾನಿಸುವುದು, ಅರ್ಥ ಮಾಡಿಕೊಳ್ಳುವುದು ಸರಿಯಲ್ಲ ಎಂಬುದನ್ನು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿ ದಶಕಗಳೇ ಸರಿದಿವೆ. ಕೇದಾರನಾಥ ಸಿಂಗ್ ಮತ್ತು ಬಿಹಾರ ಸರ್ಕಾರದ ನಡುವಣ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು, ಸೆಕ್ಷನ್ 124(ಎ)ಯನ್ನು ಅರ್ಥ ಮಾಡಿಕೊಳ್ಳಬೇಕಿರುವುದು ಹೇಗೆ ಎಂಬುದಕ್ಕೆ ಮಾರ್ಗದರ್ಶಿಯಂತೆ ಇದೆ. ಕಾನೂನು ಪಂಡಿತರ ವಲಯದಲ್ಲೂ ಸಾರ್ವಜನಿಕ ಬುದ್ಧಿಜೀವಿಗಳ ವಲಯದಲ್ಲೂ ವ್ಯಾಪಕವಾಗಿ ಚರ್ಚೆಯಾಗಿರುವ ತೀರ್ಪು ಇದು. 'ಯಾವುದೇ ಕ್ರಿಯೆ, ದೇಶದ್ರೋಹಕ್ಕೆ ಸಮ ಎಂಬುದಾಗಿ ಪರಿಗಣಿತ ಆಗಬೇಕಾದರೆ, ಅದು ಹಿಂಸಾ ಮಾರ್ಗ ಅನುಸರಿಸಿ ಸರ್ಕಾರವನ್ನು ಬುಡಮೇಲು ಮಾಡುವ ಪರಿಣಾಮ ಹೊಂದಿರಬೇಕು. ಹಿಂಸೆ ಸೃಷ್ಟಿಸಿ, ಸಾರ್ವಜನಿಕ ಶಾಂತಿಗೆ ಧಕ್ಕೆ ತರುವಂಥದ್ದಾಗಿರಬೇಕು. ಈ ಆಯಾಮಗಳನ್ನು ಹೊಂದಿಲ್ಲದ ಅನಿಸಿಕೆ, ಅಭಿಪ್ರಾಯಗಳು ದೇಶದ್ರೋಹದ ವ್ಯಾಪ್ತಿಗೆ ಬರುವುದಿಲ್ಲ' ಎಂಬುದು ಆ ಪ್ರಕರಣದಲ್ಲಿ ನ್ಯಾಯಾಲಯ ಹೇಳಿರುವ ಮಾತು. ಇದು ಸಾರ್ವಜನಿಕ ಅವಗಾಹನೆಗೆ ಲಭ್ಯವಿದ್ದರೂ, ಅಭಿಪ್ರಾಯ ಭೇದ ವ್ಯಕ್ತಪಡಿಸುವವರ ವಿರುದ್ಧ ಪೊಲೀಸರು ಹಿಂದೆ-ಮುಂದೆ ನೋಡದೆ ದೇಶದ್ರೋಹದ ಆರೋಪ ಹೊರಿಸುತ್ತಿರುವುದು ಪ್ರಜಾತಂತ್ರ ವ್ಯವಸ್ಥೆಯ ತೀರಾ ವಿಷಾದಕರ ಅಧ್ಯಾಯವೆನ್ನದೆ ವಿಧಿಯಿಲ್ಲ. ರೈತರ ಪ್ರತಿಭಟನೆಗಳಿಗೆ ಬೆಂಬಲ ಸೂಚಿಸಲು ಸಿದ್ಧಪಡಿಸಿದ್ದ ಆನ್‌ಲೈನ್ ಟೂಲ್‌ಕಿಟ್‌ಗೆ ಒಂದಿಷ್ಟು ಬದಲಾವಣೆಗಳನ್ನು ತಂದು, ಕಾನೂನುಬಾಹಿರ ಚಟುವಟಿಕೆ ನಡೆಸುತ್ತಿರುವವರು ಎನ್ನಲಾದ ವ್ಯಕ್ತಿಗಳು ಉಪಸ್ಥಿತರಿದ್ದ ಆನ್‌ಲೈನ್ ಸಭೆಯೊಂದರಲ್ಲಿ ಪಾಲ್ಗೊಂಡು 'ದೇಶದ್ರೋಹ' ಎಸಗಿದ್ದಾರೆ ಎಂದು ಆರೋಪಿಸಿ ಬೆಂಗಳೂರಿನ ಪರಿಸರ ಕಾರ್ಯಕರ್ತೆ ದಿಶಾ ರವಿ ಅವರನ್ನು ದೆಹಲಿ ಪೊಲೀಸರು ಬಂಧಿಸಿದ್ದು ಈ ಕಾನೂನಿನ ದುರ್ಬಳಕೆಯ ಹೊಸದೊಂದು ನಿದರ್ಶನದಂತೆ ಮೇಲ್ನೋಟಕ್ಕೆ ಕಾಣಿಸುತ್ತಿದೆ. ಈಗ ದಿಶಾ ಅವರಿಗೆ ದೆಹಲಿಯ ನ್ಯಾಯಾಲಯವೊಂದು ಜಾಮೀನು ನೀಡಿದೆ.



ಭಿನ್ನ ನಿಲುವು ತಾಳಿದವರಿಗೆಲ್ಲ 'ದೇಶದ್ರೋಹಿ' ಎಂಬ ಹಣೆಪಟ್ಟಿ ಕಟ್ಟುವುದರಿಂದ ದೇಶದ ಬೌದ್ಧಿಕ ವಿಕಾಸ ಕುಂದುತ್ತದೆ, ಪ್ರಜಾತಂತ್ರವೆಂಬುದು ಅಪಹಾಸ್ಯಕ್ಕೆ ಈಡಾಗುತ್ತದೆ ಎಂಬ ಎಚ್ಚರ ಆಡಳಿತಾರೂಢರಿಗೆ ಇರಬೇಕು

ದಿಶಾ ಅವರು ತಿದ್ದುಪಡಿ ಮಾಡಿದ್ದರು ಎಂದು ಹೇಳಲಾಗಿರುವ ಟೂಲ್‌ಕಿಟ್‌ನಲ್ಲಿ ಹಿಂಸೆಗೆ ಕರೆ ನೀಡುವ ಯಾವ ಅಂಶವೂ ಇಲ್ಲ ಎಂದು ನ್ಯಾಯಾಲಯ ಹೇಳಿದೆ. ಅನುಮಾನಾಸ್ಪದ ಚಾರಿತ್ರ್ಯದ ವ್ಯಕ್ತಿಗಳೊಂದಿಗೆ ಸಂಪರ್ಕ ಹೊಂದಿದ್ದರು ಅಂದಮಾತ್ರಕ್ಕೆ ಅವರ ಮೇಲೆ ತಪ್ಪು ಹೊರಿಸಲಾಗದು; ಅಂತಹ ವ್ಯಕ್ತಿಗಳೊಂದಿಗೆ ಸಂಪರ್ಕ ಹೊಂದಿದ್ದರ ಕಾರಣ ಏನಿತ್ತು ಎಂಬುದನ್ನೂ ಗಮನಿಸಬೇಕು. ದಿಶಾ ಅವರಿಗೂ ದೆಹಲಿಯಲ್ಲಿ ಜನವರಿ 26ರಂದು ನಡೆದ ಅಹಿತಕರ ಘಟನೆಗಳಿಗೂ ನೇರ ಸಂಬಂಧ ತೋರಿಸಲು ಪೊಲೀಸರು ಯಾವ ಆಧಾರವನ್ನೂ ನೀಡಿಲ್ಲ ಎಂದು ಕೋರ್ಟ್ ಹೇಳಿದೆ. ವಾಟ್ಸ್‌ಆ್ಯಪ್ ಗುಂಪೊಂದನ್ನು ಸೃಷ್ಟಿಸುವುದು, ನಿರುಪದ್ರವಿಯಂತೆ ಕಾಣಿಸುವ ಟೂಲ್‌ಕಿಟ್‌ನಲ್ಲಿ ಕೆಲವು ಬದಲಾವಣೆಗಳನ್ನು ತರುವುದು ಅಪರಾಧ ಅಲ್ಲ ಎಂದೂ ದಿಶಾ ಅವರಿಗೆ ಜಾಮೀನು ನೀಡಿದ ಆದೇಶದಲ್ಲಿ ನ್ಯಾಯಾಲಯ ಸ್ಪಷ್ಟಪಡಿಸಿದೆ. ಈ ಆದೇಶದಲ್ಲಿ ನ್ಯಾಯಾಲಯ ಹೇಳಿರುವ ಮಾತುಗಳನ್ನೂ ಪೊಲೀಸರು ದಿಶಾ ವಿರುದ್ಧ ಹೊರಿಸಿರುವ ಆರೋಪಗಳನ್ನೂ ಒಟ್ಟಾಗಿ ನೋಡಿದರೆ, ಪ್ರಭುತ್ವದ ಯೋಚನಾಕ್ರಮಕ್ಕಿಂತ ಭಿನ್ನವಾಗಿ ಆಲೋಚಿಸುವ ವ್ಯಕ್ತಿಗಳ ದನಿ ಅಡಗಿಸಲೆಂದೇ ಈ ರೀತಿಯ ಆರೋಪಗಳನ್ನು ಉದ್ದೇಶಪೂರ್ವಕವಾಗಿ ಹೊರಿಸಲಾಗುತ್ತದೆಯೇ ಎಂಬ ಅನುಮಾನ ಮೂಡುತ್ತದೆ. ವ್ಯಕ್ತಿ ಎಸಗಿದ ಅಪರಾಧ ಎಂಥದ್ದು, ಅದಕ್ಕೆ ಸೂಕ್ತವಾದ ಸೆಕ್ಷನ್ ಯಾವುದು ಎಂಬುದನ್ನು ಗುರುತಿಸಿ, ಅಂತಹ ಸೆಕ್ಷನ್‌ಗಳ ಅಡಿಯಲ್ಲಿ ದೂರು ದಾಖಲಿಸಿ ತನಿಖೆ ನಡೆಸಬೇಕಾದುದು ವೃತ್ತಿಪರ ಪೊಲೀಸರ ಕರ್ತವ್ಯ. ಅಡಿಕೆ ಕಳ್ಳತನದ ಅನುಮಾನ ಬಂದಾಗ, ಆನೆಯನ್ನು ಕೊಂದಿದ್ದಕ್ಕೆ ಬಳಸುವ ಸೆಕ್ಷನ್ ಅಡಿಯಲ್ಲಿ ದೂರು ದಾಖಲಿಸಿಕೊಂಡು ತನಿಖೆ ನಡೆಸುವುದು ವೃತ್ತಿಪರತೆ ಅನ್ನಿಸಿಕೊಳ್ಳುವುದಿಲ್ಲ. ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯವನ್ನು ರಕ್ಷಿಸುವ ಹೊಣೆಯನ್ನೂ ಹೊತ್ತಿರುವ ಪೊಲೀಸರು, ದಿಶಾ ಪ್ರಕರಣದಲ್ಲಿ ಯಾರದ್ದೋ ಒತ್ತಡಕ್ಕೆ ಒಳಗಾಗಿ ವರ್ತಿಸಿದಂತೆ ಕಾಣುತ್ತಿದೆ. ದಿಶಾ ಎಸಗಿದ ಅಪರಾಧವಾದರೂ ಏನು ಎಂಬುದನ್ನು ಸರಿಯಾಗಿ ಗಮನಿಸದೆ, ಅವರ ವಿರುದ್ಧ ಮನಸೋಇಚ್ಛೆ ಆರೋಪಗಳನ್ನು ಹೊರಿಸುವ ಕೆಲಸವನ್ನಷ್ಟೇ ಪೊಲೀಸರು ಮಾಡಿದ್ದಾರೆ ಎಂದು ಯಾರಿಗಾದರೂ ಅನ್ನಿಸಿದರೆ ಅದರಲ್ಲಿ ಆಶ್ಚರ್ಯಪಡುವಂಥದ್ದು ಏನೂ ಇಲ್ಲ. ಈ ದೇಶದ ಸಹಸ್ರಾರು ವರ್ಷಗಳ ಇತಿಹಾಸದಲ್ಲಿ ಬಹುಜನರು ನಂಬಿರುವ ಸಿದ್ಧಾಂತಕ್ಕೆ ವಿರುದ್ಧವಾದ ನಿಲುವನ್ನು ಪ್ರತಿಪಾದಿಸಿದವರಿಗೆ 'ದೇಶದ್ರೋಹಿ' ಅಥವಾ 'ರಾಜದ್ರೋಹಿ' ಎಂಬ ಹಣೆಪಟ್ಟಿ ಅಂಟಿಸಿದ ನಿದರ್ಶನಗಳು ಕಾಣುವುದಿಲ್ಲ. ನ್ಯಾಯಾಲಯ ತನ್ನ ಆದೇಶದಲ್ಲಿ ಉಲ್ಲೇಖಿಸಿರುವಂತೆ 'ಆನೋ ಭದ್ರಾಃ ಕೃತವೋ ಯಂತು ವಿಶ್ವತಃ' ಎಂಬ ಮಾತನ್ನು ಜೀವನಮೌಲ್ಯವಾಗಿ ಕಂಡ ಪರಂಪರೆ ಭಾರತಕ್ಕಿದೆ. ಭಿನ್ನ ನಿಲುವು ತಾಳಿದವರಿಗೆಲ್ಲ 'ದೇಶದ್ರೋಹಿ' ಎಂಬ ಹಣೆಪಟ್ಟಿ ಕಟ್ಟುವುದರಿಂದ ದೇಶದ ಬೌದ್ಧಿಕ ವಿಕಾಸ ಕುಂದುತ್ತದೆ, ಪ್ರಜಾತಂತ್ರವೆಂಬುದು ಅಪಹಾಸ್ಯಕ್ಕೆ ಈಡಾಗುತ್ತದೆ ಎಂಬ ವಿವೇಕ ಪ್ರಭುತ್ವಕ್ಕೆ ಮೂಡಿದರೆ ಕ್ಷೇಮ.

ದಿನದ ಟ್ವೀಟ್

ನಿರಾಶಾದಾಯಕ ಬೆಳವಣಿಗೆ



ಪ್ರಾಮಾಣಿಕವಾಗಿ ಹೇಳುವುದಾದರೆ, ನನಗೆ ಸ್ವಲ್ಪಮಟ್ಟಿಗೆ ನಿರಾಸೆಯಾಗಿದೆ. ರಾಜಕೀಯ ನಾಯಕರು ಯಾರೇ ಆಗಿರಲಿ– ನೆಹರೂ, ಇಂದಿರಾ/ರಾಜೀವ್ ಗಾಂಧಿ ಅಥವಾ ಮೋದಿ– ಕ್ರೀಡಾಂಗಣಗಳಿಗೆ ಅವರ ಹೆಸರು ಇರಿಸುವುದು ಸರಿಯಲ್ಲ. ಕ್ರೀಡಾಂಗಣಗಳಿಗೆ ಕ್ರೀಡಾಪಟುಗಳ ಹೆಸರಿಡುವುದು ಸೂಕ್ತ. ಇಂತಹ ಬೆಳವಣಿಗೆಯು ರಾಜಕೀಯ ಹೊಂದಾಣಿಕೆಯೇ ಹೊರತು ಮತ್ತೇನೂ ಅಲ್ಲ.

(ಅಹಮದಾಬಾದ್‌ನ ಮೊಟೇರಾ ಸ್ಟೇಡಿಯಂಗೆ ನರೇಂದ್ರ ಮೋದಿ ಸ್ಟೇಡಿಯಂ ಎಂದು ಮರುನಾಮಕರಣ ಮಾಡಿರುವುದಕ್ಕೆ ಪ್ರತಿಕ್ರಿಯೆ)

ಅಭಿನವ್, ವಕೀಲ

25 ವರ್ಷಗಳ ಹಿಂದೆ

ಭಾನುವಾರ, 25-2-1996

• ಚುನಾವಣೆ ವೆಚ್ಚ ಸರ್ಕಾರ ಭರಿಸಲು ಪ್ರತಿಪಕ್ಷ ಆಗ್ರಹ

ನವದೆಹಲಿ, ಫೆ. 24 (ಪಿಟಿಐ)– ಚುನಾವಣಾ ಸುಧಾರಣೆ ಕುರಿತು ದಿನೇಶ್ ಗೋಸ್ವಾಮಿ ಸಮಿತಿ ನೀಡಿರುವ ವರದಿಯನ್ನು ಸಮರ್ಪಕವಾಗಿ ಜಾರಿ ಮಾಡುವ ಬದಲು ಬಿಡಿಬಿಡಿಯಾಗಿ ಕಾರ್ಯಾಚರಣೆಗೆ ತರುತ್ತಿರುವ ಸರ್ಕಾರದ ನಿಲುವನ್ನು ಪ್ರತಿಪಕ್ಷಗಳು ಖಂಡಿಸಿವೆ. ಚುನಾವಣೆ ವೆಚ್ಚವನ್ನು ಸರ್ಕಾರವೇ ಭರಿಸಬೇಕು ಹಾಗೂ ಲೋಕಪಾಲ ಮಸೂದೆಯನ್ನು ಶೀಘ್ರ ಜಾರಿಗೊಳಿಸಬೇಕು ಎಂದು ಒತ್ತಾಯಪಡಿಸಿವೆ.

ಚುನಾವಣೆ ವ್ಯವಸ್ಥೆಗಳಲ್ಲಿನ ಲೋಪಗಳನ್ನು ನಿವಾರಿಸಲು ಚುನಾವಣೆ ವೆಚ್ಚದ ಮಿತಿಯನ್ನು ಹೆಚ್ಚಿಸಲು ಸರ್ಕಾರ ಹಿಂದೇಟು ಹಾಕುತ್ತಿರುವುದಕ್ಕೆ ಪ್ರತಿಪಕ್ಷಗಳು ಅತೃಪ್ತಿ ಸೂಚಿಸಿವೆ.

• ಸರ್ಕಾರಿ ನೌಕರರ ಸಂಘ ತನಿಖೆಗೆ ಆಗ್ರಹ

ಬೆಂಗಳೂರು, ಫೆ. 24– ರಾಜ್ಯದಲ್ಲಿನ ಸರಿಸುಮಾರು ಐದು ಲಕ್ಷದಷ್ಟಿರುವ ಸರ್ಕಾರಿ ನೌಕರರಲ್ಲಿ ಅನುಮಾನಕ್ಕೆ ಕಾರಣವಾಗಿರುವ ತನಿಖಾ ವರದಿಯನ್ನು ಬದಿಗೊತ್ತಿ, ರಾಜ್ಯ ಸರ್ಕಾರಿ ನೌಕರರ ಸಂಘದಲ್ಲಿ ನಡೆದಿದೆ ಎನ್ನಲಾದ ಹಣ ಮತ್ತು ಅಧಿಕಾರ ದುರುಪಯೋಗದ ತನಿಖೆಯನ್ನು ದಕ್ಷ-ನ್ಯಾಯನಿಷ್ಠುರ ಅಧಿಕಾರಿಯೊಬ್ಬರಿಂದ ನಡೆಸಬೇಕು ಎಂದು ಸಂಘದ ಅಧ್ಯಕ್ಷ ಕೆ.ಸಿಪ್ಪೇಗೌಡ ಇಂದು ಇಲ್ಲಿ ಒತ್ತಾಯಿಸಿದರು.

50 ವರ್ಷಗಳ ಹಿಂದೆ

ಗುರುವಾರ, 25-2-1971

• ರಾಜಸ್ತಾನದಲ್ಲಿ ಉದ್ರಿಕ್ತ ಕಾರ್ಮಿಕರ ಮೇಲೆ ಗುಂಡು: 7 ಜನರ ಸಾವು

ಜೈಪುರ, ಫೆ. 24– ಕೋಟಾದಲ್ಲಿ ಇಂದು ಬೆಳಿಗ್ಗೆ ಜೆ.ಕೆ. ಸಿಂಥೆಟಿಕ್ ಖಾಸಗಿ ಕಾರ್ಖಾನೆಯ ಉದ್ರಿಕ್ತ ಕಾರ್ಮಿಕರನ್ನು ಚದುರಿಸಲು ಪೊಲೀಸರು ಹಾರಿಸಿದ ಗುಂಡಿಗೆ ಏಳು ಮಂದಿ ಮರಣ ಹೊಂದಿದರು. ಕಾರ್ಮಿಕ ಸಂಘದ ಹೇಳಿಕೆ ಪ್ರಕಾರ, 13 ಮಂದಿ ಕಾರ್ಮಿಕರು ಮರಣ ಹೊಂದಿದ್ದಾರೆಂದು ತಿಳಿದುಬಂದಿದೆ.

• ಕಲ್ಲೇಟಿನಿಂದ ಸರೋಜಿನಿ ಮಹಿಷಿ ತಲೆಗೆ ಪೆಟ್ಟು

ಧಾರವಾಡ, ಫೆ. 24– ಚುನಾವಣೆ ಭಾಷಣವೊಂದನ್ನು ಮುಗಿಸಿಕೊಂಡು ವಾಪಸ್ ಆಗುತ್ತಿದ್ದ ಕೇಂದ್ರ ಉಪ ಸಚಿವೆ ಡಾ.ಸರೋಜಿನಿ ಮಹಿಷಿ ಅವರತ್ತ ಇಂದು ತೂರಲಾದ ಕಲ್ಲು ಬಡಿದು ಅವರ ತಲೆಗೆ ಪೆಟ್ಟಾಗಿದೆ. ಕಲ್ಲೇಟಿನಿಂದ ಇನ್ನೈವರು ಆಡಳಿತ ಕಾಂಗ್ರೆಸ್ ಕಾರ್ಯಕರ್ತರಿಗೂ ಗಾಯಗಳಾಗಿವೆ.

ಖಾಸಗಿ ಹೂಡಿಕೆಯನ್ನು ಪ್ರೋತ್ಸಾಹಿಸುತ್ತಲೇ ಅದರ ಮೇಲಿನ ನಿಯಂತ್ರಣವನ್ನೂ ಹೆಚ್ಚಿಸುವುದು ಅನಿವಾರ್ಯ

ಕೃಷಿ: ಖಾಸಗೀಕರಣ ಮತ್ತು ನಿಯಂತ್ರಣ



ವಿಶ್ಲೇಷಣೆ

ಎಂ.ಎಸ್. ಶ್ರೀರಾಮ್

ಕೇಂದ್ರ ಸರ್ಕಾರ ಮತ್ತು ರೈತರ ನಡುವಿನ ಜಟಾಪಟಿ ಮುಂದುವರಿಯುತ್ತಲೇ ಇದೆ. ಹೊಸದಾಗಿ ಜಾರಿಗೆ ತರಲು ಹೊರಟಿರುವ ಕೃಷಿ ಕಾಯ್ದೆಗಳಲ್ಲಿ ಇರುವ ತೊಂದರೆಗಳನ್ನು ಬಿಂದುವಾರು ತೋರಿಸಿಕೊಡಬೇಕೆಂದು ಸರ್ಕಾರ ಪಟ್ಟುಹಿಡಿದಿದೆ. ಈ ಮೂರು ಕಾಯ್ದೆಗಳಲ್ಲಿ ಮೊದಲನೇ ಕಾಯ್ದೆಯನ್ನು 'ರೈತರ ಉತ್ಪತ್ತಿಯ ವ್ಯಾಪಾರ ಮತ್ತು ವ್ಯವಹಾರ (ಸುಗಮಗೊಳಿಸುವ, ಪ್ರೋತ್ಸಾಹಿಸುವ) ಕಾಯ್ದೆ– 2020' (The Farmers' Produce Trade and Commerce (Promotion and Facilitation) Bill, 2020) ಪರಿಶೀಲಿಸೋಣ.

ಈ ಕಾಯ್ದೆ ಎರಡು ಮುಖ್ಯ ವಿಷಯಗಳನ್ನು ಕೈಗೆತ್ತಿಕೊಂಡಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ವಿಧಿಸುವ ಮಾರುಕಟ್ಟೆ ಶುಲ್ಕ, ಸೆಸ್ ಮತ್ತು ಅದರ ನಿಯಮಾವಳಿಯು ಈವರೆಗೂ ಮಾರುಕಟ್ಟೆಯ ಪರಿಸರದಲ್ಲಿ ಅಲ್ಲದೇ ಎಪಿಎಂಸಿಯ ಅಧಿಕಾರ ಕ್ಷೇತ್ರವಾದ ಇಡೀ ಜಿಲ್ಲೆಯಲ್ಲಿ ಜಾರಿಯಾಗುತ್ತಿತ್ತು. ಹೊಸ ಕಾಯ್ದೆಯಲ್ಲಿ ಈ ವ್ಯಾಪ್ತಿಯನ್ನು ಮಾರುಕಟ್ಟೆ ಪರಿಸರಕ್ಕೆ ಸೀಮಿತಗೊಳಿಸಲಾಗಿದೆ. ಮಾರುಕಟ್ಟೆ ಪರಿಸರದಲ್ಲಿ ನೋಂದಾಯಿತ ಮತ್ತು ಅಧಿಕೃತ ವರ್ತಕರು ಮಾತ್ರ ಖರೀದಿಸಬಹುದಾದರೆ, ಹೊರಗಿನ ಪರಿಸರದಲ್ಲಿ ಇನ್‌ಕಂ ಟ್ಯಾಕ್ಸ್ ಪ್ಯಾನ್ ಕಾರ್ಡಿರುವ ಯಾರೇ ಆದರೂ ಉತ್ಪನ್ನಗಳನ್ನು ಖರೀದಿಸಬಹುದು. ಹೀಗಾಗಿ ಆ ವರ್ತಕರ ಮೇಲೆ ಯಾವುದೇ ನಿಯಂತ್ರಣ ಮತ್ತು ಲಗಾಮಿಲ್ಲದ ಪರಿಸ್ಥಿತಿ ಉಂಟಾಗುತ್ತದೆ. ಅಲ್ಲದೆ ಈ ವ್ಯವಹಾರದಲ್ಲಿ ಯಾವುದೇ ತಕರಾರು ಉಂಟಾದರೂ ನ್ಯಾಯಾಲಯಗಳ ಬಾಗಿಲನ್ನು ತಟ್ಟುವುದಕ್ಕೆ ಸಾಧ್ಯವಿಲ್ಲ. ಬದಲಿಗೆ, ಅಧಿಕಾರವರ್ಗದ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಬಳಿ ಇತ್ಯರ್ಥ ಮಾಡಿಕೊಳ್ಳಬೇಕಾದ ಅನಿವಾರ್ಯ ಇದೆ.


ಎಪಿಎಂಸಿಯ ಅಧಿಕಾರ ವಲಯವನ್ನು ವ್ಯಾಪಕವಾಗಿಸಿ, ಮಾರುಕಟ್ಟೆ ಪರಿಸರದಾಚೆ ನಡೆಯುವ ವ್ಯವಹಾರದ ಮೇಲೂ ನಿಯಂತ್ರಣವನ್ನು ಹಿಗ್ಗಿಸಿ, ತೆರಿಗೆಗಳನ್ನು ಹೇರುವ ಅಧಿಕಾರವನ್ನು ಕೊಡುತ್ತಾ ಕಾನೂನನ್ನು ಬದಲಾಯಿಸಲು, ತಕರಾರುಗಳನ್ನು ನ್ಯಾಯ ವ್ಯವಸ್ಥೆಯತ್ತ ಒಯ್ಯಲು ಅನುವಾಗುವಂತೆ ತಿದ್ದುಪಡಿಯನ್ನು ಪರಿಗಣಿಸಲು ಸರ್ಕಾರ ತಯಾರಿದೆ ಎನ್ನುವ ಸುದ್ದಿಗಳು ಬಂದಿವೆ. ಈ ಬದಲಾವಣೆಗಳನ್ನು ಕೈಗೊಂಡರೆ ಈ ಕಾಯ್ದೆಯಲ್ಲಿ ಏನೂ ಉಳಿಯುವುದಿಲ್ಲ. ಅದು ಟೊಳ್ಳುಟೊಳ್ಳಾಗುತ್ತದೆ. ಆ ನಂತರ ಈ ಕಾನೂನು ಇದ್ದರೂ ಇಲ್ಲದಂತೆಯೇ. ಈ ದೃಷ್ಟಿಯಿಂದ ಸರ್ಕಾರದ ಈ ಪ್ರಸ್ತಾವವನ್ನು ರೈತ ಸಂಘಗಳು ಒಪ್ಪಬೇಕು ಎಂದು ವಾದಿಸಬಹುದಾದರೂ ತಾತ್ವಿಕ ನೆಲೆಯಲ್ಲಿ ಈ ಕಾನೂನು ಯಾಕೆ ಇರಬೇಕೆಂಬ ಪ್ರಶ್ನೆಯನ್ನು ಹಿಡಿದು, ಅದು ರದ್ದಾಗಲು ಜಿದ್ದು ಹಿಡಿಯುವುದು ಸರಿಯೆಂದೇ ಹೇಳಬಹುದು.

ಆದರೆ ಈ ಚರ್ಚೆಯಲ್ಲಿ ನಾವು ಮೂಲ ವಿಷಯವನ್ನು ಮರೆಯುತ್ತಿದ್ದೇವೆ. ಕೇಂದ್ರ ಸರ್ಕಾರ ತನ್ನ ಜವಾಬ್ದಾರಿಯ ಆದ್ಯತೆಗಳಿಂದ ತಪ್ಪಿಸಿಕೊಳ್ಳುತ್ತಿದೆ. ಮೂಲ ವಿಷಯವೆಂದರೆ– ಮೊದಲಿಗೆ ರೈತರಿಗೆ ತಮ್ಮ ಉತ್ಪನ್ನಗಳ ಮೇಲೆ ಕನಿಷ್ಠ ಬೆಂಬಲ ಬೆಲೆಯಂತೂ ಗಿಟ್ಟಲೇಬೇಕೆನ್ನುವುದು. ಇದನ್ನು ಖಾತರಿಪಡಿಸಲು ಸರ್ಕಾರ ಕಾನೂನಿನ ಏರ್ಪಾಟು ಮಾಡಬೇಕು. ಈ ಭದ್ರ ಬುನಾದಿಯನ್ನು ಮೊದಲಿಗೆ ನಿರ್ಮಿಸಿದರೆ ನಂತರ ಮಾರುಕಟ್ಟೆಯು ಈ ಉತ್ಪನ್ನಗಳಿಗೆ ಲಾಭದಾಯಕ ಬೆಲೆಯನ್ನು ಕೊಡಲು ಸಾಧ್ಯವಾಗಬಹುದಾದ ಸಂಸ್ಥಾಗತ ಏರ್ಪಾಟನ್ನು ಸರ್ಕಾರ ಹೇಗೆ ಮಾಡಬಹುದು ಎನ್ನುವುದನ್ನು ನೋಡಬಹುದು.

ಈ ವ್ಯವಹಾರದಲ್ಲಿ ಎಪಿಎಂಸಿಗಳು ಈವರೆಗೂ ಎರಡು ಸ್ತರಗಳಲ್ಲಿ ರೈತರಿಗಾಗಿ ಕೆಲಸ ಮಾಡುತ್ತಿದ್ದವು. ಒಂದು, ರೈತರು ತಮ್ಮ ಉತ್ಪನ್ನಗಳನ್ನು ಮಾರಲು ಅನುವಾಗುವ ಮಾರುಕಟ್ಟೆ ಪರಿಸರಗಳ (ಮಂಡಿ) ನಿರ್ಮಾಣ. ಎರಡು, ತಮ್ಮ ಉತ್ಪನ್ನಗಳಿಗೆ ಹರಾಜು ಅಥವಾ ಟೆಂಡರ್ ಮೂಲಕ ಅತ್ಯಧಿಕ ಬೆಲೆ ಕಂಡುಕೊಳ್ಳಬಹುದಾದ ಸಾಂಸ್ಥಿಕ ಏರ್ಪಾಟು. ಇಷ್ಟರ ಮೇಲೆ ನೋಂದಾಯಿತ ವರ್ತಕ ಮತ್ತು ರೈತರ ನಡುವಿನ (ಮುಖ್ಯವಾಗಿ ಉತ್ಪನ್ನದ ಬೆಲೆಯ ಪಾವತಿಗೆ ಸಂಬಂಧಿಸಿದ) ಕರಾರು ಸಮಯಕ್ಕೆ ಜಾರಿಯಾಗುವಂತೆ ನೋಡಿಕೊಳ್ಳುವುದೂ ಅದರ ಕೆಲಸವಾಗಿತ್ತು. ಎಪಿಎಂಸಿಗಳು ಪಡೆದ ಶುಲ್ಕದಿಂದ ಮಾರುಕಟ್ಟೆ ಪರಿಸರದಲ್ಲಿ ಬೇಕಾದ ಮೂಲಾಧಾರ ಸವಲತ್ತುಗಳನ್ನು ನಿರ್ಮಿಸುವ ಕೆಲಸಗಳನ್ನೂ ಅವು ಕೈಗೊಳ್ಳುತ್ತಿದ್ದವು.

ಈಗಿರುವ ಈ ಪರಿಸ್ಥಿತಿಯಿಂದ ಆಗಬೇಕಾದ ಪ್ರಗತಿ ಯಾವ ದಿಕ್ಕಿನಲ್ಲಿದೆ ಎನ್ನುವ ಪ್ರಶ್ನೆಯನ್ನು ಕೇಳಿಕೊಂಡಾಗ ನಮಗೆ ಸಿಗುವ ಉತ್ತರಗಳು ಹೀಗಿವೆ: ಮೊದಲಿಗೆ ನಮಗೆ ಉತ್ಪನ್ನಗಳನ್ನು ಒಣಗಿಸುವುದಕ್ಕೆ, ಅವುಗಳ ಗುಣಮಟ್ಟವನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ವಿಂಗಡಿಸುವುದಕ್ಕೆ ಮತ್ತು ದಾಸ್ತಾನು ಮಾಡುವುದಕ್ಕೆ ಸವಲತ್ತುಗಳು ಬೇಕು.

ಸ್ವಾಮಿನಾಥನ್ ಆಯೋಗ ಸೂಚಿಸಿದಂತೆ ಹೊಸ ಮಾರುಕಟ್ಟೆ ಪರಿಸರ, ಅನೇಕ ಮಂಡಿಗಳ ನಿರ್ಮಾಣದ ಕೆಲಸವನ್ನು ಸರ್ಕಾರ ಕೈಗೊಳ್ಳಬೇಕಿದೆ. ಈ ಕೆಲಸವು ಖಾಸಗಿ ಕ್ಷೇತ್ರದಿಂದ ಆಗುತ್ತದೆಯೇ ಅಥವಾ ಸರ್ಕಾರವೇ ಅದನ್ನು ಕೈಗೊಳ್ಳುತ್ತದೆಯೇ ಅನ್ನುವುದು ಅಷ್ಟು ಮುಖ್ಯವಲ್ಲ. ಇಲ್ಲಿ ಖಾಸಗಿ ಹೂಡಿಕೆಯನ್ನು ನಾವು ಸ್ವಾಗತಿಸಬಹುದು. ಈ ಹೂಡಿಕೆಯು ಖಾಸಗಿ ಕ್ಷೇತ್ರಕ್ಕೆ ಲಾಭದಾಯಕವಾಗಲು ಸರ್ಕಾರ ವಿಶೇಷ ಸವಲತ್ತುಗಳನ್ನೂ ಕೊಡಬಹುದು. ನಿಯಂತ್ರಣಮುಕ್ತ ವಾತಾವರಣ ವಿದ್ದರೆ ಖಾಸಗಿ ಹೂಡಿಕೆಗಳು ಬರುತ್ತವೆಂದು ಕೇಂದ್ರ ಸರ್ಕಾರ ನಂಬಿದೆ. ಆದರೆ ಹೀಗೆ ಖಾಸಗಿ ಹೂಡಿಕೆಗಳು ಬಂದಾಗ ರೈತರ ಹಿತದೃಷ್ಟಿಯನ್ನು ಕಾಪಾಡಬೇಕಾದರೆ ಸರ್ಕಾರದ ನಿಯಂತ್ರಣ ಹೆಚ್ಚಬೇಕಾಗುತ್ತದೆಯೇ ಹೊರತು ಈಗಿನ ಕಾಯ್ದೆ ಯೋಚಿಸುತ್ತಿರುವಂತೆ ನಿಯಂತ್ರಣಮುಕ್ತತೆಯತ್ತ ಸಾಗುವುದು ಅಪಾಯದ ಮಾತು. ಮಾರುಕಟ್ಟೆಗೆ ಎಷ್ಟು ಮಾಲು ಬರುತ್ತಿದೆ, ಆ ಮಾಹಿತಿಯ ವಿಶ್ವಾಸಾರ್ಹತೆಯೇನು, ಬೆಲೆಗಳ ಏರುಪೇರಿನ ಮೇಲೆ ನಿಯಂತ್ರಣ ಮತ್ತು ರೈತರಿಗೆ ದಕ್ಕಬೇಕಾದ ಬೆಲೆ– ಮತ್ತು ಆ ಬೆಲೆಯ ಮೇಲೆ ಖರೀದಿಸಿದ್ದಕ್ಕೆ ಆಗಬೇಕಾದ ಪಾವತಿ– ಈ ಎಲ್ಲದರಲ್ಲೂ ರೈತರ ಹಿತದೃಷ್ಟಿಯನ್ನು ಕಾಪಾಡಬೇಕಾದರೆ ಖಾಸಗಿ ಹೂಡಿಕೆಯನ್ನು ಪ್ರೋತ್ಸಾಹಿಸುತ್ತಲೇ ನಿಯಂತ್ರಣವನ್ನೂ ಹೆಚ್ಚಿಸುವುದು ಅನಿವಾರ್ಯವಾಗಿದೆ.




ಮಾರುಕಟ್ಟೆಗೆ ಉತ್ಪನ್ನವನ್ನು ನೀಡುವ ಮತ್ತು ಅದನ್ನು ಮಾರುವ ಎರಡು ಘಟ್ಟಗಳಲ್ಲಿ ಈ ವ್ಯವಹಾರವನ್ನು ವಿಭಜಿಸಬಹುದು. ಉತ್ಪನ್ನಗಳ ಗುಣಮಟ್ಟ ಮತ್ತು ತೂಕವನ್ನು ನಿಶ್ಚಯಿಸಿ ದಾಸ್ತಾನು ಕೇಂದ್ರಕ್ಕೆ ಒಪ್ಪಿಸಿದರೆ, ಅದಕ್ಕೆ ತಕ್ಕ ಒಂದು ವೇರ್‌ಹೌಸ್ ರಸೀತಿಯನ್ನು ಸೃಷ್ಟಿಸಿ ಅದನ್ನು ಎಲೆಕ್ಟ್ರಾನಿಕ್ ವಿನಿಮಯ ಕೇಂದ್ರದಲ್ಲಿ ವ್ಯವಹರಿಸುವ ಏರ್ಪಾಟು ಮಾಡಬಹುದು. ಆಗ, ಮಾಲನ್ನು ದಾಸ್ತಾನು ಕೇಂದ್ರಕ್ಕೆ ನೀಡುವ ಮತ್ತು ಮಾರಾಟ ಕೈಗೊಳ್ಳುವ ಪ್ರಕ್ರಿಯೆಯನ್ನು ಬೇರ್ಪಡಿಸಿದಂತಾಗುತ್ತದೆ. ಇದು ನಿಜಕ್ಕೂ ಚಾಲನೆಗೆ ಬರಬೇಕಾದರೆ ಆಧುನಿಕ ಎಲೆಕ್ಟ್ರಾನಿಕ್ ವಿನಿಮಯ ಕೇಂದ್ರಗಳನ್ನು ನಿರ್ಮಿಸಬೇಕಾಗುತ್ತದೆ. ಷೇರು ಮಾರುಕಟ್ಟೆಯಲ್ಲಿ ನಾವು ಈ ನಿರ್ಮಾಣವನ್ನು ಕೈಗೊಂಡು ಅದರ ಸಾಧ್ಯತೆಯನ್ನು ನಿರೂಪಿಸಿದ್ದೇವೆ. ಈ ವಿನಿಮಯ ಕೇಂದ್ರಗಳಲ್ಲಿ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆ ದರದಲ್ಲಿ ವ್ಯಾಪಾರ ಆಗದಂತೆ, ಬೆಲೆಗಳಲ್ಲಿ ವಿಪರೀತ ಏರುಪೇರಾದಾಗ ಸರ್ಕಿಟ್ ಬ್ರೇಕರ್‌ಗಳನ್ನು ಹೇರುವ– ನಿಯಂತ್ರಣ ಸಾಧನಗಳನ್ನು ರೂಪಿಸಬಹುದು. ಸರ್ಕಾರ ಮತ್ತು ಎಫ್‌ಸಿಐ ವಿಕೇಂದ್ರಿತವಾಗಿ ಭಿನ್ನ ವಿನಿಮಯ ಕೇಂದ್ರಗಳಿಂದ ಕನಿಷ್ಠ ಬೆಂಬಲ ಬೆಲೆಯ ಖರೀದಿಯನ್ನು ಕೈಗೊಳ್ಳಬಹುದು. ಸಣ್ಣ ಮತ್ತು ಅತಿಸಣ್ಣ ರೈತರು ಪೂರೈಸಿದ ಉತ್ಪನ್ನಗಳನ್ನು ಗುರುತಿಸಲು ಸಾಧ್ಯವಾಗುತ್ತದಾದ್ದರಿಂದ, ಕೇವಲ ಆ ಮೂಲದಿಂದ ಬಂದ ಮಾಲನ್ನು ಮಾತ್ರ ಎಫ್‌ಸಿಐ ಖರೀದಿಸಬಹುದು.

ಈ ವ್ಯವಸ್ಥೆಯಲ್ಲಿ ಎದುರಾಗುವ ಸವಾಲೆಂದರೆ– ದಾಸ್ತಾನು ಕೇಂದ್ರಕ್ಕೆ ಉತ್ಪನ್ನ ಪೂರೈಸಿದ ನಂತರ, ಅದರ ಮಾರಾಟ ಮತ್ತು ಅಲ್ಲಿಂದ ಸಾಗಣೆ ಮಾಡುವ ಕಾಲದ ಬಾಡಿಗೆ ವಸೂಲು ಮಾಡುವ ಸಬಲವಾದ ಏರ್ಪಾಟನ್ನು ನಿರ್ಮಿಸುವುದು. ಇದು ಪಾರದರ್ಶಕವಾಗೂ ಸರಳವಾಗೂ ಇರಬೇಕು. ಈ ಕಾರ್ಯ ಸ್ಥಿರವಾಗಿ ನಡೆಯಬೇಕಾದರೆ ಇದರಲ್ಲಿ ಒಂದು ದಶಕದಷ್ಟು ಕಾಲದ- ಸಮಯದ ಹೂಡಿಕೆಯೂ ಅಗತ್ಯ. ಇದಕ್ಕೆ ಸಮಾನಾಂತರವಾಗಿ ರೈತರ ಹಿತದೃಷ್ಟಿ ಕಾಪಾಡುವ ನಿಯಮಾವಳಿಯೂ ವಿಕಸಿತಗೊಳ್ಳುತ್ತದೆ.

ಗಟ್ಟಿಯಾದ ಮೂಲ ಸೌಕರ್ಯದ ನಿರ್ಮಾಣ, ಆಧುನಿಕ ಯಂತ್ರೋಪಕರಣಗಳು, ತಾಂತ್ರಿಕತೆ, ಮಾರುಕಟ್ಟೆ ಪರಿಸರದ ನಿರ್ಮಾಣಕ್ಕೂ – ಮಾರುಕಟ್ಟೆಯ ಖಾಸಗೀಕರಣಕ್ಕೂ ಮೂಲಭೂತ ವ್ಯತ್ಯಾಸವಿದೆ. ಖಾಸಗೀಕರಣವೇ ಆಧುನಿಕತೆ ಎಂದು ನಂಬುವ ಈ ಕಾನೂನು, ಸದ್ಯ ನಮ್ಮೆದುರಿಗೆ ದೈತ್ಯಾಕಾರವಾಗಿ ನಿಂತಿರುವ ಮೂಲಭೂತ ಸಮಸ್ಯೆಯತ್ತ ನೋಡಲು ಅಡ್ಡವಾಗಿ ನಿಂತಿದೆ.

ಚುರುಮುರಿ



ಬಿಗ್‌ಬಾಸ್‌ಗೆ ಹುಲಿಗಳು!

• ಬಿ.ಎನ್.ಮಲ್ಲೇಶ್

'ಏನ್ರಲೆ, ಈ ಸಲದ ಬಿಗ್‌ಬಾಸ್‌ಗೆ ನಮ್ಮ ತೆಪರೇಸಿನ ಕಳಿಸಿದ್ರೆ ಹೆಂಗೆ? ಕಪ್ ಗೆದ್ಕಂಡ್ ಬರ್ತಾನೆ ಅನ್ಸುತ್ತಾ?' ಹರಟೆಕಟ್ಟೆಯಲ್ಲಿ ಗುಡ್ಡೆ ವಿಷಯ ಪ್ರಸ್ತಾಪಿಸಿದ.

'ಅಲ್ಲಿ ಒಳಗೆ ಹೋದ ಮೇಲೆ ಕೊನೀತಂಕ ತೆಪ್ಪಗಿರಬೇಕು. ಸ್ವಲ್ಪ ಹೆಚ್ಚು ಕಮ್ಮಿ ಆದ್ರೂ ಹೊರಗೆ ಕಳಿಸಿಬಿಡ್ತಾರಂತೆ...' ದುಬ್ಬೀರ ಮಾಹಿತಿ ನೀಡಿದ.

'ತೆಪ್ಪಗಿರದೆ ಏನ್ಮಾಡ್ತಾನೆ, ಮನೇಲಿ ಹೆಂಡ್ತಿ ಮುಂದೆ ಯಾವತ್ತಾದ್ರೂ ಪಿಟಿಕ್ ಅಂದಿದಾನಾ?' ಪರ್ಮೇಶಿ ನಕ್ಕ.

'ಅದು ಮನೇಲಿ, ಬಿಗ್‌ಬಾಸ್‌ನಲ್ಲಿ ಹೆಂಡ್ತಿ ಇರಲ್ವಲ್ಲ ಅದ್ಕೇ ಹೇಳಿದೆ' ದುಬ್ಬೀರ ವಾದಿಸಿದ.

'ನನ್ ವಿಷಯ ಮಾತಾಡದಿದ್ರೆ ನಿಮಗೆ ತಿಂದ ಅನ್ನ ಕರಗಲ್ಲ ಅಲ್ವ?' ಎಂದ ತೆಪರೇಸಿ, 'ನನ್ನ ವಿಷಯ ಬಿಡ್ರಿ, ಬಿಗ್‌ಬಾಸ್‌ಗೆ ನಮ್ಮ ಹುಲಿಗಳನ್ನ ಕಳಿಸಿದ್ರೆ ಹೆಂಗೆ?' ಅಂದ.

'ಹುಲಿಗಳಾ? ಯಾವುವು?'

'ರಾಜಾಹುಲಿ, ಹೌದು ಹುಲಿಯಾ, ಉತ್ತರ ಕರ್ನಾಟಕದ ಹುಲಿ, ಹೊನ್ನಾಳಿ ಹುಲಿ, ವಿಜಯಪುರದ ಹುಲಿ ಇತ್ಯಾದಿ...'

'ಕತಿ ಮುಗೀತು, ಬಿಗ್‌ಬಾಸ್ನೋರು ಏನು ಶೋ ನಡೆಸ್ತಿದಾರೋ ಸರ್ಕಸ್ ನಡೆಸ್ತಿದಾರೋ?' ಗುಡ್ಡೆ ಆಕ್ಷೇಪಿಸಿದ.

'ಮತ್ತೇನು ಈಗ ರಾಜ್ಯದಲ್ಲಿ ಸರ್ಕಾರ ನಡೀತೈತಿ ಅನ್ಕಂಡ್ಯಾ? ಸರ್ಕಸ್ಸೇ ನಡೀತಿರೋದು...' ತೆಪರೇಸಿ ನಕ್ಕ.

'ಆತು ಬಿಡಪ್ಪ, ಈಗ ಆ ಎಲ್ಲ ಹುಲಿಗಳನ್ನ ಒಟ್ಟಿಗೇ ಬಿಗ್‌ಬಾಸ್ ಮನಿಗೆ ಬಿಟ್ರೆ ಒಂದೇ ದಿನಕ್ಕೆ ಶೋ ಮುಗೀತತಿ ಅನ್ಸುತ್ತಪ್ಪ!'

'ಯಾಕೆ?'

'ಹುಲಿಗಳು ಸುಮ್ನಿರ್ತಾವಾ? ಕಿತ್ತಾಡಿ ಕಚ್ಚಾಡಿ ಎರಡೇ ದಿನಕ್ಕೆ ಒಂದೂ ಉಳಿದಿರಲ್ಲ ಅನ್ಸುತ್ತೆ'.

'ಅದೇ ತಪ್ಪು, ಎಲ್ಲ ಹುಲಿಗಳೂ ಚೆನ್ನಾಗಿ, ಸುಖವಾಗಿ ಕೊನೀತಂಕ ಇರ್ತವೆ'.

'ಹೌದಾ? ಹಂಗೆ?'

'ಹಂಗೆ ಅಂದ್ರೆ? ಅಧಿಕಾರ ಇದ್ರೆ ಕಚ್ಚಾಡ್ತಾವೆ. ಇಲ್ಲದಿದ್ರೆ ತೆಪ್ಪಗಿರ್ತಾವೆ!'

ಸಂಗತ

ಘನಮೌಲ್ಯಕ್ಕೆ ಬೇಕಾಗಿದೆ ಮನೆಮದ್ದು

ಜೀವ ಬೆಸೆಯುವ ಪ್ರೀತಿಯೊಂದಿಗೆ ವೈಚಾರಿಕ ಬೆಳಕನ್ನು ಎದೆ ತುಂಬಿಕೊಳ್ಳಬೇಕಾದ ತುರ್ತಿನಲ್ಲಿದೆ ವರ್ತಮಾನ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಕುಲಕಸುಬಿನಿಂದ ಅರಳಿದ ಜಾತಿಯು ಕೊನೆಗೆ ತಾರತಮ್ಯದ, ಶೋಷಣೆಯ ದಾಳವಾಗಿ ಉರುಳುವಂತಾಗಿದ್ದು ಮನುಷ್ಯಜನ್ಮದ ಮಹಾದುರಂತಗಳಲ್ಲೊಂದು. ಪರಂಪರೆಯ ತೋರುಗಂಬಗಳಾಗಿ ಜನಾಂಗಗಳನ್ನು ಬೆಸೆಯುವ, ಎಲ್ಲರನ್ನೂ ಒಳಗೊಳ್ಳುವ ಹಂಬಲದಲ್ಲಿ ಹುಟ್ಟಿಕೊಂಡ ಧರ್ಮಗಳು ಮನುಕುಲದ ವಿಭಜಕಗಳಂತೆ ಅಪಾರ್ಥಗೊಳ್ಳುತ್ತಿರುವ ಚಿತ್ರ ನಮ್ಮ ಕಣ್ಣೆದುರಿದೆ.

'ಜಗತ್ತಿನ ಎಲ್ಲ ಧರ್ಮಗಳೂ ಮನುಷ್ಯ ಧರ್ಮವೇ ಶ್ರೇಷ್ಠ ಎಂದಿದ್ದರೆ, ಅದನ್ನು ಅರ್ಥೈಸಿಕೊಳ್ಳುವುದರಲ್ಲಿ ಸೋತವರು ಮಾತ್ರ ಅವರವರ ಧರ್ಮಗಳೇ ಶ್ರೇಷ್ಠವೆಂದು ಬಡಿದಾಡಿಕೊಳ್ಳುತ್ತಾರೆ...' ಎಂದಿದ್ದರು ಕುವೆಂಪು. 'ಕುಂಬಾರಗೆ ವರುಷ ದೊಣ್ಣೆಗೆ ನಿಮಿಷ...' ಎಂಬಂತೆ, ಕಾಲಾಂತರದಿಂದ ಒಡಮೂಡಿದ ಅನ್ಯೋನ್ಯತೆಯು ಜಾತಿ-ಧರ್ಮದ ಕ್ಷುಲ್ಲಕ ಕಾರಣಕ್ಕೆ ಛಿದ್ರಗೊಳ್ಳುತ್ತಿರುವ ನಿತ್ಯ ಆತಂಕವೂ ನಮ್ಮ ವರ್ತಮಾನವನ್ನು ಕಾಡುತ್ತಿದೆ.

'ಈ ಭೂಮಿಯ ಮೇಲೆ ನಾನಾ ವಿಧದ ಜನರಿದ್ದಾರೆ. ಅವರನ್ನು ಭೂಮಿ, ನೀರು, ಜಾತಿ, ಮತ, ಆಚಾರಾಭ್ಯಾಸಗಳು ಬೇರ್ಪಡಿಸಿವೆ. ಆದರೆ ಎಲ್ಲರ ಹೃದಯ, ಬುದ್ಧಿಗಳು ಒಂದೇ ತೆರನಾಗಿವೆ. ಆಕಸ್ಮಿಕವಾಗಿ ಬರುವ ಒತ್ತಡಗಳು ಒಂದೋ ಅವರ ಮೂಲಭೂತ ಭಾವನೆಗಳನ್ನು ಅರಳಿಸುತ್ತವೆ ಅಥವಾ ಕೆರಳಿಸುತ್ತವೆ. ಅರಳಿದರೆ ಅದು ಸಾಹಿತ್ಯವಾಗಿ, ಸಂಗೀತವಾಗಿ ಅಧ್ಯಾತ್ಮವಾಗುತ್ತದೆ. ಮುದುಡಿದಾಗ ಹೊಡೆದಾಟ, ದೊಂಬಿ, ರಕ್ತಪಾತದಲ್ಲಿ ಕೊನೆಯಾಗುತ್ತದೆ. ಅದರ ಫಲವಾಗಿ ಅವರ ಪರಿಸರ, ಪ್ರಪಂಚವು ಭಾವನೆಗಳ ತೀವ್ರತೆಯಿಂದ ಕಂಪಿಸುತ್ತದೆ...' ಎಂದವರು ಗಾಂಧಿ.

ಬಾವಿಯಲ್ಲಿ ಒರತೆಗಳು ಪಸೆಯನ್ನೊಸರುತ್ತಲೇ ಇರುತ್ತವಾದರೂ ಕೆಲವೊಮ್ಮೆ ಹೂಳು ತುಂಬಿಕೊಂಡು ಜಲದ ಕಣ್ಣುಗಳು ಕಟ್ಟಿಕೊಳ್ಳುವುದು ಸಹಜ. ಸಮಾಜವೆಂಬ ಬಾವಿಯಲ್ಲಿನ ಹೂಳು ತೆಗೆದು ಮಾನವೀಯತೆಯ ಒರತೆಗಳು ತೆರೆಯುವಂತೆ ಕಾಯಬೇಕಿರುವುದು ಸಾಹಿತ್ಯ ಮತ್ತು ಸಮಾಜಮುಖಿ ಚಿಂತನೆಗಳ ಆದ್ಯ ಕರ್ತವ್ಯ.

ಈ ನಾಡಿನಲ್ಲಿ ಜಾತಿಪದ್ಧತಿಯನ್ನು ಮೀರಲು ನಡೆದ ಬಹುದೊಡ್ಡ ಸಾಮಾಜಿಕ ಚಳವಳಿಯೆಂದರೆ ಅದು ವಚನಕ್ರಾಂತಿ. ಶ್ರಮಸಂಸ್ಕೃತಿಯನ್ನು ಬಿತ್ತಿ, ಸಮಸಮಾಜವನ್ನು ಕನಸಿದವರು ಶರಣರು. ಆದರೆ, ಅನುಸರಣೆ ಮತ್ತು ಅರ್ಥೈಸುವಿಕೆಯಲ್ಲಾದ ತಪ್ಪಿನಿಂದಾಗಿ ಬಸವಣ್ಣನನ್ನೂ ಸಮುದಾಯವೊಂದಕ್ಕೆ ಸೀಮಿತಗೊಳಿಸಲಾಗುತ್ತಿದೆ. ದಾಸ ಪರಂಪರೆ, ಶಿಶುನಾಳ ಷರೀಫ, ವಾಲ್ಮೀಕಿ, ನಾರಾಯಣ ಗುರು, ಸೇವಾಲಾಲ್ ಮೊದಲಾದವರ ವಿಷಯದಲ್ಲೂ ಅದೇ ಕಥೆ. ಕತ್ತಲ ಜಗತ್ತಿಗೆ ಸಂತರು, ಧರ್ಮ ಸಂಸ್ಥಾಪಕರು ತೋರಿದ ಬೆಳಕಿನ ದಾರಿಯಲ್ಲೀಗ ಮಬ್ಬು ಕವಿದಿದೆ.

ಜಗತ್ತಿನಾದ್ಯಂತ ಏಳುನೂರು ಕೋಟಿ ಮನುಷ್ಯರಿದ್ದರೂ ಮನುಷ್ಯತ್ವಕ್ಕಾಗಿ ಹುಡುಕುವ ಪರಿಸ್ಥಿತಿ ಇದೆ! ಎಲ್ಲರೂ ದೇವರು-ಧರ್ಮದ ಮಾತಾಡುತ್ತಾರಾದರೂ ದಯೆ, ಕರುಣೆಗಳಿಗಾಗಿ ಬೇಡುವುದು ಮಾತ್ರ ಇನ್ನೂ ನಿಂತಿಲ್ಲ. ಕೇವಲ ಒಬ್ಬ ಮನುಷ್ಯನಾಗುವುದು ಅಷ್ಟೊಂದು ಕಷ್ಟವೇ ಈ ಭೂಮಿಯಲ್ಲಿ?

ದ್ವೇಷಬಿತ್ತನೆಯಲ್ಲಿ ಭವಿಷ್ಯದ ಪೀಳಿಗೆಗೆ ರೋಗಗ್ರಸ್ತ ನಾಳೆಗಳನ್ನು ಕರುಣಿಸುತ್ತಿರುವ ವಿದ್ಯಮಾನಗಳು ತಲೆಮಾರುಗಳನ್ನು ಅನಿಶ್ಚಿತತೆಯ ಪೆಡಂಭೂತವಾಗಿ ಕಾಡುವುದು ಸತ್ಯ. ಋಷಿಸಂತರ ಆದರ್ಶಗಳನ್ನು ವಿಚಾರವಾಗಿ ಆರಾಧಿಸುವ, ಪಾಲಿಸುವ, ಎದೆಯಲ್ಲಿಟ್ಟುಕೊಳ್ಳುವ ಬದಲು ಅವರನ್ನು ಗುಡಿ ಕಟ್ಟಿ ಕೂಡಿಹಾಕಿದ್ದೇವೆ. ಜೀವಪರವಾಗಿ ಬದುಕು ಸವೆಸಿದ ದಾರ್ಶನಿಕರನ್ನೂ ಕಡೆಗೆ ದೇವರನ್ನೂ ಜಾತಿ-ಧರ್ಮಗಳಿಗೆ ಗಂಟುಹಾಕಿ, ಸಂಕುಚಿತತೆಯ ಸಂಕೋಲೆಯಲ್ಲಿ ಬಂಧಿಸಿಬಿಟ್ಟಿದ್ದೇವೆ. ದೇವರಿಗೂ ಇಲ್ಲಿ ಸ್ವಾತಂತ್ರ್ಯ ಕಳಕೊಂಡು ಗೋಳಾಡುವ ಪರಿಸ್ಥಿತಿ!



'ಸರ್ವೇಜನಾಃ ಸುಖಿನೋ ಭವಂತು' ಮಂತ್ರವನ್ನಾಗಿ 'ವಸುದೈವ ಕುಟುಂಬಕಂ' ತತ್ವವನ್ನಾಗಿ ಕಲಿಸಿದ ಹಿಂದೂ ಧರ್ಮಕ್ಕೆ ಮತ್ತೊಬ್ಬರ ಶಾಂತಿಯನ್ನು ಕಬಳಿಸುವುದು ಸಾಧ್ಯವೇ?, 'ನಿನ್ನಂತೆಯೇ ನೆರೆಯವರನ್ನೂ ಪ್ರೀತಿಸು...' ಅಂತ ಬೋಧಿಸಿದ ಯೇಸುವಿನ ಆರಾಧಕನಾದ ನೈಜ ಕ್ರೈಸ್ತನೊಬ್ಬನಿಗೆ ಕೋಮುವಾದಿಯಾಗಲು ಸಾಧ್ಯವೇ?, 'ಒಬ್ಬ ಮನುಷ್ಯನು ಸಂಕಟಪಟ್ಟರೆ ಸಕಲ ಮನುಕುಲವೇ ಸಂಕಟಪಟ್ಟಂತೆ...' ಎಂದು ಅರುಹಿದ ಕುರಾನ್‌ನ ನೈಜ ಅನುಯಾಯಿಗಳಿಗೆ ನಿರಪರಾಧಿಗಳನ್ನು ಹಿಂಸಿಸಲು ಸಾಧ್ಯವಾಗುವುದೇ? ಅಸಾಧ್ಯ. ಹಾಗಿದ್ದಾಗ ಧರ್ಮದ ಹೆಸರಲ್ಲಿ ನಡೆಯುವ ಗಲಭೆಗಳಿಗೂ ಧರ್ಮಕ್ಕೂ ಸಂಬಂಧವಿಲ್ಲ ಎನ್ನುವುದು ಸ್ಪಷ್ಟ.

ಕ್ರೌರ್ಯವನ್ನು ಬಿತ್ತುವವರು ಯಾರಿದ್ದರೂ ಅವರೆಲ್ಲಾ ಧರ್ಮವಿರೋಧಿಗಳೇ ಆಗಿರುತ್ತಾರೆ! 'ಕುಲದ ನೆಲೆಯನೇನಾದರು ಬಲ್ಲಿರಾ...?' ಎಂದು ಗದರುತ್ತಲೇ 'ಮಾನವಧರ್ಮ ಬಲುದೊಡ್ಡದು...' ಅಂತ ಸಾರಿದೆ ದಾಸವಾಣಿ. ಜೀವ ಬೆಸೆಯುವ ಪ್ರೀತಿಯೊಂದಿಗೆ ವೈಚಾರಿಕ ಬೆಳಕನ್ನು ಎದೆ ತುಂಬಿಕೊಳ್ಳಬೇಕಾದ ತುರ್ತಿನಲ್ಲಿದೆ ವರ್ತಮಾನ. ದೇಶ-ಭಾಷೆ, ಹಣ-ಅಂತಸ್ತು, ಜಾತಿ-ಧರ್ಮದ ಟ್ಯಾಗ್‌ಲೈನ್ ಕಳಚಿಟ್ಟು, ಕೇವಲ ಮನುಷ್ಯನಾಗಿ ಜೀವ-ಜೀವಗಳಲ್ಲಿ ದೈವತ್ವವನ್ನು ಕಂಡು, ಎಲ್ಲರೊಂದಿಗೆ ಅಕ್ಕರೆಯಲ್ಲಿ ಒಡನಾಡಲು ಸಾಧ್ಯವಾದರೆ, ಇವತ್ತಿನ ಜಗತ್ತನ್ನು ಕಾಡುವ ಅರ್ಧದಷ್ಟು ಗಂಭೀರವ್ಯಾಧಿಗಳು ಅವಾಗಿಯೇ ಬಗೆಹರಿಯುತ್ತವೆ.

ಜಾಗತಿಕ ಸಮಸ್ಯೆಯಾಗಿ ಬದಲಾಗಿರುವ ತೀವ್ರಗತಿಯ ಅಸಹನೆ, ಕ್ರೌರ್ಯಗಳೆಂಬ ಕ್ಯಾನ್ಸರ್‌ಗೆ ಈಗ ಮನೆಮದ್ದು ಅರೆಯಬೇಕಿದೆ. ಪ್ರೀತಿ, ಸಹನೆ, ಸಹಬಾಳ್ವೆಯ ಘನಮೌಲ್ಯಗಳೊಂದಿಗೆ ಸರಳ, ಸಂಸ್ಕಾರಯುತ ಬದುಕಿಗೆ ಜನ ಹೊರಳಬೇಕಿದೆ.

ವಾಚಕರ ವಾಣಿ

ಮಹನೀಯರ ಮಾದರಿ ನಡೆ

'ಮಠಗಳ ಪೋಷಣೆ ಮತ್ತು ಭಕ್ತರು' ಎಂಬ ಮಲ್ಲಿಕಾರ್ಜುನ ಹೆಗ್ಗಳಗಿ ಅವರ ಲೇಖನ (ಸಂಗತ ಫೆ. 24) ಪ್ರಸ್ತುತ ಸಂದರ್ಭದಲ್ಲಿ ಎಲ್ಲರಿಗೂ ದಾರಿದೀಪವಾಗಬೇಕಿದೆ. ಸಿದ್ಧೇಶ್ವರ ಶ್ರೀಗಳು ಆತ್ಮಸಾಕ್ಷಿಗೆ ಬದ್ಧರಾಗಿ ಪ್ರಶಸ್ತಿ, ಪುರಸ್ಕಾರ, ಅನುದಾನ ಎಲ್ಲವನ್ನೂ ವಿನಮ್ರತೆಯಿಂದ ತ್ಯಜಿಸಿರುವುದು ಹಾಗೆಯೇ ಮೃತ್ಯುಂಜಯ ಸ್ವಾಮೀಜಿ ಅವರು ರಾಷ್ಟ್ರಪತಿಯಾಗಿದ್ದ ಬಾಬು ರಾಜೇಂದ್ರ ಪ್ರಸಾದ್ ಅವರು ತಮ್ಮ ಮಠಕ್ಕೆ ಭೇಟಿ ನೀಡಿದಾಗ, ಅವರ ಬರುವಿಕೆಗಿಂತ ವಿದ್ಯಾರ್ಥಿಗಳ ಊಟಕ್ಕೆ ಧಾನ್ಯ ಸಂಗ್ರಹಿಸಲು ತೆರಳುವುದಕ್ಕೆ ಆದ್ಯತೆ ನೀಡಿದ್ದುದು ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ನುಡಿಯನ್ನು ನೆನಪಿಗೆ ತರುತ್ತದೆ. ಇಂತಹ ಮಹನೀಯರಿಂದಲೇ ಅಲ್ಲವೆ ಆದರ್ಶ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕಿರುವುದು. ಈಗಿನ ಪರಿಸ್ಥಿತಿ ಬೇರೆಯೇ ಇದೆ. ಅನುದಾನ, ಪುರಸ್ಕಾರಕ್ಕಾಗಿ ಪ್ರಭಾವಿಗಳ ಮೇಲೆ ಒತ್ತಡ ಹಾಕುವಂತಹ ಕಾಲಘಟ್ಟ ಇದು. ಮಹನೀಯರ ಸರಳ-ಸಜ್ಜನಿಕೆಯ ನಡೆ ಎಲ್ಲರಿಗೂ ಸ್ಫೂರ್ತಿದಾಯಕವಾಗಲಿ.

ಸೌಮ್ಯ ಚೆಲುವರಾಜ್, ಬೆಂಗಳೂರು

ರೈತ ಚಳವಳಿ ಮತ್ತು ಬರಹಗಾರರ ವಿರೋಧ

'ರೈತ ಚಳವಳಿ ಬಗ್ಗೆ ಬರಹಗಾರರ ಮೌನವೇಕೆ?' ಎಂದು ಲೇಖಕ ಪುರುಷೋತ್ತಮ ಬಿಳಿಮಲೆ ವ್ಯಗ್ರರಾಗಿ ಪ್ರಶ್ನಿಸಿದ್ದಾರೆ (ಪ್ರ.ವಾ., ಫೆ. 21). ಬರಹಗಾರರೆಲ್ಲರೂ ಅದನ್ನು ವಿರೋಧಿಸಲೇ ಬೇಕಾದದ್ದು ನೈತಿಕ ಕರ್ತವ್ಯವಾಗಿದ್ದು, ಏಕೆ ವಿರೋಧಿಸುತ್ತಿಲ್ಲವೆಂಬ ಧ್ವನಿ ಅವರ ಮಾತಿನಲ್ಲಿ ಅಡಗಿರುವಂತಿದೆ. ರೈತ ಚಳವಳಿ ಈಗ ಕೇವಲ ರೈತ ಚಳವಳಿಯಾಗಿ ಉಳಿಯದೆ ಅದನ್ನು ರಾಜಕೀಯಗೊಳಿಸಲಾಗಿದೆ ಎಂಬುದು ಸೂರ್ಯಸ್ಪಷ್ಟ. ಇನ್ನು ದೇಶದ ಬುದ್ಧಿಜೀವಿಗಳೆನಿಸಿಕೊಂಡ ಬರಹಗಾರರು ಕೂಡ ಕೇವಲ ಬರಹಗಾರರಾಗಿ ಉಳಿದಿಲ್ಲ. ಕಾಂಗ್ರೆಸ್ ಬರಹಗಾರರು, ಕಮ್ಯುನಿಸ್ಟ್ ಬರಹಗಾರರು, ಬಿಜೆಪಿ ಬರಹಗಾರರು ಮತ್ತು ಪಕ್ಷೇತರ ಬರಹಗಾರರು ಎಂದೆಲ್ಲ ವಿಭಕ್ತಗೊಂಡಿರುವುದು ಕೂಡ ಸುಳ್ಳೇನಲ್ಲ. ಕೆಲವರಂತೂ ಕೆಲವು ರಾಜಕೀಯ ಪಕ್ಷಗಳ ಸಕ್ರಿಯ ಸದಸ್ಯರಾಗಿ, ವಕ್ತಾರರಾಗಿ, ಚುನಾವಣಾ ಪ್ರಚಾರದಲ್ಲೂ ತೊಡಗಿಸಿಕೊಂಡಿರುವುದು ಮತ್ತು ಅಂಥವರು ಆ ಪಕ್ಷಗಳ ನಿಲುವುಗಳನ್ನು ಸಮರ್ಥಿಸುವುದು ತಮ್ಮ ನೈತಿಕ ಕರ್ತವ್ಯವೆಂದು ತಿಳಿದು ಅದರಂತೆ ನಡೆದುಕೊಳ್ಳುತ್ತಿರುವುದೂ ತಿಳಿದೇ ಇದೆ. ಹಾಗಿರುವಾಗ ಬರಹಗಾರರೆಲ್ಲರೂ ಯಾವುದೇ ವಿಷಯವನ್ನಾಗಲಿ ಏಕಕಂಠದಿಂದ ಸಮರ್ಥಿಸುತ್ತಾರೆಂದಾಗಲಿ ಅಥವಾ ಸಮರ್ಥಿಸಬೇಕೆಂದಾಗಲಿ, ವಿರೋಧಿಸುತ್ತಾರೆಂದಾಗಲಿ ಅಥವಾ ವಿರೋಧಿಸಬೇಕೆಂದಾಗಲಿ ಅದು ಹೇಗೆ ಬಿಳಿಮಲೆಯವರು ಆಶಿಸಿದ್ದಾರೋ ತಿಳಿಯದು.

ಯಾವುದನ್ನು ಇವರು ನವ ವಸಾಹತುಶಾಹಿ ಎಂದು ಹೇಳುತ್ತಾರೋ ಅದು ಈ ದೇಶಕ್ಕೆ ಕಾಲಿಟ್ಟು ಹಲವು ದಶಕಗಳೇ ಸಂದಿವೆ. ಅಂಥ ನವ ವಸಾಹತುಶಾಹಿಯನ್ನು ಅನುಮಾನದಿಂದ ನೋಡುತ್ತಿದ್ದ ರಾಜಕೀಯ ಮುಂದಾಳುಗಳು, ಚಿಂತಕರು ಆನಂತರ ಅದರ ಸಮರ್ಥಕರಾಗಿ ಅದನ್ನು ತೆರೆದ ತೋಳುಗಳಿಂದ ಸ್ವಾಗತಿಸಿ ಅಪ್ಪಿಕೊಂಡದ್ದೂ ಈಗಾಗಲೇ ಇತಿಹಾಸ.

ಡಾ. ಆರ್.ಲಕ್ಷ್ಮೀನಾರಾಯಣ, ಬೆಂಗಳೂರು

ಖಜಾನೆ

ಅಮೆರಿಕ: ಖಜಾನೆ ಕಾರ್ಯದರ್ಶಿಯಾಗಿ ಮಹಿಳೆ ನೇಮಕ (ಪ್ರ.ವಾ., ಜ. 27)
ನಾರೀ ನೇತೃತ್ವದಲ್ಲಿ
ಸುರಕ್ಷಿತವಾಗಿರುತ್ತದೆ
ಖಜಾನೆ!
(ದೇವರಾಣೆ).
ಖಾಲಿಯಾದರೆ, ಕಾಲಧರ್ಮ!
(ಅಂದಹಾಗೆ, ಮನೆಗಳಲ್ಲಿ ಎಲ್ಲೆಡೆ
ಕಾಮಿನಿಯೆ ಖಜಾಂಚಿ ತಾನೆ?)

ಸಿ.ಪಿ.ಕೆ., ಮೈಸೂರು

ಜಿಲ್ಲಾಧಿಕಾರಿ ಮೆರವಣಿಗೆ: ಮಾದರಿ ನಡೆಯಲ್ಲ

'ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ' ಕಾರ್ಯಕ್ರಮಕ್ಕಾಗಿ ಬಂದ ಜಿಲ್ಲಾಧಿಕಾರಿಗೆ ಹೆಸರಘಟ್ಟ ಹೋಬಳಿಯ ಹನಿಯೂರು ಗ್ರಾಮಸ್ಥರು ಪೂರ್ಣಕುಂಭ ಸ್ವಾಗತ ನೀಡಿ, ಎತ್ತಿನ ಬಂಡಿಯಲ್ಲಿ ಮೆರವಣಿಗೆ ಮಾಡಿದ್ದಾರೆ (ಪ್ರ.ವಾ., ಫೆ. 21). ಇದು ಗ್ರಾಮಸ್ಥರ ಸೌಜನ್ಯ ಮತ್ತು ಮುಗ್ಧತೆಗೆ ನಿದರ್ಶನ. ಆದರೆ ಜನತಂತ್ರ ವ್ಯವಸ್ಥೆಯಲ್ಲಿ ಈ ನಡೆ ಒಪ್ಪುವಂಥದ್ದಲ್ಲ. ಸರ್ಕಾರದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು ಅಧಿಕಾರಿಗಳ ಪ್ರಮುಖ ಕರ್ತವ್ಯ. ಅಂತಹ ಉದ್ದೇಶಕ್ಕಾಗಿ ಗ್ರಾಮಕ್ಕೆ ಬಂದ ಅಧಿಕಾರಿಗಳನ್ನು ಸ್ವಾಗತಿಸಲು ಮೆರವಣಿಗೆಯೇ ಮಾರ್ಗವಲ್ಲ. ಅಷ್ಟಕ್ಕೂ ಗ್ರಾಮಸ್ಥರೇ ಕಚೇರಿಗಳಿಗೆ ಬಂದಾಗ ಆಗದೇ ಇರುವ ಕೆಲಸ ಅಧಿಕಾರಿಗಳು ಗ್ರಾಮಕ್ಕೆ ಬಂದಾಗ ಮಾತ್ರ ಆಗುವುದು ನಿಜವೇ? ಕಚೇರಿಗಳಲ್ಲಿ ಕೆಲಸ ಸಲೀಸಾಗಿ ಆಗುವುದು ಸಾಧ್ಯವಿಲ್ಲವೆಂದಾದರೆ ಅದಕ್ಕೆ ಮೂಲಕಾರಣಗಳನ್ನು ಹುಡುಕುವುದು ಮಾರ್ಗವಾಗಬೇಕು. ಇಲ್ಲವೇ ಸರ್ಕಾರಿ ಕಚೇರಿಗಳ ನಿರ್ವಹಣೆಯನ್ನು ತಪ್ಪಿಸಿ 'ಮೊಬೈಲ್ ಕಚೇರಿ'ಗಳನ್ನು ಆರಂಭಿಸಬಹುದಲ್ಲವೇ?

ಡಾ. ಜಿ.ಬೈರೇಗೌಡ, ಬೆಂಗಳೂರು

ಕುಬೇರನ ಸ್ಥಾನ ಕದಲಿಸಿದ ಚಂಚಲೆ

ಕೆಲವು ವರ್ಷಗಳ ಕಾಲ ಜಗತ್ತಿನ ಅತ್ಯಂತ ಸಿರಿವಂತ ವ್ಯಕ್ತಿಯಾಗಿದ್ದ ಅಮೆಜಾನ್‌ನ ಜೆಫ್ ಬೆಝೋಸ್ ಇದೇ ಜನವರಿಯಲ್ಲಿ ಆ ಸ್ಥಾನವನ್ನು ವಿದ್ಯುಚ್ಛಕ್ತಿ ಮೂಲಕ ಚಲಿಸುವ ಕಾರನ್ನು ಉತ್ಪಾದಿಸುವ ಟೆಸ್ಲಾದ ಒಡೆಯ ಎಲಾನ್ ಮಸ್ಕ್ ಅವರಿಗೆ ಬಿಟ್ಟುಕೊಟ್ಟರು. ವಾಯುಮಾಲಿನ್ಯ ತಡೆಗಟ್ಟುವ ದೃಷ್ಟಿಯಿಂದ ಜಗತ್ತಿನಾದ್ಯಂತ ಇಂತಹ ಕಾರುಗಳಿಗೆ ಬೇಡಿಕೆ ಹೆಚ್ಚಾದಂತೆ ಟೆಸ್ಲಾಕ್ಕೆ ಶುಕ್ರದೆಸೆ.

ಇಂತಹ ಕಾರುಗಳ ಖರೀದಿಗೆ ಬಿಟ್ ಕಾಯಿನ್ ಮೂಲಕವೂ ಹಣ ಪಾವತಿಸಬಹುದು ಹಾಗೂ ತಾನೂ ಈ ರೀತಿಯ ಕ್ರಿಪ್ಟೊ ಕರೆನ್ಸಿಯಲ್ಲಿ ಹಣ ಹೂಡಿದ್ದೇನೆ ಎಂದು ಎಲಾನ್ ಹೇಳಿದ್ದೇ ತಡ ಬಿಟ್ ಕಾಯಿನ್ ಮುಂತಾದ ಡಿಜಿಟಲ್ ಕರೆನ್ಸಿಯ ಬೆಲೆ ಗಗನಕ್ಕೇ ಚಿಮ್ಮಿತು. ಯಾಕೋ ಈ ಬೆಲೆ ಸ್ವಲ್ಪ ಹೆಚ್ಚೇ ಆಯಿತೆಂದು ಎಲಾನ್ ಟ್ವೀಟ್ ಮಾಡಿದ್ದೇ ತಡ, ಒತ್ತಡಕ್ಕೊಳಗಾಗಿ ಈಗ ಕೆಳಗೆ ಜಾರಿದೆ. ಟೆಸ್ಲಾ ಕಂಪನಿಯ ಷೇರು ಬೆಲೆಯಲ್ಲಿ ಇತ್ತೀಚೆಗೆ ಒಂದೇ ದಿನ 66.80 ಅಮೆರಿಕನ್ ಡಾಲರ್‌ನ ಕುಸಿತ ಉಂಟಾಗಿ ಎಲಾನ್ ಅವರ ಸಂಪತ್ತೂ 15.2 ಶತಕೋಟಿ ಅಮೆರಿಕನ್ ಡಾಲರ್‌ನಷ್ಟು ಕರಗಿದೆ. ಅಂದರೆ ಸುಮಾರು ಒಂದು ಲಕ್ಷದ ಹತ್ತು ಸಾವಿರ ಕೋಟಿ ರೂಪಾಯಿಗಳು! ಹಾಗೆಯೇ ಕುಬೇರರಲ್ಲಿ ಅತ್ಯಂತ ಕುಬೇರನ ಮೊದಲ ಸ್ಥಾನ ಖಾಲಿ ಮಾಡಬೇಕಾಗಿ ಬಂದಿದೆ. ಲಕ್ಷ್ಮಿ ಎಷ್ಟು ಚಂಚಲ ಅಲ್ಲವೇ?

ಈ ರೀತಿಯ ಬಿಟ್ ಕಾಯಿನ್‌ಗಳು ನಮಗೆ ಬೇಡವೆಂದು ಸರ್ಕಾರವು ಭಾರತದಲ್ಲಿ ಇಂತಹ ಕ್ರಿಪ್ಟೊ ಕರೆನ್ಸಿಯನ್ನು ನಿಷೇಧಿಸಿ ಆತ್ಮನಿರ್ಭರದ ಸ್ವದೇಶಿ ಡಿಜಿಟಲ್ ಕರೆನ್ಸಿಯನ್ನು ಚಲಾವಣೆಗೆ ತರುವ ಸಿದ್ಧತೆಯಲ್ಲಿದೆ. ಡಿಜಿಟಲ್ ಇಂಡಿಯಾ ಅಭಿಯಾನದಲ್ಲಿ ಇದೂ ಒಂದು ಮಹತ್ತರ ಹೆಜ್ಜೆಯಾಗಲಿದೆ.

ಭರತ್ ಬಿ.ಎನ್., ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ಸೇರುವ ಹಟ

ಅರ್ಹತೆ ಮೀರಿ ಪಲ್ಲಟ ಸಲ್ಲದು

• ದಾಸನೂರು ಕೂಸಣ್ಣ



1950ರಲ್ಲಿ ನಮ್ಮ ಸಂವಿಧಾನ ಜಾರಿಗೆ ಬರುವುದರೊಂದಿಗೆ 1936ರ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ಪಂಗಡ ಪರಿಕಲ್ಪನೆಯ ಸಾಮಾಜಿಕ-ಸಾಂಸ್ಥಿಕ ಸ್ವರೂಪ ಬದಲಾಯಿತು. ಆಗ, ನಿಮ್ನ ವರ್ಗ (ಮಾಜಿ ಅಸ್ಪೃಶ್ಯರು) ಮತ್ತು ಆದಿವಾಸಿಗಳನ್ನು ಗುರುತಿಸುವುದಕ್ಕಾಗಿ ಎರಡು ವಿಧಾನಗಳಿದ್ದವು. ಸಂಪೂರ್ಣ ಪ್ರಮಾಣದ ಅಸ್ಪೃಶ್ಯತೆ (Absolute Untouchables) ಅನುಭವಿಸಿದ್ದವರನ್ನು ಪರಿಶಿಷ್ಟ ಜಾತಿ ಎಂದು ಗುರುತಿಸಲಾಯಿತು; ಮೂಲ 44 ಆದಿಮ ಬುಡಕಟ್ಟುಗಳ (Aboriginal Tribes) ಗುಣಲಕ್ಷಣವಿದ್ದ ಸಮುದಾಯಗಳು ಸೇರಿ ಪರಿಶಿಷ್ಟ ಪಂಗಡ ಆಯಿತು. ಇವೆರಡು ಗುಂಪುಗಳಿಗಿಂತ ಮೇಲಿದ್ದ ನಿಮ್ನ ವರ್ಗ ಮತ್ತು ಬುಡಕಟ್ಟುಗಳು ವಿವಿಧ ಸ್ತರದ ಅತಿ ಹಿಂದುಳಿದ ವರ್ಗಗಳಾದವು.

ಸಂವಿಧಾನವು ಪ್ರತಿಪಾದಿಸಿದ ಸಾಮಾಜಿಕ ನ್ಯಾಯದ ಪರಿಕಲ್ಪನೆಯು ಈಗ ಮೂರಾಬಟ್ಟೆಯಾಗುತ್ತಿದೆ. ಆ ಕಾರಣಕ್ಕಾಗಿಯೇ ಮೀಸಲಾತಿಯನ್ನು ರಾಜಕೀಯ ಮತ್ತು ಸಾಮಾಜಿಕ ಪ್ರಾಬಲ್ಯವನ್ನು ಮುಂದಿಟ್ಟುಕೊಂಡು ಪಡೆಯುವ ಪ್ರಯತ್ನ ಜೋರಾಗಿದೆ.

ಸಾಮಾಜಿಕ ಸ್ಥಿತಿಗತಿ ಮತ್ತು ಭೌಗೋಳಿಕ ಚಲನೆಯು ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳನ್ನು ನಿರ್ಣಯಿಸುವ ನೆಲೆಗಟ್ಟಾಗಿದ್ದವು ಎಂಬುದನ್ನು ಗಮನದಲ್ಲಿ ಇರಿಸಿಕೊಂಡೇ ಈಗಿನ ಮೀಸಲಾತಿ ಹೋರಾಟವನ್ನು ನೋಡಬೇಕು.

ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ ಬೇರೆ ಪ್ರಾಂತ್ಯದಲ್ಲಿದ್ದ ಕೆಲವು ಭೌಗೋಳಿಕ ಪ್ರದೇಶಗಳು ಕರ್ನಾಟಕಕ್ಕೆ ಸೇರ್ಪಡೆಯಾದವು. ಭೌಗೋಳಿಕ ಪ್ರದೇಶಗಳ ಜತೆಗೆ ಅಲ್ಲಿದ್ದ ಕೆಲವು ಸಮುದಾಯಗಳು ಕೂಡ ರಾಜ್ಯದ ಭಾಗವಾದವು. ಹಾಗಾಗಿ, ಮೂಲ ರಾಜ್ಯದಲ್ಲಿ ಈ ಸಮುದಾಯಗಳಿಗೆ ಯಾವ ಸ್ಥಾನಮಾನ ಇತ್ತೋ ಅದನ್ನೇ ಹೊಸ ರಾಜ್ಯದಲ್ಲಿಯೂ ಮುಂದುವರಿಸಲಾಯಿತು.

ಸಂವಿಧಾನದ 341 ಮತ್ತು 342ನೇ ವಿಧಿ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಹಾಗೂ 340ನೇ ವಿಧಿಯಲ್ಲಿ ಇತರ ಹಿಂದುಳಿದ ವರ್ಗಗಳನ್ನು ಗುರುತಿಸಲಾಗಿದೆ. ರಾಜ್ಯದ ಬಹುತೇಕ ಹಿಂದುಳಿದ ವರ್ಗಗಳ ಆಯೋಗಗಳು ಐದು ಅಂಶಗಳ ಆಧಾರದಲ್ಲಿ ಜಾತಿ ಗುಂಪುಗಳನ್ನು ರೂಪಿಸಿವೆ. ಅವುಗಳೆಂದರೆ, 1. ಬಡ ರೈತ ಮತ್ತು ಕೂಲಿಕಾರ ಸಮುದಾಯ, 2. ಸಾಂಪ್ರದಾಯಿಕ ಸೇವೆ ನೀಡುವ ಸಮುದಾಯಗಳು, 3. ಸಾಂಪ್ರದಾಯಿಕ ಕುಶಲಕರ್ಮಿ ಸಮುದಾಯಗಳು, 4. ಸುಧಾರಿತ ಕುಶಲಕರ್ಮಿ ಸಮುದಾಯಗಳು ಮತ್ತು 5. ಭಿಕ್ಷುಕ, ಅಲೆಮಾರಿ, ಅರೆ ಅಲೆಮಾರಿ, ಅಧಿಸೂಚಿತ ಅಪರಾಧೀಕರಣ ಬುಡಕಟ್ಟು ಮತ್ತು ವಿಮುಕ್ತ ಸಮುದಾಯಗಳು. ಹಾಗಾಗಿ, ಕರ್ನಾಟಕದ ಹಿಂದುಳಿದವರ ಪಟ್ಟಿಯು ರಾಷ್ಟ್ರದಲ್ಲೇ ವೈಜ್ಞಾನಿಕವಾಗಿದೆ. ಈ ಸ್ತರ ವಿನ್ಯಾಸ ಮತ್ತು ಚಲನೆಗಳನ್ನು ಅರಿಯಲಾಗದ ಸಮುದಾಯಗಳು ಮೀಸಲಾತಿಗಾಗಿ ಹಿಂದೆ-ಮುಂದೆ ಜಿಗಿಯುತ್ತಿವೆ. ಹಿಂದುಳಿದ ಸಮುದಾಯದಿಂದ ಪರಿಶಿಷ್ಟ ಪಂಗಡ ಆಗಬೇಕೆನ್ನುವ ಅಥವಾ ಹಿಂದುಳಿದ ಸಮುದಾಯಗಳಲ್ಲೇ ಹಿನ್ನೆಗೆತ ಮಾಡಬೇಕೆನ್ನುತ್ತಿರುವ ಸಮುದಾಯಗಳಿಗೆ, ಈ ಸಾಮಾಜಿಕ ಸೂತ್ರ ಗೋಚರಿಸುತ್ತಿಲ್ಲ. ಹಾಗಾಗಿ, ಸಾಮಾಜಿಕ ಸಮಾನ ಅವಕಾಶಗಳ ಮೂಲಕ ಸಂಪಾದಿಸಬೇಕಿರುವ ಸಂರಕ್ಷಣೆಗಳನ್ನು ಪರಿಶಿಷ್ಟ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಮೀಸಲಾತಿಯ ಮೂಲಕ ಪಡೆಯಬೇಕೆಂಬ ಬೇಡಿಕೆ ಮುಂದಿಡುತ್ತಿವೆ.

ರಾಜ್ಯದಲ್ಲಿ ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಪ್ರಮಾಣವು ಶೇ 6.95ರಷ್ಟಕ್ಕೇರಿದೆ (2011). ಇಲ್ಲಿಯೂ ಸಣ್ಣ ಮೀನುಗಳನ್ನು ದೊಡ್ಡ ಮೀನುಗಳು ನುಂಗುವ ಪ್ರವೃತ್ತಿ ಇದೆ; ಅತ್ಯಂತ ದುರ್ಬಲ ಬುಡಕಟ್ಟುಗಳಿಗೆ ಮೀಸಲಾತಿ ಸಿಗದೆ ಕಂಗಾಲಾಗಿರುವ ದಾರುಣ ಸ್ಥಿತಿ ಈ ಮೀಸಲಾತಿ ಪಟ್ಟಿಗೆ ಸೇರಬೇಕೆನ್ನುವವರಿಗೆ ಅರ್ಥವಾಗುತ್ತಿಲ್ಲ. ಬೇಡರು ಪಡೆದ ಮೀಸಲು ಸ್ಥಾನಗಳನ್ನು ಕಂಡು ಅನೇಕ ಸಮುದಾಯಗಳು ಇದರ ಫಲಾನುಭವಿ ಆಗಬೇಕೆನ್ನುವ ಹಟ ಮಾಡುತ್ತಿವೆ. ಆದರೆ, ಮೀಸಲು ಪ್ರಮಾಣ ಹೆಚ್ಚಳವು ಸಾಂವಿಧಾನಿಕವಾಗಿ ಮಾನ್ಯವಾಗಿಲ್ಲ ಎಂಬುದನ್ನು ಎಲ್ಲರೂ ಮರೆಯುತ್ತಿರುವಂತೆ ಕಾಣಿಸುತ್ತಿದೆ. ಯಾವುದೇ ಸಮುದಾಯವು ಪರಿಶಿಷ್ಟ ಪಂಗಡಕ್ಕೆ ಸೇರಬೇಕಾದರೆ ಅದರಲ್ಲಿ ಮೂಲತಃ ಆದಿಮವಾದ ಲಕ್ಷಣ, ಭೌಗೋಳಿಕ ಪ್ರತ್ಯೇಕ ಅಸ್ಮಿತೆ, ವಿಶಿಷ್ಟ ಬುಡಕಟ್ಟು ಸಾಂಸ್ಕೃತಿಕ ಗುಣ, ಅನ್ಯರೊಂದಿಗೆ ಬೆರೆಯುವುದಕ್ಕೆ ಸಂಕೋಚ ಮತ್ತು ಆರ್ಥಿಕವಾಗಿ ತೀರಾ ಹಿಂದುಳಿದಿರುವಿಕೆಯಂತಹ ಸ್ವರೂಪ ಇರಬೇಕು.

ಸಮಾಜದ ಮಧ್ಯಮ ಹಂತದಲ್ಲಿರುವ ಕುರುಬ, ಮಡಿವಾಳ, ಬೆಸ್ತ ಮುಂತಾದ ಸಮುದಾಯಗಳು ಈ ಮೀಸಲಾತಿಗೆ ಅರ್ಹರಾಗುವವೇ? ಕಾಡು ಕುರುಬ, ಜೇನು ಕುರುಬ ಹಾಗೂ ಗೊಂಡರ ಕುಲಾಚಾರಗಳಡಿ ನುಗ್ಗುವ ಕಸರತ್ತನ್ನು ಕುರುಬರು ಐದು ದಶಕಗಳಿಂದ ಮಾಡುತ್ತಿದ್ದಾರೆ. ಜನಗಣತಿ (1961) ಮತ್ತು ಕುಲಶಾಸ್ತ್ರೀಯ ಅಧ್ಯಯನದ ವರದಿಗಳಲ್ಲಿ ಕುರುಬ ಪದ ಅಪಭ್ರಾಂಶಿಕವಾಗಿ ಸೇರಿದೆ ಎಂಬ ಅಭಿಪ್ರಾಯಗಳಿವೆ. ಗೊಂಡ್ ಹಿಂದುಳಿದ ಪ್ರವರ್ಗವಾಗಿತ್ತು (1936). ಆದರೆ, ಹಲವು ರಾಜ್ಯಗಳಲ್ಲಿ ಪರಿಶಿಷ್ಟ ಪಂಗಡದ ಅರ್ಹತೆ ಪಡೆದು, ರಾಷ್ಟ್ರೀಯ ಸಂಖ್ಯಾಬಲದಲ್ಲಿ ದ್ವಿತೀಯ ಸ್ಥಾನದಲ್ಲಿದೆ. ಸ್ವಾತಂತ್ರ್ಯಪೂರ್ವದಲ್ಲಿಯೇ ಬಾಂಬೆ ಮತ್ತು ಹೈದರಾಬಾದ್ ಪ್ರಾಂತ್ಯಗಳಲ್ಲಿದ್ದ ಈ ಸಮುದಾಯದ ಜನರು ಕರ್ನಾಟಕದಲ್ಲಿ ಬುಡಕಟ್ಟು ಸಮುದಾಯಕ್ಕೆ ಸೇರ್ಪಡೆಗೊಂಡಿದ್ದಾರೆ. ಕುರುಬ/ಕುರುಮ/ಧನಗರ್ ಜಾತಿಗಳು ಇದರ ಒಳ ಪಂಗಡವಾಗಿದ್ದರೆ ಅಂದೇ ಈ ಮೀಸಲಾತಿ ಪಟ್ಟಿಗೆ ಸೇರುತ್ತಿದ್ದವು.

ಹಿಂದಿನ ಯಾವುದೇ ಕುಲಶಾಸ್ತ್ರೀಯ ಅಧ್ಯಯನ ಮತ್ತು ಜನಗಣತಿಯಲ್ಲಿ ಗೊಂಡ್ (Koitur) ಮತ್ತು ಕುರುಬ ನಡುವಿನ ಸಾಮಾಜಿಕ ಸಂಬಂಧಗಳು ರುಜುವಾತಾಗಿಲ್ಲ. ಗಾಮವಕ್ಕಲಿಗರೂ ಸಹ ಗೊಂಡರಲ್ಲ. ಗೊಂಡರು-ಕುರುಬರು-ಗಾಮವಕ್ಕಲಿಗರು ಒಂದೆಂದು ವಾದಿಸುವುದು ಗೊಂಡರಿಗೆ ಮಾಡುವ ಸಾಮಾಜಿಕ ದ್ರೋಹವಾಗುತ್ತದೆ. ಒಂದುವೇಳೆ, ರಾಜಕೀಯ ಒತ್ತಡಗಳಿಗೆ ಕೇಂದ್ರ ಸರ್ಕಾರ ಮಣಿದು ಓಟಿನ ದುರಾಸೆಯಿಂದ ಕುರುಬರನ್ನು ಪರಿಶಿಷ್ಟ ಪಂಗಡವಾಗಿಸಿದರೆ ಬೇಡರನ್ನೇ ಅರಗಿಸಿಕೊಳ್ಳಲಾಗದ ಅತಿಸೂಕ್ಷ್ಮ ಬುಡಕಟ್ಟುಗಳು ಮೀಸಲಾತಿಯಿಂದ ಮತ್ತಷ್ಟು ದೂರ ಹೋಗಬೇಕಾಗುತ್ತವೆ. ಕುರುಬರು ಸುಧಾರಿಸಿದ ನಾಗರಿಕ ಪ್ರವರ್ಗ ಎನ್ನುವುದೇ ಸೇರ್ಪಡೆಗೆ ಕೇಂದ್ರ ಸರ್ಕಾರ ಸಮ್ಮತಿಸದಿರಲು ಕಾರಣ. ಆದರೆ ಬೇಡರಿಗೆ ಬಾಂಬೆ ಕರ್ನಾಟಕದಲ್ಲಿ ಮೀಸಲಾತಿಯಿದ್ದ ಕಾರಣ, ಇತ್ತೀಚಿನ ತಿದ್ದುಪಡಿಯಲ್ಲಿ ತಳವಾರ ಮತ್ತು ಪರಿವಾರ ಸಹ ಉಪ ಪಂಗಡಗಳೆಂದು ಸಾರಲಾಗಿದೆ. ಆದರೆ ಬೆಸ್ತ, ಗಂಗಾಮತಸ್ಥ, ಬೊಯಾ ಸಮುದಾಯಗಳಿಗೆ ಈ ಪದಗಳು ಸಲ್ಲದಿಲ್ಲದ್ದರೂ ಈ ಗುಂಪುಗಳಿಗೆ ಅನ್ಯಾಯ ಆಗಿದೆ ಎಂಬುದು ಸತ್ಯ. ತಳಸ್ತರದ ಪಂಗಡಗಳಿಗೆ ಆಗುತ್ತಿರುವ ಸಾಂವಿಧಾನಿಕ ಅನ್ಯಾಯಗಳು ಇರುಳುಗಣ್ಣಿನ ರಾಜಕಾರಣಕ್ಕೆ ಮೆಳ್ಳುಗಣ್ಣಿನ ಆಡಳಿತ ಸಾಥಿ ಎಂಬುದನ್ನು ಎತ್ತಿ ತೋರಿಸುತ್ತದೆ.

ಪಂಚಮಸಾಲಿ, ವೀರಶೈವ ಜಂಗಮರ ಸಾಮಾಜಿಕ ಸ್ಥಾನದಲ್ಲಿರುವ ಬಲಿಷ್ಠ ಕೃಷಿಕ ಸಮುದಾಯವಾಗಿದ್ದು ಪ್ರವರ್ಗ 2(ಎ) ಮೀಸಲಾತಿಗಾಗಿ ಆಗ್ರಹಿಸುತ್ತಿದೆ. ಅಲ್ಲಿರುವ 102 ಜಾತಿಗಳ ಒಳವಿನ್ಯಾಸವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ಅವರಲ್ಲಿ ಸಾಂಪ್ರದಾಯಿಕ ಸೇವಾ ನಿರತರು ಕಡಿಮೆ ಇದ್ದಾರೆ ಮತ್ತು ಹೆಚ್ಚಿನ ಸಮುದಾಯಗಳು ಸಾಂಪ್ರದಾಯಿಕ ಕುಶಲಕರ್ಮಿ ಉತ್ಪಾದಕ ಸಮುದಾಯಗಳಾಗಿವೆ. ಅಂದರೆ, ಇವುಗಳ ಭೂಹಿಡುವಳಿ ರಚನೆ ಹಲವಾರು ಕೋನಗಳಾಗಿ ವಿಭಜನೆಗೊಂಡು ಭೂರಹಿತರ ಪ್ರಮಾಣ ಹೆಚ್ಚಿದೆ ಎಂದರ್ಥ. ಒಟ್ಟಾರೆ, ಹಿಂದುಳಿದ ವರ್ಗಗಳಲ್ಲೇ ಅಧಿಕ ಜನಸಂಖ್ಯೆ ಹೊಂದಿರುವ ಸಮುದಾಯ ಇದು. ಈ ಮೀಸಲಾತಿಗಾಗಿ ಆಗ್ರಹಿಸುವ ಹಕ್ಕು ಪಂಚಮಸಾಲಿಗಳಿಗಿದೆ; ಆದರೆ ಈ ಗವಾಕ್ಷಿಗೆ ಸೇರುವ ಅರ್ಹತೆ ಇದೆಯೇ ಎನ್ನುವುದು ಸಾಂವಿಧಾನಿಕ ಪ್ರಶ್ನೆ.

ಲಿಂಗಾಯತ ಸಮುದಾಯಗಳನ್ನು ಪ್ರಾಥಮಿಕ ಸಮೀಕ್ಷೆಗೆ ಒಳಪಡಿಸಿದರೆ ಸರ್ಕಾರಿ ಉದ್ಯೋಗ ಮತ್ತು ಸಂಪತ್ತು ಕ್ರೋಡೀಕರಣಗಳಲ್ಲಿ ಪಂಚಮಸಾಲಿ, ಬಣಜಿಗ, ವೀರಶೈವ, ಜಂಗಮರು ಯಾವ ಕ್ರಮಾಂಕದಲ್ಲಿದ್ದಾರೆಂದು ತಿಳಿಯುತ್ತದೆ. ದುರ್ಬಲ ಲಿಂಗಾಯತ ಸಮುದಾಯಗಳ ಸಂಕಷ್ಟವು ಲಿಂಗಾಯತ ಬಲಿಷ್ಠ ಕೋಮುಗಳಿಗೆ ಕಾಣಿಸುತ್ತಿಲ್ಲ ಎಂಬುದು ನಿಜ. ಹಾಗಾಗಿಯೇ 'ಬಲಿಷ್ಠರಿಗೆ ಅನ್ಯಾಯ' ಎಂಬ ಕೂಗು ವಿಧಾನ ಸೌಧದಲ್ಲಿ ಧ್ವನಿಸುತ್ತಿದೆ. ಈ ದನಿ ರಾಜಕಾರಣದಿಂದ ಧರ್ಮಕಾರಣವಾಗಿ ಸಾಮಾಜೀಕರಣದ ವಕ್ರಸುಳಿಯಲ್ಲಿ ನಲುಗುತ್ತಿದೆ. ಆಗ್ರಹಗಳು ಸಾಂವಿಧಾನಿಕ ಚೌಕಟ್ಟಿನಲ್ಲಿದ್ದರಷ್ಟೇ ಮನ್ನಣೆ ಎನ್ನುವ ಎದೆಗಾರಿಕೆಯನ್ನು ಸರ್ಕಾರ ತೋರಬೇಕಿದೆ. ಒಂದುವೇಳೆ ಪಂಚಮಸಾಲಿಯಂತಹ ಸಮುದಾಯ ಅಪ್ಪಿತಪ್ಪಿ 2(ಎ) ಕಕ್ಷೆಗೆ ಸೇರಿದರೆ ಈಡಿಗ, ವಿಶ್ವಕರ್ಮ, ಕುರುಬ ಮತ್ತು ಅನೇಕ ಸಣ್ಣಪುಟ್ಟ ಸಮುದಾಯಗಳು ಮುಂದೆ ಮಂಗಮಾಯ. ಇದು ಸಂವಿಧಾನದ ಧೋರಣೆ ಆಗಬಾರದಷ್ಟೇ.

(ಲೇಖಕ: ಸಮುದಾಯ ಚಿಂತಕ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ, ಬೆಂಗಳೂರು)



ಕುದುರೆಗಳ ಮೇಲೆ ಸರಂಜಾಮು ಹೇರಿ ಹೊರಟ ಅಲೆಮಾರಿ ಗುಂಪು

ಅಲೆಮಾರಿಗಳ ಅಹವಾಲು

ಮನೆಯೇ ಇಲ್ಲದವರಿಗೆ ಮಠದ ಸಾರಥ್ಯವೆಲ್ಲಿ?

• ವಿಜಯಕುಮಾರ್ ಎಸ್.ಕೆ.

ಮೀಸಲಾತಿ ಪಟ್ಟಿಯಲ್ಲಿ ಪರಿಷ್ಕರಣೆ, ಬದಲಾವಣೆ, ಪ್ರಮಾಣ ಹೆಚ್ಚಳ ಮಾಡುವಂತೆ ಹಲವು ಸಮುದಾಯದ ರಾಜಕಾರಣಿಗಳು, ಮಠಾಧೀಶರು ಬೀದಿಗಿಳಿದಿದ್ದಾರೆ. ಸದಾ ಬೀದಿಯಲ್ಲೇ ಬದುಕುವ 74 ಅಲೆಮಾರಿ ಸಮುದಾಯಗಳು ಮೀಸಲಾತಿ ಪಟ್ಟಿಯಲ್ಲಿದ್ದರೂ, ಅದರ ಲಾಭ ಪಡೆಯಲು ಆಗಿಲ್ಲ. ಅವರ ಪರ ಧ್ವನಿ ಎತ್ತಲು ಒಬ್ಬೇ ಒಬ್ಬ ಶಾಸಕ ಅಥವಾ ಸಂಸದರಿಲ್ಲ. ಅವರ ಕೂಗು ಅಕ್ಷರಶಃ ಅರಣ್ಯ ರೋದನವಾಗಿದೆ.

ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಲ್ಲಿ 51 ಅಲೆಮಾರಿ ಸಮುದಾಯಗಳು, ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿರುವ 54 ಜಾತಿಗಳಲ್ಲಿ 23 ಅಲೆಮಾರಿ ಸಮುದಾಯಗಳಿವೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 54 ಶಾಸಕರು ರಾಜ್ಯ ವಿಧಾನಸಭೆಯಲ್ಲಿದ್ದಾರೆ. ಆದರೆ, ಈ ಅಲೆಮಾರಿ ಸಮುದಾಯಗಳನ್ನು ಪ್ರತಿನಿಧಿಸುವ ಒಬ್ಬ ಶಾಸಕ ವಿಧಾನಸಭೆ ಮತ್ತು ಸಂಸತ್ ಪ್ರವೇಶಿಸಿದ ಉದಾಹರಣೆ ಇಲ್ಲ. ಜಿಲ್ಲಾ ಪಂಚಾಯಿತಿಯ ಒಬ್ಬ ಸದಸ್ಯ, ಗ್ರಾಮ ಪಂಚಾಯಿತಿ ಮತ್ತು ನಗರ ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ಬೆರಳೆಣಿಕೆಯ ಸದಸ್ಯರು ಇದ್ದಾರೆ ಎಂಬುದಷ್ಟೇ ಈ ಸಮುದಾಯದ ಹೆಗ್ಗಳಿಕೆ

'ಸಾಧು–ಸಂತರ ವೇಷಧರಿಸಿ ಭಿಕ್ಷಾಟನೆ ಮಾಡುವ ವೃತ್ತಿಯ 'ಸುಡಗಾಡು ಸಿದ್ಧ' ಸಮುದಾಯ ಅಲೆಮಾರಿಗಳ ಪಟ್ಟಿಯಲ್ಲಿ ಇದೆ. ಆದರೆ, ನಮ್ಮ ಪರ ಧ್ವನಿಯಾಗಲು ನಿಜವಾದ ಸ್ವಾಮೀಜಿಗಳ್ಯಾರೂ ಇಲ್ಲ. ಈ ತನಕ ನೆಲೆ ನಿಲ್ಲಲು ಸಾಧ್ಯವಾಗದ ನಮಗೆ ಮನೆಗಳೇ ಇಲ್ಲ, ಇನ್ನು ಮಠ ಎಲ್ಲಿಂದ ಕಟ್ಟೋದು ಸ್ವಾಮಿ' ಎನ್ನುತ್ತಾರೆ ಈ ಸಮುದಾಯದ ಜನರು.

ಹಗಲು ವೇಷ, ಬೈರಾಗಿ ವೇಷ, ಗೊಂಬೆಯಾಟ, ಮೋಡಿಯಾಟ, ಹಚ್ಚೆ ಹಾಕುವುದು, ಕೋಲೆ ಬಸವನ ಆಟ, ತತ್ವಪದ ಗಾಯನ, ಶಹನಾಯಿ ನುಡಿಸುವುದು, ಗರುಡಗಂಭ ಹೊತ್ತು ಭಿಕ್ಷಾಟನೆ, ಕಣಿ ಹೇಳುವುದು, ತಲೆಕೂದಲು ವ್ಯಾಪಾರ, ರಂಗೋಲಿ ಮಾರಾಟ, ಬುಟ್ಟಿ, ಚಾಪೆ ಹೆಣೆಯುವುದು, ಕಾಚು ತಯಾರಿಕೆ, ಹಂದಿ ಸಾಕಾಣಿಕೆ, ಮೀನುಗಾರಿಕೆ, ಚರ್ಮಗಾರಿಕೆ, ಅಲೆಮಾರಿ ಬೇಟೆಗಾರಿಕೆ, ಅರಣ್ಯ ಕಿರು ಉತ್ಪನ್ನಗಳ ಸಂಗ್ರಹ... ಹೀಗೆ ಹಲವು ಪಾರಂಪರಿಕ ಕಸುಬುಗಳನ್ನು ನಂಬಿಕೊಂಡು ಊರಿನಿಂದ ಊರಿಗೆ ಅಲೆದಾಡಿಕೊಂಡು ತುತ್ತಿನ ಚೀಲ ತುಂಬಿಸಿಕೊಳ್ಳುವುದು ಇವರ ವೃತ್ತಿ.

ಅರಣ್ಯ ನಾಶಕ್ಕೆ ಅಡ್ಡಿಯಾಗಿದ್ದ ಕಾರಣಕ್ಕೆ ಬ್ರಿಟಿಷರಿಂದ ಅಪರಾಧಿ ಬುಡಕಟ್ಟು ಎಂದು ಘೋಷಣೆ ಮಾಡಿಸಿಕೊಂಡ ಗಂಟಿ ಚೋರ್ಸ್, ಮಾಂಗ್ ಗಾರುಡಿ ಸಮುದಾಯಗಳು ಅಲೆಮಾರಿ ಪಟ್ಟಿಯಲ್ಲಿವೆ. 'ಅಪರಾಧಿ ಬುಡಕಟ್ಟು ಎಂದು ಬ್ರಿಟಿಷರ ಘೋಷಣೆ' ಎಂಬ ಅಂಶ ಸರ್ಕಾರ ಸಿದ್ಧಪಡಿಸಿರುವ ಈ ಸಮುದಾಯಗಳ ಪಾರಂಪರಿಕ ವೃತ್ತಿ ಪಟ್ಟಿಯಲ್ಲಿ ಈಗಲೂ ಇದೆ.

'ಸ್ವಂತ ಊರಿಲ್ಲದ ಕಾರಣ ಮಕ್ಕಳೊಂದಿಗೆ ಊರೂರು ಸುತ್ತುವ ಅಲೆಮಾರಿಗಳಿಗೆ ಪ್ರಾಥಮಿಕ ಶಿಕ್ಷಣವೇ ದೊರೆಯುತ್ತಿಲ್ಲ. ಶಿಕ್ಷಣವೇ ಇಲ್ಲದ ಕಾರಣ ಸರ್ಕಾರಿ ಉದ್ಯೋಗ ಮತ್ತು ಇತರ ಮೀಸಲಾತಿ ಸೌಲಭ್ಯ ಪಡೆಯಲಾಗಿಲ್ಲ. ಆಶ್ರಯ ಮನೆಗಳ ಯಾವ ಯೋಜನೆಯೂ ಇವರನ್ನು ತಲುಪಿಲ್ಲ. ಸ್ವಂತ ನಿವೇಶನ ಇದ್ದವರಿಗೆ ಆಶ್ರಯ ಮನೆಗಳು ಮಂಜೂರಾಗುತ್ತವೆ. ಆಧಾರ್ ಕಾರ್ಡ್, ಪಡಿತರ ಚೀಟಿಯನ್ನೇ ಹೊಂದಿರದ ನಮಗೆ ಸ್ವಂತ ನಿವೇಶನ ಎಲ್ಲಿದೆ' ಎಂದು ಅವರು ಪ್ರಶ್ನಿಸುತ್ತಾರೆ.

'ದೊಂಬ, ಕೊರಮ, ಕೊರಚ, ಸುಡಗಾಡು ಸಿದ್ಧ, ಶಿಳ್ಳೆಕ್ಯಾತ ಹೀಗೆ... ನಮ್ಮ ಸಮುದಾಯದ ಹೆಸರುಗಳೇ ಬೈಗುಳದ ಸೂಚಕವಾಗಿವೆ. ಇಂತಹ ಜಾತಿ ಎಂದು ಹೇಳಿಕೊಳ್ಳಲು ಸಾಧ್ಯವಾಗದಷ್ಟು ಹೀನಾಯ ಸ್ಥಿತಿ ನಮ್ಮದು. ಅಸ್ಪೃಶ್ಯರಲ್ಲೇ ಅಸ್ಪೃಶ್ಯರು ನಾವು' ಎನ್ನುತ್ತಾರೆ ಅಲೆಮಾರಿ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಬಿ.ಎಚ್. ಮಂಜುನಾಥ ದಾಯತ್ಕರ್.

'ಸಾಮಾನ್ಯವಾಗಿ ಈ ಸಮುದಾಯಗಳು ನಗರದೊಳಗೆ ಅಥವಾ ನಗರದ ಅಂಚಿನಲ್ಲಿ ಟೆಂಟ್‌ಗಳಲ್ಲಿ ಜೀವನ ನಡೆಸುತ್ತಿವೆ. ಸರ್ಕಾರ ಸವಲತ್ತುಗಳನ್ನು ದೊರಕಿಸುವ ಮಾತು ಹಾಗಿರಲಿ; ಕಳ್ಳತನ, ದರೋಡೆ ಪ್ರಕರಣಗಳಲ್ಲಿ ನಿಜವಾದ ಆರೋಪಿಗಳು ಸಿಗದಿದ್ದಾಗ ಪೊಲೀಸರು ಇವರನ್ನು ಬಂಧಿಸಿ ಕೇಸುಗಳನ್ನು ಹಾಕಿ ಜೈಲಿಗೆ ತಳ್ಳುತ್ತಾರೆ. ನಮ್ಮ ಕುಲಕಸುಬೇ ಕಳ್ಳತನ ಎಂದು ಪೊಲೀಸರು ನಂಬಿದ್ದಾರೆ. ಜಾಮೀನು ಪಡೆಯಲೂ ಆಗದ ಎಷ್ಟೋ ಮಂದಿ ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸಿದ್ದಾರೆ' ಎಂದು ಮಹಾಸಭಾದ ರಾಜ್ಯ ಖಜಾಂಚಿ ಆದರ್ಶ ಯಲ್ಲಪ್ಪ ಅಳಲು ತೋಡಿಕೊಳ್ಳುತ್ತಾರೆ.

51 ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಅಲೆಮಾರಿ ಸಮುದಾಯಗಳು

23 ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿರುವ ಅಲೆಮಾರಿ ಸಮುದಾಯಗಳು

9.63 ಲಕ್ಷ ಒಟ್ಟು ಜನಸಂಖ್ಯೆ

96.56% ಭೂರಹಿತ ಅಲೆಮಾರಿಗಳು

41.92% ಸಾಕ್ಷರತೆಯ ಪ್ರಮಾಣ

ಹೆಸರಿಗಷ್ಟೇ ಕೋಶ: ಪ್ರತ್ಯೇಕ ನಿಗಮ ಬೇಕು

ಅಲೆಮಾರಿ ಸಮುದಾಯಗಳಲ್ಲಿ ಅಲ್ಪಸ್ವಲ್ಪ ಶಿಕ್ಷಣ ಪಡೆದ ಕೆಲವರು ಅಲೆಮಾರಿ ಬುಡಕಟ್ಟು ಮಹಾಸಭಾ ಎಂಬ ಸಂಘಟನೆ ಕಟ್ಟಿಕೊಂಡು ಸರ್ಕಾರದ ಮೇಲೆ ಒತ್ತಡ ಹೇರುವ ಕೆಲಸವನ್ನು ಇತ್ತೀಚಿನ ವರ್ಷಗಳಲ್ಲಿ ಆರಂಭಿಸಿದ್ದಾರೆ. ಅದರ ಫಲವಾಗಿ ಕರ್ನಾಟಕ ಬುಡಕಟ್ಟು ಸಂಶೋಧನಾ ಸಂಸ್ಥೆ ಮತ್ತು ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಇವರ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಿತ್ತು.

'ಇದನ್ನು ಆಧರಿಸಿ 2014–15ನೇ ಸಾಲಿನ ಬಜೆಟ್‌ನಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ₹123 ಕೋಟಿ ಪ್ಯಾಕೇಜ್ ಘೋಷಣೆ ಮಾಡಿದ್ದರು. ಆದರೆ, ಅನುದಾನ ಬಳಕೆಗೆ ಮಾರ್ಗಸೂಚಿ ನೀಡಲಿಲ್ಲ' ಎಂದು ಮಹಾಸಭಾದ ರಾಜ್ಯ ಕಾರ್ಯಾಧ್ಯಕ್ಷ ವೆಂಕಟರಮಣಯ್ಯ ಹೇಳಿದರು.

'ವಿಶ್ವೇಶ್ವರಯ್ಯ ಟವರ್‌ನಲ್ಲಿ ಇರುವ ಅಲೆಮಾರಿಗಳ ಅಭಿವೃದ್ಧಿ ಕೋಶದ ಕಚೇರಿ ಕೂಡ ಅಲೆಮಾರಿಗಳ ಬದುಕಿನಂತೆಯೇ ಆಗಿದೆ. ಕಾರಿಡಾರ್‌ನಲ್ಲೇ ನಾಲ್ಕೈದು ಬೀರುಗಳನ್ನು ಜೋಡಿಸಿಕೊಂಡು ಒಬ್ಬ ವಿಶೇಷಾಧಿಕಾರಿ ಮತ್ತು ಕಚೇರಿ ಅಧೀಕ್ಷಕ ಕಚೇರಿ ನಡೆಸುತ್ತಿದ್ದಾರೆ. ಇಡೀ ಕಚೇರಿಗೆ ಇಬ್ಬರೇ ಸಿಬ್ಬಂದಿ. ಎಸ್‌ಡಿಎ, ಎಫ್‌ಡಿಎ, ಡಿ ದರ್ಜೆ ನೌಕರ ಯಾರೂ ಇಲ್ಲ. ಇದು ಸರ್ಕಾರ ಅಲೆಮಾರಿಗಳ ಬಗ್ಗೆ ಹೊಂದಿರುವ ಕಾಳಜಿ' ಎಂದು ಬೇಸರ ವ್ಯಕ್ತಪಡಿಸಿದರು.

'2014ರಿಂದ 2020ರವರೆಗೆ ₹246 ಕೋಟಿ ಅನುದಾನವನ್ನು ಸರ್ಕಾರ ನೀಡಿದೆ. ಅದರಲ್ಲಿ ₹96 ಕೋಟಿ ಖರ್ಚಾಗದೇ ಉಳಿದಿದೆ. ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣಕ್ಕೆ ವರ್ಷಕ್ಕೆ ಕನಿಷ್ಠ ₹25 ಸಾವಿರ ಕೋಟಿ ಅನುದಾನ ಬರುತ್ತಿದೆ. 74 ಸಮುದಾಯಗಳಿರುವ ಅಲೆಮಾರಿಗಳಿಗೆ ₹25 ಕೋಟಿ ಅಥವಾ ₹30 ಕೋಟಿ ಅನುದಾನ ನೀಡಿ ಕೈತೊಳೆದುಕೊಳ್ಳಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಗೆ ಅಲೆಮಾರಿಗಳ ಬದುಕೇ ಅರ್ಥವಾಗಿಲ್ಲ. ನಮ್ಮ ಪರ ಮಾತನಾಡುವ ಒಂದೇ ಒಂದು ಧ್ವನಿ ವಿಧಾನಸಭೆಯಲ್ಲಿ ಇಲ್ಲ. ಹೀಗಾಗಿ ನಮ್ಮ ಬೇಡಿಕೆಗಳು ಅರಣ್ಯ ರೋದನವಾಗಿವೆ' ಎನ್ನುತ್ತಾರೆ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಕಿರಣಕುಮಾರ್ ಕೊತ್ತಗೆರೆ.

'ಹೀಗಾಗಿ, ಪ್ರತ್ಯೇಕ ನಿಗಮವನ್ನು ಸರ್ಕಾರ ರಚಿಸಬೇಕು. ವರ್ಷಕ್ಕೆ ಕನಿಷ್ಠ ₹250 ಕೋಟಿ ಮೀಸಲಿಡಬೇಕು. ಸಮಾಜ ಕಲ್ಯಾಣ ಇಲಾಖೆಯಲ್ಲೇ ಅಲೆಮಾರಿಗಳಿಗೆ ಪ್ರತ್ಯೇಕ ಕೋಶ ರಚಿಸಬೇಕು' ಎಂದು ಅವರು ಒತ್ತಾಯಿಸಿದರು.

ಆರಂಭವೇ ಆಗದ ಸಮೀಕ್ಷೆ

ಅಲೆಮಾರಿಗಳಾದ ಇವರು ಜನಗಣತಿ ಸಂದರ್ಭದಲ್ಲೂ ಲೆಕ್ಕಕ್ಕೆ ಸಿಗುವುದಿಲ್ಲ. ಇವರ ಜನಸಂಖ್ಯೆ, ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿ ಕುರಿತು ಪ್ರತ್ಯೇಕವಾಗಿ ಸಮೀಕ್ಷೆ ನಡೆಸಿ ವರದಿ ನೀಡುವಂತೆ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಎಲ್ಲಾ ರಾಜ್ಯ ಸರ್ಕಾರಗಳಿಗೆ 2016ರ ಆಗಸ್ಟ್‌ನಲ್ಲಿ ಸೂಚಿಸಿತ್ತು.

'ಬೇರೆ ಬೇರೆ ರಾಜ್ಯಗಳಲ್ಲಿ ಸಮೀಕ್ಷೆ ಮುಕ್ತಾಯದ ಹಂತಕ್ಕೆ ತಲುಪಿದೆ. ರಾಜ್ಯದಲ್ಲಿ ಇನ್ನೂ ಸಮೀಕ್ಷೆಯೇ ಆರಂಭವಾಗಿಲ್ಲ. ಕಾರ್ಯ ಒತ್ತಡ ಇರುವ ಕಾರಣ ಯಾವುದಾದರೂ ವಿಶ್ವವಿದ್ಯಾಲಯಕ್ಕೆ ವಹಿಸುತ್ತೇವೆ ಎಂದು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಹೇಳುತ್ತಿದ್ದಾರೆ. ಮನೆ–ಮನೆ ಸಮೀಕ್ಷೆ ಕಾರ್ಯವನ್ನು ವಿಶ್ವವಿದ್ಯಾಲಯ ಮಾಡಲು ಸಾಧ್ಯವೇ. ಎಲ್ಲಾ ಇಲಾಖೆಗಳ ಸಹಕಾರ ಪಡೆದು ಸರ್ಕಾರವೇ ಮಾಡಬೇಕು' ಎಂದು ಮೇದರ ಸಮುದಾಯದ ರಾಜ್ಯಾಧ್ಯಕ್ಷ ಬಾಬು ಮೇದರ್ ಹೇಳಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ಉತ್ತರಪ್ರದೇಶ-ದೆಹಲಿ ನಡುವಣ ಗಾಜಿಪುರ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರಿಗೆ ಟೆಂಟ್‌ಗಳನ್ನು ಬಾಡಿಗೆಗೆ ನೀಡಲಾಗಿದೆ. ರೈತರ ಮುಖಂಡ ರಾಕೇಶ್ ಟಿಕಾಯತ್ ಅವರು, ಹಲವು ದಿನಗಳಿಂದ ಟೆಂಟ್‌ಗಳ ಬಾಡಿಗೆ ₹ 6 ಕೋಟಿ ನೀಡಿಲ್ಲ. ಹೀಗಾಗಿ ಡಕಾಯಿತ ರಾಕೇಶ್ ಟಿಕಾಯತ್ ವಿರುದ್ಧ ಉತ್ತರ ಪ್ರದೇಶದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಟೆಂಟ್‌ಗಳನ್ನು ಬಾಡಿಗೆಗೆ ನೀಡಿರುವವರಿಗೆ ಬಾಡಿಗೆ ನೀಡದೆ ವಂಚಿಸಲಾಗಿದೆ. ಹೀಗಾಗಿ ಅವರು ಎಫ್‌ಐಆರ್ ದಾಖಲಿಸಿದ್ದಾರೆ' ಎಂಬ ವಿವರ ಇರುವ ಪೋಸ್ಟ್‌ಗಳು ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ವೈರಲ್ ಆಗಿವೆ.

✓ ಆದರೆ, ಈ ಪೋಸ್ಟ್‌ಗಳಲ್ಲಿ ಇರುವ ಮಾಹಿತಿ ಸುಳ್ಳು ಎಂದು ದಿ ಲಾಜಿಕಲ್ ಇಂಡಿಯನ್, ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಗಾಜಿಪುರ ಗಡಿಯಲ್ಲಿ 100 ಟೆಂಟ್‌ಗಳನ್ನು ಹಾಕಲಾಗಿದೆ. ಅವುಗಳನ್ನು ದಿನದ ಬಾಡಿಗೆ ಆಧಾರದಲ್ಲಿ ನೀಡಲಾಗಿದೆ. ಪ್ರತಿ ಟೆಂಟ್‌ಗೆ ಪ್ರತಿದಿನ ₹ 1,000 ಬಾಡಿಗೆ ಪಾವತಿಸಬೇಕು. ಜನವರಿ 26ರ ಹಿಂಸಾಚಾರದ ನಂತರ ರೈತರ ಪ್ರತಿಭಟನೆಗೆ ಬರುತ್ತಿರುವ ದೇಣಿಗೆ ಕಡಿಮೆಯಾಗಿದೆ' ಎಂದು ದಿ ಹಿಂದೂ ಮತ್ತು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಗಳು ವರದಿ ಪ್ರಕಟಿಸಿವೆ. ಆದರೆ, ಟೆಂಟ್‌ಗಳ ಬಾಡಿಗೆ ನೀಡದೇ ಇರುವ ಕಾರಣಕ್ಕೆ ರಾಕೇಶ್ ಟಿಕಾಯತ್ ವಿರುದ್ಧ ಯಾವುದೇ ಎಫ್‌ಐಆರ್ ದಾಖಲಾಗಿಲ್ಲ. ಉತ್ತರ ಪ್ರದೇಶ ಪೊಲೀಸರು ಸಹ ಇದನ್ನು ದೃಢಪಡಿಸಿದ್ದಾರೆ ಎಂದು ಲಾಜಿಕಲ್ ಇಂಡಿಯನ್ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಸಮಸ್ಯೆಯ ಪರಿಹಾರ

ಮಿಥಿಲೆಯ ರಾಜ ವಿದೇಹನಿಗೆ ಮಹೋಷಧಕುಮಾರನ ಬಗ್ಗೆ ಸಂಪೂರ್ಣ ತೃಪ್ತಿಯಾಗಿ, ಅವನು ಮಹಾಜ್ಞಾನಿ, ಬೋಧಿಸತ್ವ ಎಂದು ತಿಳಿದಿದ್ದರೂ ಅಮಾತ್ಯರಾದ ಸೇನಕಪಂಡಿತ ಮುಂತಾದವರು ಅವನನ್ನು ಮತ್ತಷ್ಟು ಪರೀಕ್ಷಿಸಬೇಕೆಂದು ಬಯಸುತ್ತಿದ್ದರು. ಅವರ ಪರೀಕ್ಷೆಗಳಾದರೂ ಮುಗಿದುಹೋಗಲಿ ಎಂದು ರಾಜ ಕಾಯುತ್ತಿದ್ದ. ಪಂಡಿತರು ಮತ್ತೊಂದು ಪರೀಕ್ಷೆಯನ್ನು ಯೋಜಿಸಿದರು.

ಮಹೋಷಧಕುಮಾರನಿದ್ದ ನಗರಕ್ಕೆ ವಿದೇಹ ರಾಜನಿಂದ ಒಂದು ಸಂದೇಶ ಹೋಯಿತು. 'ರಾಜರಿಗೆ ನಿಮ್ಮ ನಗರದ ಬುದ್ಧಿಶಾಲಿಗಳಿಂದ ತಯಾರಾದ ಚಿತ್ರಾನ್ನವನ್ನು ತಿನ್ನಬೇಕೆಂಬ ಆಸೆಯಾಗಿದೆ. ಆದರೆ ಅದನ್ನು ಸಿದ್ಧಪಡಿಸುವುದಕ್ಕೆ ಕೆಲವು ನಿಬಂಧನೆಗಳಿವೆ. ಅವುಗಳನ್ನು ಮೀರತಕ್ಕದ್ದಲ್ಲ. ಮೀರಿದ್ದು ಕಂಡು ಬಂದರೆ ಇಡೀ ನಗರದ ಎಲ್ಲರಿಗೂ ಶಿಕ್ಷೆಯಾಗುತ್ತದೆ. ಈ ಚಿತ್ರಾನ್ನವನ್ನು ಮಾಡುವುದಕ್ಕೆ ಅಕ್ಕಿಯನ್ನು ಬಳಸಬಾರದು. ಅನ್ನ ಮಾಡಲು ನೀರು ಹಾಕಬಾರದು. ಒರಳಿನಲ್ಲಿ ಆಡಿಸಬಾರದು, ಒಲೆಯ ಮೇಲಿಟ್ಟು ಬೇಯಿಸಬಾರದು, ಬೆಂಕಿಯಿಂದ ಬೇಯಿಸಬಾರದು, ಸೌದೆಯಿಂದ ಬೇಯಿಸಬಾರದು, ಅನ್ನ ಬೇಯುವುದನ್ನು ಯಾರೂ ನೋಡಬಾರದು, ಹೆಂಗಸು ಅಡುಗೆ ಮಾಡಬಾರದು ಮತ್ತು ಗಂಡಸೂ ಅಡುಗೆ ಮಾಡಬಾರದು. ಇದನ್ನು ಸಿದ್ಧಪಡಿಸಿದ ಮೇಲೆ ರಸ್ತೆಯಲ್ಲಿ ತರಬಾರದು. ಇದರಲ್ಲಿ ಯಾವುದೇ ಕರಾರನ್ನು ತಪ್ಪಿದರೆ ನಗರಕ್ಕೆ ತಲಾ ಸಾವಿರ ಹಣದಂತೆ ದಂಡ ವಿಧಿಸಲಾಗುವುದು. ಎಚ್ಚರ'.

ಹೊಸ ಪರೀಕ್ಷೆಯನ್ನು ಕೇಳಿ ಜನರು ಗಾಬರಿಯಾದರು. ಈ ತರಹದ ಕರಾರುಗಳಲ್ಲಿ ಚಿತ್ರಾನ್ನ ಮಾಡುವುದು ಸಾಧ್ಯವೇ? ಮಾಡದಿದ್ದರೆ ರಾಜಾಜ್ಞೆಯನ್ನು ಪಾಲಿಸದಿದ್ದುದಕ್ಕೆ ಶಿಕ್ಷೆ. ಆದರೆ ಮಾಡುವುದು ಹೇಗೆ? ಬುದ್ಧಿವಂತರೆಲ್ಲ ಸೇರಿ ಚಿಂತಿಸಿ ತಲೆಕೆಡಿಸಿಕೊಂಡರು. ಪರಿಹಾರ ದೊರೆಯಲಿಲ್ಲ. ಮತ್ತೆ ಕೊನೆಗೆ ಮಹೋಷಧಕುಮಾರನ ಕಡೆಗೆ ಎಲ್ಲರೂ ನಡೆದರು. ಆತ ಎಲ್ಲ ಕರಾರುಗಳನ್ನು ಕೇಳಿಸಿಕೊಂಡ. ಪ್ರತಿಯೊಂದು ಕರಾರಿನ ಬಗ್ಗೆಯೂ ಒಂದೊಂದು ಕ್ಷಣ ಚಿಂತಿಸಿದ. ಅವನಿಗೊಂದು ಖಚಿತವಾದ ನಂಬಿಕೆ ಇತ್ತು. ಪರಿಹಾರವಿಲ್ಲದ ಸಮಸ್ಯೆಯೇ ಇಲ್ಲ. ಯಾವಾಗಲೂ ಪರಿಹಾರವು ಸಮಸ್ಯೆಯ ಜೊತೆಗೇ ಅಂಟಿಕೊಂಡಿರುತ್ತದೆ. ಸ್ವಲ್ಪ ತಾಳ್ಮೆಯಿಂದ ಮನದ ಸ್ಥಿಮಿತತೆಯಿಂದ ಗಮನಿಸಿದಾಗ, ಪರಿಹಾರವನ್ನು ಸಮಸ್ಯೆಯಿಂದ ಬೇರ್ಪಡಿಸಬಹುದು.

ಆತ ಕೆಲವು ಕೆಲಸಗಾರರನ್ನು ಕರೆದು ಹೇಳಿದ, 'ನೋಡಿ, ರಾಜ ಅಕ್ಕಿಯನ್ನು ಬಳಸಬಾರದೆಂದು ತಿಳಿಸಿದ್ದಾನೆ. ಆದ್ದರಿಂದ ಅಕ್ಕಿಯನ್ನು ಬಿಟ್ಟು ಸಿರಿಧಾನ್ಯವಾದ ನವಣಕ್ಕಿಯನ್ನು ಬಳಸಿ. ನೀರು ಹಾಕುವ ಬದಲು ಅನ್ನ ಮಾಡಲು ಬೇಕಾಗುವಷ್ಟು ಹಿಮಗಡ್ಡೆಗಳನ್ನು ಮಡಕೆಗೆ ಹಾಕಿ. ಒಲೆಯ ಮೇಲೆ, ಬೆಂಕಿಯಿಂದ, ಸೌದೆಯಿಂದ ಬೇಯಿಸಬಾರದಾದ್ದರಿಂದ, ನೆಲದಲ್ಲಿ ಒಂದು ಗುಂಡಿಯನ್ನು ತೆಗೆಯಿರಿ, ಅದರ ಮಧ್ಯದಲ್ಲಿ ಮಡಕೆಯನ್ನು ಇಟ್ಟು ನವಣಕ್ಕಿಯೊಂದಿಗೆ ಚಿತ್ರಾನ್ನ ರುಚಿಯಾಗಲು ಬೇಕಾದ ಎಲ್ಲ ಪದಾರ್ಥಗಳನ್ನು ಕಲ್ಲಿನ ಕಟ್ಟೆಯ ಮೇಲೆ ಅರೆದು ಹಾಕಿ. ಗಟ್ಟಿಯಾದ ಮುಚ್ಚಳವನ್ನು ಬಿಗಿದು, ಅದರ ಸುತ್ತಲೂ ಚೆನ್ನಾಗಿ ಕಾದ ಮರಳನ್ನು ಸುರಿದು ಮುಚ್ಚಿಬಿಡಿ. ನೆಲದ ಬಿಸಿ, ಮರಳಿನ ಬಿಸಿಗೆ ಅನ್ನ ಚೆನ್ನಾಗಿ ಬೇಯುತ್ತದೆ. ಅಡುಗೆ ಮಾಡುವುದಕ್ಕೆ ಒಂದಿಬ್ಬರು ನಪುಂಸಕರನ್ನು ನೇಮಿಸಿ. ಅನ್ನವಾದ ಮೇಲೆ ಅವರು ಅದನ್ನು ರಾಜಮಾರ್ಗದಿಂದ ತೆಗೆದುಕೊಂಡು ಹೋಗದೆ ಕಾಡಿನ ಮೂಲಕ ಹೋಗುವಂತೆ ಮಾಡಿ'. ಅವರು ಅದರಂತೆಯೇ ಮಾಡಿದರು. ರಾಜನಿಗೆ ಇದು ಮಹೋಷಧಕುಮಾರನ ಬುದ್ಧಿವಂತಿಕೆಯೇ ಎಂದು ಅರಿವಾಯಿತು. ಮತ್ತೆ ಅಮಾತ್ಯರಿಗೆ ನಿರಾಸೆ. ❖

ದಿನ ಭವಿಷ್ಯ

ಗುರುವಾರ 25 ಫೆಬ್ರುವರಿ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಶತಬಿಷ ತ್ರಯೋದಶೀ ಗಂ. 22-2 (ಹ. 3-34) ಗುರುವಾರ ನಿತ್ಯ ನಕ್ಷತ್ರ ಪುಷ್ಯ ಗಂ 12-34 (ಹ. 11-46) ಶೋಭನ ನಾಮ ಯೋಗ ಗಂ 43-44 ತೈತಲ ಕರಣ ಗಂ 22-2 ವಿಷ. ಗಂ. 44-48 ಅಮೃತ ಶೇಷ ಗಂ. 0-10 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 6-42 ಸೂರ್ಯಾಸ್ತ: 6-24 ಅದೃಷ್ಟ ಸಂಖ್ಯೆ 2 9

ಮೇಷ: ಹಣಕಾಸಿನ ವಿಷಯಗಳಲ್ಲಿ ತುಂಬಾ ಎಚ್ಚರಿಕೆ ಅಗತ್ಯ. ಸರ್ಕಾರಿ ನೌಕರರಿಗೆ ಪ್ರಗತಿ ಉಂಟಾಗುವುದು. ಕುಟುಂಬದಲ್ಲಿ ಸೌಹಾರ್ದ. ಸೋದರರಿಂದ ಸಹಕಾರ ಮಕ್ಕಳ ಅಭಿವೃದ್ಧಿಯಿಂದಾಗಿ ಸಂತೃಪ್ತಿ.

ವೃಷಭ: ವೈಯಕ್ತಿಕ ತೊಂದರೆಯಿಂದ ಮುಕ್ತರಾಗುವಿರಿ. ಸಮಸ್ಯೆಗಳು ಪರಿಹಾರ ಕಾಣುವವು. ಸ್ಥಿರಾಸ್ತಿ ಖರೀದಿ ಸಾಧ್ಯತೆ. ಉದ್ಯೋಗದಲ್ಲಿ ಪ್ರಗತಿ. ಪತ್ನಿಯ ಆರೋಗ್ಯದಲ್ಲಿ ವ್ಯತ್ಯಯ.

ಮಿಥುನ: ಹೊಸ ಯೋಜನೆಗಳಿಗೆ ಉತ್ಸಾಹ ಮೂಡುವುದು. ಶುಭಕಾರ್ಯಗಳ ಸಂಕಲ್ಪ ಈಡೇರಿ ಸಂತಸ. ತೃಪ್ತಿದಾಯಕ ಕೌಟುಂಬಿಕ ಜೀವನ. ಮಹಿಳೆಯರಿಗೆ ಗೌರವ ಪ್ರಾಪ್ತಿ.

ಕರ್ಕಾಟಕ: ಪ್ರಾಪ್ತವಯಸ್ಕರಿಗೆ ವಿವಾಹ ನಿಶ್ಚಯ ಸಾಧ್ಯತೆ. ಕುಟುಂಬದ ಹಿರಿಯರ ಮನೋಭಿಲಾಷೆಗಳು ಈಡೇರುವವು. ಆರ್ಥಿಕ ಸಂಪನ್ಮೂಲಗಳ ಅಭಿವೃದ್ಧಿಯಿಂದಾಗಿ ಸಂತೃಪ್ತಿ.

ಸಿಂಹ: ವೈಯುಕ್ತಿಕ ಜೀವನದಲ್ಲಿ ಅಭಿವೃದ್ಧಿ. ಸಾಮಾಜಿಕ ಗೌರವಾದರಗಳನ್ನು ಹೊಂದುವಿರಿ. ಕೃಷಿ ಕ್ಷೇತ್ರದಲ್ಲಿ ಧಾನ್ಯಾಭಿವೃದ್ಧಿ. ವೃತ್ತಿಯಲ್ಲಿನ ಸಮಸ್ಯೆಗಳಿಗೆ ಪರಿಹಾರ. ಸಂಗಾತಿಯಿಂದ ಸಂತಸದ ಸುದ್ದಿ.

ಕನ್ಯಾ: ಪರಸ್ಪರ ಭಿನ್ನಾಭಿಪ್ರಾಯಗಳು ಪರಿಹಾರವಾಗಿ ಸುಖದಾಂಪತ್ಯ ಜೀವನಕ್ಕೆ ನಾಂದಿ. ಶುಭ ಸಮಾರಂಭಗಳಲ್ಲಿ ಭಾಗಿ. ಕೆಲಸ ಕಾರ್ಯಗಳಲ್ಲಿ ಆತುರ ಬೇಡ. ವ್ಯವಹಾರದಲ್ಲಿ ಆರ್ಥಿಕ ನಷ್ಟ ಸಾಧ್ಯತೆ.

ತುಲಾ: ಸರ್ಕಾರಿ ನೌಕರಿಯಲ್ಲಿರುವವರಿಗೆ ಅನುಕೂಲ. ಹೊಸ ಯೋಜನೆಯನ್ನು ನಿರೂಪಿಸುವಲ್ಲಿ ಯಶಸ್ಸು. ಅನಾವಶ್ಯಕ ವ್ಯವಹಾರಗಳಲ್ಲಿ ತಲೆ ಹಾಕದಿರಿ. ಮಾತೃವರ್ಗದವರಿಂದ ಸಹಕಾರ.

ವೃಶ್ಚಿಕ: ವಿದ್ಯಾರ್ಥಿಗಳಿಗೆ ಓದಿನಲ್ಲಿ ವಿಶೇಷ ಪ್ರಗತಿ. ಮಾತಿನಿಂದ ಗೌರವ ಪ್ರಾಪ್ತಿ. ಸರ್ಕಾರದಿಂದಾಗುವ ಕೆಲಸ ಕಾರ್ಯಗಳು ಸುಗಮ. ಉದ್ಯೋಗ ನಿಮಿತ್ತ ದೂರ ಪ್ರಯಾಣ ಯೋಗ.

ಧನು: ಸಾಮಾಜಿಕ ಕಾರ್ಯಕರ್ತರಿಗೆ ಇರಿಸುಮುರಿಸು ಸಾಧ್ಯತೆ. ಮನೆಯಲ್ಲಿ ವಸ್ತ್ರಾಭರಣ ಖರೀದಿ ಸಾಧ್ಯತೆ. ಶತ್ರುಬಾಧೆ ಉಲ್ಬಣ. ವಿದ್ಯಾಭ್ಯಾಸಕ್ಕಾಗಿ ದೂರಪ್ರಯಾಣ. ಆರೋಗ್ಯದ ಬಗ್ಗೆ ಎಚ್ಚರ.

ಮಕರ: ದೂರ ಪ್ರಯಾಣದಲ್ಲಿ ಧನ ನಷ್ಟವಾಗುವುದು. ಮನರಂಜನಾ ಕಾರ್ಯಕ್ರಮದಲ್ಲಿ ಭಾಗಿ. ಪ್ರಿಯ ವ್ಯಕ್ತಿಗಳ ಆಗಮನ. ಮಕ್ಕಳ ಶ್ರೇಯೋಭಿವೃದ್ಧಿಯಿಂದಾಗಿ ಮಾನಸಿಕ ತೃಪ್ತಿ.

ಕುಂಭ: ಇಂದಿನ ಮಟ್ಟಿಗೆ ದೂರದ ಪ್ರಯಾಣಗಳನ್ನು ಮುಂದೂಡುವುದು ಸೂಕ್ತ. ಸಂಗಾತಿಯ ಸಹಕಾರದಿಂದಾಗಿ ಸಾಂಸಾರಿಕ ನೆಮ್ಮದಿ. ಅಪೇಕ್ಷಿತರಿಗೆ ವಿವಾಹ ಸಂಬಂಧಗಳು ಕೂಡಿಬರಲಿವೆ.

ಮೀನ: ಅನಾವಶ್ಯಕ ಮಾತುಗಳಿಂದಾಗಿ ನಿಷ್ಠೂರಕ್ಕೊಳಗಾಗುವ ಸಾಧ್ಯತೆ. ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಅವಕಾಶ. ಉದ್ಯೋಗದಲ್ಲಿರುವವರಿಗೆ ಪದೋನ್ನತಿ. ಇಷ್ಟದೇವತಾ ದರ್ಶನದಿಂದ ನೆಮ್ಮದಿ.

ನಿಮ್ಮ ಜನ್ಮದಿನ 25-ಫೆಬ್ರುವರಿ ಈ ದಿನವು ಅತ್ಯಂತ ಶುಭಕರವಾಗಿದ್ದು, ಜನ್ಮತಃ ಅದೃಷ್ಟವು ನಿಮ್ಮ ಪಾಲಿಗೆ ಉತ್ತಮವಾಗಿದೆ. ಲೇವಾದೇವಿ ವ್ಯವಹಾರದಿಂದಾಗಿ ಕೈ ಸುಟ್ಟುಕೊಳ್ಳುವ ಸಾಧ್ಯತೆ ಇದ್ದು, ವಿದ್ಯಾಬಲದ ಮೇಲಿನ ನೌಕರಿ ಅಥವಾ ಉದ್ಯೋಗ ನಿಮಗೆ ಅನುಕೂಲಕರವಾಗಿರುವುದು. ಅನುರೂಪ ದಾಂಪತ್ಯಜೀವನದಿಂದಾಗಿ ಸಂತೋಷವನ್ನನುಭವಿಸುವಿರಿ.


ಪದಬಂಧ 4519 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಿಶೇಷವಾದ ದ್ರೋಹ (3)
4.ಸಭೆಯಲ್ಲಿರುವ ಸದಸ್ಯ (4)
6.ರಾತ್ರಿ ವೇಳೆ ಸಂಚರಿಸುವಂಥಹ ದೆವ್ವ, ಭೂತ ಇತ್ಯಾದಿ (4)
8.ಉಚಿತ ಎಂದರೂ ಇದು ನಿಶ್ಚಿತವಾದದ್ದು (3)
11.ಗುಲಾಬಿ ತಂದಿರುವ ಸೇವಕ (3)
13.ಈ ಪರಿಯಾಗಿ ಬಂದಿರುವ ಅಪಹಾಸ್ಯ (4)
17.ವೀರಾಜಮಾನವಾದ ಚಕ್ರವರ್ತಿ (4)
18.ಕೊಡತಕ್ಕ ಶುಲ್ಕ (3)

ಮೇಲಿಂದ ಕೆಳಕ್ಕೆ

1.ವಿದ್ಯೆಯನ್ನು ಬಯಸುವವನು (3)
2.ನಗುವ ವದನ (4)
3.ಬಲದ ವಿರುದ್ಧ ನಿಂತಿರುವ ರೊಡ್ಡ! (3)
5.ನಾದಿನಿಯ ಸ್ವರ! (2)
7.ರೀತಿಯೊಡನೆ ಬರುವ ಜೋಡುನುಡಿ (3)
9.ತರಗತಿಯ ಮುಂದಿರುವ ಒಣಗಿದ ಎಲೆ (3)
10.ತಾಪ ಏರಿದಾಗ ತೋರಿಸಿದ ಶೌರ್ಯ (3)
12.ಮಹಾರಾಜರ ಎದುರಿಗೇ ಈ ಪಂಚನಾಮೆ! (4)
14.ಕುದುರೆಯನ್ನೇರುವ ಬಳೆ (3)
15.ಬೆಸವಲ್ಲದ ಸಂಖ್ಯೆ (2)
16.ಗೋವಿನ ಹತ್ತಿರವಿರುವ ಕಣಜ (3)



4518ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸುಲಭೋಪಾಯ 4.ಕುತಂತ್ರ 5.ಶಹರು 6.ಹುತಾತ್ಮ 8.ಮಯ 9.ಬಾಕು 11.ಮಂದಿರ 14.ವಿಳಾಸ 15.ಒನಕೆ 16.ನವೀಕರಣ

ಮೇಲಿಂದ ಕೆಳಕ್ಕೆ: 1.ಸುಮುಹೂರ್ತ 2.ಭೋಜನಾಲಯ 3.ಯಶಸ್ಸು 4.ಕುರುಹು 7.ತಾರೀಕು 8.ಮಡದಿ 9.ಬಾಲಬಡಿಕ 10.ಸುಮಬಾಣ 12.ರವಿಕೆ 13.ವ್ಯಸನ

ಸುಡೊಕು 4905


		7		6				2
	8		5		2	3		
6		2		4		7		8
	7				9			
5		9			6		3	7
	6		7					4
2		3	8		4	6		
		6		2			8	9
8	1		6		7	4		

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4904 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ಷೇರುಪೇಟೆ ವಹಿವಾಟು 1030



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,707
ಇಂದಿನ ಅಂತ್ಯ	14,982
▲	274
ದಿನದ ಗರಿಷ್ಠ	15,008

ವಿನಿಮಯ ದರ

$ ಡಾಲರ್	72.35
£ ಪೌಂಡ್	102.43
€ ಯುರೊ	87.97
¥ ಯೆನ್ (100ಕ್ಕೆ)	68.36

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹450
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹453

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹1170(1170)
ಸೂರ್ಯಕಾಂತಿ (ರಿಫೈನ್ಡ್)	₹1540 (1520)
ಪಾಮೋಲಿನ್	₹1152 (1145)

ಕೊಬ್ಬರಿ ಧಾರಣೆ

ಬೆಂಗಳೂರು	₹15000-19000
ತುರುವೇಕೆರೆ	₹15500-15500




ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10125	10250	10225	136.85ಸೆಂಟ್ಸ್
ಎಸಿ	4145	4000	4050	
ಆರ್‌ಪಿ	5250	5200	5250	
ಆರ್‌ಸಿ	3000	3150	3000	1444ಡಾಲರ್

ಕ್ರಿಪ್ಟೊಕರೆನ್ಸಿ: ಆರ್‌ಬಿಐ ಕಳವಳ

ನವದೆಹಲಿ (ಪಿಟಿಐ): ಕ್ರಿಪ್ಟೊಕರೆನ್ಸಿಗಳು ಹಣಕಾಸಿನ ಸ್ಥಿರತೆ ಮೇಲೆ ಬೀರಬಹುದಾದ ಪ್ರಭಾವದ ವಿಚಾರವಾಗಿ ಕಳವಳಗೊಂಡಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ. ಈ ವಿಚಾರವನ್ನು ತಾನು ಕೇಂದ್ರ ಸರ್ಕಾರಕ್ಕೆ ತಿಳಿಸಿರುವುದಾಗಿಯೂ ಅದು ಹೇಳಿದೆ.


ಶಕ್ತಿಕಾಂತ ದಾಸ್



‘ಕ್ರಿಪ್ಟೊಕರೆನ್ಸಿಗಳ ವಿಚಾರದಲ್ಲಿ ನಮಗೆ ಕೆಲವು ಪ್ರಮುಖ ಕಳವಳಗಳು ಇವೆ. ನಾವು ಹೇಳಿರುವುದನ್ನು ಸರ್ಕಾರ ಪರಿಶೀಲಿಸುತ್ತಿದೆ. ಸರ್ಕಾರವು ಈ ಬಗ್ಗೆ ಒಂದು ತೀರ್ಮಾನ ಕೈಗೊಳ್ಳುತ್ತದೆ ಎಂದು ಭಾವಿಸಿದ್ದೇನೆ. ಅಗತ್ಯ ಎದುರಾದರೆ ಈ ಬಗ್ಗೆ ಸಂಸತ್ತು ಕೂಡ ಪರಿಶೀಲಿಸಿ, ತೀರ್ಮಾನಿಸಲಿದೆ’ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಸಿಎನ್‌ಬಿಸಿ–ಟಿವಿ18ಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

‘ಬ್ಲಾಕ್‌ಚೈನ್ ತಂತ್ರಜ್ಞಾನದ ಪ್ರಯೋಜನವನ್ನು ತಾವು ಪಡೆಯಬೇಕು. ಆದರೆ, ಹಣಕಾಸಿನ ಸ್ಥಿರತೆಯ ದೃಷ್ಟಿಕೋನದಿಂದ ಕ್ರಿಪ್ಟೊಕರೆನ್ಸಿಗಳ ವಿಚಾರವಾಗಿ ನಮ್ಮಲ್ಲಿ ಕಳವಳ ಮೂಡಿದೆ’ ಎಂದು ದಾಸ್ ಹೇಳಿದ್ದಾರೆ. ಡಿಜಿಟಲ್ ಕರೆನ್ಸಿಗಳನ್ನು ಭಯೋತ್ಪಾದನಾ ಚಟುವಟಿಕೆಗಳಿಗೆ ನೆರವು ನೀಡಲು, ಹಣದ ಅಕ್ರಮ ವರ್ಗಾವಣೆಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಆರ್‌ಬಿಐ ಈ ಹಿಂದೆ ಆತಂಕ ವ್ಯಕ್ತಪಡಿಸಿತ್ತು.

ಭಾರತದ್ದೇ ಆದ ಅಧಿಕೃತ ಡಿಜಿಟಲ್ ಕರೆನ್ಸಿಯ ಚಲಾವಣೆಗೆ ಅಗತ್ಯವಿರುವ ಕಾನೂನಿನ ಚೌಕಟ್ಟು ರೂಪಿಸಲು ಹಾಗೂ ವ್ಯಕ್ತಿಗಳು ಮತ್ತು ಕಂಪನಿಗಳು ಕ್ರಿಪ್ಟೊಕರೆನ್ಸಿಗಳಲ್ಲಿ ವಹಿವಾಟು ನಡೆಸುವುದನ್ನು ನಿರ್ಬಂಧಿಸಲು ಪ್ರತ್ಯೇಕ ಮಸೂದೆಯೊಂದನ್ನು ಮಂಡಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ.

ಬ್ಯಾಂಕ್‌ಗಳು ಮತ್ತು ಮತ್ತು ಇತರ ಸಂಸ್ಥೆಗಳು ಕ್ರಿಪ್ಟೊಕರೆನ್ಸಿ ಮೂಲಕ ನಡೆಸುವ ವಹಿವಾಟುಗಳಿಗೆ ಬೆಂಬಲ ನೀಡುವುದನ್ನು ಆರ್‌ಬಿಐ 2018ರಲ್ಲಿ ನಿಷೇಧಿಸಿತ್ತು. ಆದರೆ, ಈ ನಿಷೇಧವನ್ನು ಸುಪ್ರೀಂ ಕೋರ್ಟ್ ತೆರವುಗೊಳಿಸಿದೆ. ತನ್ನದೇ ಆದ ಡಿಜಿಟಲ್ ಕರೆನ್ಸಿ ಆರಂಭಿಸುವ ಕೆಲಸದಲ್ಲಿ ಆರ್‌ಬಿಐ ತೊಡಗಿದೆ ಎಂದು ದಾಸ್ ಹೇಳಿದ್ದಾರೆ.

ಸಣ್ಣ ಹೂಡಿಕೆದಾರರಿಗೆ ಸರ್ಕಾರಿ ಬಾಂಡ್‌ಗಳಲ್ಲಿ ನೇರವಾಗಿ ಹೂಡಿಕೆ ಮಾಡಲು ಅವಕಾಶ ಕೊಡುವ ಕಾರ್ಯ ಪ್ರಗತಿಯಲ್ಲಿದೆ, ಇದಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಕೆಲವೇ ವಾರಗಳಲ್ಲಿ ಹೊರಡಿಸಲಾಗುವುದು ಎಂದೂ ಅವರು ಹೇಳಿದ್ದಾರೆ.

‘ಉಳಿಸಿದ ಹಣ ಗಳಿಸಿದ ಹಣ’



ಎಂ. ಶ್ರೀನಿವಾಸ ರಾವ್
ಗ್ಲೋಬಲ್ ಅಲಯನ್ಸ್ ಫಾರ್ ಮಾಸ್ ಆಂತ್ರಪ್ರೀನರ್‌ಷಿಪ್‌ನ ಸಿಇಒ

ಸ್ಫೂರ್ತಿಯ ಉದ್ಯಮಿ

‘ಎಲ್‌ಜೆಸ್ ಸ್ನ್ಯಾಕಿಸ್’ಅನ್ನು ಅನುಷ್ಕಾ ಜೈಸಿಂಗ್ ಒಂದು ದಶಕದ ಹಿಂದೆ ಪ್ರಾರಂಭಿಸಿದರು. ಕಾರ್ಪೊರೇಟ್ ವಲಯಕ್ಕೆ ಲಘು ಆಹಾರ ಪೂರೈಕೆಯಲ್ಲಿ ಪರಿಣತಿಯೊಂದಿಗೆ, ತಿಂಡಿಗಳ ತಯಾರಿಕೆ ಮತ್ತು ಮಾರಾಟದ ಈ ಬ್ರ್ಯಾಂಡ್ ಶುರುವಾಯಿತು. ಕಾರ್ಪೊರೇಟ್ ವಲಯಕ್ಕೆ ಅಗತ್ಯವಿರುವ ಎಲ್ಲ ಬಗೆಯ ತಿಂಡಿಗಳನ್ನು ಪೂರೈಸಬೇಕು ಎಂಬುದು ಈ ಬ್ರ್ಯಾಂಡ್‌ನ ಬಯಕೆಯಾಗಿತ್ತು.

ತಮ್ಮ ಅನುಭವವನ್ನು ಹಂಚಿಕೊಳ್ಳುವ ಅನುಷ್ಕಾ, ‘ಮಾನವ ಸಂಪನ್ಮೂಲ ವಿಭಾಗದಲ್ಲಿ ಹತ್ತು ವರ್ಷ ಕೆಲಸ ಮಾಡಿದ ನಂತರ, ನನ್ನದೇ ಆದ ಉದ್ಯಮವೊಂದನ್ನು ಪ್ರಾರಂಭಿಸಲು ನಿರ್ಧರಿಸಿದೆ. ಸಿಂಧಿ ಮೂಲ, ತಿಂಡಿಪೋತ ಡಿಎನ್‌ಎ, ಭಾರತೀಯ ಮನಸ್ಸು ಮತ್ತು ಆತ್ಮ ಹೊಂದಿರುವ ನನಗೆ ಮನಸ್ಸಿನಲ್ಲಿ ಮೂಡಿದ ಆಲೋಚನೆಯನ್ನು ಅಡುಗೆಯ ರೂಪಕ್ಕೆ ತರುವುದು ಗೊತ್ತಿತ್ತು’ ಎಂದು ಹೇಳುತ್ತಾರೆ. 2009ರ ಸುಮಾರಿನಲ್ಲಿ ಸಿಂಧಿ ಆಹಾರ ಪದ್ಧತಿಯ ಕೆಲವು ರುಚಿಕರ ತಿಂಡಿಗಳು ಮಾರುಕಟ್ಟೆಯಲ್ಲಿ ದೊರೆಯುತ್ತಿರಲಿಲ್ಲ.

ತಿಂಡಿಗಳ ಮಾರುಕಟ್ಟೆಯನ್ನು ಗುರಿಯಾಗಿಸಿಕೊಂಡು ಕೆಲಸ ನಿಭಾಯಿಸುವುದು ಎಂದು ನಿರ್ಧರಿಸಿದ ನಂತರ ಅನುಷ್ಕಾ, ‘ಸ್ನ್ಯಾಕ್ ಕಿಯೋಸ್ಕ್’ ಪರಿಕಲ್ಪನೆಯೊಂದಿಗೆ 2009ರ ಡಿಸೆಂಬರ್‌ನಲ್ಲಿ ತಮ್ಮ ಉದ್ಯಮ ಆರಂಭಿಸಿದರು. ನಾಲ್ಕರಿಂದ ಐದು ಬಗೆಯ ರೆಡಿ-ಟು-ಫ್ರೈ ತಿಂಡಿಗಳನ್ನು ಮಾರಾಟ ಮಾಡುವ ಬೀದಿಬದಿಯ ಕಿಯೋಸ್ಕ್ ಆರಂಭಿಸಿದ ಎಂಟು ತಿಂಗಳಲ್ಲಿ ಅವರು ತಮ್ಮ ಕಿಯೋಸ್ಕ್‌ಗಳ ಸಂಖ್ಯೆಯನ್ನು ನಾಲ್ಕಕ್ಕೆ ಹೆಚ್ಚಿಸಿದರು.

ಮುನ್ನೂರು ಚದರ ಅಡಿ ಜಾಗದಲ್ಲಿ ಕೇವಲ ಮೂರು ಜನ ಉದ್ಯೋಗಿಗಳೊಂದಿಗೆ ಉದ್ಯಮ ಆರಂಭಿಸಿದ ಅನುಷ್ಕಾ, ಹೆಚ್ಚಿನ ಭರವಸೆಯೊಂದಿಗೆ 2010ರಲ್ಲಿ ಕಾರ್ಪೊರೇಟ್ ಜಗತ್ತಿಗೆ ಅಡುಗೆ ಮಾಡಿಕೊಡುವ ಕೆಲಸ ಶುರು ಮಾಡಿದರು. ‘ಮತ್ತೆ ಹಿಂದಿರುಗಿ ನೋಡುವ ಪ್ರಮೇಯ ಬಂದಿಲ್ಲ’ ಎಂದು ಅನುಷ್ಕಾ ಹೇಳುತ್ತಾರೆ.

ಅನುಷ್ಕಾ ತಾವು ಉದ್ಯಮಿಯಾಗಿ ಬದಲಾಗಿದ್ದರ ಹಿಂದೆ ಉದ್ಯೋಗಸೃಷ್ಟಿಯ ಉದ್ದೇಶ ಇರುವುದನ್ನೂ ಹೇಳುತ್ತಾರೆ. ‘ನಮ್ಮ ಗುರಿ 100ಕ್ಕೂ ಹೆಚ್ಚು ಜನರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು - ಸಮಾಜದಲ್ಲಿ ಹಿಂದಕ್ಕೆ ಉಳಿದಿರುವ ವರ್ಗಗಳಿಂದ ಜನರನ್ನು ಆಯ್ಕೆ ಮಾಡಿಕೊಂಡು, ಅವರಿಗೆ ತರಬೇತಿ ನೀಡುವುದು. ಜೊತೆಗೆ, ಅಂತಹ ಸಮುದಾಯಗಳ ದುಡಿಯುವ ತಾಯಂದಿರಿಗೆ ಹೊಂದುವ ಕೆಲಸದ ಆಯ್ಕೆಗಳನ್ನು ಒದಗಿಸುವ ಉದ್ದೇಶವೂ ಇತ್ತು. 2019ರ ಡಿಸೆಂಬರ್ ವೇಳೆಗೆ ಪ್ರತಿದಿನ ಹತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಉದ್ಯೋಗಿಗಳಿಗೆ ತಿಂಡಿಗಳನ್ನು ಪೂರೈಸುವ ಉದ್ಯಮವಾಗಿ ನಮ್ಮ ಬ್ರ್ಯಾಂಡ್ ಬೆಳೆದು ನಿಂತಿತ್ತು’ ಎಂದು ಅನುಷ್ಕಾ ಹೇಳುತ್ತಾರೆ. 2019ರಲ್ಲಿ ಅನುಷ್ಕಾ ಅವರು ಗ್ರಾಹಕರಿಗೆ ನೇರವಾಗಿ ತಿಂಡಿಗಳನ್ನು ಪೂರೈಸಲು ಶುರು ಮಾಡಿದರು.

ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ತಮ್ಮ ಉದ್ಯಮ ಎದುರಿಸಿದ ಸವಾಲುಗಳ ಬಗ್ಗೆಯೂ ಅವರು ಅನುಭವ ಹಂಚಿಕೊಳ್ಳುತ್ತಾರೆ. ‘ಸಾಂಕ್ರಾಮಿಕವು ಎಲ್‌ಜೆಸ್ ಸ್ನ್ಯಾಕಿಸ್ ಮೇಲೆ ತೀವ್ರ ಪರಿಣಾಮ ಬೀರಿತು. ಉದ್ಯೋಗಿಗಳೆಲ್ಲ ಮನೆಯಿಂದಲೇ ಕೆಲಸ ಮಾಡಲು ಆರಂಭಿಸಿದ ನಂತರ ನಮ್ಮ ಕಾರ್ಪೊರೇಟ್ ಅಡುಗೆ ವ್ಯವಹಾರವು ಸ್ಥಗಿತಗೊಂಡಿತು. ಯಶಸ್ವಿ ವ್ಯಕ್ತಿಗಳು ಕೆಲಸವನ್ನು ಭಿನ್ನವಾಗಿ ಮಾಡಿ ತೋರಿಸುತ್ತಾರೆ ಎಂಬ ಮಾತಿನಂತೆ ನಾವು ನಮ್ಮ ವ್ಯವಹಾರಕ್ಕೆ ಪುನಶ್ಚೇತನ ನೀಡಲು ಮುಂದಾದೆವು. ನಾವು ಫ್ರೋಜನ್ ಆಹಾರ ವಿಭಾಗದಲ್ಲಿ ಹೊಸ ಅವಕಾಶಗಳನ್ನು ಕಂಡುಕೊಂಡೆವು. ಸಮೋಸಾ, ರೋಲ್ಸ್, ಮೊಮೊಸ್‌ನಂತಹ ಬಗೆಬಗೆಯ ಫ್ರೋಜನ್ ತಿಂಡಿಗಳನ್ನು ತಯಾರಿಸಲು ಪ್ರಾರಂಭಿಸಿದ್ದೇವೆ ಮತ್ತು ದಿನಕ್ಕೆ ಅರ್ಧ ಟನ್‌ನಷ್ಟು ಇಂತಹ ತಿಂಡಿಗಳನ್ನು ತಯಾರಿಸುವ ಸಾಮರ್ಥ್ಯ ಬೆಳೆಸಿಕೊಂಡಿದ್ದೇವೆ. ಬೆಂಗಳೂರಿನಾದ್ಯಂತ ವಿತರಕರು ಮತ್ತು ವಿತರಣಾ ಪಾಲುದಾರರನ್ನು ಹೊಂದಿದ್ದೇವೆ. ಇದಲ್ಲದೆ, ನಾವು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಹಾಗೂ ತಮಿಳುನಾಡಿನಲ್ಲಿ ಪಾಲುದಾರರನ್ನು ಅರಸುತ್ತಿದ್ದೇವೆ’ ಎಂದರು.

ತಮ್ಮ ಔದ್ಯಮಿಕ ಪಯಣದಲ್ಲಿ ಪತಿಯಿಂದ ದೊರೆತ ಬೆಂಬಲಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸುವ ಅನುಷ್ಕಾ, ಇತರ ಉದ್ಯಮಿಗಳಿಗೆ ಸರಳವಾದ, ಆದರೆ ಜೀವನವನ್ನು ಬದಲಿಸುವ ಸಂದೇಶವನ್ನು ಹೊಂದಿದ್ದಾರೆ. ‘ಉದ್ಯಮದ ಮೊದಲ ದಿನದಿಂದಲೂ ನಿಮ್ಮ ಆದಾಯವನ್ನು ಕ್ರಮಬದ್ಧವಾಗಿ ಬಳಸುವ ಕೆಲಸ ಮಾಡಿ. ಏಕೆಂದರೆ ಉಳಿಸಿದ ಹಣ ನೀವು ಗಳಿಸಿದ ಹಣವೂ ಹೌದು’ ಎನ್ನುತ್ತಾರೆ ಅವರು.


ಅನುಷ್ಕಾ ಜೈಸಿಂಗ್

ಪಿಂಚಣಿ ಪಾವತಿ, ಸಣ್ಣ ಉಳಿತಾಯ ಯೋಜನೆ
ಖಾಸಗಿ ಬ್ಯಾಂಕ್‌ಗಳಿಗೂ ಅವಕಾಶ

ನವದೆಹಲಿ (ಪಿಟಿಐ): ತೆರಿಗೆ ಸಂಗ್ರಹ, ಪಿಂಚಣಿ ಪಾವತಿ ಮತ್ತು ಸಣ್ಣ ಉಳಿತಾಯ ಯೋಜನೆಗಳನ್ನು ನಿಭಾಯಿಸುವುದು ಸೇರಿದಂತೆ ಸರ್ಕಾರಿ ಯೋಜನೆಗಳಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕೇಂದ್ರ ಹಣಕಾಸು ಸಚಿವಾಲಯವು ಎಲ್ಲ ಖಾಸಗಿ ಬ್ಯಾಂಕ್‌ಗಳಿಗೆ ಅವಕಾಶ ಕಲ್ಪಿಸಿದೆ.

ಸರ್ಕಾರಕ್ಕೆ ಸಂಬಂಧಿಸಿದ ಇಂತಹ ವಹಿವಾಟುಗಳಲ್ಲಿ ತೊಡಗಿಸಿಕೊಳ್ಳಲು ಈವರೆಗೆ ಕೆಲವು ದೊಡ್ಡ ಖಾಸಗಿ ಬ್ಯಾಂಕ್‌ಗಳಿಗೆ ಮಾತ್ರ ಅವಕಾಶ ಇತ್ತು. ಈಗ ಗ್ರಾಹಕರಿಗೆ ಹೆಚ್ಚಿನ ಅನುಕೂಲ ಆಗುವ ನಿರೀಕ್ಷೆ ಇದೆ, ಗ್ರಾಹಕ ಸೇವೆಗಳಲ್ಲಿ ಸ್ಪರ್ಧಾತ್ಮಕತೆಯನ್ನು ಮತ್ತು ಕ್ಷಮತೆಯನ್ನು ಹೆಚ್ಚಿಸುವ ನಿರೀಕ್ಷೆಯೂ ಇದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

‘ಭಾರತದ ಅರ್ಥ ವ್ಯವಸ್ಥೆಯ ಬೆಳವಣಿಗೆಯಲ್ಲಿ ಖಾಸಗಿ ಬ್ಯಾಂಕ್‌ಗಳು ಇನ್ನು ಮುಂದೆ ಸಮಾನ ಪಾಲುದಾರರಾಗಬಹುದು’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

‘ಸರ್ಕಾರದ ವಹಿವಾಟುಗಳ ವಿಚಾರದಲ್ಲಿ ಖಾಸಗಿ ಬ್ಯಾಂಕ್‌ಗಳಿಗೆ ಮಾನ್ಯತೆ ನೀಡಲು ಇನ್ನು ಆರ್‌ಬಿಐಗೆ ಯಾವ ನಿರ್ಬಂಧವೂ ಇರುವುದಿಲ್ಲ. ಈ ವಿಚಾರವನ್ನು ಆರ್‌ಬಿಐಗೆ ತಿಳಿಸಲಾಗಿದೆ’ ಎಂದು ಕೂಡ ಪ್ರಕಟಣೆಯಲ್ಲಿ ಹೇಳಲಾಗಿದೆ. ಐಡಿಬಿಐ ಬ್ಯಾಂಕ್ ಮಾತ್ರವೇ ಅಲ್ಲದೆ, ಸರ್ಕಾರಿ ಸ್ವಾಮ್ಯದ ಎರಡು ಬ್ಯಾಂಕ್‌ಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ಉದ್ದೇಶ ಇದೆ ಎಂಬುದನ್ನು ಸರ್ಕಾರವು ಈ ಬಾರಿಯ ಬಜೆಟ್‌ನಲ್ಲಿ ಹೇಳಿದೆ.

‘ಖಾಸಗಿ ವಲಯಕ್ಕೆ ಉತ್ತೇಜನ’: (ನವದೆಹಲಿ) ಸರ್ಕಾರದ ಹೊಸ ಕ್ರಮವು ಖಾಸಗಿ ಬ್ಯಾಂಕ್‌ಗಳಿಗೆ ರಾಜ್ಯ ಸರ್ಕಾರದ ಯೋಜನೆಗಳನ್ನು, ವಹಿವಾಟುಗಳನ್ನು ಕೂಡ ನಿಭಾಯಿಸಲು ಹಂತ ಹಂತವಾಗಿ ಅವಕಾಶ ಕಲ್ಪಿಸಲಿದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

‘ಕೇಂದ್ರ ಸರ್ಕಾರದ ವಹಿವಾಟುಗಳನ್ನು ಇನ್ನು ಮುಂದೆ ಖಾಸಗಿ ಬ್ಯಾಂಕ್‌ಗಳೂ ನಡೆಸಬಹುದು ಎಂಬ ತೀರ್ಮಾನವು ಖಾಸಗಿ ಬ್ಯಾಂಕ್ ವಲಯಕ್ಕೆ ಉತ್ತೇಜನ ನೀಡುವುದಷ್ಟೇ ಅಲ್ಲದೆ, ದೇಶದ ಅಭಿವೃದ್ಧಿಗೂ ಕೊಡುಗೆ ನೀಡಲಿದೆ.’ ಎಂದು ಜೆ. ಸಾಗರ್ ಅಸೋಸಿಯೇಟ್ಸ್‌ನ ಪಾಲುದಾರ ಅನೀಶ್ ಮಶ್ರೂವಾಲಾ ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನಲ್ಲಿ ಬಾಷ್ ‘ಸ್ಮಾರ್ಟ್ ಕ್ಯಾಂಪಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜರ್ಮನಿಯ ತಂತ್ರಜ್ಞಾನ ಮತ್ತು ಸೇವಾ ಸಂಸ್ಥೆ ಬಾಷ್, 2022ರ ಜೂನ್ ವೇಳೆಗೆ ₹ 800 ಕೋಟಿ ವೆಚ್ಚದಲ್ಲಿ ಬೆಂಗಳೂರಿನ ಆಡುಗೋಡಿಯಲ್ಲಿ ಸ್ಮಾರ್ಟ್ ಕ್ಯಾಂಪಸ್ ತೆರೆಯಲಿದೆ.

‘75 ಎಕರೆ ವಿಸ್ತೀರ್ಣದ ಈ ಸ್ಮಾರ್ಟ್ ಕ್ಯಾಂಪಸ್, ಯೊರೋಪ್‌ನ ಹೊರಗಿರುವ ಎರಡನೇ ಅತಿ ದೊಡ್ಡ ಜಾಗತಿಕ ತಂತ್ರಜ್ಞಾನ ಕೇಂದ್ರವಾಗಲಿದೆ. ನಿರ್ಮಾಣ ಕಾರ್ಯ ಪೂರ್ಣಗೊಂಡ ಬಳಿಕ ಈ ಕ್ಯಾಂಪಸ್‌ನಲ್ಲಿ ಕೆಲಸ ಮಾಡುವ ಎಂಜಿನಿಯರ್‌ಗಳ ಸಂಖ್ಯೆಯು ಈಗಿರುವ 6,000ದಿಂದ 10,000ಕ್ಕೆ ಏರಿಕೆಯಾಗಲಿದೆ’ ಎಂದು ಬಾಷ್‌ನ ಆಡಳಿತ ನಿರ್ದೇಶಕಿ ಹಾಗೂ ಭಾರತದಲ್ಲಿ ಬಾಷ್ ಸಮೂಹದ ಅಧ್ಯಕ್ಷೆಯಾಗಿರುವ ಸುಮಿತ್ರಾ ಭಟ್ಟಾಚಾರ್ಯ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಸ್ಮಾರ್ಟ್ ಕಣ್ಗಾವಲು, ಸ್ಮಾರ್ಟ್ ಪಾರ್ಕಿಂಗ್ ಮುಂತಾದ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಇಲ್ಲಿ ಅಳವಡಿಸಲಾಗುವುದು. ಕ್ಯಾಂಪಸ್ ಒಳಗೆ 16 ಮಹಡಿಗಳ ಕಟ್ಟಡ ಹಾಗೂ ಎರಡು ಕ್ಯಾಂಪಸ್‌ಗಳನ್ನು ಸಂಪರ್ಕಿಸುವ ಸೇತುವೆಗಳನ್ನು ನಿರ್ಮಿಸಲಾಗುತ್ತಿದೆ. ಕ್ಯಾಂಪಸ್‌ನ ಅಡಿಯಲ್ಲಿ ಮೆಟ್ರೊ ರೈಲ್ವೆ ಲೈನ್ ಹಾದು ಹೋಗಲಿದೆ’ ಎಂದು ಭಟ್ಟಾಚಾರ್ಯ ತಿಳಿಸಿದರು.

‘ತಾಲಿಬಾನ್ ಆಳ್ವಿಕೆಗೆ ಬೈಡನ್ ಒಪ್ಪುವುದಿಲ್ಲ’

ವಾಷಿಂಗ್ಟನ್: ‘ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಆಡಳಿತ ನಡೆಸುವುದನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಒಪ್ಪುವುದಿಲ್ಲ ಎಂದು ಹೇಳಿರುವ ಶ್ವೇತಭವನ, ಯುದ್ಧಪೀಡಿತವಾಗಿರುವ ಆ ದೇಶದಲ್ಲಿ ಶಾಂತಿ ನೆಲೆಸಲು ಬೇಕಾದ ಕ್ರಮ ಕೈಗೊಳ್ಳುವ ಪ್ರಕ್ರಿಯೆ ನಡೆಯುತ್ತಿರುವ ವಿಚಾರವನ್ನು ಒತ್ತಿ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1050
ನಡುಗೋಲು	1150-1250
ರಾಶಿ	1400-1450
ರಾಶಿ ಉತ್ತಮ	1500-1600
ಜರಡಿ	1700-1750
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	2000-2050
ಕಾಳು ಮೆಣಸು	325
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41500
ಹಳತು	42500-51000
ಕುಮಟಾ	
ಚಿಪ್ಪು	25169-30109
ಕೋಕ	17099-29019
ಫ್ಯಾಕ್ಟರಿ	14189-19111
ಹಳೆಚಾಲಿ	39169-41599
ಹೊಸಚಾಲಿ	33099-36899
ಸಿದ್ದಾಪುರ	
ಬಿಳಿಗೋಟು	20969-28699
ಕೋಕ	20209-28699
ಹಳೆಚಾಲಿ	34899-40299
ಹೊಸಚಾಲಿ	33399-36839
ಕೆಂಪುಗೋಟು	24780-30012
ರಾಶಿ	37849-42109
ತಟ್ಟಿಬೆಟ್ಟೆ	32669-38699
ಹೊಸನಗರ	
ಚಾಲಿ	32809-34099
ಕೆಂಪುಗೋಟು	30599-33199
ರಾಶಿ	38109-43199
ಸಿಪ್ಪೆಗೋಟು	11399-16415
ಯಲ್ಲಾಪುರ	
ಅಪಿ	48369-50879
ಬಿಳಿಗೋಟು	21899-3009
ಕೋಕ	20899-29299
ಚಾಲಿ	31899-40899
ಕೆಂಪುಗೋಟು	27879-34899
ರಾಶಿ	39800-47269
ತಟ್ಟಿಬೆಟ್ಟೆ	35499-39369
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	43058-44300
ಗೊರಬಲು	16810-31489
ರಾಶಿ	38000-42801
ಸರಕು	48000-75000
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	241-432
ದ್ವಿತಳಿ (ಬಿ.ವಿ)	331-523

₹ 2.96 ಲಕ್ಷ ಕೋಟಿ ಸಾಲ ವಿತರಣೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಿವಿಧ ಬ್ಯಾಂಕ್‌ಗಳ ಮೂಲಕ 2021–22ನೇ ಆರ್ಥಿಕ ವರ್ಷದಲ್ಲಿ ₹ 2,96,051 ಕೋಟಿ ಮೊತ್ತದ ಸಾಲ ವಿತರಣೆಯ ಗುರಿಯನ್ನು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ಅಂದಾಜು ಮಾಡಿದೆ.

ಸಾಲ ವಿತರಣೆಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲ ಜಿಲ್ಲೆಗಳ ಸಮಗ್ರ ಮಾಹಿತಿಯನ್ನು ಸಂಗ್ರಹಿಸಿ, ಅಧ್ಯಯನ ನಡೆಸಿ ನಬಾರ್ಡ್ ಸಿದ್ಧಪಡಿಸಿರುವ ‘ಸ್ಟೇಟ್ ಫೋಕಸ್ ಪೇಪರ್–2021–22’ ಅನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಬುಧವಾರ ನಗರದಲ್ಲಿ ನಡೆದ ಸಮಾರಂಭದಲ್ಲಿ ಬಿಡುಗಡೆ ಮಾಡಿದರು.

2020–21ನೇ ಹಣಕಾಸು ವರ್ಷದಲ್ಲಿ ₹ 2,44,564 ಕೋಟಿ ಸಾಲ ವಿತರಣೆ ಗುರಿ ನಿಗದಿಪಡಿಸಲಾಗಿತ್ತು. ಮುಂಬರುವ ಆರ್ಥಿಕ ವರ್ಷದಲ್ಲಿ ಸಂಭವನೀಯ ಸಾಲ ವಿತರಣೆಯ ಗುರಿಯನ್ನು ಶೇಕಡ 21.05ರಷ್ಟು ಹೆಚ್ಚಿಸಲಾಗಿದೆ. ಈ ವರದಿಯ ಆಧಾರದಲ್ಲೇ ಬ್ಯಾಂಕ್‌ಗಳೂ ವಾರ್ಷಿಕ ಸಾಲ ಯೋಜನೆಯನ್ನು ಸಿದ್ಧಪಡಿಸಲಿವೆ.

ಕೃಷಿ ಮತ್ತು ಪೂರಕ ಚಟುವಟಿಕೆಗಳಿಗಾಗಿ ₹ 1.45 ಲಕ್ಷ ಕೋಟಿ (ಶೇ 49.05) ಮೊತ್ತದ ಸಾಲ ವಿತರಣೆಯ ಗುರಿಯನ್ನು ನಬಾರ್ಡ್ ನಿಗದಿಪಡಿಸಿದೆ. ಉದ್ಯಮ ವಲಯಕ್ಕೆ ₹ 1.08 ಲಕ್ಷ ಕೋಟಿ ಹಾಗೂ ವಸತಿ ವಲಯಕ್ಕೆ ₹ 28,579ಕೋಟಿ ಸಾಲ ವಿತರಣೆಯ ಗುರಿಯನ್ನು ಅಂದಾಜು ಮಾಡಲಾಗಿದೆ.

‘ಸಾಲ ವಿತರಣೆ ತೃಪ್ತಿಕರವಾಗಿಲ್ಲ’

‘ಕರ್ನಾಟಕದಲ್ಲಿ ಬ್ಯಾಂಕ್‌ಗಳು ಕೃಷಿ ಮತ್ತು ಪೂರಕ ವಲಯಕ್ಕೆ ವಿತರಿಸುತ್ತಿರುವ ಸಾಲದ ಪ್ರಮಾಣ ತೃಪ್ತಿಕರವಾಗಿಲ್ಲ’ ಎಂದು ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮ ಅಸಮಾಧಾನ ವ್ಯಕ್ತಪಡಿಸಿದರು.

ರೈತರ ಎಲ್ಲ ಮಾಹಿತಿ ಒದಗಿಸಿದ್ದರೂ, ಕಿಸಾನ್ ಕ್ರೆಡಿಟ್ ಕಾರ್ಡ್ ವಿತರಣೆಯಲ್ಲಿ ಹೆಚ್ಚಿನ ಪ್ರಗತಿ ಆಗಿಲ್ಲ. ಮೀನುಗಾರಿಕೆಯಲ್ಲಿ ತೊಡಗಿರುವ 11,094 ಮಂದಿ ಸಾಲ ಕೋರಿ ಅರ್ಜಿ ಸಲ್ಲಿಸಿದ್ದರೆ, 1,800 ಜನರಿಗೆ ಮಾತ್ರ ಸಾಲ ಮಂಜೂರು ಮಾಡಲಾಗಿದೆ. ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿ ಸಭೆಯಲ್ಲಿ ಪದೇ ಪದೇ ವಿಷಯ ಪ್ರಸ್ತಾಪಿಸುತ್ತಿದ್ದರೂ ಬ್ಯಾಂಕ್‌ಗಳಿಂದ ಸ್ಪಂದನೆ ದೊರೆಯುತ್ತಿಲ್ಲ ಎಂದರು.

2021–22ನೇ ಸಾಲಿನ ಸಾಲ ವಿತರಣಾ ಅಂದಾಜು

ವಲಯ	ಅಂದಾಜು ಮೊತ್ತ (₹ ಕೋಟಿಗಳಲ್ಲಿ)	ಶೇಕಡವಾರು
ಕೃಷಿ ಸಾಲ	₹1,16,346	39.30
ಕೃಷಿ ಮೂಲಸೌಲಭ್ಯ	₹6,734	2.27

1,030 ಅಂಶ ಏರಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಹಣಕಾಸು ವಲಯದ ಷೇರುಗಳ ಖರೀದಿ ಭರಾಟೆ ಜೋರಾಗಿದ್ದ ಕಾರಣದಿಂದಾಗಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಬುಧವಾರದ ವಹಿವಾಟಿನಲ್ಲಿ 1,030 ಅಂಶ ಏರಿಕೆ ಕಂಡಿತು.

ರಾಷ್ಟ್ರೀಯ ಷೇರುಪೇಟೆಯಲ್ಲಿ ತಾಂತ್ರಿಕ ಕಾರಣದಿಂದಾಗಿ ವಹಿವಾಟು ಕೆಲವು ಹೊತ್ತು ಸ್ಥಗಿತಗೊಂಡಿತ್ತು. ನಂತರ, ವಹಿವಾಟಿನ ಅವಧಿಯನ್ನು ತುಸು ವಿಸ್ತರಿಸಲಾಯಿತು. ರಾಷ್ಟ್ರೀಯ ಷೇರುಪೇಟೆಯ ಸೂಚ್ಯಂಕ ನಿಫ್ಟಿ 274 ಅಂಶ ಏರಿಕೆ ದಾಖಲಿಸಿತು.

ಷೇರುಪೇಟೆಯ ದಿನದ ವಹಿವಾಟು ಮಧ್ಯಾಹ್ನ 3.30ಕ್ಕೆ ಮುಕ್ತಾಯಗೊಳ್ಳುತ್ತದೆ. ಬುಧವಾರ 3.30ಕ್ಕೂ ತುಸು ಮೊದಲು, ‘ವಹಿವಾಟು 5 ಗಂಟೆಯವರೆಗೂ ಮುಂದುವರಿಯಲಿದೆ’ ಎಂದು ಬಿಎಸ್‌ಇ ಮತ್ತು ಎನ್‌ಎಸ್‌ಇ ಪ್ರಕಟಿಸಿದವು. ಎನ್‌ಎಸ್‌ಇಯಲ್ಲಿ ಬೆಳಿಗ್ಗೆ 11.40ರ ನಂತರ ತಾಂತ್ರಿಕ ದೋಷದಿಂದಾಗಿ ವಹಿವಾಟು ನಡೆದಿರಲಿಲ್ಲ. ಆದರೆ, ಬಿಎಸ್‌ಇಯಲ್ಲಿ ವಹಿವಾಟು ಮುಂದುವರಿದಿತ್ತು. ಬ್ರೆಂಟ್ ಕಚ್ಚಾ ತೈಲದ ಬೆಲೆಯಲ್ಲಿ ಶೇಕಡ 0.96ರಷ್ಟು ಹೆಚ್ಚಳ ಆಗಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯದಲ್ಲಿ 11 ಪೈಸೆ ಹೆಚ್ಚಳ ಆಗಿದೆ.

ಮುಂಬೈ ಧಾರಣೆ

ಶೇಂಗಾ

24-2-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9850-9900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	1150 (1132)
ಪಾಮ್ ವಾರದ ಡೆಲಿವರಿ	1150 (1143)
ಸೂರ್ಯಕಾಂತಿ ಎಣ್ಣೆ ಕಚ್ಚಾ	1490 (1480)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,500 (46,700)
ಬೆಳ್ಳಿ ಕೆ.ಜಿ
69,150 (69,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ಯಾರಾಚೂಟ್ ಮೇಲೆ ಗೌಪ್ಯ ಸಂದೇಶ!

ಕೇಪ್ ಕ್ಯಾನವೆರಲ್ (ಎಪಿ): ಪರ್ಸವರೆನ್ಸ್ ರೋವರ್‌ಅನ್ನು ಮಂಗಳ ಗ್ರಹದ ಮೇಲಿಳಿಸಲು ಬಳಸಿದ ಪ್ಯಾರಾಚೂಟ್, ಗೌಪ್ಯ ಸಂದೇಶವೊಂದನ್ನು ಒಳಗೊಂಡಿದ್ದು, ಇದು ಖಗೋಳ ವಿಜ್ಞಾನ ಪ್ರಿಯರಲ್ಲಿ ಕುತೂಹಲಕ್ಕೆ ಕಾರಣವಾಗಿದೆ.

ಪದಬಂಧ ಪ್ರಿಯರೂ ಆಗಿರುವ, ರೋವರ್ ನಿರ್ವಹಣೆ ತಂಡದಲ್ಲಿರುವ ಸಿಸ್ಟಮ್ ಎಂಜಿನಿಯರ್ ಇಯಾನ್ ಕ್ಲಾರ್ಕ್ ಈ ಗೌಪ್ಯ ಸಂದೇಶ ಅಳವಡಿಸಿದ್ದಾರೆ.

ಕಿತ್ತಳೆ ಮತ್ತು ಬಿಳಿ ಬಣ್ಣದ ಪಟ್ಟಿಗಳನ್ನು ಒಳಗೊಂಡಿರುವ ಪ್ಯಾರಾಚೂಟ್‌ನಲ್ಲಿ ಬೈನರಿ ಕೋಡ್ ಬಳಸಿ ಕ್ಲಾರ್ಕ್ ಅವರು ‘ಡೇರ್ ಮೈಟಿ ಥಿಂಗ್ಸ್’ ಎಂದು ಬರೆದಿದ್ದಾರೆ. ಈ ಸಂಕೇತಾಕ್ಷರಗಳ ವಿಶ್ಲೇಷಣೆಗಾಗಿ, ಕ್ಯಾಲಿಫೋರ್ನಿಯಾದ ಪಸಡೇನಾದಲ್ಲಿರುವ ಜೆಟ್ ಪ್ರೊಪಲ್ಷನ್ ಲ್ಯಾಬೊರೇಟರಿಯಲ್ಲಿ (ಜೆಪಿಎಲ್) ಅವರು ಜಿಪಿಎಸ್ ಆಧಾರಿತ ವ್ಯವಸ್ಥೆಯೊಂದನ್ನು ಸಹ ಅಳವಡಿಸಿದ್ದಾರೆ.

ಭಾರತದ ಯಾವುದೇ ಪ್ರದೇಶವನ್ನು ಪಕ್ಷವು ಅಗೌರವಿಸಿಲ್ಲ: ಹಿರಿಯ ಮುಖಂಡ ಆನಂದ ಶರ್ಮಾ

ರಾಹುಲ್ ಹೇಳಿಕೆಗೆ ಕಾಂಗ್ರೆಸ್‌ನಲ್ಲೇ ವಿರೋಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಭಾರತದವರಿಗಿಂತ ದಕ್ಷಿಣ ಭಾರತದವರು ಯಾವುದೇ ಸಮಸ್ಯೆ ಅಥವಾ ವಿಷಯಗಳನ್ನು ಗಂಭೀರವಾಗಿ ಪರಿಗಣಿಸುತ್ತಾರೆ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನೀಡಿರುವ ಹೇಳಿಕೆಗೆ ಪಕ್ಷದ ಕೆಲವು ಮುಖಂಡರೇ ವಿರೋಧ ವ್ಯಕ್ತಪಡಿಸಿದ್ದಾರೆ.



ಆನಂದ ಶರ್ಮಾ

ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಆನಂದ್ ಶರ್ಮಾ ಈ ಬಗ್ಗೆ ಪ್ರತಿಕ್ರಿಯಿಸಿದ್ದು, 'ದೇಶದ ಯಾವುದೇ ಪ್ರದೇಶವನ್ನು ಪಕ್ಷವು ಅಗೌರವಿಸಿಲ್ಲ. ಹೀಗಾಗಿ, ತಪ್ಪು ತಿಳಿವಳಿಕೆ ಉಂಟಾಗಿರುವ ಬಗ್ಗೆ ರಾಹುಲ್ ಅವರೇ ಸ್ಪಷ್ಟನೆ ನೀಡಬೇಕು' ಎಂದು ಹೇಳಿದ್ದಾರೆ.

'ಕಾಂಗ್ರೆಸ್ ಎಂದಿಗೂ ದೇಶವನ್ನು ವಿಭಜಿಸಿಲ್ಲ. ಭಾರತದ ಪ್ರತಿಯೊಂದು ಭಾಗವು ಮುಖ್ಯವಾಗಿದೆ. ಎಲ್ಲ ಪ್ರದೇಶಗಳನ್ನು ಸಮಾನವಾಗಿ ಕಂಡಿದೆ. ಉತ್ತರ ಭಾರತವು ಸಹ ಅಪಾರ ಕೊಡುಗೆ ನೀಡಿದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮೋತಿಲಾಲ್ ನೆಹರೂ, ಜವಾಹರ ಲಾಲ್ ನೆಹರೂ, ಡಾ. ರಾಜೇಂದ್ರ ಪ್ರಸಾದ್ ಮುಂತಾದವರು ನಿಸ್ವಾರ್ಥದಿಂದ ದೇಶಕ್ಕಾಗಿ ಸೇವೆ ಸಲ್ಲಿಸಿದ್ದಾರೆ. ಸ್ವಾತಂತ್ರ್ಯ ದೊರೆತ ಬಳಿಕವೂ ಪಂಡಿತ ಜವಾಹರಲಾಲ್ ನೆಹರೂ, ಇಂದಿರಾಗಾಂಧಿ, ಲಾಲ್ ಬಹಾದ್ದೂರ ಶಾಸ್ತ್ರಿ, ಅಟಲ್ ಬಿಹಾರಿ ವಾಜಪೇಯಿ, ಡಾ. ಮನಮೋಹನ್ ಸಿಂಗ್ ಮುಂತಾದ ಮುಖಂಡರು ಅಪಾರ ಕೊಡುಗೆ ನೀಡಿದ್ದಾರೆ' ಎಂದು ವಿವರಿಸಿದ್ದಾರೆ.

'ನಾವು ಏಕತೆಯ ಮತ್ತು ಒಗ್ಗಟ್ಟಿನ ಭಾರತದಲ್ಲಿ ನಂಬಿಕೆ ಇಟ್ಟಿದ್ದೇವೆ. ಹೀಗಾಗಿ, ಅಗೌರವ ತೋರಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಹೇಳಿದ್ದಾರೆ.

ರಾಜ್ಯಸಭೆಯ ಹಿರಿಯ ಸದಸ್ಯ ಕಪಿಲ್ ಸಿಬಲ್ ಅವರು ಸಹ ಆನಂದ ಶರ್ಮಾ ಹೇಳಿಕೆಗೆ ಸಹಮತ ವ್ಯಕ್ತಪಡಿಸಿದ್ದಾರೆ.


ಕಪಿಲ್ ಸಿಬಲ್

'ದೇಶದ ಎಲ್ಲಾ ಭಾಗದ ಮತದಾರರು ಜಾಣರಿದ್ದಾರೆ. ಅವರ ಬುದ್ಧಿವಂತಿಕೆಯನ್ನು ಕಡೆಗಣಿಸಬಾರದು' ಎಂದು ಕಪಿಲ್ ಸಿಬಲ್ ಹೇಳಿದ್ದಾರೆ.

ತಿರುವನಂತಪುರದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದ ರಾಹುಲ್ ಗಾಂಧಿ, '15 ವರ್ಷಗಳ ಕಾಲ ಉತ್ತರ ಭಾರತದಲ್ಲಿ ಸಂಸದನಾಗಿದ್ದೆ. ಅಲ್ಲಿನ ರಾಜಕೀಯವೇ ವಿಭಿನ್ನವಾಗಿತ್ತು. ಕೇರಳಕ್ಕೆ ಬಂದ ಮೇಲೆ ದಿಢೀರನೆ ಹೊಸತನ ಕಾಣಿಸಿತು. ಇಲ್ಲಿನ ಜನರು ನೈಜ ವಿಷಯಗಳು ಮತ್ತು ಸಮಸ್ಯೆಗಳ ಬಗ್ಗೆ ಆಸಕ್ತಿ ಹೊಂದಿದ್ದಾರೆ. ಕೇವಲ ತೋರಿಕೆಯ ವಿಷಯಗಳ ಬದಲು ನೈಜ ವಿಷಯಗಳ ಬಗ್ಗೆ ಗಮನಹರಿಸುತ್ತಾರೆ' ಎಂದು ಹೇಳಿದ್ದರು.

ಈ ಹೇಳಿಕೆ ಬಳಿಕ ವಾಗ್ದಾಳಿ ನಡೆಸಿದ್ದ ಬಿಜೆಪಿ ಮುಖಂಡರು, 'ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವಕಾಶವಾದಿ. ಕೇರಳದಲ್ಲಿ ಮಾಡಿದ ಭಾಷಣದಲ್ಲಿ ಉತ್ತರ ಭಾರತೀಯರ ಬಗ್ಗೆ ಕೀಳಾಗಿ ಮಾತನಾಡಿದ್ದಾರೆ' ಎಂದು ಟೀಕಿಸಿದ್ದರು.

ಉತ್ತರ ಪ್ರದೇಶದ ಅಮೇಠಿ ಕ್ಷೇತ್ರವನ್ನು ರಾಹುಲ್ ಗಾಂಧಿ 2004ರಿಂದ ಪ್ರತಿನಿಧಿಸುತ್ತಿದ್ದರು. ಬಳಿಕ, 2019ರಲ್ಲಿ ಲೋಕಸಭೆ ಚುನಾವಣೆಯಲ್ಲಿ ಅಮೇಠಿ ಮತ್ತು ಕೇರಳದ ವಯನಾಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರು. ಅಮೇಠಿಯಲ್ಲಿ ಪರಾಭವಗೊಂಡಿದ್ದ ರಾಹುಲ್, ವಯನಾಡುನಲ್ಲಿ ಜಯಗಳಿಸಿದರು.

ಬಿಜೆಪಿಯಿಂದ ಉತ್ತರ–ದಕ್ಷಿಣ ವಿಭಜನೆಯ 'ಟೂಲ್‌ಕಿಟ್' ಮಾರಾಟ: ಸುರ್ಜೇವಾಲಾ



ರಣದೀಪ ಸುರ್ಜೇವಾಲಾ

'ಉತ್ತರ–ದಕ್ಷಿಣ ವಿಭಜನೆಯ ಟೂಲ್‌ಕಿಟ್ ಅನ್ನು ಬಿಜೆಪಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದೆ' ಎಂದು ಕಾಂಗ್ರೆಸ್‌ನ ಮುಖ್ಯ ವಕ್ತಾರ ರಣದೀಪ ಸುರ್ಜೇವಾಲಾ ದೂರಿದ್ದಾರೆ.

ರಾಹುಲ್ ಗಾಂಧಿ ಅವರು ನೀಡಿರುವ ಹೇಳಿಕೆಗೆ ಬಿಜೆಪಿ ಮುಖಂಡರು ಮಾಡಿರುವ ಟೀಕೆಗೆ ಪ್ರತಿಕ್ರಿಯಿಸಿರುವ ಅವರು 'ತಮಗೆ ಅಗತ್ಯವಿರುವ ನೈಜ ವಿಷಯಗಳ ಬಗ್ಗೆ ಸರ್ಕಾರವನ್ನು ಪ್ರಶ್ನಿಸುವಂತೆ ರಾಹುಲ್ ಗಾಂಧಿ ಜನತೆಗೆ ಕರೆ ನೀಡಿದ್ದಾರೆ. ಅದು ಕೇಂದ್ರ ಅಥವಾ ರಾಜ್ಯ ಸರ್ಕಾರ ಇರಬಹುದು. ಜತೆಗೆ, ಬಿಜೆಪಿ ಮಾರಾಟ ಮಾಡುವ ತೋರಿಕೆಯ ಟೂಲ್‌ಕಿಟ್ ಕಥೆಗಳನ್ನು ಕಡೆಗಣಿಸುವಂತೆಯೂ ಅವರು ಹೇಳಿದ್ದಾರೆ' ಎಂದು ಸ್ಪಷ್ಟನೆ ನೀಡಿದ್ದಾರೆ.

'ಉತ್ತರ–ದಕ್ಷಿಣ ವಿಭಜನೆಯ ಟೂಲ್‌ಕಿಟ್ ಅಳವಡಿಸಿಕೊಂಡಿರುವ ಬಿಜೆಪಿ, ಸುದ್ದಿ ವಾಹಿನಿಗಳಿಗೆ ಮತ್ತು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದೆ. ಜನತೆಯ ನಿಜವಾದ ಸಮಸ್ಯೆಗಳಿಂದ ದೇಶದ ಗಮನವನ್ನು ಬೇರೆಡೆ ಸೆಳೆಯಲು ಬಿಜೆಪಿ ಕೇವಲ ತೋರಿಕೆಯ ಮತ್ತು ಪೊಳ್ಳು ವಿಷಯಗಳನ್ನು ಪ್ರತಿ ದಿನ ಪ್ರಸ್ತಾಪಿಸುತ್ತಿದೆ' ಎಂದು ಕಿಡಿಕಾರಿದ್ದಾರೆ.

'ಪ್ರಸ್ತುತ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬಗ್ಗೆ ಚರ್ಚೆಯಾಗಬೇಕಾಗಿದೆ. ಸಣ್ಣ ಮತ್ತು ಮಧ್ಯಮ ಉದ್ಯಮಗಳು ಸಂಕಷ್ಟದಲ್ಲಿವೆ. ಸಂವಿಧಾನದ ಮೇಲೆ ದಾಳಿ ಮಾಡಲಾಗುತ್ತದೆ. ಜತೆಗೆ, ಸರ್ಕಾರದ ನೀತಿಗಳ ಬಗ್ಗೆ ವಿರೋಧ ವ್ಯಕ್ತಪಡಿಸುವ ಮತ್ತು ಮಾತನಾಡುವ ಹಕ್ಕನ್ನು ಜನರು ಕಳೆದುಕೊಳ್ಳುತ್ತಿದ್ದಾರೆ' ಎಂದು ದೂರಿದ್ದಾರೆ.



ಕೋವಿಡ್ ಏರುಗತಿಯ ಆತಂಕ

ಒಂದನೇ ಪುಟದಿಂದ...

ಹೊಸ ಪ್ರಕರಣಗಳ ಸಂಖ್ಯೆ ಏರಿಕೆ: ದೇಶದಲ್ಲಿ ಮಂಗಳವಾರ ರಾತ್ರಿಯಿಂದ ಬುಧವಾರ ರಾತ್ರಿವರೆಗೆ 13,742 ಹೊಸ ಪ್ರಕರಣಗಳು ಪತ್ತೆಯಾಗಿವೆ. ಇದೇ ಅವಧಿಯಲ್ಲಿ ಕೋವಿಡ್‌ನಿಂದ ಸತ್ತವರ ಸಂಖ್ಯೆ 104. ಮೃತರ ಸಂಖ್ಯೆ ಹಿಂದಿನ ಎರಡು ವಾರದಲ್ಲೇ ಅತ್ಯಧಿಕ. ಈವರೆಗೆ ಪತ್ತೆಯಾಗಿರುವ ಒಟ್ಟು ಪ್ರಕರಣಗಳ ಸಂಖ್ಯೆ 1.10 ಕೋಟಿಯನ್ನು ಮೀರಿವೆ. ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 1.56 ಲಕ್ಷವನ್ನು ದಾಟಿದೆ.

'7,000ಕ್ಕೂ ಹೆಚ್ಚು ರೂಪಾಂತರ'

'ದೇಶದಲ್ಲಿ ಈವರೆಗೆ ಕೋವಿಡ್-19ಕ್ಕೆ ಕಾರಣವಾಗುವ ಸಾರ್ಸ್-ಕೋವ್-2 ವೈರಸ್‌ನ (ಕೊರೊನಾವೈರಸ್) 7,640 ರೂಪಾಂತರಗಳನ್ನು ಪತ್ತೆ ಮಾಡಲಾಗಿದೆ. ಆದರೆ ಇವೆಲ್ಲವೂ ರೂಪಾಂತರ ವೈರಸ್‌ಗಳಾಗಿ ವಿಕಾಸವಾಗಿಲ್ಲ. ಆದರೆ, ಕೆಲವು ರೂಪಾಂತರಗಳು ವೈರಸ್‌ಗಳಾಗಿ ವಿಕಾಸವಾಗಿರುವ ಸಾಧ್ಯತೆ ಇದೆ' ಎಂದು ಅಧ್ಯಯನ ವರದಿ ಹೇಳಿದೆ. ಹೈದರಾಬಾದ್‌ನಲ್ಲಿ ಇರುವ ಸಿಎಸ್‌ಐಆರ್-ಸೆಂಟರ್ ಫಾರ್ ಸೆಲ್ಯುಲಾರ್ ಅಂಡ್ ಮೊಲಿಕ್ಯುಲರ್ ಬಯಾಲಜಿ ಸಂಸ್ಥೆಯ ವಿಜ್ಞಾನಿಗಳು ನಡೆಸಿದ ಅಧ್ಯಯನದಲ್ಲಿ ಈ ಅಂಶ ಪತ್ತೆಯಾಗಿದೆ.

'ಬ್ರಿಟನ್, ಬ್ರೆಜಿಲ್, ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾಗಿರುವ ರೂಪಾಂತರ ಕೊರೊನಾ ವೈರಸ್‌ಗಳು ಭಾರತದಲ್ಲೂ ಪತ್ತೆಯಾಗಿವೆ. ಜತೆಗೆ ಭಾರತದಲ್ಲೇ ಕೆಲವು ರೂಪಾಂತರ ವೈರಸ್‌ಗಳು ಅಭಿವೃದ್ಧಿಯಾಗಿವೆ. ಆದರೆ ದೇಶದಲ್ಲಿ ದಿಢೀರ್ ಎಂದು ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಗಲು ಈ ರೂಪಾಂತರ ವೈರಸ್‌ಗಳೇ ಕಾರಣ ಎನ್ನಲಾಗದು' ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

ಅಂಜಲಿಗೆ ಭ್ರಷ್ಟಾಚಾರ ವಿರೋಧಿ ಚಾಂಪಿಯನ್ ಪ್ರಶಸ್ತಿ



ವಾಷಿಂಗ್ಟನ್ (ಪಿಟಿಐ): ಭಾರತದ ಸಾಮಾಜಿಕ ಕಾರ್ಯಕರ್ತೆ ಅಂಜಲಿ ಭಾರದ್ವಾಜ್ ಭ್ರಷ್ಟಾಚಾರ ವಿರೋಧಿ ಚಾಂಪಿಯನ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಆಡಳಿತ ಘೋಷಿಸಿದ 12 ಭ್ರಷ್ಟಾಚಾರ ವಿರೋಧಿ ಚಾಂಪಿಯನ್‌ಗಳಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯ ವಿಷಯಗಳ ಕುರಿತಂತೆ ಕೆಲಸ ಮಾಡುತ್ತಿರುವ ಅಂಜಲಿ ಭಾರದ್ವಾಜ್ ಸಹ ಒಬ್ಬರಾಗಿದ್ದಾರೆ.

'ಪಾರದರ್ಶಕತೆಯನ್ನು ಕಾಪಾಡಲು, ಭ್ರಷ್ಟಾಚಾರವನ್ನು ಎದುರಿಸಲು ಮತ್ತು ತಮ್ಮದೇ ದೇಶಗಳಲ್ಲಿ ಪ್ರತಿಕೂಲ ಪರಿಸ್ಥಿತಿಯಲ್ಲಿ ದಣಿವರಿಯದೆ ಕೆಲಸ ಮಾಡಿದ ವ್ಯಕ್ತಿಗಳನ್ನು ಗುರುತಿಸಲು ಹೊಸ ಅಂತರರಾಷ್ಟ್ರೀಯ ಭ್ರಷ್ಟಾಚಾರ ವಿರೋಧಿ ಚಾಂಪಿಯನ್ಸ್ ಪ್ರಶಸ್ತಿಯನ್ನು ಘೋಷಿಸುತ್ತಿದ್ದೇನೆ' ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಟೋನಿ ಬ್ಲಿಂಕೆನ್ ಹೇಳಿದ್ದಾರೆ.

ಎರಡು ದಿನಗಳ ಕೇರಳ ರಾಜ್ಯ ಪ್ರವಾಸದಲ್ಲಿ ಕಾಂಗ್ರೆಸ್ ನಾಯಕ

ಮೀನುಗಾರರೊಂದಿಗೆ ರಾಹುಲ್ ಸಂವಾದ

ಕೊಲ್ಲಂ (ಪಿಟಿಐ): ಚುನಾವಣೆಯ ಹೊಸ್ತಿಲಲ್ಲಿರುವ ಕೇರಳದಲ್ಲಿ ಕಳೆದ ಎರಡು ದಿನಗಳಿಂದ ಪ್ರವಾಸ ಕೈಗೊಂಡಿರುವ ಸಂಸದ ರಾಹುಲ್ ಗಾಂಧಿ ಬುಧವಾರ ಜಿಲ್ಲೆಯ ತಂಗಸ್ಸೆರಿ ಕಡಲ ತೀರದಲ್ಲಿ ಮೀನುಗಾರರೊಂದಿಗೆ ಸಂವಾದ ನಡೆಸಿದರು.

ನೀಲಿ ಟೀ ಶರ್ಟ್ ಮತ್ತು ಖಾಕಿ ಪ್ಯಾಂಟ್ ಧರಿಸಿದ್ದ ರಾಹುಲ್ ಗಾಂಧಿ ಮುಂಜಾನೆ 4.30ರ ಸುಮಾರಿಗೆ ಇಲ್ಲಿನ ವಾಡಿ ಬೀಚ್‌ನಿಂದ ತಮ್ಮ ಪ್ರವಾಸ ಆರಂಭಿಸಿದರು. ನಂತರ ಸಮುದ್ರದಲ್ಲಿ ಮೀನುಗಾರರ ಜತೆ ದೋಣಿಯಲ್ಲಿ ಸಾಗುತ್ತಾ ಸುಮಾರು ಒಂದೂವರೆ ಗಂಟೆ ಕಾಲ ಅವರೊಂದಿಗೆ ಮಾತುಕತೆ ನಡೆಸಿದರು. ಮೀನುಗಾರರ ಜೀವನದ ರೀತಿ, ನೀತಿ, ಎದುರಿಸುವ ಕಷ್ಟಗಳು ಸೇರಿದಂತೆ ಮೀನುಗಾರ ಸಮುದಾಯದವರ ಅನುಭವಗಳನ್ನು ಕೇಳುತ್ತಾ, ಸಮುದ್ರಕ್ಕೆ ಬಲೆ ಬೀಸಿ ಮೀನು ಹಿಡಿಯಲು ಯತ್ನಿಸಿದರು ರಾಹುಲ್.


ಮೀನು ಹಿಡಿದ ಬಲೆ ಎಳೆಯುತ್ತಿರುವ ರಾಹುಲ್ ಗಾಂಧಿ

ಈ ಮೀನುಗಾರರೊಂದಿಗಿನ ಸಮುದ್ರ ಯಾನದಲ್ಲಿ ರಾಹುಲ್ ಅವರೊಂದಿಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ. ಸಿ. ವೇಣುಗೋಪಾಲ್ ಮತ್ತು ಸಂಸದ ಹಾಗೂ ರಾಷ್ಟ್ರೀಯ ಮತ್ಸ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿರುವ ಟಿ. ಎನ್. ಪ್ರತಾಪ್ ಜತೆಗಿದ್ದರು.

ಸಮುದ್ರದಿಂದ ವಾಪಸ್ ದಂಡೆಯತ್ತ ಬರುವಾಗ, ದಂಡೆಯಲ್ಲಿ ನಿಂತಿದ್ದ ನಾಗರಿಕರತ್ತ ರಾಹುಲ್ ಕೈ ಬೀಸಿದರು.

'ನಾನು ಇಂದು ಮುಂಜಾನೆ, ನನ್ನ ಸಹೋದರರೊಂದಿಗೆ ಸಮುದ್ರಕ್ಕೆ ತೆರಳಿದ್ದೆ. ದೋಣಿಯಲ್ಲಿ ಸಮುದ್ರಕ್ಕೆ ಹೋಗಿ ಹಿಂತಿರುಗಿದ ನಂತರ, ಮೀನುಗಾರ ಸಹೋದರರು ಬಹಳ ಅಪಾಯದಲ್ಲಿ ಬದುಕುತ್ತಿದ್ದಾರೆ ಎಂದೆನಿಸಿತು. ಇವರು ಪರಿಶ್ರಮದೊಂದಿಗೆ ಮೀನು ಹಿಡಿದು ತಂದು ಮಾರುತ್ತಾರೆ. ಬೇರೆಯವರು ಲಾಭ ಪಡೆಯುತ್ತಾರೆ' ಎಂದು ರಾಹುಲ್ ತಮ್ಮ ಅನುಭವ ಹಂಚಿಕೊಂಡರು.

'ನಾನು ಮೀನು ಹಿಡಿಯಲು ಪ್ರಯತ್ನಿಸಿದೆ. ನನಗೆ ಸಿಕ್ಕಿದ್ದು ಒಂದೇ ಮೀನು. ಇಷ್ಟು ಸಮಯ, ಶ್ರಮ ಹಾಕಿ ಬಲೆ ಬೀಸಿದರೂ ಸಿಕ್ಕಿದ್ದು ಏನೂ ಇಲ್ಲ. ಇದು ನನ್ನ ಅನುಭವ' ಎಂದು ಮಾತು ಪೋಣಿಸಿದರು ರಾಹುಲ್.

'ಮೀನುಗಾರಿಕೆಗೆ ಪ್ರತ್ಯೇಕ ಸಚಿವಾಲಯ ರಚಿಸಬೇಕೆಂಬ ಬೇಡಿಕೆ ಇದೆ. ಇದರಿಂದ ಮೀನುಗಾರ ಸಮುದಾಯವನ್ನು ರಕ್ಷಿಸುವ ಜತೆಗೆ, ಅವರ ಸಮಸ್ಯೆಗಳನ್ನು ಪರಿಹರಿಸಲು ಅನುಕೂಲವಾಗುತ್ತದೆ. ಮುಂದಿನ ವಿಧಾನಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ಈ ಅಂಶವನ್ನು ಸೇರಿಸುವ ಸಂಬಂಧ ಕೇರಳದ ಯುಡಿಎಫ್ ನಾಯಕರು ಶೀಘ್ರದಲ್ಲೇ ಮೀನುಗಾರ ಸಮುದಾಯದೊಂದಿಗೆ ಚರ್ಚೆ ನಡೆಸಲಿದ್ದಾರೆ' ಎಂದರು.

ಇದೇ ವೇಳೆ, ಆಳ ಸಮುದ್ರ ಮೀನುಗಾರಿಕೆಯ ಗುತ್ತಿಗೆಯನ್ನು ಕೇರಳ ಸರ್ಕಾರ ವಿದೇಶಿ ಕಂಪನಿಗೆ ನೀಡಿರುವ ವಿರುದ್ಧ ಎದ್ದಿರುವ ವಿವಾದದ ಬಗ್ಗೆ ಮಾತನಾಡಿದ ರಾಹುಲ್ ಗಾಂಧಿ, 'ಈ ಬಗ್ಗೆ ಸರ್ಕಾರ ಏನು ಮಾಡುತ್ತದೆ ಕಾದು ನೋಡೋಣ' ಎಂದು ತಿಳಿಸಿದರು.

ತನಿಖೆಗೆ ಸೂಚನೆ: ವಿವಾದದ ಸುಳಿವು ದೊರೆಯುತ್ತಿದ್ದಂತೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಕೇರಳ ರಾಜ್ಯ ಒಳನಾಡು ಸಂಚಾರ ನಿಗಮ (ಕೆಎಸ್‌ಐಎನ್‌ಸಿ) ಅಮೆರಿಕ ಮೂಲದ ಇಎಂಸಿಸಿ ಇಂಟರ್‌ನ್ಯಾಷನಲ್ ನಡುವಿನ ಒಪ್ಪಂದವನ್ನು ರದ್ದುಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಅಲ್ಲದೆ ಈ ಒಪ್ಪಂದಕ್ಕೆ ಸಹಿ ಹಾಕಿದ ಸಂದರ್ಭಗಳ ಬಗ್ಗೆ ತನಿಖೆ ನಡೆಸುವಂತೆ ಸೂಚಿಸಿದ್ದಾರೆ.

ಪಂಜಾಬಿ ಗಾಯಕ ಶಾರ್ದೂಲ್ ನಿಧನ



ಮೊಹಾಲಿ: ಖ್ಯಾತ ಪಂಜಾಬಿ ಗಾಯಕ ಶಾರ್ದೂಲ್ ಸಿಕಂದರ್ (60) ಬುಧವಾರ ನಿಧನ ಹೊಂದಿದರು. ಇವರಿಗೆ ಕೋವಿಡ್ ಖಚಿತವಾಗಿದ್ದರಿಂದ ಇಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಖ್ಯಾತ ತಬಲಾ ವಾದಕ ಸಾಗರ್ ಮಸ್ತಾನ ಅವರ ಮಗನಾಗಿರುವ ಶಾರ್ದೂಲ್, 80ರ ದಶಕದಲ್ಲಿ ವೃತ್ತಿಜೀವನವನ್ನು ಆರಂಭಿಸಿದ್ದರು. 25ಕ್ಕೂ ಹೆಚ್ಚು ಅಲ್ಬಂ ಹಾಡುಗಳನ್ನು ಹೊರತಂದಿದ್ದರು. ಪಂಜಾಬಿ ಚಿತ್ರಗಳಲ್ಲೂ ಕೆಲಸ ಮಾಡಿದ್ದರು.

ವೃತ್ತಿಪರ ಸಂಸ್ಥೆಗಳಲ್ಲಿ ಅದಕ್ಷತೆಗೆ ಇಲ್ಲ ಅವಕಾಶ

ವೈದ್ಯ ಕಾಲೇಜು: ಗುಣಮಟ್ಟದಲ್ಲಿ ರಾಜಿ ಅಸಾಧ್ಯ: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಹೊಸ ವೈದ್ಯಕೀಯ ಕಾಲೇಜು ಆರಂಭ ಮತ್ತು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳಕ್ಕೆ ಇರುವ ಸಮಯದ ಗಡುವು ಮತ್ತು ಗುಣಮಟ್ಟ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ. ಗುಣಮಟ್ಟದ ಮಾನದಂಡಗಳ ಬಗೆಗಿನ ನಿರ್ಲಕ್ಷ್ಯವು ದೇಶದಲ್ಲಿ ವೈದ್ಯಕೀಯ ಶಿಕ್ಷಣವನ್ನು ಕಾಡುತ್ತಿದೆ ಎಂದು ಅಭಿಪ್ರಾಯಪಟ್ಟಿದೆ.

ವೈದ್ಯಕೀಯ ಕಾಲೇಜು ಆರಂಭಿಸಲು 2004ರಲ್ಲಿಯೇ ಅನುಮತಿ ಪಡೆದರೂ ಲೋಪಗಳನ್ನು ಸರಿಪಡಿಸಲು ಕೇರಳದ ಟ್ರಸ್ಟ್ ಒಂದಕ್ಕೆ ಸಾಧ್ಯವಾಗಿರಲಿಲ್ಲ. ಪಾಲಕ್ಕಾಡ್‌ನ ವಾಲಯಾರ್‌ನಲ್ಲಿ 300 ಹಾಸಿಗೆಗಳ 76 ವೈದ್ಯರು ಮತ್ತು 380 ನರ್ಸ್‌ಗಳಿರುವ ಆಸ್ಪತ್ರೆಯನ್ನು 2006ರಲ್ಲಿಯೇ ಸ್ಥಾಪಿಸಲಾಗಿದೆ ಎಂದು ಟ್ರಸ್ಟ್ ಹೇಳಿಕೊಂಡಿದೆ. 2020–21ನೇ ಸಾಲಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲು ಅವಕಾಶ ನೀಡಬೇಕು ಎಂದು ಟ್ರಸ್ಟ್, ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ಪೀಠವು ಈ ಅರ್ಜಿಯನ್ನು ವಜಾ ಮಾಡಿದೆ.

ವೈದ್ಯಕೀಯ ಪದವೀಧರರು ವೈದ್ಯರಾಗಿ ಕೆಲಸ ಮಾಡಲು ಅಗತ್ಯವಾದ ಕೌಶಲಗಳನ್ನು ಹೊಂದಿರಬೇಕು ಎಂಬುದನ್ನು ವೃತ್ತಿಪರ ಕಾಲೇಜುಗಳು ಖಾತರಿಪಡಿಸಬೇಕು. ಹೀಗಾಗಿ, ಗುಣಮಟ್ಟದ ವಿಚಾರದಲ್ಲಿ ಕಟ್ಟುನಿಟ್ಟಿನ ಧೋರಣೆ ಅನುಸರಿಸಬೇಕು ಎಂದು ನ್ಯಾಯಾಲಯವು ಹೇಳಿದೆ.

'ಮೌಲ್ಯಮಾಪನದ ಕಳಪೆ ವ್ಯವಸ್ಥೆ, ವೈದ್ಯಕೀಯ ಕಾಲೇಜುಗಳ ಸಂಖ್ಯೆಯಲ್ಲಿ ಹೆಚ್ಚಳ, ರೋಗಿಗಳು ಮತ್ತು ವೈದ್ಯಕೀಯ ಉಪಕರಣಗಳ ಕೊರತೆ, ವಿಶೇಷವಾಗಿ ಖಾಸಗಿ ಕಾಲೇಜುಗಳಲ್ಲಿ ಪ್ರವೇಶಾತಿಯಲ್ಲಿ ಪ್ರತಿಭೆಯ ಅಪಮೌಲ್ಯೀಕರಣ, ಶುಲ್ಕ ಹೆಚ್ಚಳ, ದುರ್ಬಲವಾದ ಮೌಲ್ಯಮಾಪನ ಮತ್ತು ಮಾನ್ಯತೆ ವ್ಯವಸ್ಥೆಗಳು ವೈದ್ಯಕೀಯ ಶಿಕ್ಷಣ ವ್ಯವಸ್ಥೆಯನ್ನು ಕಾಡುತ್ತಿವೆ' ಎಂದು ಅಭಿಪ್ರಾಯಪಟ್ಟಿದೆ.

'ಇಂತಹ ಅದಕ್ಷ ಕಾಲೇಜುಗಳು ಕಾರ್ಯನಿರ್ವಹಿಸಲು ಅವಕಾಶ ಕೊಟ್ಟರೆ ಭವಿಷ್ಯದ ವಿದ್ಯಾರ್ಥಿ ಸಮುದಾಯವನ್ನೇ ಗಂಡಾಂತರಕ್ಕೆ ಒಳಪಡಿಸಿದಂತಾಗುತ್ತದೆ. ಇಂತಹ ಕಾಲೇಜುಗಳಲ್ಲಿ ಕಲಿತ ವಿದ್ಯಾರ್ಥಿಗಳು ಅಸಮರ್ಥ ವೈದ್ಯರಾಗಿ, ಅಂತಿಮವಾಗಿ ಸಮಾಜಕ್ಕೆ ದೊಡ್ಡ ಅಪಾಯವಾಗಿ ಪರಿವರ್ತನೆಯಾಗಬಹುದು' ಎಂದು ಪೀಠವು ಹೇಳಿದೆ. ಕಾಲೇಜು ಆರಂಭಿಸಲು ಟ್ರಸ್ಟ್‌ಗೆ 2004ರಲ್ಲಿಯೇ ಷರತ್ತುಬದ್ಧ ಅನುಮತಿ ನೀಡಲಾಗಿತ್ತು. 17 ವರ್ಷ ಕಳೆದರೂ ಲೋಪಗಳನ್ನು ಸರಿಪಡಿಸಿಕೊಳ್ಳಲು ಟ್ರಸ್ಟ್‌ಗೆ ಸಾಧ್ಯವಾಗಿಲ್ಲ ಎಂದು ತರಾಟೆಗೆ ತೆಗೆದುಕೊಂಡಿದೆ.

ಯುಪಿಎಸ್‌ಸಿ ಪರೀಕ್ಷೆ: ಹೆಚ್ಚುವರಿ ಅವಕಾಶ ನಿರಾಕರಿಸಿದ 'ಸುಪ್ರೀಂ'

ನವದೆಹಲಿ: ಕಳೆದ ವರ್ಷ ಅಕ್ಟೋಬರ್‌ನಲ್ಲಿ ಕೋವಿಡ್‌ನಿಂದ ಕೊನೆಯ ಅವಕಾಶ ಕಳೆದುಕೊಂಡವರಿಗೆ ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ನಾಗರಿಕ ಸೇವಾ ಪರೀಕ್ಷೆ ಬರೆಯಲು ಹೆಚ್ಚುವರಿ ಅವಕಾಶ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾ ಮಾಡಿದೆ.

ಕೋವಿಡ್‌ನಿಂದ 2020ರಲ್ಲಿ ಕಡೆಯ ಅವಕಾಶ ಕಳೆದುಕೊಂಡವರು ಸೇರಿದಂತೆ ಯುಪಿಎಸ್‌ಸಿ ಆಕಾಂಕ್ಷಿಗಳಿಗೆ ವಯೋಮಿತಿಯಲ್ಲಿ ಒಂದು ಬಾರಿ ವಿನಾಯಿತಿ ಕೊಡುವುದು ಬೇರೆ ಅಭ್ಯರ್ಥಿಗಳ ಜತೆ ತಾರತಮ್ಯ ಮಾಡಿದಂತಾಗುತ್ತದೆ ಎಂದು ಫೆಬ್ರುವರಿ 9ರಂದು ಕೇಂದ್ರ ಸರ್ಕಾರ ನ್ಯಾಯಾಲಯಕ್ಕೆ ತಿಳಿಸಿತ್ತು. ಬುಧವಾರ ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ, ರಚನಾ ಮತ್ತು ಇತರರ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿತು. ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ಪೀಠ ಈ ಆದೇಶ ನೀಡಿದೆ.

₹22,350 ಕೋಟಿ ನೀಡಲು ಕೇಂದ್ರ ಸಚಿವ ಸಂಪುಟ ಸಭೆ ಒಪ್ಪಿಗೆ

ಔಷಧ, ಐಟಿ ಕ್ಷೇತ್ರಗಳಿಗೆ ಪ್ರೋತ್ಸಾಹ ಯೋಜನೆ

ನವದೆಹಲಿ (ಪಿಟಿಐ): ದೇಶದ ಔಷಧ ತಯಾರಿಕೆ ಹಾಗೂ ಮಾಹಿತಿ ತಂತ್ರಜ್ಞಾನ ಹಾರ್ಡ್‌ವೇರ್ ತಯಾರಿಕಾ ಕ್ಷೇತ್ರಗಳಿಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರವು ಬುಧವಾರ ₹ 22,350 ಕೋಟಿ ಮೌಲ್ಯದ ಉತ್ಪಾದನೆ ಆಧಾರಿತ ಪ್ರೋತ್ಸಾಹ ಯೋಜನೆಯನ್ನು ಘೋಷಿಸಿದೆ.

ಈ ಕ್ಷೇತ್ರಗಳಲ್ಲಿ ಹೂಡಿಕೆ ಆಕರ್ಷಿಸುವುದು ಮತ್ತು ಉದ್ಯೋಗಾವಕಾಶ ಹೆಚ್ಚಿಸುವ ಗುರಿ ಹೊಂದಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ಪ್ರೋತ್ಸಾಹ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

'ಔಷಧ ತಯಾರಿಕಾ ಕ್ಷೇತ್ರಕ್ಕೆ ₹15,000 ಕೋಟಿಯ ಪ್ರೋತ್ಸಾಹ ಯೋಜನೆ ಘೋಷಿಸಲಾಗಿದ್ದು, 2020–21ರಿಂದ 2028–29ರ ಅವಧಿಯಲ್ಲಿ ಇದು ಜಾರಿಯಾಗಲಿದೆ. ದೇಶೀಯ ಔಷಧ ತಯಾರಕರಿಗೆ ಈ ಯೋಜನೆಯಿಂದ ಪ್ರೋತ್ಸಾಹ ಲಭಿಸುವುದಲ್ಲದೆ ಗ್ರಾಹಕರಿಗೆ ಕಡಿಮೆ ದರದಲ್ಲಿ ಔಷಧಗಳನ್ನು ಪೂರೈಸಲು ಸಹಾಯವಾಗಲಿದೆ. ರಫ್ತು ವಿಚಾರದಲ್ಲೂ ಈ ಯೋಜನೆಯು ಸಹಾಯಕವಾಗಲಿದೆ ಎಂದು ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ್ ಪ್ರಸಾದ್ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

'2022ರಿಂದ 2028ರವರೆಗಿನ ಆರು ವರ್ಷಗಳಲ್ಲಿ ಮಾರಾಟದಲ್ಲಿ ₹2.94 ಲಕ್ಷ ಕೋಟಿ ಹಾಗೂ ರಫ್ತಿನಲ್ಲಿ ₹1.96 ಲಕ್ಷ ಕೋಟಿಯಷ್ಟು ಏರಿಕೆಯನ್ನು ನಿರೀಕ್ಷಿಸಲಾಗಿದೆ. ದೇಶದ ಔಷಧ ಕ್ಷೇತ್ರದಲ್ಲಿ ಸುಮಾರು ₹15,000 ಕೋಟಿ ವಿದೇಶಿ ಬಂಡವಾಳ ಹೂಡಿಕೆಯಾಗುವ ನಿರೀಕ್ಷೆ ಇದೆ. ಈ ಯೋಜನೆಯು 20,000 ನೇರ ಹಾಗೂ ಸುಮಾರು 80,000ದಷ್ಟು ಪರೋಕ್ಷ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿದೆ ಎಂದೂ ಅವರು ತಿಳಿಸಿದರು.

'ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ ಇನ್ನಷ್ಟು ಅಭಿವೃದ್ಧಿ ಸಾಧಿಸುವ ಶಕ್ತಿ ಭಾರತದ ಔಷಧ ಕ್ಷೇತ್ರಕ್ಕೆ ಇದೆ. ಹೂಡಿಕೆಯನ್ನು ಆಕರ್ಷಿಸಿ ತಯಾರಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದು, ಆ ಮೂಲಕ ದೇಶದ ಔಷಧ ತಯಾರಿಕಾ ಕ್ಷೇತ್ರವನ್ನು ಜಾಗತಿಕ ನಾಯಕನನ್ನಾಗಿಸುವುದು ಈ ಯೋಜನೆಯ ಉದ್ದೇಶ' ಎಂದು ಅವರು ಹೇಳಿದರು.

ಕಂಪ್ಯೂಟರ್ ತಯಾರಿಕೆಗೆ ಪ್ರೋತ್ಸಾಹ: ಲ್ಯಾಪ್‌ಟಾಪ್, ಟ್ಯಾಬ್ಲೆಟ್, ಆಲ್ ಇನ್ ವನ್ ಕಂಪ್ಯೂಟರ್ ಹಾಗೂ ಸರ್ವರ್‌ಗಳಂಥ ಹಾರ್ಡ್‌ವೇರ್ ತಯಾರಿಕೆಗೆ ಪ್ರೋತ್ಸಾಹ ನೀಡಲು ₹ 7,350 ಕೋಟಿಯ ತಯಾರಿಕೆ ಆಧರಿತ ಪ್ರೋತ್ಸಾಹ ಯೋಜನೆಗೂ ಸಚಿವ ಸಂಪುಟ ಅನುಮೋದನೆ ನೀಡಿದೆ.

'ಸ್ಥಳೀಯ ಮತ್ತು ಜಾಗತಿಕ ಮಟ್ಟದ ಕಂಪನಿಗಳು ಈ ಯೋಜನೆಯ ಲಾಭ ಪಡೆಯಲಿವೆ. ಹೊಸ ಯೋಜನೆಯಡಿ ಮುಂದಿನ ನಾಲ್ಕು ವರ್ಷಗಳಲ್ಲಿ ₹ 3.26 ಕೋಟಿ ಮೌಲ್ಯದ ತಯಾರಿಕೆ ಹಾಗೂ ₹ 2.45 ಕೋಟಿ ಮೌಲ್ಯದ ರಫ್ತನ್ನು ನಿರೀಕ್ಷಿಸಲಾಗಿದೆ. 1.80 ಲಕ್ಷ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ.

'ಭಾರತವು ₹29,470 ಕೋಟಿ ಮೌಲ್ಯದ ಲ್ಯಾಪ್‌ಟಾಪ್ ಹಾಗೂ ₹2870 ಕೋಟಿ ಮೌಲ್ಯದ ಟ್ಯಾಬ್ಲೆಟ್‌ಗಳನ್ನು ಈಗ ಆಮದು ಮಾಡುತ್ತಿದೆ. ಜಾಗತಿಕ ಮಟ್ಟದಲ್ಲಿ ನಾಲ್ಕೈದು ಕಂಪನಿಗಳೇ ಶೇ 70ರಷ್ಟು ಮಾರುಕಟ್ಟೆ ಪಾಲನ್ನು ತಮ್ಮದಾಗಿಸಿಕೊಂಡಿವೆ. ಈ ಕಂಪನಿಗಳು ಹಾಗೂ ದೇಶೀಯ ಕಂಪನಿಗಳು ಸಹ ಪ್ರೋತ್ಸಾಹ ಯೋಜನೆಯ ಲಾಭ ಪಡೆದುಕೊಳ್ಳಬಹುದು' ಎಂದು ರವಿಶಂಕರ್ ತಿಳಿಸಿದರು.

ಮುಖ್ಯಾಂಶಗಳು

- ಔಷಧ ಕ್ಷೇತ್ರಕ್ಕೆ ₹15 ಸಾವಿರ ಕೋಟಿಯ ಪ್ರೋತ್ಸಾಹ ಯೋಜನೆ
- ಹಾರ್ಡ್‌ವೇರ್ ತಯಾರಿಕೆಗೆ ಉತ್ತೇಜನ
- ತಯಾರಿಕೆಯಲ್ಲಿ ಜಾಗತಿಕ ನಾಯಕನಾಗುವ ಗುರಿ

ಪುದುಚೇರಿಯಲ್ಲಿ ರಾಷ್ಟ್ರಪತಿ ಆಳ್ವಿಕೆಗೆ ಸಂಪುಟ ಒಪ್ಪಿಗೆ

ನವದೆಹಲಿ (ಪಿಟಿಐ): ಪುದುಚೇರಿಯಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ವಿಶ್ವಾಸಮತ ಸಾಬೀತುಪಡಿಸಲು ವಿಫಲವಾಗಿ ಅಧಿಕಾರ ಕಳೆದುಕೊಂಡ ಬೆನ್ನಲ್ಲೇ ರಾಷ್ಟ್ರಪತಿ ಆಡಳಿತ ಜಾರಿಗೊಳಿಸುವ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ.

ಸಚಿವ ಸಂಪುಟ ಸಭೆಯ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್, ಮುಖ್ಯಮಂತ್ರಿ ವಿ.ನಾರಾಯಣಸ್ವಾಮಿ ಅವರು ರಾಜೀನಾಮೆ ಸಲ್ಲಿಸಿದ ನಂತರ ಯಾವುದೇ ಪಕ್ಷ ಪುದುಚೇರಿಯಲ್ಲಿ ಸರ್ಕಾರ ರಚನೆಯ ಹಕ್ಕು ಮಂಡಿಸಲಿಲ್ಲ. ಹೀಗಾಗಿ ಲೆಫ್ಟಿನೆಂಟ್ ಗವರ್ನರ್ ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸು ಮಾಡಿದ್ದು, ಅದಕ್ಕೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ತಿಳಿಸಿದ್ದಾರೆ.

ರಾಷ್ಟ್ರಪತಿ ಇದಕ್ಕೆ ಸಹಿ ಹಾಕಿದ ನಂತರ ವಿಧಾನಸಭೆ ವಿಸರ್ಜನೆಯಾಗಲಿದೆ. ಕೇಂದ್ರಾಡಳಿತ ಪುದುಚೇರಿಯಲ್ಲಿ ಆಡಳಿತಾತ್ಮಕ ಕಾರ್ಯಗಳಿಗೆ ಅಗತ್ಯ ಕ್ರಮಗಳನ್ನು ಆದಷ್ಟು ಶೀಘ್ರ ಕೈಗೊಳ್ಳಲಾಗುವುದು ಎಂದು ಸಚಿವರು ಹೇಳಿದರು.

ಚುನಾವಣಾ ಆಯೋಗವು ನಾಲ್ಕು ರಾಜ್ಯಗಳ ಜೊತೆಗೆ ಪುದುಚೇರಿಯ ವಿಧಾನಸಭಾ ಚುನಾವಣೆಯ ದಿನಾಂಕಗಳನ್ನು ಪ್ರಕಟಿಸಿದ ತಕ್ಷಣ ಮಾದರಿ ನೀತಿ ಸಂಹಿತೆ ಜಾರಿಗೆ ಬರಲಿದೆ ಎಂದು ಅವರು ತಿಳಿಸಿದರು.

ತಮ್ಮ ಪಕ್ಷದ ಮತ್ತು ಡಿಎಂಕೆ ಶಾಸಕರು ರಾಜೀನಾಮೆ ಸಲ್ಲಿಸಿದ ನಂತರ ಸರ್ಕಾರ ಅಲ್ಪಮತಕ್ಕೆ ಕುಸಿದಿತ್ತು. ಕಳೆದ ಸೋಮವಾರ ವಿಧಾನಸಭೆಯಲ್ಲಿ ವಿಶ್ವಾಸಮತ ಸಾಬೀತುಪಡಿಸಲು ವಿಫಲವಾದ ವಿ. ನಾರಾಯಣಸ್ವಾಮಿ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ಇಬ್ಬರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿ ಬುಧವಾರ ನಡೆದ ಗುಂಡಿನ ಚಕಮಕಿಯಲ್ಲಿ ಭದ್ರತಾ ಪಡೆಗಳು ಇಬ್ಬರು ಉಗ್ರರನ್ನು ಹೊಡೆದುರುಳಿಸಿವೆ.

ನಾಲ್ಕು ಕ್ಷೇತ್ರಗಳನ್ನು ಬಿಟ್ಟು ಉಳಿದೆಲ್ಲ ಸಾರ್ವಜನಿಕ ರಂಗದ ಉದ್ದಿಮೆ ಖಾಸಗೀಕರಣ

'ಉದ್ಯಮಕ್ಕೆ ಬೆಂಬಲ ಸರ್ಕಾರದ ಕರ್ತವ್ಯ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಖಾಸಗೀಕರಣವನ್ನು ಮತ್ತೊಮ್ಮೆ ಅತ್ಯಂತ ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಸರ್ಕಾರವು ವ್ಯಾಪಾರದಲ್ಲಿ ತೊಡಗಿಸಿಕೊಳ್ಳುವ ಯಾವ ಅಗತ್ಯವೂ ಇಲ್ಲ. ನಷ್ಟದಲ್ಲಿರುವ ಘಟಕಗಳನ್ನು ತೆರಿಗೆದಾರರ ಹಣದಲ್ಲಿ ಸಾಕಬೇಕಾಗಿಲ್ಲ. ಈ ಹಣವನ್ನು ಜನರ ಅಭಿವೃದ್ಧಿಗೆ ಬಳಸಬಹುದು ಎಂದು ಮೋದಿ ಹೇಳಿದ್ದಾರೆ. ರಕ್ಷಣೆ ಮತ್ತು ಇತರ ಮಹತ್ವದ ಕ್ಷೇತ್ರಕ್ಕೆ ಸಂಬಂಧಿಸಿದ್ದಲ್ಲದ ಉದ್ಯಮಗಳನ್ನು ಉದ್ದೇಶಿಸಿ ಅವರು ಹೀಗೆ ಹೇಳಿದ್ದಾರೆ.

'ತೈಲ, ಅನಿಲ ಮತ್ತು ವಿದ್ಯುತ್ ಕ್ಷೇತ್ರದ ಸುಮಾರು ನೂರು ಸಾರ್ವಜನಿಕ ರಂಗದ ಉದ್ಯಮಗಳನ್ನು ಖಾಸಗಿಯವರಿಗೆ ತೆರೆದಿಡಲಾಗುವುದು. ಇದರಿಂದ ₹2.5 ಲಕ್ಷ ಕೋಟಿ ಹೂಡಿಕೆಯ ಅವಕಾಶ ಖಾಸಗಿ ರಂಗಕ್ಕೆ ದೊರೆಯಲಿದೆ. ಉದ್ಯಮ ಮತ್ತು ವ್ಯಾಪಾರವನ್ನು ಬೆಂಬಲಿಸುವುದು ಸರ್ಕಾರದ ಕರ್ತವ್ಯ. ಆದರೆ, ಸರ್ಕಾರವೇ ಉದ್ಯಮಗಳ ಮಾಲೀಕತ್ವ ಹೊಂದಿವ ಅಗತ್ಯ ಇಲ್ಲ' ಎಂದು ಮೋದಿ ಪ್ರತಿಪಾದಿಸಿದ್ದಾರೆ. 2021–22ನೇ ಸಾಲಿನ ಬಜೆಟ್‌ನಲ್ಲಿ ಖಾಸಗೀಕರಣದ ಧೋರಣೆ ಕುರಿತ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

ಹೂಡಿಕೆ, ಜಾಗತಿಕ ಅತ್ಯುತ್ತಮ ಪದ್ಧತಿಗಳು, ಅತ್ಯುನ್ನತ ಗುಣಮಟ್ಟದ ವ್ಯವಸ್ಥಾಪಕರನ್ನು ಖಾಸಗಿ ಕ್ಷೇತ್ರವು ತರುತ್ತದೆ. ನಿರ್ವಹಣೆ ಮತ್ತು ಆಧುನಿಕತೆಯಲ್ಲಿ ಬದಲಾವಣೆಗೆ ಕಾರಣವಾಗುತ್ತದೆ. ಸರ್ಕಾರದ ಪಾಲು ಮಾರಾಟದ ಮೂಲಕ ಸಿಕ್ಕ ಹಣವನ್ನು ನೀರು ಮತ್ತು ನೈರ್ಮಲ್ಯ, ಶಿಕ್ಷಣ ಹಾಗೂ ಆರೋಗ್ಯ ಸೇವೆಯ ಕ್ಷೇತ್ರಗಳಿಗೆ ವೆಚ್ಚ ಮಾಡಲಾಗುತ್ತದೆ ಎಂದು ಮೋದಿ ಹೇಳಿದ್ದಾರೆ.

ಅತ್ಯಂತ ನಿರ್ಣಾಯಕವಾದ ಅಣು, ಇಂಧನ, ಬಾಹ್ಯಾಕಾಶ ಮತ್ತು ರಕ್ಷಣೆಗೆ ಸಂಬಂಧಿಸಿದ ನಾಲ್ಕು ಕ್ಷೇತ್ರಗಳನ್ನು ಬಿಟ್ಟು ಇನ್ನೆಲ್ಲ ಕ್ಷೇತ್ರಗಳ ಸಾರ್ವಜನಿಕ ರಂಗದ ಉದ್ಯಮಗಳನ್ನು ಖಾಸಗೀಕರಣಗೊಳಿಸಲು ತಮ್ಮ ಸರ್ಕಾರ ಬದ್ಧವಾಗಿದೆ. ವಿದ್ಯುತ್, ಪೆಟ್ರೋಲಿಯಂ, ಕಲ್ಲಿದ್ದಲು ಮತ್ತು ಇತರ ಖನಿಜಗಳು, ಬ್ಯಾಂಕಿಂಗ್, ವಿಮೆ ಮತ್ತು ಹಣಕಾಸು ಸೇವಾ ಕ್ಷೇತ್ರದ ಉದ್ಯಮಗಳಲ್ಲಿ ಸರ್ಕಾರವು ಕನಿಷ್ಠ ಮಟ್ಟದ ಪಾಲನ್ನು ಮಾತ್ರ ಉಳಿಸಿಕೊಳ್ಳಲಿದೆ ಎಂದು ಅವರು ತಿಳಿಸಿದ್ದಾರೆ.

ಪಾಲು ಮಾರಾಟ ಪ್ರಕ್ರಿಯೆಗೆ ವೇಗ ತುಂಬಲು ಕಾರ್ಯದರ್ಶಿಗಳ ಉನ್ನತಾಧಿಕಾರ ಸಮಿತಿಯನ್ನು ರಚಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಅತಿ ದೊಡ್ಡ ಪಾಲು ಮಾರಾಟ

ಭಾರತದ ಎರಡನೇ ಅತ್ಯಂತ ದೊಡ್ಡ ತೈಲ ಸಂಸ್ಥೆ ಬಿಪಿಸಿಎಲ್, ವಿಮಾನಯಾನ ಸಂಸ್ಥೆ ಏರ್ ಇಂಡಿಯಾ, ದೇಶದ ಅತ್ಯಂತ ದೊಡ್ಡ ಹಡಗುಯಾನ ಸಂಸ್ಥೆ ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ, ಹೆಲಿಕಾಪ್ಟರ್ ಸೇವಾ ಸಂಸ್ಥೆ ಪವನ್ ಹನ್ಸ್ ಮುಂತಾದ ಉದ್ಯಮಗಳ ಪಾಲು ಮಾರಾಟದಿಂದ ಮುಂದಿನ ಹಣಕಾಸು ವರ್ಷದಲ್ಲಿ ₹1.75 ಲಕ್ಷ ಕೋಟಿ ಗಳಿಕೆಯ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ. ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒ, ಸಾರ್ವಜನಿಕ ವಲಯದ ಎರಡು ಬ್ಯಾಂಕುಗಳು ಮತ್ತು ಒಂದು ಜನರಲ್ ವಿಮಾ ಕಂಪನಿಯ ಮಾರಾಟವೂ ನಡೆಯಲಿದೆ. ಇದು ಸರ್ಕಾರದ ಈವರೆಗಿನ ಅತ್ಯಂತ ದೊಡ್ಡ ಪಾಲು ಮಾರಾಟ ಯೋಜನೆ ಎನಿಸಿಕೊಳ್ಳಲಿದೆ.

ಕೋವಿಡ್ ಕೇಂದ್ರವಾದ ಅಮರಾವತಿ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯು ಕೋವಿಡ್–19 ಪ್ರಸರಣದ ಹೊಸ ಕೇಂದ್ರವಾಗಿ ರೂಪುಗೊಂಡಿದೆ. ಇಲ್ಲಿ ಕೋವಿಡ್‌ನ 5,000ಕ್ಕೂ ಹೆಚ್ಚು ಸಕ್ರಿಯ ಪ್ರಕರಣಗಳು ಈಗ ಇವೆ. ರಾಜ್ಯದಲ್ಲಿ ಮುಂಬೈ, ಪುಣೆ ಹಾಗೂ ನಾಗ್ಪುರದ ನಂತರ ಅತಿ ಹೆಚ್ಚು ಸಕ್ರಿಯ ಪ್ರಕರಣಗಳನ್ನು ಹೊಂದಿರುವ ಜಿಲ್ಲೆ ಅಮರಾವತಿ.

28 ಲಕ್ಷ ಜನಸಂಖ್ಯೆ ಹೊಂದಿರುವ ಅಮರಾವತಿ ಜಿಲ್ಲೆಯಲ್ಲಿ ಕಳೆದ ಎರಡು ವಾರಗಳಿಂದ ಸತತವಾಗಿ ದಿನಕ್ಕೆ 600ರಿಂದ 800 ಕೋವಿಡ್ ಹೊಸ ಪ್ರಕರಣಗಳು ದಾಖಲಾಗುತ್ತಿವೆ. ಇದು ಸರ್ಕಾರ ಹಾಗೂ ಜಿಲ್ಲಾಡಳಿತಕ್ಕೆ ದೊಡ್ಡ ತಲೆನೋವಾಗಿದೆ.

ಜಿಲ್ಲೆಯಲ್ಲಿ ಈವರೆಗೆ ಒಟ್ಟಾರೆ 32,045 ಮಂದಿ ಸೋಂಕಿಗೆ ಒಳಗಾಗಿದ್ದು, 443 ಮಂದಿ ಬಲಿಯಾಗಿದ್ದಾರೆ. ಇಲ್ಲಿ ಒಂದು ವಾರ ಅವಧಿಯ ಲಾಕ್‌ಡೌನ್ ಘೋಷಿಸಲಾಗಿದ್ದು ಸೋಮವಾರ ಕೊನೆಗೊಳ್ಳಲಿದೆ. ದೇಶದಲ್ಲಿ ಕೋವಿಡ್ ಹರಡುವಿಕೆಯ ವೇಗ ಕಡಿಮೆಯಾಗಿದ್ದು, ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆ ಚುನಾವಣೆಗಳ ಕಾರಣದಿಂದ ರಾಜಕೀಯ ಸಭೆ–ಸಮಾರಂಭಗಳ ಸಂಖ್ಯೆ ಏರಿಕೆಯಾಗಿದೆ. ಮುನ್ನೆಚ್ಚರಿಕೆ ಕ್ರಮಗಳನ್ನು ಗಾಳಿಗೆ ತೂರಿ, ಮದುವೆ–ಮುಂಜಿ ಮುಂತಾದ ಸಮಾರಂಭಗಳಲ್ಲಿ ಜನರು ಭಾಗಿಯಾಗುತ್ತಿದ್ದಾರೆ. ಕೋವಿಡ್ ನಿಯಂತ್ರಣಕ್ಕೆ ವರ್ಷದಿಂದ ಹೋರಾಡುತ್ತಿರುವ ಆಡಳಿತ ದಣಿದು ಸುಮ್ಮನಾಗಿರುವುದು ಕೋವಿಡ್ ಹರಡುವಿಕೆ ವೇಗ ಪಡೆಯಲು ಕಾರಣ ಎಂದು ವಿಶ್ಲೇಷಿಸಲಾಗಿದೆ.

'ಮುಂಬೈಗೆ ಹೋಲಿಸಿದರೆ ಅಮರಾವತಿಯ ಜನಸಂಖ್ಯೆ ಕಡಿಮೆ ಇದೆ. ಆದರೆ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಸರಿಸುಮಾರು ಸಮನಾಗಿಯೇ ಇದೆ. ಇಲ್ಲಿನ ಜನರು ಕೋವಿಡ್ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿದ್ದು ಸಹ ಇದಕ್ಕೆ ಕಾರಣ' ಎಂದು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವ ಯಶೋಮತಿ ಠಾಕೂರ್ ಹೇಳಿದ್ದಾರೆ.

'ಕೋವಿಡ್ ಪ್ರಸರಣದ ವೇಗ ಹೆಚ್ಚಾಗಿರುವುದಕ್ಕೆ ಜಿಲ್ಲಾಡಳಿತವನ್ನು ಮಾತ್ರ ದೂಷಿಸುವುದು ಸರಿಯಲ್ಲ. ಫೆಬ್ರುವರಿ ತಿಂಗಳಲ್ಲಿ ಇಲ್ಲಿ ಅನೇಕ ಮದುವೆ ಸಮಾರಂಭಗಳು ನಡೆದಿದ್ದವು. ಇದರಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ನಾವು ಭೀಕರ ಪಿಡುಗಿನ ಮಧ್ಯೆ ಇದ್ದೇವೆ ಎಂಬುದನ್ನು ಜನರು ಮರೆಯಬಾರದು' ಎಂದು ಬಿಜೆಪಿ ಮುಖಂಡ, ಮಾಜಿ ಸಚಿವ ಡಾ. ಸುನಿಲ್ ದೇಶ್‌ಮುಖ್ ಹೇಳಿದ್ದಾರೆ.

'ಅಮರಾವತಿ ಹಾಗೂ ಅಚಲಾಪುರ ನಗರಗಳಲ್ಲೇ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ಹೆಚ್ಚು ಜನಸಂಖ್ಯೆ ಇರುವ ಈ ನಗರಗಳಲ್ಲಿ, ಫೆಬ್ರುವರಿ ತಿಂಗಳಲ್ಲಿ ಮದುವೆ ಸಮಾರಂಭಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆದಿದ್ದವು' ಎಂದು ಪತ್ರಕರ್ತ, ಲೇಖಕ ಅವಿನಾಶ್ ದುಢೆ ಹೇಳಿದ್ದಾರೆ. ಬುಧವಾರ ಮುಂಜಾನೆ ಅಮರಾವತಿಯಲ್ಲಿ 5,595 ಸಕ್ರಿಯ ಕೋವಿಡ್ ಪ್ರಕರಣಗಳು ಇದ್ದವು. ಪುಣೆ, ನಾಗ್ಪುರ ಮುಂಬೈಯಲ್ಲಿ ಕ್ರಮವಾಗಿ 9,399, 6,382 ಹಾಗೂ 6,199 ಸಕ್ರಿಯ ಪ್ರಕರಣಗಳಿವೆ.

ದೆಹಲಿ ಪ್ರವೇಶಕ್ಕೆ ಪ್ರಮಾಣಪತ್ರ ಕಡ್ಡಾಯ

ನವದೆಹಲಿ: ಹೆಚ್ಚು ಕೋವಿಡ್ ಪ್ರಕರಣಗಳಿರುವ ಐದು ರಾಜ್ಯಗಳಿಂದ, ರಾಷ್ಟ್ರ ರಾಜಧಾನಿ ದೆಹಲಿಗೆ ಬರುವವರು ಕಡ್ಡಾಯವಾಗಿ ಕೋವಿಡ್ ನೆಗೆಟಿವ್ ಪ್ರಮಾಣಪತ್ರವನ್ನು ತರಬೇಕು ಎಂದು ದೆಹಲಿ ಸರ್ಕಾರ ತಿಳಿಸಿದೆ.

ಕೋವಿಡ್ ಪ್ರಸರಣ ತೀವ್ರಗೊಂಡಿರುವ ಮಹಾರಾಷ್ಟ್ರ, ಕೇರಳ, ಪಂಜಾಬ್, ಛತ್ತೀಸಗಡ ಹಾಗೂ ಮಧ್ಯಪ್ರದೇಶದಿಂದ ಬರುವವರಿಗೆ ಪ್ರಮಾಣಪತ್ರವನ್ನು ಕಡ್ಡಾಯಗೊಳಿಸಲಾಗಿದೆ. ಶುಕ್ರವಾರ ರಾತ್ರಿಯಿಂದ ಈ ನಿಯಮ ಜಾರಿಗೆ ಬರಲಿದ್ದು, ಮಾರ್ಚ್ 15ರವರೆಗೆ ಮುಂದುವರಿಯಲಿದೆ ಎಂದು ಮೂಲಗಳು ತಿಳಿಸಿವೆ.

ಶಬರಿಮಲೆ ಪ್ರಕರಣ ವಾಪಸ್

ತಿರುವನಂತಪುರ(ಪಿಟಿಐ): ಕೇರಳದಲ್ಲಿ ಶಬರಿಮಲೆ ಮತ್ತು ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರೋಧಿಸಿ ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ ದಾಖಲಾಗಿದ್ದ ಪ್ರಕರಣಗಳನ್ನು ವಾಪಸ್ ಪಡೆಯಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಕೌಶಿಕ್‌ಗೆ ಪದಕ



ಗುವಾಹಟಿ (ಪಿಟಿಐ): ಭಾರತೀಯ ಮೂಲದ ಕೌಶಿಕ್ ಬರುವಾ ಅವರಿಗೆ ಕಾಂಬೋಡಿಯಾ ದೇಶ ವಿಶಿಷ್ಟ ಸೇವೆಗಾಗಿ ದೇಶದ ರಾಷ್ಟ್ರೀಯ ಗೌರವ ನೀಡಿದೆ.

ಅಸ್ಸಾಂನವರಾದ ಕೌಶಿಕ್ ಅವರು ಪ್ರಸ್ತುತ, ವಿಶ್ವಸಂಸ್ಥೆಯ ಕೃಷಿ ಅಭಿವೃದ್ಧಿ ಅಂತರರಾಷ್ಟ್ರೀಯ ನಿಧಿಯ (ಐಎಫ್‌ಎಡಿ) ಕಾಂಬೋಡಿಯಾ ಮತ್ತು ಲಾವೋಸ್‌ನ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕಾಂಬೋಡಿಯನ್ ಸರ್ಕಾರವು ಬರುವಾ ಅವರಿಗೆ ರಾಯಲ್ ಆರ್ಡರ್ ಆಫ್ ಸಹಮೆತ್ರೆಯಡಿ ರಾಷ್ಟ್ರೀಯ ಪದಕ ನೀಡಿ ಗೌರವಿಸಿದೆ.

ಮೂರನೇ ಟೆಸ್ಟ್ ಪಂದ್ಯ: ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮಿಂಚಿದ ಅಶ್ವಿನ್: ತತ್ತರಿಸಿದ ಇಂಗ್ಲೆಂಡ್ ತಂಡ

ತವರಿನಂಗಳದಲ್ಲಿ ಅಕ್ಷರ್ ಪಟೇಲ್ ಕಮಾಲ್

ಅಹಮದಾಬಾದ್: ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಬುಧವಾರ ಸಂಜೆ ಹೊನಲು ಬೆಳಕು ಚೆಲ್ಲುವ ಮುನ್ನವೇ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಸ್ಪಿನ್ ಮೋಡಿಗೆ ಇಂಗ್ಲೆಂಡ್ ತಂಡವು ತತ್ತರಿಸಿತು.

ತಮ್ಮ ವೃತ್ತಿಜೀವನದ ದ್ವಿತೀಯ ಟೆಸ್ಟ್ ಪಂದ್ಯದಲ್ಲಿಯೂ ಐದು ವಿಕೆಟ್‌ಗಳ ಗೊಂಚಲು ಗಳಿಸಿದ ಅಕ್ಷರ್ (38ಕ್ಕೆ6) ಇಂಗ್ಲೆಂಡ್ ಎದುರಿನ ಸರಣಿಯ ಮೂರನೇ ಟೆಸ್ಟ್‌ನ ಮೊದಲ ದಿನವೇ ಭಾರತ ತಂಡದಲ್ಲಿ ಸಂಭ್ರಮ ಮೂಡಿಸಿದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಇಂಗ್ಲೆಂಡ್ ತಂಡವು 48.4 ಓವರ್‌ಗಳಲ್ಲಿ 112 ರನ್‌ಗಳಿಗೆ ಆಲೌಟ್ ಆಯಿತು. ಅದಕ್ಕುತ್ತರವಾಗಿ ಭಾರತ ತಂಡವು ದಿನದಾಟದ ಅಂತ್ಯಕ್ಕೆ 33 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 99 ರನ್ ಗಳಿಸಿತು.

ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ (ಬ್ಯಾಟಿಂಗ್ 57) ಮತ್ತು ಉಪನಾಯಕ ಅಜಿಂಕ್ಯ ರಹಾನೆ (ಬ್ಯಾಟಿಂಗ್ 1) ಕ್ರೀಸ್‌ನಲ್ಲಿದ್ದಾರೆ.

ಮೊದಲ ಪೆಟ್ಟು ಕೊಟ್ಟ ಇಶಾಂತ್: ನೂರನೇ ಟೆಸ್ಟ್ ಪಂದ್ಯ ಆಡುತ್ತಿರುವ ಇಶಾಂತ್ ಶರ್ಮಾ ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಡಾಮ್ ಸಿಬ್ಲಿ ವಿಕೆಟ್ ಗಳಿಸುವ ಮೂಲಕ ತಂಡಕ್ಕೆ ಉತ್ತಮ ಆರಂಭ ಕೊಟ್ಟರು.

ಅಕ್ಷರ್ ಮೋಡಿ: ತವರಿನಂಗಳದಲ್ಲಿ ಆಡುವ ಅವಕಾಶ ಪಡೆದ ಅಕ್ಷರ್ ಏಳನೇ ಓವರ್‌ನಲ್ಲಿ ಮೊದಲ ಬೇಟೆಯಾಡಿದರು. ತಮ್ಮ ತವರು ರಾಜ್ಯದ ಅಭಿಮಾನಿಗಳ ಎದುರು ಜಾನಿ ಬೆಸ್ಟೊ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.

ನಿಧಾನಗತಿಯ ಮತ್ತು ನೇರ ಎಸೆತಗಳನ್ನೇ ಹೆಚ್ಚು ಪ್ರಯೋಗಿಸಲು ಆರಂಭಿಸಿದ ಅಕ್ಷರ್ ಯಶಸ್ಸು ಗಳಿಸಿದರು. ಬೆನ್ ಸ್ಟೋಕ್ಸ್ ಮತ್ತು ಅರ್ಧಶತಕ ಗಳಿಸಿದ ಜ್ಯಾಕ್ ಕ್ರಾಲಿ ಅವರನ್ನು ಎಲ್‌ಬಿಡಬ್ಲ್ಯು ಜಾಲದಲ್ಲಿ ಕೆಡವಿದರು. ಅದೇ ತಂತ್ರವನ್ನು ಮುಂದುವರಿಸಿದ ಅಕ್ಷರ್ ಮೋಡಿಗೆ ಜೋಫ್ರಾ ಆರ್ಚರ್ ಮತ್ತು ಬೆನ್ ಫೋಕ್ಸ್ ಕ್ಲೀನ್ ಬೋಲ್ಡ್ ಆದರು. ಸ್ಟುವರ್ಟ್ ಬ್ರಾಡ್ ಕೂಡ ಪಟೇಲ್ ಎಸೆತದಲ್ಲಿ ಜಸ್‌ಪ್ರೀತ್ ಬೂಮ್ರಾಗೆ ಕ್ಯಾಚಿತ್ತರು. ಅಕ್ಷರ್ ವೃತ್ತಿಜೀವನದ ಎರಡನೇ ಟೆಸ್ಟ್ ಇದಾಗಿದೆ. ಈಚೆಗೆ ಚೆನ್ನೈನಲ್ಲಿ ಪದಾರ್ಪಣೆ ಮಾಡಿದ್ದ ಪಂದ್ಯದಲ್ಲಿಯೂ ಐದು ವಿಕೆಟ್‌ಗಳ ಗೊಂಚಲು ಗಳಿಸಿದ್ದರು.

ಇನ್ನೊಂದು ಬದಿಯಲ್ಲಿ ಮಿಂಚಿದ ಆಫ್‌ಸ್ಪಿನ್ನರ್ ಅಶ್ವಿನ್ ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ (17; 37ಎ) ಅವರನ್ನು ಖೆಡ್ಡಾದಲ್ಲಿ ಕೆಡವಿದರು. ಒಲಿ ಪೋಪ್ ಮತ್ತು ಜ್ಯಾಕ್ ಲೀಚ್ ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡರು. ಇದರಿಂದಾಗಿ ಇಂಗ್ಲೆಂಡ್ ಅಲ್ಪಮೊತ್ತಕ್ಕೆ ಕುಸಿಯಿತು.



ಇಶಾಂತ್ ಶರ್ಮಾ ಅವರಿಗೆ ರಾಷ್ಟ್ರಪತಿ ರಾಮನಾಥ್ ಕೋವಿಂದ ಅವರು ಸ್ಮರಣಿಕೆ ನೀಡಿ ಗೌರವಿಸಿದರು.–ಪಿಟಿಐ ಚಿತ್ರ



ಅಕ್ಷರ್ ಪಟೇಲ್ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್‌ಕಾರ್ಡ್

ಇಂಗ್ಲೆಂಡ್ 112 (48.4 ಓವರ್‌ಗಳಲ್ಲಿ)

ಜ್ಯಾಕ್ ಕ್ರಾಲಿ ಎಲ್‌ಬಿಡಬ್ಲ್ಯು ಬಿ ಅಕ್ಷರ್ ಪಟೇಲ್	53
ಡಾಮ್ ಸಿಬ್ಲಿ ಸಿ ರೋಹಿತ್ ಶರ್ಮಾ ಬಿ ಇಶಾಂತ್ ಶರ್ಮಾ	00
ಜಾನಿ ಬೆಸ್ಟೊ ಎಲ್‌ಬಿಡಬ್ಲ್ಯು ಬಿ ಅಕ್ಷರ್ ಪಟೇಲ್	0
ಜೋ ರೂಟ್ ಎಲ್‌ಬಿಡಬ್ಲ್ಯು ಬಿ ಆರ್. ಅಶ್ವಿನ್	17
ಬೆನ್ ಸ್ಟೋಕ್ಸ್ ಎಲ್‌ಬಿಡಬ್ಲ್ಯು ಬಿ ಅಕ್ಷರ್ ಪಟೇಲ್	6
ಒಲಿ ಪೋಪ್ ಬಿ ಆರ್. ಅಶ್ವಿನ್	1
ಬೆನ್ ಫೋಕ್ಸ್ ಬಿ ಅಕ್ಷರ್ ಪಟೇಲ್	12
ಜೋಫ್ರಾ ಆರ್ಚರ್ ಬಿ ಅಕ್ಷರ್ ಪಟೇಲ್	11
ಜ್ಯಾಕ್ ಲೀಚ್ ಸಿ ಚೇತೇಶ್ವರ್ ಪೂಜಾರ ಬಿ ಆರ್. ಅಶ್ವಿನ್	3
ಸ್ಟುವರ್ಟ್ ಬ್ರಾಡ್ ಸಿ ಜಸ್‌ಪ್ರೀತ್ ಬೂಮ್ರಾ ಬಿ ಅಕ್ಷರ್ ಪಟೇಲ್	3
ಜೇಮ್ಸ್ ಆ್ಯಂಡರ್ಸನ್ ಔಟಾಗದೆ	0
ಇತರೆ (ಬೈ 1, ಲೆಗ್ ಬೈ 2, ನೋಬಾಲ್ 3)	6

ವಿಕೆಟ್ ಪತನ: ವಿಕೆಟ್ ಪತನ: 1–2 (ಸಿಬ್ಲಿ; 2.3), 2–27 (ಜಾನಿ; 6.1), 3–74 (ರೂಟ್; 21.5), 4–80 (ಕ್ರಾಲಿ; 24.4), 5–81 (ಪೋಪ್; 27.4), 6–81 (ಸ್ಟೋಕ್ಸ್;28.5), 7–93 (ಜೋಫ್ರಾ; 34.2), 8–98 (ಲೀಚ್;37.3), 9–105 (ಬ್ರಾಡ್;46.3), 10–112 (ಫೋಕ್ಸ್; 48.4)

ಬೌಲಿಂಗ್: ಇಶಾಂತ್ ಶರ್ಮಾ 5–1–26–1, ಜಸ್‌ಪ್ರೀತ್ ಬೂಮ್ರಾ 6–3–19–0, ಅಕ್ಷರ್ ಪಟೇಲ್ 21.4–6–38–6, ಆರ್. ಅಶ್ವಿನ್ 16–6–26–3

ಭಾರತ 3ಕ್ಕೆ 99 (33 ಓವರ್‌ಗಳಲ್ಲಿ)

ರೋಹಿತ್ ಶರ್ಮಾ ಬ್ಯಾಟಿಂಗ್	57
ಶುಭಮನ್ ಗಿಲ್ ಸಿ ಕ್ರಾಲಿ ಬಿ ಜೋಫ್ರಾ ಆರ್ಚರ್	11
ಚೇತೇಶ್ವರ್ ಪೂಜಾರ ಎಲ್‌ಬಿಡಬ್ಲ್ಯು ಬಿ ಜ್ಯಾಕ್ ಲೀಚ್	0
ವಿರಾಟ್ ಕೊಹ್ಲಿ ಬಿ ಜ್ಯಾಕ್ ಲೀಚ್	27
ಅಜಿಂಕ್ಯ ರಹಾನೆ ಬ್ಯಾಟಿಂಗ್	1
ಇತರೆ (ಬೈ 2, ವೈಡ್ 1)	3

ವಿಕೆಟ್ ಪತನ: 1–33 (ಗಿಲ್; 14.6), 2–34 (ಪೂಜಾರ; 15.5), 3–98 (ವಿರಾಟ್ ಕೊಹ್ಲಿ, 32.2)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 9–6–11–0, ಸ್ಟುವರ್ಟ್ ಬ್ರಾಡ್ 6–1–16–0, ಜೊಫ್ರಾ ಆರ್ಚರ್ 5–2–24–1, ಜ್ಯಾಕ್ ಲೀಚ್ 10–1–27–2, ಬೆನ್ ಸ್ಟೋಕ್ಸ್ 3–0–19–0

ಮರುನಾಮಕರಣದ ಪರ–ವಿರೋಧ

ಮೊಟೇರಾ ಕ್ರೀಡಾಂಗಣಕ್ಕೆ ಮರುನಾಮಕರಣ ಮಾಡಿ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರು ಇಟ್ಟಿರುವುದಕ್ಕೆ ಸಾಮಾಜಿಕ ಜಾಲತಾಣದಲ್ಲಿ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ.

ವಿರೋಧ

ಕೆಲವು ವರ್ಷಗಳ ಹಿಂದೆ ದೇಶದ ವಿಮಾನ ನಿಲ್ದಾಣ, ಆಸ್ಪತ್ರೆ ಮತ್ತಿತರ ಸಾರ್ವಜನಿಕ ಸಂಸ್ಥೆಗಳಿಗೆ ಗಾಂಧಿ ಕುಟುಂಬದವರ ಹೆಸರು ಯಾಕೆ ಬೇಕು. ಅವರೇನು ಪೈಲಟ್ ಅಥವಾ ವೈದ್ಯರಾ ಎಂದು ಹಲವರು ಪ್ರಶ್ನೆ ಕೇಳಿದ್ದು ಈಗಲೂ ನೆನಪಿದೆ. ಅದೇ ಪ್ರಶ್ನೆ ಈಗಲೂ ಅನ್ವಯಿಸುತ್ತದೆ. ಪ್ರಧಾನಿ ಮೋದಿಜಿ ಅವರು ಕ್ರಿಕೆಟಿಗರಾ?

– ಸೌರಭ್ ಮಿರಗಾನೆ

ಈ ಪರಿಯು ಇಷ್ಟವಾಗಲಿಲ್ಲ. ಇನ್ನೂ ರಾಜಕೀಯದಲ್ಲಿ ಸಕ್ರೀಯವಾಗಿರುವಾಗ ಮತ್ತು ಅಧಿಕಾರ ಸ್ಥಾನದಲ್ಲಿರುವಾಗ ಕ್ರೀಡಾಂಗಣವೊಂದಕ್ಕೆ ತಮ್ಮ ಹೆಸರು ನಾಮಕರಣ ಮಾಡಿಕೊಳ್ಳುವುದು ಎಷ್ಟು ಸರಿ. ಕಾಂಗ್ರೆಸ್‌ನವರೂ ಹಿಂದೆ ಇದೇ ರೀತಿ ಮಾಡಿದ್ದಾರೆ. ಮೋದಿಜೀ ಕೂಡ ಅದೇ ರೀತಿ ಮಾಡಿದ್ದಾರೆ

–ಕುಶಾಲ್ ಮೆಹ್ತಾ

ಬೇರೆ ದೇಶದಲ್ಲಿ ಮೆಲ್ಬರ್ನ್ ಕ್ರಿಕೆಟ್ ಮೈದಾನ, ಲಾರ್ಡ್ಸ್, ಓಲ್ಡ್ ಟ್ರಾಫರ್ಡ್, ಆಪ್ಟಸ್, ಟ್ರೆಂಟ್ ಬ್ರಿಡ್ಜ್, ಗಾಬಾ, ವಾಂಡರರ್ಸ್ ಕ್ರೀಡಾಂಗಣವೆಂದು ಹೆಸರಿಸಲಾಗುತ್ತದೆ. ಆದರೆ ನಮ್ಮಲ್ಲಿ ನರೇಂದ್ರ ಮೋದಿ, ರಾಜೀವ ಗಾಂಧಿ, ಇಂದಿರಾಗಾಂಧಿ, ಸರ್ದಾರ್ ಪಟೇಲ್ ಎಂದೆಲ್ಲ ಇಡಲಾಗುತ್ತದೆ.

–ಅಭಿ

ಇದು ಸರ್ದಾರ್ ಪಟೇಲ್ ಅವರಿಗೆ ಮಾಡಿದ ಅವಮಾನವಲ್ಲವೆಂದರೆ ಅಚ್ಚರಿಯಾಗುತ್ತದೆ!

– ಅಲೀಮ್

ಪರ

ಸರ್ದಾರ್ ಪಟೇಲ್ ಕ್ರೀಡಾ ಸಂಕೀರ್ಣವನ್ನು ಮರುನಾಮಕರಣ ಮಾಡಿಲ್ಲ. ಅದೂ ಈಗಲೂ ಹಾಗೇ ಇದೆ. ಮೊಟೇರಾ ಕ್ರೀಡಾಂಗಣಕ್ಕಷ್ಟೇ ನರೇಂದ್ರ ಮೋದಿಯವರ ಹೆಸರು ಇಡಲಾಗಿದೆ.

– ರವಿ ಮಿಶ್ರಾ

ದೇಶದಲ್ಲಿ 75ಕ್ಕೂ ಹೆಚ್ಚು ಕ್ರೀಡಾ ಸಂಕೀರ್ಣಗಳಿಗೆ ನೆಹರು, ಇಂದಿರಾ ಮತ್ತು ರಾಜೀವಗಾಂಧಿಯವರ ಹೆಸರುಗಳನ್ನು ಇಡಲಾಗಿದೆ. ಅವರೆಲ್ಲರೂ ಸಾರ್ವಕಾಲೀಕ ಕ್ರೀಡಾ ಸಾಧಕರಲ್ಲವೇ?

–ಬಲ್ವಿಂದರ್ ಸಿಂಗ್ ಭಿಲ್ಲಾ

ಸರಿ–ತಪ್ಪುಗಳನ್ನು ಆ ಮಹಾದೇವನಿಗೆ ಬಿಟ್ಟುಬಿಡಿ. ಆದರೆ ನಿಮ್ಮನ್ನೇ ನೀವು ಪ್ರಾಮಾಣಿಕವಾಗಿ ಪ್ರಶ್ನಿಸಿಕೊಳ್ಳಿ. ನಾಲ್ಕು ಅವಧಿಗೆ ಮುಖ್ಯಮಂತ್ರಿ, ಏಳು ವರ್ಷಗಳಿಂದ ಪ್ರಧಾನಮಂತ್ರಿಯಾಗಿ 19 ವರ್ಷಗಳಿಂದ ಸತತವಾಗಿ ಸರ್ಕಾರಿ ಸೇವೆಯಲ್ಲಿದ್ದಾರೆ. ಇಷ್ಟಿದ್ದೂ ಒಂದು ಕ್ರೀಡಾಂಗಣಕ್ಕೆ ನಾಮಕರಣಗೊಳ್ಳಲು ಅವರು ಅರ್ಹರಲ್ಲವೇ?

–ಸಮಿತ್ ಠಕ್ಕರ್

ವಿರೋಧಿಸುವವರು ನಿಮ್ಮನ್ನು ತಿದ್ದಿಕೊಳ್ಳಿ. ಹೋಗಿ ನೋಡಿ. ಬೃಹತ್ ಕ್ರೀಡಾ ಸಂಕೀರ್ಣದ ಒಂದು ಭಾಗಕ್ಕೆ ಮಾತ್ರ ನಮೋ ನಾಮಕರಣ ಮಾಡಲಾಗಿದೆ

–ಆಕಾಶ್ ಸಿಂಗ್

ಸುದ್ದಿ 2 ನಿಮಿಷ

ರಸ್ತೆ ಸುರಕ್ಷತಾ ಟಿ20 ಕ್ರಿಕೆಟ್ ಸರಣಿ ಭಾರತಕ್ಕೆ ಬಾಂಗ್ಲಾದೇಶ ಎದುರಾಳಿ

ಮುಂಬೈ (ಪಿಟಿಐ): ವಿಶ್ವ ಕ್ರಿಕೆಟ್‌ನ ದಿಗ್ಗಜರು ಆಡಲಿರುವ ರಸ್ತೆ ಸುರಕ್ಷತಾ ವಿಶ್ವ ಟಿ20 ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡಕ್ಕೆ ಬಾಂಗ್ಲಾದೇಶದ ಸವಾಲು ಎದುರಾಗಿದೆ. ಮಾರ್ಚ್ 5ರಂದು ಛತ್ತೀಸಗಡದ ರಾಯಪುರದಲ್ಲಿ ಈ ಹಣಾಹಣಿ ನಡೆಯಲಿದೆ.

ರಾಯಪುರದ ಶಹೀದ್ ವೀರ್ ನಾರಾಯಣ ಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಪಂದ್ಯಗಳು ಆಯೋಜನೆಯಾಗಿದ್ದು, ಮಾರ್ಚ್ 7ರಂದು ನಡೆಯುವ ಸೆಣಸಾಟದಲ್ಲಿ ಇಂಗ್ಲೆಂಡ್–ಬಾಂಗ್ಲಾದೇಶ ತಂಡಗಳು ಮುಖಾಮುಖಿಯಾಗಲಿವೆ ಎಂದು ಮಾಧ್ಯಮ ಪ್ರಕಟಣೆ ತಿಳಿಸಿದೆ.

ಮಾರ್ಚ್ 17ರಂದು ಮೊದಲ ಸೆಮಿಫೈನಲ್ ನಡೆಯಲಿದೆ.

ನಾಲ್ಕರ ಘಟ್ಟದ ಎರಡನೆಯ ಪಂದ್ಯ 19ರಂದು ಆಯೋಜನೆಯಾಗಿದೆ. ಮಾರ್ಚ್ 21ರಂದು ಫೈನಲ್ ಪಂದ್ಯ ನಿಗದಿಯಾಗಿದೆ.

ರಸ್ತೆ ಸುರಕ್ಷತೆ ಕುರಿತು ಜಾಗೃತಿ ಮೂಡಿಸಲು ಆಯೋಜಿಸಿರುವ ಈ ಟೂರ್ನಿಯಲ್ಲಿ ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್, ಬ್ರಯಾನ್ ಲಾರಾ, ಮುತ್ತಯ್ಯ ಮುರಳೀಧರನ್, ತಿಲಕರತ್ನೆ ದಿಲ್‌ಶಾನ್, ಸೇರಿದಂತೆ ಆರು ದೇಶಗಳ (ಭಾರತ, ಬಾಂಗ್ಲಾದೇಶ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ಶ್ರೀಲಂಕಾ ಹಾಗೂ ವೆಸ್ಟ್ ಇಂಡೀಸ್) ಖ್ಯಾತ ಆಟಗಾರರು ಪಾಲ್ಗೊಳ್ಳುತ್ತಿದ್ದಾರೆ.



ಐಎಸ್‌ಎಲ್: ಸಮಾಧಾನಕರ ಜಯಕ್ಕೆ ಬಿಎಫ್‌ಸಿ ಪೈಪೋಟಿ

ವಾಸ್ಕೊ, ಗೋವಾ: ಕನಸು ಕೈಗೂಡಲಿಲ್ಲ; ಆಸೆ ನೆರವೇರಲಿಲ್ಲ. ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಇದೇ ಮೊದಲ ಬಾರಿ ಪ್ಲೇ ಆಫ್ ಹಂತಕ್ಕೇರದೆ ಹೊರಬಿದ್ದಿದೆ. ಲೀಗ್ ಹಂತದಲ್ಲಿ ತಂಡದ ಕೊನೆಯ ಪಂದ್ಯ ಗುರುವಾರ ನಡೆಯಲಿದ್ದು ಸಮಾಧಾನಕರ ಜಯಕ್ಕಾಗಿ ಸೆಣಸಲಿದೆ.

ತಿಲಕ್ ಮೈದಾನದಲ್ಲಿ ನಡೆಯಲಿರುವ ಪಂದ್ಯದಲ್ಲಿ ಸುನಿಲ್ ಚೆಟ್ರಿ ಬಳಗ ಜೆಮ್ಶೆಡ್‌ಪುರ ಎಫ್‌ಸಿ (ಜೆಎಫ್‌ಸಿ)ಯನ್ನು ಎದುರಿಸಲಿದೆ. ಜೆಎಫ್‌ಸಿಯ ಪ್ಲೇ ಆಫ್ ಹಂತದ ಕನಸು ಕೂಡ ಕಮರಿದೆ. ಆದ್ದರಿಂದ ಆ ತಂಡವೂ ಜಯದೊಂದಿಗೆ ಅಭಿಯಾನ ಕೊನೆಗೊಳಿಸುವ ಹಂಬಲದಲ್ಲಿ ಕಣಕ್ಕೆ ಇಳಿಯಲಿದೆ.

ಒವೆನ್ ಕೊಯ್ಲೆ ಕೋಚ್ ಆಗಿರುವ ಜೆಮ್ಶೆಡ್‌ಪುರ ಎಫ್‌ಸಿ ಆರು ಪಂದ್ಯಗಳನ್ನು ಗೆದ್ದುಕೊಂಡಿದ್ದು 24 ಪಾಯಿಂಟ್‌ಗಳೊಂದಿಗೆ ಆರನೇ ಸ್ಥಾನದಲ್ಲಿದೆ. ಬೆಂಗಳೂರು ಕೇವಲ ಐದು ಪಂದ್ಯಗಳನ್ನು ಗೆದ್ದುಕೊಂಡಿದ್ದು ಏಳರಲ್ಲಿ ಡ್ರಾ ಸಾಧಿಸಿದೆ. ಅಷ್ಟೇ ಪಂದ್ಯಗಳನ್ನು ಸೋತಿದೆ. ಪಾಯಿಂಟ್ ಪಟ್ಟಿಯಲ್ಲಿ ತಂಡದ ಸ್ಥಾನ ಏಳಕ್ಕೆ ಇಳಿದಿದೆ.

ಗಾಯಗೊಂಡಿರುವ ಬಿಸ್ವ ದಾರ್ಜಿ ಮತ್ತು ಅಮಾನತುಗೊಂಡಿರುವ ಆಶಿಕ್ ಕರುಣಿಯನ್ ಈ ಪಂದ್ಯದಲ್ಲಿ ಬಿಎಫ್‌ಸಿಗೆ ಲಭ್ಯವಿಲ್ಲ. ಜೆಮ್ಶೆಡ್‌ಪುರ ತಂಡದಲ್ಲಿ ನೆರಿಜಸ್ ವಲ್‌ಸ್ಕಿಸ್ ಆಡುತ್ತಿಲ್ಲ.

ಅಚ್ಚರಿ ಮೂಡಿಸಿದ ಮರುನಾಮಕರಣ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ವಿಶ್ವದ ದೊಡ್ಡ ಕ್ರಿಕೆಟ್ ಕ್ರೀಡಾಂಗಣಕ್ಕೆ ಬುಧವಾರ ಮರುನಾಮಕರಣ ಮಾಡಿದ ನಡೆಯು ಅಚ್ಚರಿಗೆ ಕಾರಣವಾಯಿತು.

ಭಾರತ ಮತ್ತು ಇಂಗ್ಲೆಂಡ್ ಟೆಸ್ಟ್ ಪಂದ್ಯದ ಆರಂಭಕ್ಕೂ ಮುನ್ನ ನಡೆದ ಉದ್ಘಾಟನೆ ಸಮಾರಂಭದಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ನಾಮಫಲಕದ ಪರದೆ ಸರಿಸಿದಾಗ ಎಲ್ಲರಿಗೂ ಅಚ್ಚರಿಯಾಗಿತ್ತು. ಅದರಲ್ಲಿ 'ನರೇಂದ್ರ ಮೋದಿ ಸ್ಟೇಡಿಯಂ' ಪದಗಳು ಮಿನುಗಿದ್ದು ಆ ಅಚ್ಚರಿಗೆ ಕಾರಣ.

ಉದ್ಘಾಟನೆ ಸಮಾರಂಭದವರೆಗೂ ಈ ತಾಣವನ್ನು ಸರ್ದಾರ್ ಪಟೇಲ್ ಕ್ರೀಡಾಂಗಣವೆಂದೇ ಎಲ್ಲರೂ ಕರೆದಿದ್ದರು. ಆದರೆ ಈಗ ಪ್ರಧಾನಿ ಮೋದಿಯವರ ಹೆಸರು ಬಂದಿದೆ ಎಂದು ಗುಜರಾತ್ ಕ್ರಿಕೆಟ್ ಸಂಸ್ಥೆಯ ಕೆಲವು ಪದಾಧಿಕಾರಿಗಳೇ ಅಚ್ಚರಿ ವ್ಯಕ್ತಪಡಿಸಿದರು. ಉದ್ಘಾಟನಾ ನಾಮಫಲಕದಲ್ಲಿ ರಾಷ್ಟ್ರಪತಿ ಕೋವಿಂದ್, ಗೃಹ ಸಚಿವ ಅಮಿತ್ ಶಾ, ಅವರ ಮಗ ಮತ್ತು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ, ರಿಲಯನ್ಸ್ ಅಧ್ಯಕ್ಷ ಮತ್ತು ರಾಜ್ಯಸಭಾ ಸದಸ್ಯ ಪರಿಮಲ್ ನತ್ವಾಣಿ ಮತ್ತು ಅವರ ಮಗ, ಗುಜರಾತ್ ಕ್ರಿಕೆಟ್ ಸಂಸ್ಥೆ ಉಪಾಧ್ಯಕ್ಷ ಧನರಾಜ್, ಗುಜರಾತ್‌ನ ಉಪಮುಖ್ಯಮಂತ್ರಿ ನಿತಿನ್ ಪಟೇಲ್ ಅವರ ಹೆಸರುಗಳಿವೆ.

ಕ್ರೀಡಾಂಗಣದ ಗೇಟ್ -1 ರ ನೆತ್ತಿಯ ಮೇಲೆ ಇರುವ ದೊಡ್ಡ ಫಲಕದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಸ್ಪೋರ್ಟ್ಸ್ ಎನ್‌ಕ್ಲೇವ್ ನರೇಂದ್ರ ಮೋದಿ ಸ್ಟೇಡಿಯಂ' ಎಂದು ಇಂಗ್ಲಿಷ್‌ನಲ್ಲಿ ಉಲ್ಲೇಖಿಸಲಾಗಿದೆ. ಈ ದ್ವಾರದ ಮೂಲಕ ಪ್ರೇಕ್ಷಕರು ದೊಡ್ಡ ಸಾಲಿನಲ್ಲಿ ಕ್ರೀಡಾಂಗಣ ಪ್ರವೇಶಿಸಿದರು.

ಮರುನಾಮಕರಣದ ವಿಷಯ ಕಾಂಗ್ರೆಸ್ ಪಕ್ಷವನ್ನು ಕೆರಳಿಸಿದೆ.

'ನಮ್ಮ ಪಕ್ಷವು ಅಹಮದಾಬಾದ್ ಕ್ರಿಕೆಟ್ ಕ್ರೀಡಾಂಗಣಕ್ಕೆ ಸರ್ದಾರ್ ಸಾಹೇಬ್ (ಸರ್ದಾರ್ ವಲ್ಲಭಭಾಯಿ ಪಟೇಲ್) ಹೆಸರನ್ನಿಟ್ಟಿತ್ತು. ಇದೀಗ ಅದನ್ನು ಬದಲಿಸಿ ನರೇಂದ್ರ ಮೋದಿ ಅವರ ಹೆಸರನ್ನು ಇಟ್ಟಿರುವುದು ಉದ್ಧಟತನವಾಗಿದೆ. ಇದು ಸರ್ದಾರ್ ಸಾಹೇಬರಿಗೆ ಮಾಡಿದ ಅವಮಾನವಾಗಿದೆ. ಇದನ್ನು ಗುಜರಾತ್ ಸಹಿಸುವುದಿಲ್ಲ' ಎಂದು ಗುಜರಾತ್ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಅಮಿತ್ ಚಾವಡಾ ಟ್ವೀಟ್ ಮಾಡಿದ್ದಾರೆ.

'2014ರಲ್ಲಿ ನರೇಂದ್ರ ಮೋದಿಯವರು ಗುಜರಾತ್ ಮುಖ್ಯಮಂತ್ರಿ ಮತ್ತು ಜಿಸಿಎ ಅಧ್ಯಕ್ಷರೂ ಆಗಿದ್ದರು. ಆ ಸಂದರ್ಭದಲ್ಲಿ ಇದ್ದ 25 ವರ್ಷಗಳಷ್ಟು ಹಳೆಯ ಮೊಟೇರಾ ಕ್ರೀಡಾಂಗಣವನ್ನು ನೆಲಸಮ ಮಾಡಿ ನೂತನ ಬೃಹತ್ ಕ್ರೀಡಾಂಗಣ ನಿರ್ಮಾಣಕ್ಕೆ ಮುನ್ನುಡಿ ಬರೆದಿದ್ದರು' ಎಂದು ಈಚೆಗೆ ಜಿಸಿಎ ಪ್ರಕಟಣೆ ನೀಡಿತ್ತು.

ಹೋದ ವರ್ಷ ಇದೇ ದಿನ ಈ ಕ್ರೀಡಾಂಗಣದಲ್ಲಿ 'ನಮಸ್ತೆ ಟ್ರಂಪ್' ಕಾರ್ಯಕ್ರಮವನ್ನು ನರೇಂದ್ರ ಮೋದಿ ನೇತೃತ್ವದಲ್ಲಿ ಅದ್ದೂರಿಯಾಗಿ ಆಯೋಜಿಸಲಾಗಿತ್ತು.



ಸರ್ದಾರ್ ವಲ್ಲಭಭಾಯಿ ಪಟೇಲ್ ಸ್ಪೋರ್ಟ್ಸ್ ಎನ್‌ಕ್ಲೇವ್ ನಿರ್ಮಾಣಕ್ಕೆ ಶಿಲಾನ್ಯಾಸ ಮಾಡಿದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅಮಿತ್ ಶಾ ಇದ್ದರು –ಪಿಟಿಐ ಚಿತ್ರ

ಪಿಚ್‌ಗೆ ನುಗ್ಗಿದ ಕೊಹ್ಲಿ ಅಭಿಮಾನಿ

ಅಹಮದಾಬಾದ್: ವಿರಾಟ್ ಕೊಹ್ಲಿಯ ಅಭಿಮಾನಿಯೊಬ್ಬ ಪಂದ್ಯ ನಡೆಯುವ ವೇಳೆ ಕ್ರೀಡಾಂಗಣದ ಭದ್ರತಾ ಸಿಬ್ಬಂದಿಯ ಕಣ್ತಪ್ಪಿಸಿ ಪಿಚ್‌ನತ್ತ ನುಗ್ಗಿದ ಘಟನೆ ಬುಧವಾರ ನಡೆಯಿತು.

ಈ ಸಂದರ್ಭದಲ್ಲಿ ಬ್ಯಾಟಿಂಗ್ ಮಾಡುತ್ತಿದ್ದ ಭಾರತದ ವಿರಾಟ್ ಕೊಹ್ಲಿ ಕ್ಷಣಕಾಲ ಅವಾಕ್ಕಾದರು. ಇನಿಂಗ್ಸ್‌ನ 19ನೇ ಓವರ್‌ನಲ್ಲಿ ಗ್ಯಾಲರಿಯಲ್ಲಿದ್ದ ಪ್ರೇಕ್ಷಕ ಪೊಲೀಸರು ಮತ್ತು ಕ್ರೀಡಾಂಗಣದ ಭದ್ರತಾ ಸಿಬ್ಬಂದಿಯನ್ನು ವಂಚಿಸಿ ತಡೆಬೇಲಿ ಹಾರಿ ಪಿಚ್‌ನತ್ತ ಓಡಿ ಬಂದರು. ನಂತರ ಆತನನ್ನು ಹಿಡಿದ ಸಿಬ್ಬಂದಿಯು ಹೊರಗೆ ಕರೆದೊಯ್ದರು.

360 ಡಿಗ್ರಿ ನೋಟ: ಕ್ರೀಡಾಂಗಣದ ಯಾವುದೇ ಭಾಗದಿಂದಲೂ ಪಂದ್ಯವನ್ನು ಯಾವುದೇ ಅಡೆತಡೆಯಿಲ್ಲದೇ ವೀಕ್ಷಿಸುವ ವಿಶೇಷತೆ ಈ ಕ್ರೀಡಾಂಗಣದ್ದಾಗಿದೆ. 360 ಡಿಗ್ರಿ ಸುತ್ತಳತೆಯಲ್ಲಿ ಎಲ್ಲಿಯೇ ನಿಂತರೂ ಪಿಚ್‌ನಲ್ಲಿ ನಡೆಯುವ ಆಟವನ್ನು ನೋಡಬಹುದಾಗಿದೆ. ಯಾವುದೇ ಸ್ಥಂಭಗಳು ಇಲ್ಲದಿರುವುದೇ ಈ ರೀತಿಯ ಸ್ಪಷ್ಟ ಚಿತ್ರಣ ಸಿಗಲು ಕಾರಣವಾಗಿದೆ. ಈ ರೀತಿ ಇರುವುದು ದೇಶದಲ್ಲಿ ಇದೊಂದೇ ಕ್ರೀಡಾಂಗಣದಲ್ಲಿ ಎನ್ನಲಾಗಿದೆ.

ಸರ್ದಾರ್ ಪಟೇಲ್ ವಿರುದ್ಧ ಬಿಜೆಪಿ ಪ್ರತೀಕಾರ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಗುಜರಾತ್‌ನ ಅಹಮದಾಬಾದ್ ಬಳಿಯ ಮೊಟೇರಾದಲ್ಲಿರುವ ವಿಶ್ವದ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣದ ಮರು ನಾಮಕರಣ ಪ್ರಕ್ರಿಯೆಯನ್ನು ಕಾಂಗ್ರೆಸ್ ತೀವ್ರವಾಗಿ ಟೀಕಿಸಿದೆ.

ಮೊಟೇರಾದಲ್ಲಿ 1983ರಲ್ಲಿ ನಿರ್ಮಿಸಲಾದ ಕ್ರೀಡಾಂಗಣಕ್ಕಿದ್ದ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಹೆಸರನ್ನು ಬದಲಿಸಿ, ಪ್ರಧಾನಿ ನರೇಂದ್ರ ಮೋದಿ ಹೆಸರನ್ನು ಇರಿಸಿರುವುದು ಪ್ರತೀಕಾರದ ಕ್ರಮ ಎಂದು ಪಕ್ಷದ ವಕ್ತಾರ ಪವನ್ ಖೇರಾ ಹೇಳಿದ್ದಾರೆ.

ಮಹಾತ್ಮಾ ಗಾಂಧಿ ಅವರಂತೆಯೇ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ನಿಷೇಧದ ಪರ ಸರ್ದಾರ್ ಪಟೇಲ್ ಅವರೂ ಇದ್ದರು ಎಂಬ ಕಾರಣದಿಂದಲೇ ಅವರ ಹೆಸರು ಬದಲಿಸಲಾಗಿದೆ ಎಂದು ಬುಧವಾರ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಇತರ ಸರ್ಕಾರಗಳ ಉತ್ತಮ ಕೆಲಸ– ಕಾರ್ಯಗಳಿಂದಲೇ ಮನ್ನಣೆ ಪಡೆಯುತ್ತಿರುವ ಮೋದಿ ನೇತೃತ್ವದ ಸರ್ಕಾರ, ಇದುವರೆಗೂ ಯಾವುದೇ ಸ್ಮರಣೀಯ ಕಾರ್ಯ ಮಾಡಿಲ್ಲ. ಈ ಹಿಂದೆ ಮಹಾತ್ಮಾ ಗಾಂಧಿ ಅವರ ಕೈಲಿದ್ದ ಚರಕವನ್ನು ತೆರವುಗೊಳಿಸಿದ್ದ ಬಿಜೆಪಿ, ಇದೀಗ ಪಟೇಲ್ ಅವರ ಹೆಸರು ಬದಲಿಸಿದೆ ಎಂದು ಟೀಕಿಸಿದ್ದಾರೆ.

ಪಟೇಲ್ ಹೆಸರು ಬದಲಿಸಿ ದೇಶದ ಜನರನ್ನು ಅವಮಾನಿಸಿರುವ ಮೋದಿ ಹಾಗೂ ಬಿಜೆಪಿ, ಕ್ರೀಡಾಂಗಣದಲ್ಲಿನ ಎರಡು ಎಂಡ್‌ಗಳಿಗೆ ಅದಾನಿ ಮತ್ತು ರಿಲಯನ್ಸ್ ಹೆಸರು ಇರಿಸಿದ್ದು ಖಂಡನೀಯ ಎಂದು ಅವರು ಹೇಳಿದ್ದಾರೆ.

ಸರ್ಕಾರದ ವಿವಿಧ ಯೋಜನೆಗಳಿಗೆ ಇಂದಿರಾ ಗಾಂಧಿ ಹಾಗೂ ರಾಜೀವ್ ಗಾಂಧಿ ಅವರ ಹೆಸರು ಇರಿಸಿರುವುದನ್ನು ಸಮರ್ಥಿಸಿಕೊಂಡ ಖೇರಾ, ಅವರ ಸೇವೆ ಮತ್ತು ತ್ಯಾಗದ ಪ್ರತೀಕವಾಗಿ, ಅವರ ಸ್ಮರಣೆಗಾಗಿ ಹೆಸರು ಇರಿಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

'ಅನೇಕ ಅಡೆತಡೆಗಳ ಮಧ್ಯೆಯೂ ಸಾಧಕರನ್ನು ನೀಡಿರುವ ಈ ಮಣ್ಣಿನಲ್ಲಿ ವೈಶಿಷ್ಟ್ಯ ಇದೆ' ಎಂಬ ಸರ್ದಾರ್ ಪಟೇಲ್ ಅವರ ಹೇಳಿಕೆಯನ್ನು ಕ್ರೀಡಾಂಗಣದ ವಿಷಯವನ್ನು ಪ್ರಸ್ತಾಪಿಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಟ್ವೀಟ್ ಮಾಡಿದ್ದಾರೆ.

'ಮಾತೃ ಸಂಘಟನೆ (ಆರ್‌ಎಸ್‌ಎಸ್) ಯನ್ನು ನಿಷೇಧಿಸಿದ್ದ ಪಟೇಲ್ ಅವರ ಹೆಸರನ್ನು ಬದಲಿಸಿರುವ ಬಿಜೆಪಿಯ ಕ್ರಮವು ಪ್ರತೀಕಾರದ್ದಾಗಿದೆ' ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಟ್ವೀಟ್ ಮಾಡಿದ್ದಾರೆ.

ದೇವದತ್ತ ಶತಕಕ್ಕೆ ಒಲಿದ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭಿಕ ಬ್ಯಾಟ್ಸ್‌ಮನ್ ದೇವದತ್ತ ಪಡಿಕ್ಕಲ್ ಬುಧವಾರ ಶತಕದಂಚಿನಲ್ಲಿ ಎಡವಲಿಲ್ಲ. ಭರ್ಜರಿ ಬ್ಯಾಟಿಂಗ್ ಮೂಲಕ ನೂರರ ಗಡಿಯನ್ನೂ ದಾಟಿದರು, ತಂಡಕ್ಕೆ ಜಯದ ಕಾಣಿಕೆಯನ್ನೂ ನೀಡಿದರು.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಮೂರನೇ ಪಂದ್ಯದಲ್ಲಿ ಕರ್ನಾಟಕ ತಂಡವು 101 ರನ್‌ಗಳಿಂದ ಒಡಿಶಾ ವಿರುದ್ಧ ಜಯಿಸಿತು. ನಗರದ ಹೊರವಲಯದಲ್ಲಿರುವ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಒಡಿಶಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಜೋಡಿ ಆರ್. ಸಮರ್ಥ್ (60; 83ಎಸೆತ, 4ಬೌಂ) ಮತ್ತು ದೇವದತ್ತ (152; 140ಎ, 14ಬೌಂ, 5ಸಿ) ಮೊದಲ ವಿಕೆಟ್ ಜೊತೆಯಾಟದಲ್ಲಿ 140 ರನ್‌ಗಳನ್ನು ಸೇರಿಸಿದರು. ಈ ಅಡಿಪಾಯದ ಮೇಲೆ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 329 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಒಡಿಶಾ ತಂಡವು 44 ಓವರ್‌ಗಳಲ್ಲಿ 228 ರನ್ ಗಳಿಸಲಷ್ಟೇ ಶಕ್ತವಾಯಿತು. ಶುಭ್ರಾಂಶು ಸೇನಾಪತಿ (78; 92ಎ, 3ಬೌಂ, 2ಸಿ) ಮತ್ತು ಅಂಕಿತ್ ಯಾದವ್ (56; 63ಎ) ಅವರ ಅರ್ಧಶತಕಗಳು ತಂಡದ ಜಯಕ್ಕೆ ಸಾಕಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 50 ಓವರ್‌ಗಳಲ್ಲಿ 5ಕ್ಕೆ 329 (ಆರ್. ಸಮರ್ಥ್ 60, ದೇವದತ್ತ ಪಡಿಕ್ಕಲ್ 152, ಕೆ.ವಿ.ಸಿದ್ಧಾರ್ಥ್ 41, ಕರುಣ್ ನಾಯರ್ 25, ಅಭಿಮನ್ಯು ಮಿಥುನ್ 40; ಸೂರ್ಯಕಾಂತ್ ಪ್ರಧಾನ್ 53ಕ್ಕೆ2, ಹರ್ಷಿತ್ ರಾಥೋಡ್ 80ಕ್ಕೆ2, ಶಂತನು ಮಿಶ್ರಾ 39ಕ್ಕೆ1); ಒಡಿಶಾ: 44 ಓವರ್‌ಗಳಲ್ಲಿ 228 (ಗೌರವ್ ಚೌಧರಿ 20, ಸಂದೀಪ್ ಪಟ್ನಾಯಕ್ 28, ಶುಭ್ರಾಂಶು ಸೇನಾಪತಿ 78, ಅಂಕಿತ್ ಯಾದವ್ 56; ಪ್ರಸಿದ್ಧ ಕೃಷ್ಣ 46ಕ್ಕೆ3, ವೈಶಾಕ್ ವಿಜಯಕುಮಾರ್ 35ಕ್ಕೆ1, ಜೆ.ಸುಚಿತ್ 33ಕ್ಕೆ1, ಶ್ರೇಯಸ್ ಗೋಪಾಲ್ 47ಕ್ಕೆ3).

ಕಾರು ಅಪಘಾತ: ಟೈಗರ್ ವುಡ್ಸ್‌ಗೆ ಗಾಯ

ಲಾಸ್ ಏಂಜಲೀಸ್ (ಎಎಫ್‌ಪಿ): ಅಮೆರಿಕದ ಖ್ಯಾತ ಗಾಲ್ಫ್ ಆಟಗಾರ ಟೈಗರ್ ವುಡ್ಸ್ ಕಾರು ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದಾರೆ ಎಂದು ಲಾಸ್ ಏಂಜಲೀಸ್ ಆಡಳಿತ ತಿಳಿಸಿದೆ.


'ಮಂಗಳವಾರ ಬೆಳಗಿನ ಜಾವ ಅವರು ಪ್ರಯಾಣಿಸುತ್ತಿದ್ದ ಕಾರು ಪಲ್ಟಿಯಾಗಿದ್ದು, ವುಡ್ಸ್ ಅವರ ಎರಡೂ ಕಾಲುಗಳಿಗೆ ಗಂಭೀರ ಏಟಾಗಿದೆ. ಕಾರಿನೊಳಗೆ ಸಿಲುಕಿದ್ದ ಅವರನ್ನು ರಕ್ಷಿಸಿರುವ ಅಗ್ನಿಶಾಮಕ ದಳ ಸಿಬ್ಬಂದಿ ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದಾರೆ. ವುಡ್ಸ್ ಅವರಿಗೆ ಶಸ್ತ್ರ ಚಿಕಿತ್ಸೆ ನೆರವೇರಿಸಲಾಗಿದೆ. ಈಗ ಅವರ ಆರೋಗ್ಯ ಸ್ಥಿರವಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ಯಶಸ್ವಿ ಗಾಲ್ಫರ್ ಆಗಿರುವ ವುಡ್ಸ್ 15 ಪ್ರಮುಖ ಗಾಲ್ಫ್ ಚಾಂಪಿಯನ್‌ಷಿಪ್‌ಗಳಲ್ಲಿ ಜಯಗಳಿಸಿದ್ದಾರೆ.

ಇತ್ತೀಚೆಗಷ್ಟೇ ಅವರು ಐದನೇ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಹೀಗಾಗಿ ಮುಂದಿನ ಪಂದ್ಯಗಳಲ್ಲಿ ಆಡಲಿದ್ದೇನೆಯೇ ಎಂಬುದು ಖಚಿತವಿಲ್ಲ ಎಂದು ಅವರು ಹೇಳಿದ್ದರು. ಈ ಹಿಂದೆ ಕೊನೆಯದಾಗಿ 2019ರಲ್ಲಿ ಪಂದ್ಯವಾಡಿದ್ದ ಗೆಲುವು ಸಾಧಿಸಿದ್ದಾರೆ.

'ರಿವೇರಿಯಾ ಕಂಟ್ರಿ ಕ್ಲಬ್'ನಲ್ಲಿ ವಾರ್ಷಿಕ ಜೆನೆಸಿಸ್ ಇನ್ವಿಟೇಷನಲ್ ಗಾಲ್ಫ್ ಟೂರ್ನಿಯಲ್ಲಿ ಭಾಗವಹಿಸಲು ವುಡ್ಸ್ ತೆರಳುತ್ತಿದ್ದರು ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಅಪಘಾತದ 'ಹಾಟ್‌ಸ್ಪಾಟ್' ಎಂದು ಕರೆಯಲ್ಪಡುವ ಕಡಿದಾದ ರಸ್ತೆಯಲ್ಲಿ ಈ ಅವಘಡ ಸಂಭವಿಸಿದೆ. ಕಾರಿನಲ್ಲಿ ವುಡ್ಸ್ ಒಬ್ಬರೇ ಇದ್ದರು. ಅವರು ಸಾಮಾನ್ಯಕ್ಕಿಂತ ಹೆಚ್ಚಿನ ವೇಗದಲ್ಲಿ ಕಾರು ಚಲಾಯಿಸುತ್ತಿದ್ದರು ಎಂದು ಲಾಸ್ ಏಂಜಲೀಸ್‌ನ ಕೌಂಟಿ ಶೆರಿಫ್ಸ್ ಇಲಾಖೆ ಮಾಹಿತಿ ನೀಡಿದೆ.



ಅಪಘಾತಕ್ಕೆ ಒಳಗಾದ ಟೈಗರ್ ವುಡ್ಸ್ ಪ್ರಯಾಣಿಸುತ್ತಿದ್ದ ಕಾರು–ರಾಯಿಟರ್ಸ್ ಚಿತ್ರ

ಭಾರತ ತಂಡದಲ್ಲಿ ಅರ್ಜುನ್

ನವದೆಹಲಿ (ಪಿಟಿಐ): ಕರ್ನಾಟಕದ ಅರ್ಜುನ್ ಹಲಕುರ್ಕಿ ಅವರು ರೋಮ್‌ನಲ್ಲಿ ನಡೆಯಲಿರುವ ಮಟ್ಟೆವ್ ಪೆಲಿಕೋನ್ ಕುಸ್ತಿ ಟೂರ್ನಿಗೆ ಭಾರತ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ. ಮಾರ್ಚ್ 4ರಿಂದ 7ರವರೆಗೆ ನಡೆಯಲಿರುವ ಟೂರ್ನಿಗೆ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಬುಧವಾರ 34 ಮಂದಿಯನ್ನು ಒಳಗೊಂಡ ತಂಡವನ್ನು ಪ್ರಕಟಿಸಿದೆ.

ಬಜರಂಗ್ ಪುನಿಯಾ ಹಾಗೂ ವಿನೇಶಾ ಪೋಗಟ್ ಟೂರ್ನಿಯ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಬಜರಂಗ್ ಹಾಗೂ ವಿನೇಶಾ ಅವರು ಹೋದ ವರ್ಷದ ಡಿಸೆಂಬರ್‌ನಲ್ಲಿ ಸರ್ಬಿಯಾದ ಬೆಲ್‌ಗ್ರೇಡ್‌ನಲ್ಲಿ ನಡೆದ ಮಟ್ಟೆವ್ ಪೆಲಿಕೋನ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಲು ಸಜ್ಜಾಗಿದ್ದಾರೆ.

ಫುಟ್‌ಬಾಲ್: ಸ್ಲಾಮ್‌ಜರ್ಸ್ ಬೆಳಗಾವಿಗೆ ಜಯ

ಬೆಂಗಳೂರು: ಸ್ಲ್ಯಾಮ್‌ಜರ್ಸ್ ಬೆಳಗಾವಿ ತಂಡವು ರಾಜ್ಯ ಫುಟ್‌ಬಾಲ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಇಂಟಿಮಸಿ ಕರ್ನಾಟಕ ವಿಮೆನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು. ಬುಧವಾರ ಇಲ್ಲಿ ನಡೆದ ಸೂಪರ್ ಡಿವಿಷನ್ ಪಂದ್ಯದಲ್ಲಿ 1–0ಯಿಂದ ಮಿಸಾಕ ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿತು.

ವಿಜೇತ ತಂಡದ ಆರತಿ (45ನೇ ನಿಮಿಷ) ಗೋಲು ದಾಖಲಿಸಿದರು.

ಗುರುವಾರ ನಡೆಯಲಿರುವ ಪಂದ್ಯದಲ್ಲಿ ಮಾತೃ ಪ್ರತಿಷ್ಠಾನ ಎಫ್‌ಸಿ-ಬೆಂಗಳೂರು ಸಾಕರ್ ಗೆಲಾಕ್ಸಿ ತಂಡಗಳು ಸೆಣಸಲಿವೆ.